ಸಾಮಾಜಿಕ ಬದಲಾವಣೆಯಲ್ಲಿ ಸರಕಾರೇತರ ಸಂಸ್ಥೆಗಳು:
ಬೆಳ್ತಂಗಡಿ ತಾಲೂಕು ಒಂದು ಅಧ್ಯಯನ

ಹಂಪಿ ಕನ್ನಡ ವಿಶ್ವವಿದ್ಯಾಲಯದ, ಎಂ.ಫಿಲ್ ಪದವಿಗಾಗಿ

(ಸಮಾಜ ವಿಜ್ಞಾನ ನಿಕಾಯ) ಸಾದರಪಡಿಸಿದ ಸಂಪ್ರಬಂಧ

ಸಂಶೋಧಕ

ಅಲೆಕ್ಸ್ ಐವನ್ ಸಿಕ್ವೇರಾ

ಮಾರ್ಗದರ್ಶಕರು

ಡಾ. ಪೀಟರ್ ವಿಲ್ಸನ್ ಪ್ರಭಾಕರ್

೨೦೦೮

ಕರ್ನಾಟಕ ಥಿಯೋಲಾಜಿಕಲ್ ಸಂಶೋಧನಾ ಕೇಂದ್ರ

ಬಲ್ಮಠ, ಮಂಗಳೂರು- ೫೭೫೦೦೧

637

ಸಾಮಾಜಿಕ ಬದಲಾವಣೆಯಲ್ಲಿ ಸರಕಾರೇತರ ಸಂಸ್ಥೆಗಳು: ಬೆಳ್ತಂಗಡಿ ತಾಲೂಕು ಒಂದು ಅಧ್ಯಯನ

ಹಂಪಿ ಕನ್ನಡ ವಿಶ್ವವಿದ್ಯಾಲಯದ, ಎಂ.ಫಿಲ್ ಪದವಿಗಾಗಿ

(ಸಮಾಜ ವಿಜ್ಞಾನ ನಿಕಾಯ) ಸಾದರಪಡಿಸಿದ ಸಂಪ್ರಬಂಧ

ಸಂಶೋಧಕ

ಅಲೆಕ್ಸ್ ಐವನ್ ಸಿಕ್ವೇರಾ

ಮಾರ್ಗದರ್ಶಕರು

ಡಾ. ಪೀಟರ್ ವಿಲ್ಸನ್ ಪ್ರಭಾಕರ್

೨೦೦೮

ಕರ್ನಾಟಕ ಥಿಯೋಲಾಜಿಕಲ್ ಸಂಶೋಧನಾ ಕೇಂದ್ರ

ಬಲ್ಮಠ, ಮಂಗಳೂರು- ೫೭೫೦೦೧

ಪ್ರಮಾಣ ಪತ್ರ

ಹಂಪಿ ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್ ಪದವಿಗಾಗಿ ಸಾದರಪಡಿಸಿದ "ಸಾಮಾಜಿಕ ಬದಲಾವಣೆಯಲ್ಲಿ ಸರಕಾರೇತರ ಸಂಸ್ಥೆಗಳು: ಬೆಳ್ತಂಗಡಿ ತಾಲೂಕು ಒಂದು ಅಧ್ಯಯನ" ಎಂಬ ಶೀರ್ಷಿಕೆಯ ಈ ಸಂಪ್ರಬಂಧವು ನನ್ನ ಸ್ವತಂತ್ರ ಕೃತಿಯಾಗಿದ್ದು ಅಧ್ಯಯನ ಮತ್ತು ವಿಶ್ಲೇಷಣೆಯ ಫಲೋದಯವಾಗಿದೆ. ಮಂಗಳೂರಿನ ಥಿಯೋಲಾಜಿಕಲ್ ಸಂಶೋಧನಾ ಕೇಂದ್ರದಲ್ಲಿ ಡಾ. ಪೀಟರ್ ವಿಲ್ಸನ್ ಪ್ರಭಾಕರ್ ಅವರ ಮಾರ್ಗದರ್ಶನದಲ್ಲಿ ಸಿದ್ಧ ಪಡಿಸಿದ ಈ ಸಂಪ್ರಬಂಧವನ್ನು ಬೇರಾವುದೇ ಪದವಿ, ಡಿಪ್ಲೋಮ ಅಥವಾ ತತ್ಸಮಾನ ಉಪಾಧಿಗಳ ಪ್ರಾಪ್ತಿಗಾಗಿ ಅಥವಾ ಆರ್ಥಿಕ ಲಾಭಕ್ಕಾಗಿ ಇಡಿಯಾಗಿ ಅಥವಾ ಬಿಡಿಯಾಗಿ ಬಳಸಿಕೊಂಡಿಲ್ಲವೆಂದು, ನಾನು ಈ ಮೂಲಕ ದೃಢಪಡಿಸುತ್ತೇನೆ.

ಅಲೆಕ್ಸ್ ಐವನ್ ಸಿಕ್ವೇರಾ
ಸಂಶೋಧಕ

ಕರ್ನಾಟಕ ಥಿಯೋಲಾಜಿಕಲ್ ಸಂಶೋಧನಾ ಕೇಂದ್ರ
ಬಲ್ಮಠ, ಮಂಗಳೂರು, ೫೭೫೦೦೧
ದಿನಾಂಕ: ೩೦/೧೨/೨೦೦೮

ಯೋಗ್ಯತಾ ಪತ್ರ

ಅಲೆಕ್ಸ್ ಐವನ್ ಸಿಕ್ವೇರಾ ಇವರು ನನ್ನ ಸಲಹೆ ಮತ್ತು ಮಾರ್ಗದರ್ಶನದಲ್ಲಿ "ಸಾಮಾಜಿಕ ಬದಲಾವಣೆಯಲ್ಲಿ ಸರಕಾರೇತರ ಸಂಸ್ಥೆಗಳು: ಬೆಳ್ತಂಗಡಿ ತಾಲೂಕು ಒಂದು ಅಧ್ಯಯನ" ಎಂಬ ಶೀರ್ಷಿಕೆಯ ಈ ಸಂಪ್ರಬಂಧವನ್ನು ಎಂ.ಫಿಲ್ ಪದವಿ ಪ್ರಾಪ್ತಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ, ಸಲ್ಲಿಸಬೇಕೆಂದು ಸಿದ್ಧಪಡಿಸಿದ್ದಾರೆ. ಈ ಸಂಪ್ರಬಂಧವು ಸಂಶೋಧಕರ ಸ್ವಂತ ಪರಿಶ್ರಮ ಕ್ಷೇತ್ರ ಕಾರ್ಯ, ಸಂದರ್ಶನ ಮತ್ತು ಸಂಶೋಧನೆಯ ಫಲಸ್ವರೂಪವಾಗಿದೆ. ಇವರು ಈ ಸಂಪ್ರಬಂಧದ ವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಲಿ ಅಥವಾ ಇನ್ನಿತರ ಉದ್ದೇಶಗಳಿಗಾಗಲಿ ಬಳಸಿಕೊಂಡಿಲ್ಲ.

ಡಾ. ಪೀಟರ್ ವಿಲ್ಸನ್ ಪ್ರಭಾಕರ್
ಸಂಶೋಧನ ಮಾರ್ಗದರ್ಶಕರು.

ಕರ್ನಾಟಕ ಥಿಯೋಲಾಜಿಕಲ್ ಸಂಶೋಧನಾ ಕೇಂದ್ರ
ಬಲ್ಮಠ, ಮಂಗಳೂರು ೫೭೫೦೦೧
ದಿನಾಂಕ: ೩೦/೧೨/೨೦೦೮

ನೆನಕೆ

"ಸಾಮಾಜಿಕ ಬದಲಾವಣೆಯಲ್ಲಿ ಸರಕಾರೇತರ ಸಂಸ್ಥೆಗಳು: ಬೆಳ್ತಂಗಡಿ ತಾಲೂಕು ಒಂದು ಅಧ್ಯಯನ" ಎಂಬ ಶೀರ್ಷಿಕೆಯ ಈ ಸಂಪ್ರಬಂಧವು ಕರ್ನಾಟಕ ಥಿಯೋಲಾಜಿಕಲ್ ಸಂಶೋಧನಾ ಕೇಂದ್ರದಡಿಯಲ್ಲಿ ಎಂ.ಫಿಲ್ ಪದವಿಗಾಗಿ ನಡೆಸಿದ ಕಾಲಬದ್ಧ ಸಂಶೋಧನೆ. ಈ ಸಂಶೋಧನಾ ಕಾರ್ಯಕ್ಕೆ ಎಲ್ಲಾ ಬಗೆಯ ವ್ಯವಸ್ಥಾಪನ ನೆರವು ನೀಡಿದವರು ಕನ್ನಡ ವಿಶ್ವವಿದ್ಯಾನಿಲಯ, ಹಂಪಿ ಮತ್ತು ಕರ್ನಾಟಕ ಥಿಯೋಲಾಜಿಕ್ ಸಂಶೋಧನಾ ಕೇಂದ್ರ, ಮಂಗಳೂರು. ಈ ಎರಡೂ ಪ್ರೇರಕ ಕೇಂದ್ರಗಳನ್ನು ಕೃತಜ್ಞತಾಪೂರ್ವಕವಾಗಿ ನೆನೆಯುತ್ತೇನೆ.

ಈ ಪ್ರಬಂಧ ರಚನೆಯ ಸಂದರ್ಭದಲ್ಲಿ ಮಾರ್ಗದರ್ಶಕರಾಗಿ ನನಗೆ ಸೂಕ್ತ ಸಲಹೆ ಸೂಚನೆಗಳನ್ನು ನೀಡಿದ ಕರ್ನಾಟಕ ಥಿಯೋಲಾಜಿಕ್ ಸಂಶೋಧನಾ ಕೇಂದ್ರದ ಮಾರ್ಗದರ್ಶಕರೂ ಹಾಗೂ ವಿವೇಕಾನಂದ ಕಾಲೇಜು, ಪುತ್ತೂರು ಇದರ ಇತಿಹಾಸ ವಿಭಾಗದ ಮುಖ್ಯಸ್ಥರೂ ಆಗಿರುವ ಡಾ.ಪೀಟರ್ ವಿಲ್ಸನ್ ಪ್ರಭಾಕರ್ ಇವರಿಗೆ ನನ್ನ ಹೃತ್ಪೂರ್ವಕ ವಂದನೆಗಳು. ಆಡಳಿತಾತ್ಮಕ ಸಹಕಾರ ನೀಡಿ, ನನ್ನ ಸಂಶೋಧನೆಗೆ ಪೂರ್ಣ ಬೆಂಬಲ ನೀಡಿದ ಕರ್ನಾಟಕ ಥಿಯೋಲಾಜಿಕಲ್ ಕಾಲೇಜಿನ ಪ್ರಾಂಶುಪಾಲರಾದ ರೇ। ಡಾ। ಜೆ.ಎಸ್ ಸದಾನಂದ ಹಾಗೂ ಕರ್ನಾಟಕ ಥಿಯೋಲಾಜಿಕಲ್ ಸಂಶೋಧನಾ ಕೇಂದ್ರದ ನಿರ್ದೇಶಕರಾದ ಡಾ। ಎ.ವಿ. ನಾವಡ ಇವರನ್ನು ಗೌರವ ಪೂರ್ವಕವಾಗಿ ಸ್ಮರಿಸಿಕೊಳ್ಳುತ್ತೇನೆ. ನನ್ನ ಈ ಸಂಶೋಧನೆಗೆ ಮೂಲ ಪ್ರೇರಣೆಯಾಗಿರುವ ಡಾ। ಜೆ.ಸಿ ಮಿರಾಂದ ಪ್ರಾಂಶುಪಾಲರು ಸಂತ ಮೇರೀಸ್ ಕಾಲೇಜು ಶಿರ್ವ ಮತ್ತು ಸೂಕ್ತ ಸಲಹೆ ಸೂಚನೆಗಳನ್ನು ನೀಡಿದ ಪ್ರೋ ರಾಬರ್ಟ್ ಜೋಸ್ ಪ್ರಾಂಶುಪಾಲರು ಸೇಕ್ರೆಡ್ ಹಾರ್ಟ್ ಕಾಲೇಜು ಮಡಂತ್ಯಾರು ಇವರಿಗೆ ನನ್ನ ಹಾರ್ಧಿಕ ಕೃತಜ್ಞತೆಗಳು.

ಸಂಶೋಧನೆಯ ಮಾಹಿತಿ ಸಂಗ್ರಹದ ಸಂದರ್ಭದಲ್ಲಿ ಎಲ್ಲಾ ರೀತಿಯ ಪ್ರೋತ್ಸಾಹ ನೀಡಿದ ಶ್ರೀ ಸೋಮನಾಥ್ ನಾಯಕ್ ಅಧ್ಯಕ್ಷರು ನಾಗರಿಕ ಸೇವಾ ಟ್ರಸ್ಟ್ ಗುರುವಾಯನಕೆರೆ, ಶ್ರೀ ಬಿ.ಕೆ. ಪರಮೇಶ್ವರ ಕಾರ್ಯದರ್ಶಿ ನಾಗರಿಕ ಸೇವಾ ಟ್ರಸ್ಟ್ ಮತ್ತು ಇತರ ಸರಕಾರೇತರ ಸಂಸ್ಥೆಗಳ ಮುಖ್ಯಸ್ಥರಿಗೆ ನನ್ನ ನಮನಗಳು. ಸಂಶೋಧನೆಯ ಸಂದರ್ಭದಲ್ಲಿ ಪ್ರಶ್ನಾವಳಿ ಮತ್ತು ಸಂದರ್ಶನಗಳಲ್ಲಿ ಭಾಗಿಯಾಗಿ ಉಪಯುಕ್ತ ಮಾಹಿತಿ ನೀಡಿದ ಸರ್ವರಿಗೂ ನನ್ನ ಕೃತಜ್ಞತೆಗಳು.


ಕರ್ನಾಟಕ ಥಿಯೋಲಾಜಿಕಲ್ ಸಂಶೋಧನಾ ಕೇಂದ್ರ
ಬಲ್ಮಠ, ಮಂಗಳೂರು

ಅಲೆಕ್ಸ್ ಐವನ್ ಸಿಕ್ವೇರಾ
ಸಂಶೋಧಕ

ದಕ್ಷಿಣ ಕನ್ನಡ ಜಿಲ್ಲೆ



ಬೆಳ್ತಂಗಡಿ ತಾಲೂಕು



ಸಾಮಾಜಿಕ ಬದಲಾವಣೆಯಲ್ಲಿ ಸರಕಾರೇತರ ಸಂಸ್ಥೆಗಳು: ಬೆಳ್ತಂಗಡಿ ತಾಲೂಕು ಒಂದು ಅಧ್ಯಯನ

ಅಧ್ಯಾಯಗಳ ವಿವರ

ಅಧ್ಯಾಯ : ಒಂದು

ಅಧ್ಯಯನದ ಪರಿಗ್ರಹಿಕೆ

೧.೧ ಪ್ರಸ್ತಾವನೆ

೧.೨ ಅಧ್ಯಾಯಗಳ ಸಂಕ್ಷಿಪ್ತ ಪರಿಚಯ

೧.೩ ಬೆಳ್ತಂಗಡಿ ತಾಲೂಕಿನ ಭೌಗೋಳಿಕ ಲಕ್ಷಣಗಳು

೧.೪ ಬೆಳ್ತಂಗಡಿ ತಾಲೂಕು ಒಂದು ಪ್ರವಾಸಿತಾಣ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರ

೧.೫ ಐತಿಹಾಸಿಕ ನಿವೇಶನಗಳು

೧.೬ ಪ್ರಮುಖ ರಾಜವಂಶಗಳು

೧.೭ ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಕಾರ್ಯ ವಿಧಾನ

೧.೮ ಅಧ್ಯಯನದ ಪ್ರಾಮುಖ್ಯತೆ ಮತ್ತು ತಾತ್ವಿಕ ದೃಷ್ಟಿಕೋನ

ಅಧ್ಯಾಯ : ಒಂದು

ಅಧ್ಯಯನದ ಪರಿಗ್ರಹಿಕೆ

೧.೧ ಪ್ರಸ್ತಾವನೆ

ಮನುಷ್ಯ ಸಮಾಜ ಜೀವಿ ಮಾತ್ರವಲ್ಲದೆ ಸಂಘಜೀವಿಯೂ ಹೌದು. ಮನುಷ್ಯನ ವ್ಯಕ್ತಿತ್ವ ಮತ್ತು ಚಟುವಟಿಕೆಗಳಲ್ಲಿ ಹಂತಹಂತವಾಗಿ ಬದಲಾವಣೆ ಮತ್ತು ಬೆಳವಣಿಗೆ ಕಂಡು ಬಂದಿದೆ. ತನ್ನ ಜೀವನದ ಒಂದು ಕಾಲ ಘಟ್ಟದಲ್ಲಿ ತನ್ನ ಬದುಕಿಗಾಗಿ ಮಾತ್ರ ಸಂಘರ್ಷ ನಡೆಸುತ್ತಿದ್ದ ಮಾನವ ಕ್ರಮೇಣವಾಗಿ ಪರರಹಿತವನ್ನು ತನ್ನ ಕರ್ತವ್ಯ ಎಂಬುದಾಗಿ ಅರಿತುಕೊಂಡ. ಧಾರ್ಮಿಕ ಪ್ರೇರಣೆಯಿಂದ ಪ್ರಚೋಧಿತವಾಗಿ ಪರರ ಸೇವೆಯೇ ಪರಮಧರ್ಮ ಎಂಬುದನ್ನು ಅರಿತುಕೊಂಡ. ತನ್ನ ಅಮೂಲ್ಯ ಸಮಯ ಮತ್ತು ಸಂಪತ್ತನ್ನು ಯಾವುದೇ ಲಾಭವನ್ನು ಅಪೇಕ್ಷಿಸದೆ ಪರರ ಹಿತಕ್ಕಾಗಿ ಬಳಸಿಕೊಳ್ಳುವ ಮನೋಧರ್ಮವನ್ನು ಬೆಳಸಿಕೊಂಡ. ಹೀಗೆ ಮಾನವ ಸಮಾಜದಲ್ಲಿ, ಸೇವಾ ಮನೋಭಾವನೆ ರೂಪಿತವಾಯಿತು.

ಯುರೋಪ್ ಖಂಡದ ವಿವಿಧ ದೇಶಗಳಲ್ಲಿ ಕ್ರೈಸ್ತ ಮಿಶೊನರಿಗಳ ವಿವಿಧ ಪಂಗಡಗಳಾದ ಫ್ರಾನ್ಸಿಸ್ಕನ್ಸ್, ದೊಮಿನಕನ್ಸ್, ಅಗಸ್ಟ್‌ನ್ಸ್, ಜೆಸ್ವಿಟ್ಸ್ ಮುಂತಾದವರು ತಮ್ಮ ಸೇವಾ ಮನೋಭಾವನೆಯನ್ನು ಬಡವರ ಮತ್ತು ದೀನದಲಿತರ ಅಭ್ಯುದಯಕ್ಕಾಗಿ ಬಳಸಿಕೊಂಡರು. ಜಗತ್ತಿನ ವಿವಿಧ ದೇಶಗಳಲ್ಲಿ ಕೂಡಾ ತಮ್ಮ ಧರ್ಮ ಮತ್ತು ಸೇವಾ ಚಟುವಟಿಕೆಗಳನ್ನು ಕಾರ್ಯಗತಗೊಳಿಸುವಲ್ಲಿ ಯಶಸ್ವಿಯಾದರು. ಭಾರತದಲ್ಲಿ ಕೂಡಾ ಸೇವಾ ಮನೋಭಾವನೆ ಮತ್ತು ದಾನದತ್ತಿಗಳ ಪ್ರಕ್ರಿಯೆಗಳು ವೇಧಗಳ ಕಾಲದಿಂದಲೂ ಅಸ್ತಿತ್ವದಲ್ಲಿದ್ದವು. ಕ್ರಮೇಣವಾಗಿ ಈ ಎಲ್ಲಾ ಪ್ರಕ್ರಿಯೆಗಳು ಸಾಮಾಜಿಕ ಪರಿಕಲ್ಪನೆಗಳಾಗಿ ರೂಪುಗೊಂಡವು. ಈ ಪ್ರಕ್ರಿಯೆಯವನ್ನು ವ್ಯವಸ್ಥಿತವಾಗಿ ಕಾರ್ಯರೂಪಕ್ಕೆ ತರುವಲ್ಲಿ ಸಂಘ ಸಂಸ್ಥೆಗಳ ಪಾತ್ರ ಹಿರಿದಾದುದು. ಈ ಸಂಘಟನೆಗಳು ಬಡವರ ಮತ್ತು ದೀನ ದಲಿತರ ಆಶಾ ಕಿರಣಗಳಾದವು. ತ್ಯಾಗ, ಸೇವೆ ಮತ್ತು ದಾನ ಧರ್ಮ ಪ್ರಕ್ರಿಯೆಗಳು ನಮ್ಮ ಭಾರತೀಯ ಸಮಾಜದ ಸಂದೇಶಗಳಾದವು. ಇವುಗಳು ಮನುಷ್ಯನ ಬದುಕನ್ನು ಪರಿಪೂರ್ಣತೆಯತ್ತ ಕೊಂಡುಯ್ಯುವಲ್ಲಿ ಯಶಸ್ವಿಯಾದವು. ಅನ್ಯಾಯಗಳ ವಿರುದ್ಧ ಹೋರಾಟ, ಅಜ್ಞಾನದ ವಿರುದ್ಧ ಜಾಗೃತಿ ಮತ್ತು ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರ ಮುಂತಾದುವುಗಳು ಈ ಸಂಘಟನೆಗಳ ಮೂಲ ಧ್ಯೇಯಗಳಾದವು. ಒಟ್ಟಿನಲ್ಲಿ ಜಗತ್ತಿನ ಶ್ರೇಷ್ಠ ಸಂಪತ್ತು ಮಾನವನ ವ್ಯಕ್ತಿತ್ವದಲ್ಲಿ ಅಡಗಿದೆ ಎಂಬುದನ್ನು ಕಂಡುಕೊಂಡು ಸಮಾಜದ ಸರ್ವಾಂಗೀಣ ಪ್ರಗತಿಯೇ ಈ ಸಂಸ್ಥೆಗಳ ಮೂಲ ಉದ್ದೇಶವಾಯಿತು. ಇದೇ ಸಂದರ್ಭದಲ್ಲಿ ಕೆಲವೊಂದು ಸಂಘಟನೆಗಳು ಸೇವೆ ಮತ್ತು ಅಭಿವೃದ್ಧಿಯಂತಹ ಆದರ್ಶಗಳನ್ನು ಮುಂದಿಟ್ಟು ಸಮಾಜಘಾತುಕ ಶಕ್ತಿಗಳನ್ನು ಸೃಷ್ಟಿಸುವಲ್ಲಿ ಕೂಡಾ ಕಾರಣೀಭೂತವಾಗಿವೆ ಎಂಬ ಅಂಶವನ್ನು ಗಮನಿಸುವುದು ಕೂಡಾ ಅಗತ್ಯವಾಗಿದೆ.

ಜಾಗತಿಕ ಮಟ್ಟದಲ್ಲಿ ಸರಕಾರೇತರ ಸಂಸ್ಥೆಗಳ ಹಲವಾರು ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತವೆ. ಭಾರತದ ದೃಷ್ಟಿಯಲ್ಲಿ ಕೂಡಾ ಸರಕಾರೇತರ ಸಂಸ್ಥೆಗಳು ಮನುಷ್ಯನ ಚಟುವಟಿಕೆಗಳ ಕೇಂದ್ರಗಳಾಗಿವೆ. ಕರ್ನಾಟಕ ರಾಜ್ಯ ಮಟ್ಟದಲ್ಲಿ ಕೆಲವೊಂದು ಸರಕಾರೇತರ ಸಂಸ್ಥೆಗಳು ವಿಶೇಷ ಸ್ಥಾನಮಾನವನ್ನು ಹೊಂದಿವೆ. ಬೆಳ್ತಂಗಡಿ ತಾಲೂಕಿನ

ವ್ಯಾಪ್ತಿಯಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ (ರಿ), ನಾಗರಿಕ ಸೇವಾ ಟ್ರಸ್ಟ್ ಗುರುವಾಯನಕೆರೆ, ಕಾಮುಜಿನ್ ಕೃಷಿಕ ಸೇವಾ ಕೇಂದ್ರ ದಯಾಳ್ ಬಾಗ್ ಉಜಿರೆ ಮುಂತಾದುವುಗಳು ಮುಂಚೂಣಿಯಲ್ಲಿವೆ. ಈ ಸಂಘ ಸಂಸ್ಥೆಗಳ ಕಾರ್ಯ ವೈಖರಿ ಮತ್ತು ಎಷ್ಟರ ಮಟ್ಟಿಗೆ ಅವುಗಳು ಸಾಮಾಜಿಕ ಬದಲಾವಣೆಯ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡಿವೆ ಎಂಬುದನ್ನು ತಿಳಿದುಕೊಳ್ಳುವ ಪ್ರಯತ್ನವೇ ಈ ಅಧ್ಯಯನ.

ಜಾಗತಿಕ ಮಟ್ಟದಲ್ಲಿ ಮತ್ತು ಭಾರತಕ್ಕೆ ಸೀಮಿತವಾಗಿರುವಂತೆ ಸರಕಾರೇತರ ಸಂಸ್ಥೆಗಳ ಕುರಿತು ಸಾಕಷ್ಟು ಅಧ್ಯಯನಗಳು ನಡೆದಿವೆ. ವಿವಿಧ ಬ್ಯಾಂಕ್ ಮತ್ತು ಆರ್ಥಿಕ ಸಂಸ್ಥೆಗಳ ಹಣಕಾಸಿ ನೆರವಿನೊಂದಿಗೆ ಸಾಕಷ್ಟು ಅಧ್ಯಯನ ವರದಿಗಳು ಸಿದ್ಧಗೊಂಡಿವೆ. ಪಂಜಾಬ್ ರಾಷ್ಟ್ರೀಯ ಬ್ಯಾಂಕ್, ಸಿಂಡಿಕೇಟ್ ಬ್ಯಾಂಕ್, ನಬಾರ್ಡ್ (NABARD), ಮತ್ತು ಕೇಂದ್ರ ಯೋಜನಾ ಆಯೋಗದ ವತಿಯಿಂದ ಸರಕಾರೇತರ ಸಂಸ್ಥೆಗಳ ಕುರಿತಾದ ಬಹಳಷ್ಟು ಅಧ್ಯಯನಗಳು ನಡೆದಿವೆ, ಕರ್ನಾಟಕ ಮತ್ತು ಬೆಳ್ತಂಗಡಿ ತಾಲೂಕಿಗೆ ಸೀಮಿತವಾಗಿರುವಂತೆ ಸರಕಾರೇತರ ಸಂಸ್ಥೆಗಳ ಕುರಿತು ಹಲವಾರು ಸಂಶೋಧನೆಗಳು ನಡೆದಿವೆ. ಡಾ। ಕೃಷ್ಣ ಕೊತಾಯಿಯವರು ಬರೆದಿರುವ "ಎಕ್ಸ್‌ಪರಿಮೆಂಟ್ಸ್ ಇನ್ ರೂರಲ್ ಡೆವಲಪ್‌ಮೆಂಟ್ (Experiements In Rural Development)" ಎಂಬ ಕೃತಿಯಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ವಿವಿಧ ಕಾರ್ಯಕ್ರಮಗಳನ್ನು ಆರ್ಥಿಕ ನೆಲೆಯಲ್ಲಿ ವಿಮರ್ಶೆ ಮಾಡುವ ಪ್ರಯತ್ನವನ್ನು ಮಾಡಲಾಗಿದೆ. ಎಂ. ಆರ್ ದೀಕ್ಷಿತ್ ರವರು ಬರೆದ "ಡೆವಲಪ್‌ಮೆಂಟ್ ಓರಿಯೆಂಟೇಷನ್ ಆಫ್ ಚಾರಿಟಿ–ಕೇಸ್ ಆಫ್ ಶ್ರೀ ಕ್ಷೇತ್ರ ಧರ್ಮಸ್ಥಳ ರೂರಲ್ ಡೆವಲಪ್‌ಮೆಂಟ್ ಪ್ರಾಜೆಕ್ಟ್ (Development Orientation of Charity-case of Shree Kshethra Dharmasthala Rural Development Project)" ಎಂಬ ಕೃತಿಯಲ್ಲಿ ಸೇವಾ ಮನೋಧರ್ಮದ ಬೆಳವಣಿಗೆಯ ಕುರಿತು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಗೆ ಸಂಬಂಧಿಸದಂತೆ ಕೂಲಂಕುಶವಾಗಿ ವಿಮರ್ಶೆಯನ್ನು ಮಾಡಲಾಗಿದೆ. ಅದೇ ರೀತಿಯಲ್ಲಿ ನಾಗರಿಕ ಸೇವಾ ಟ್ರಸ್ಟ್ ಗುರುವಾಯನಕೆರೆ ಇದರ ಕುರಿತು ಕೂಡ ಕೆಲವೊಂದು ಅಧ್ಯಯನಗಳು ನಡೆದಿವೆ. ನಾಗರಿಕ ಸೇವಾ ಟ್ರಸ್ಟ್ ನೇತೃತ್ವದಲ್ಲಿ ಕೂಡಾ ಗ್ರಾಮೀಣ ಜನತೆಯ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಅನೇಕ ಅಧ್ಯಯನ ವರದಿಗಳು ಸಿದ್ಧಗೊಂಡಿವೆ. ಟ್ರಸ್ಟ್ ನೇತೃತ್ವದಲ್ಲಿ ಬೆಳ್ತಂಗಡಿ ತಾಲೂಕಿನ ವಿವಿಧ ಗ್ರಾಮಗಳ ಜನತಾ ವೈವಿಧ್ಯ ದಾಖಲಾತಿಗಳು ಸಿದ್ದಗೊಂಡಿದ್ದೂ ಪ್ರಸ್ತುತ ಅಧ್ಯಯನಕ್ಕೆ ತಕ್ಕಂತೆ ಅಮೂಲ್ಯ ದಾಖಲೆಗಳನ್ನು ಹೊಂದಿವೆ. ದಲಿತರ ಮತ್ತು ಮಹಿಳೆಯರ ಕುರಿತಾದ ವಿಶೇಷ ಅಧ್ಯಯನಗಳು ಕೂಡ ನಡೆದಿವೆ. "ಹೊರ ಅಂಚಿನಿಂದ ಕೇಂದ್ರ ಬಿಂದುವಿನತ್ತ" ಎಂಬ ಕೃತಿಯು ಬೆಳ್ತಂಗಡಿ ತಾಲೂಕಿನ ದಲಿತರ ಕುರಿತಾದ ಸಮಗ್ರ ಮಾಹಿತಿಯನ್ನು ಹೊಂದಿದೆ. ಮಹಿಳೆಯರ ಹಕ್ಕುಗಳು ಮತ್ತು ಸಮಸ್ಯೆಗಳ ಕುರಿತಂತೆ ಕೂಡ ಹಲವಾರು ಕೃತಿಗಳು ಟ್ರಸ್ಟ್ ವತಿಯಿಂದ ಪ್ರಕಾಶಿಸಲ್ಪಟ್ಟಿವೆ.

ಬೆಳ್ತಂಗಡಿ ತಾಲೂಕಿನ ಐತಿಹಾಸಕ್ಕೆ ಪೂರಕವಾದ ಹಲವಾರು ಕೃತಿಗಳಿವೆ. ತಾಲೂಕಿನ ಐತಿಹಾಸಿ ನಿವೇಶನಗಳನ್ನು ಮತ್ತು ಮನೆತನಗಳನ್ನು ಕೂಡ ಸಂಶೋಧನೆಗಾಗಿ ಬಳಸಲಾಗಿದೆ. ಅಳದಂಗಡಿಯ ಅಜಿಲರ ಕುರಿತು ಮತ್ತು ಬಂಗಾಡಿಯ ಬಂಗರ ಕುರಿತು ಕೆಲವೊಂದು ಸಂಶೋಧನೆಗಳು ನಡೆಯುತ್ತವೆ. ತುಳು ನಾಡಿನ ಖ್ಯಾತ ಇತಿಹಾಸ ಸಂಶೋಧಕರಾದ ಗಣಪತಿರಾವ್ ಐಗಳ, ಡಾ। ಗುರುರಾಜ ಭಟ್, ಡಾ। ಸೂರ್ಯನಾಥ ಕಾಮತ್, ಬಿ.ಎ.

ಸಾಲೆತ್ತೂರ್, ಡಾ। ವಸಂತ ಮಾದವ, ಡಾ। ಕೆ.ಪಿ.ರಮೇಶ್, ಅನಂತರಾಮ ಬಂಗಾಡಿ ಮುಂತಾದವರ ಸಂಶೋಧನೆಗಳಲ್ಲಿ ಬೆಳ್ತಂಗಡಿ ತಾಲೂಕಿನ ಐತಿಹಾಸಿಕ ಪರಂಪರೆ ಮತ್ತು ಸಂಸ್ಕೃತಿಯ ಕುರಿತು ವಿಶೇಷವಾದ ಮಾಹಿತಿಗಳಿವೆ. ವಿಲಿಯಂ ಪ್ಯಾಸ್‌ರವರು ಬರೆದ "ದಿ ಲ್ಯಾಂಡ್ ಕಾಲ್ಡ್ ಸೌಥ್ ಕೆನರಾ (The Land Called South Canara) ಎಂಬ ಕೃತಿಯು ಬೆಳ್ತಂಗಡಿ ತಾಲೂಕಿನ ಐತಿಹಾಸಿಕ ಪರಂಪರೆ ಮತ್ತು ಸಂಸ್ಕೃತಿಯ ಕುರಿತು ಅಮೂಲ್ಯ ಮಾಹಿತಿಯನ್ನು ಹೊಂದಿದೆ. ಬೆಳ್ತಂಗಡಿಯ ಪ್ರಾದೇಶಿಕ ಮನೆತನಗಳಾದ ಬಂಗರ ಮತ್ತು ಅಜಿಲರ ಕುರಿತು ಮಾಹಿತಿಯನ್ನು ಈ ಕೃತಿಯು ಹೊಂದಿದೆ. ಈ ಅಧ್ಯಯನಕ್ಕಾಗಿ ಬಳಸಲಾದ ಇತರ ಕೃತಿಗಳಲ್ಲಿ "ತಳಪರಿಗೆ" ಎಂಬ ಲೇಖನಗಳ ಸಂಗ್ರಹದಲ್ಲಿ ಡಾ। ಜೋಗನ್ ಶಂಕರ್ ಮತ್ತು ಡಾ। ಡೊಮಿನಿಕ್ ದಾವಿದಪ್ಪ ಇವರು ಬರೆದ ಲೇಖನಗಳಲ್ಲಿ ದಲಿತರ ಸ್ಥಾನಮಾನಕ್ಕೆ ಪೂರಕವಾದ ಮಾಹಿತಿಯಿದೆ.

ಭಾರತೀಯ ಸಮಾಜದ ರಚನೆ ಅಲ್ಲಿರುವ ವೈರುಧ್ಯಗಳು, ಆಶಯಗಳು ಸಂಕೀರ್ಣವಾಗಿದ್ದು ಹಲವು ನೆಲೆಗಳಲ್ಲಿ ಅರ್ಥೈಸುವ ಪ್ರಯತ್ನವನ್ನು ಈ ಸಮಾಜದ ಬಗ್ಗೆ ಗಂಭೀರವಾಗಿ ಚಿಂತಿಸುವ ಪ್ರತಿಯೊಬ್ಬರೂ ಮಾಡಬೇಕಾಗುತ್ತದೆ. ಭಾರತೀಯ ಸಮಾಜದ ವರ್ಗ, ಜಾತಿ, ಧರ್ಮ, ಲಿಂಗಾಧಾರಿತ ಶ್ರೇಣೀಕೃತ ವ್ಯವಸ್ಥೆಯ ಆಳವಾದ ಜ್ಞಾನ, ಸಾಮಾಜಿಕ ಬದಲಾವಣೆಯನ್ನು ಬಯಸುವ ಪ್ರತಿಯೊಬ್ಬ ವ್ಯಕ್ತಿ, ಸಂಸ್ಥೆಗಳಿಗೆ ಇರಬೇಕಾಗುತ್ತದೆ. ಇಲ್ಲದಿದ್ದಲ್ಲಿ, ಆ ಸಂಸ್ಥೆಗಳು ಆಶಯಗಳು, ಕಾರ್ಯಕ್ರಮಗಳು, ಹೋರಾಟಗಳು ಪ್ರತಿಗಾಮಿ ಪರಿಣಾಮವನ್ನು ಬೀರುವ ಅಪಾಯವಿದೆ. ಈ ನಿಟ್ಟಿನಲ್ಲಿ ಜಾತಿ, ವರ್ಗ, ಲಿಂಗಗಳ ಆಧಾರದಲ್ಲಿ ಹೇಗೆ ಶ್ರೇಣೀಕೃತ ವ್ಯವಸ್ಥೆಯನ್ನು ರೂಪಿಸಿ ಮುಂದುವರಿಸುತ್ತಿದೆಯೆಂಬುದನ್ನು ತಿಳಿಯುವ ಪ್ರಯತ್ನ ಇಲ್ಲಿದೆ. ಅಷ್ಟೇ ಅಲ್ಲ, ಸ್ವಾತಂತ್ರ್ಯದ ನಂತರ ಪ್ರಜಾಪ್ರಭುತ್ವ ವ್ಯವಸ್ಥೆ ಯಾವ ಅಭಿವೃದ್ಧಿ ಮಾದರಿಗಳನ್ನು ದೇಶದ ಮುಂದಿಟ್ಟಿದೆ? ಈ ಅಭಿವೃದ್ಧಿ ಮಾದರಿಗಳಿಂದ ಸಮಾಜ ಮತ್ತು ಪರಿಸರದ ಮೇಲೆ ಯಾವ ಪರಿಣಾಮ ಬೀರುತ್ತದೆ? ಈ ಬದಲಾವಣೆಯ ಹಾದಿಯಲ್ಲಿ ಸರಕಾರೇತರ ಸಂಸ್ಥೆಗಳು ಯಾವ ಪಾತ್ರವನ್ನು ನಿರ್ವಹಿಸುತ್ತಿವೆಯೆಂಬುದನ್ನು ತಿಳಿಯುವ ಪ್ರಯತ್ನ ಇಲ್ಲಿದೆ.

ಸ್ವಾತಂತ್ರ್ಯೋತ್ತರ ಭಾರತದಲ್ಲಿ ನೆಹರೂ ಮಾದರಿಯ ಅಭಿವೃದ್ಧಿಯನ್ನು ಕಾರ್ಯಗತಗೊಳಿಸುವ ಕಾರ್ಯಸೂಚಿ ರಚಿಸಲ್ಪಟ್ಟಿತ್ತು. ಭಾರತವನ್ನು ಕಾಡುತ್ತಿರುವ ಸಮಸ್ಯೆಗಳಿಗೆ ವಿಜ್ಞಾನ, ಮತ್ತು ಕೈಗಾರಿಕೆಗಳು ಪರಿಹಾರವಾಗಬಹುದೆಂದು ನೆಹರೂರವರು ಬಲವಾಗಿ ನಂಬಿದ್ದರು. ಮಿಶ್ರ ಆರ್ಥಿಕ ವ್ಯವಸ್ಥೆ ಸರಕಾರ ಹಾಗೂ ಉದ್ದಿಮೆದಾರರ ಬಂಡವಾಳವನ್ನು ಸಾರ್ವಜನಿಕ ವಲಯದಲ್ಲಿ ಸಮರ್ಪಕವಾಗಿ ಹೂಡಲು ಸಹಕಾರಿಯಾಗಬಹುದು ಹಾಗೂ ಇದರಿಂದ ದೇಶ ಪ್ರಗತಿ ಸಾಧಿಸಬಹುದೆಂದು ನೆಹರೂರವರ ಕನಸಾಗಿತ್ತು. ಪಂಚವಾರ್ಷಿಕ ಯೋಜನೆಗಳ ಅನುಷ್ಠಾನ ದೇಶದ ಅಭಿವೃದ್ಧಿಗೆ ಪೂರಕವಾಗಬಹುದೆಂದು ನಂಬಿದ್ದರು. ಸ್ವಾತಂತ್ರ್ಯದ ನಂತರದ ಮೂರು ದಶಕಗಳು ಈ ನಿಟ್ಟಿನ ಪ್ರಯತ್ನದ ನಿರ್ವಚನೆಯಾಗಿದೆ. ನಗರಗಳು, ಕೈಗಾರಿಕೆಗಳು, ಅಣೆಕಟ್ಟುಗಳು, ಸಾರಿಗೆ, ಶಿಕ್ಷಣ ವ್ಯವಸ್ಥೆ ಇವುಗಳೆಲ್ಲಾ ಇಂತಹ ಸಮಾಜವನ್ನು ರಚಿಸುವಲ್ಲಿ ಸ್ವಲ್ಪ ಮಟ್ಟಿಗೆ ಯಶಸ್ವಿಯಾಗಿದೆ. ಈ ಅಭಿವೃದ್ಧಿ ಮಾದರಿಗಳು ಹಲವು ಜನ–ಸಮುದಾಯಗಳಲ್ಲಿ ಭ್ರಮ ನಿರಸನವನ್ನು ತಂದೊಡ್ಡಿವೆ. ಅಭಿವೃದ್ಧಿ ಫಲ ಕೇವಲ ಮೇಲ್‌ಸ್ತರದ ಸಮುದಾಯಗಳಿಗೆ ದೊರಕಿದ್ದು, ಕೆಳಸ್ಥರಗಳ ಪರಿಸ್ಥಿತಿ ಇನ್ನು ಹೀನಾಯವಾಗುತ್ತಿದೆಯೆಂಬುದು ಒಂದು ಕಡೆಯಾದರೆ, ಈ ಮಾದರಿಯಿಂದ

ಪರಿಸರ ಹಾಗೂ ಇಲ್ಲಿಯ ನೈಸರ್ಗಿಕ ಸಂಪತ್ತಿನ ಲೂಟಿಯಾಗುತ್ತಿದೆಯೆಂಬುದು ಇನ್ನೊಂದು ವಿಚಾರ. ಆಶೀಷ್ ನಂದಿ, ವಂದನಾಶಿವ, ಸುಂದರ್‌ಲಾಲ್ ಬಹುಗುಣ, ಕ್ಲಾಡ್ ಆಲ್ವಾರಿಸ್, ಮೊದಲಾದ ಚಿಂತಕರು ಈ ಅಭಿವೃದ್ಧಿ ಮಾದರಿ ಪಾಶ್ಚಾತ್ಯ ಪ್ರೇರಿತವಾಗಿದ್ದು ಇದನ್ನು ತಿರಸ್ಕರಿಸುವಂತೆ ತಮ್ಮ ಬರಹ ಹಾಗೂ ಹೋರಾಟಗಳ ಮುಖಾಂತರ ಪ್ರತಿರೋಧವನ್ನು ಒಡ್ಡುತ್ತಿದ್ದಾರೆ. ಇದಕ್ಕೆ ಬದಲಾಗಿ ಗಾಂಧಿ ಮಾದರಿಯ ಗ್ರಾಮ ವ್ಯವಸ್ಥೆಯನ್ನು ಕೇಂದ್ರಿಕರಿಸಿ ಕೊಂಡು ಹೋಗುವ ಅಭಿವೃದ್ಧಿ ತಳ–ಸಮುದಾಯಗಳನ್ನು ಒಳಗೊಳ್ಳುವಂತೆ ಮಾಡುತ್ತದೆಯೆಂಬುದು ಅವರ ದೃಢವಾದ ನಿಲುವು. ಇನ್ನು ಕೆಲವರು ತಾಳಿ ಬಾಳುವ (Sustainable Development.) ಅಭಿವೃದ್ಧಿ ಮಾದರಿ ಉತ್ತಮವಾದುದೆಂದು ವಾದಿಸುತ್ತಾರೆ.

ಅಂಬೇಡ್ಕರ್ ಹಳ್ಳಿ ಸಮುದಾಯದಲ್ಲಿ ಮಡುಗಟ್ಟಿರುವ ಜಾತಿ ವ್ಯವಸ್ಥೆಯನ್ನು ತಿರಸ್ಕರಿಸುತ್ತಾ ಕೈಗಾರಿಕಾ ಕೇಂದ್ರಗಳಾಗಿ ಮಾರ್ಪಾಡಾಗುವ ನಗರಗಳಲ್ಲಿ ದಲಿತರ ವಿಮೋಚನಾ ಮಾರ್ಗವಿದೆಯೆಂದು ವಾದಿಸುತ್ತಾರೆ. ಇಲ್ಲಿ ಯಾವ ಅಭಿವೃದ್ಧಿ ಮಾದರಿ ಉತ್ತಮವೆಂದು ವಾದಿಸುವುದಕ್ಕಿಂತ ಮಿಗಿಲಾಗಿ ಈ ಮಾದರಿಗಳು ಯಾರನ್ನು ಮತ್ತು ಯಾವ ಸಮುದಾಯಗಳನ್ನು ತನ್ನ ತೆಕ್ಕೆಯೊಳಗೆ ಇಡುತ್ತದೆ (Inclusive) ಹಾಗೂ ಯಾರನ್ನು ಅಂಚಿನೆಡೆಗೆ ತಳ್ಳುತ್ತದೆ (Exclusive) ಎಂಬ ಮೂಲಭೂತ ಪ್ರಶ್ನೆಯನ್ನು ಎತ್ತಬೇಕಾಗಿದೆ.

ಸರಕಾರೇತರ ಸಂಸ್ಥೆಗಳ ಅಧ್ಯಯನ ನಡೆಸುವಾಗ ಅವರ ಗುರಿ, ಉದ್ದೇಶಗಳ ಕೂಲಂಕಶ ಪರೀಕ್ಷೆ ನಡೆಸುತ್ತಾ ಯಾವ ವರ್ಗ, ಜಾಗಿ, ಸಮುದಾಯಗಳೊಂದಿಗೆ ತಮ್ಮನ್ನು ತಾವೇ ಗುರುತಿಸುತ್ತಾರೆ ಹಾಗೂ ಯಾವ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ, ಅಷ್ಟೇ ಅಲ್ಲ, ಇದರಿಂದ ಆ ಸಮುದಾಯಗಳ ಮೇಲೆ ಯಾವ ಪರಿಣಾಮವನ್ನು ಬೀರುತ್ತದೆಯೆಂಬುದರ ಸಮಗ್ರ ಪರಿಶೀಲನೆ ನಡೆಸಬೇಕಾಗುತ್ತದೆ.

ಕಳೆದ ಎರಡು ದಶಕಗಳಲ್ಲಿ ಭಾರತೀಯ ಸಮಾಜ ತೀವ್ರತರವಾಗಿ ಬದಲಾವಣೆ ಹೊಂದುತ್ತಿರುವುದನ್ನು ಕಾಣುತ್ತಿದ್ದೇವೆ. ಜಾಗತೀಕರಣ, ಉದಾರೀಕರಣ, ಖಾಸಗೀಕರಣ ಪ್ರಕ್ರಿಯೆಗಳು ಆರ್ಥಿಕ, ಸಾಮಾಜಿಕ, ರಾಜಕೀಯ ವ್ಯವಸ್ಥೆಗಳನ್ನು ಬದಲಾಯಿಸುತ್ತವೆ. ಬಹುರಾಷ್ಟ್ರೀಯ ಕಂಪೆನಿಗಳು ಯಾವ ದೇಶದಲ್ಲೂ ಹೋಗಿ ಬಂಡವಾಳ ಹೂಡುವ ಅವಕಾಶವನ್ನು ಜಾಗತೀಕರಣ ನೀಡುತ್ತಿದೆ. ಇದರಿಂದಾಗಿ ಜನಸಾಮಾನ್ಯರ ಸಾಂಪ್ರಾದಾಯಿಕ ಜೀವನ ವ್ಯವಸ್ಥೆ ಸಂಪೂರ್ಣವಾಗಿ ಸ್ಥಾನಪಲ್ಲಟವಾಗುತ್ತಿದೆ. ಕೆಳಸ್ತರದ ಸಮುದಾಯಗಳು ಈ ಪ್ರಕ್ರಿಯೆಯೊಳಗೆ ತೊಡಗಿಸುವಂತೆ ಜಾಗತೀಕರಣ ಪೂರಕವಾಗಿ ಕಾರ್ಯನಿರ್ವಹಿಸುತ್ತಿದೆಯೋ ಅಥವಾ ಅವರನ್ನು ಇನ್ನಷ್ಟು ಅಂಚಿಗೆ ತಳ್ಳುತ್ತಿವೆಯೋ ಎಂಬುದನ್ನು ತಿಳಿಯಬೇಕಾಗಿದೆ. ಸರ್ಕಾರೇತರ ಸಂಘಟನೆಗಳು ಈ ಮೇಲಿನ ದ್ವಂದ್ವಗಳಿಗೆ ಉತ್ತರಿಸುವ ಪ್ರಯತ್ನ ನಡೆಸುತ್ತಿವೆ ಮತ್ತು ಸಮಾಜದ ನಿರ್ಲಕ್ಷಿತ ವರ್ಗಗಳ ರಕ್ಷಣೆಗೆ ಪೂರಕವಾಗಿ ಸ್ಪಂದಿಸುತ್ತವೆ.

೧.೨ ಅಧ್ಯಾಯಗಳ ಸಂಕ್ಷಿಪ್ತ ಪರಿಚಯ:

"ಸರಕಾರೇತರ ಸಂಸ್ಥೆಗಳು ಮತ್ತು ಸಾಮಾಜಿಕ ಬದಲಾವಣೆ: ಬೆಳ್ತಂಗಡಿ ತಾಲೂಕು ಒಂದು ಅಧ್ಯಯನ" ಎಂಬುವುದು ಅಧ್ಯಯನದ ವಿಷಯವಾಗಿದೆ. ಸರಕಾರೇತರ ಸಂಸ್ಥೆಗಳು ಸಾಮಾಜಿಕ ಬದಲಾವಣೆಯ ಮೇಲೆ ಎಷ್ಟರ ಮಟ್ಟಿಗೆ ಪ್ರಭಾವ ಬೀರುತ್ತವೆ ಎಂಬುದನ್ನು ತಿಳಿಯುವ ಮೂಲ ಉದ್ದೇಶವನ್ನು ಹೊಂದಿದೆ. ನಾಗರಿಕ ಸೇವಾ ಟ್ರಸ್ಟ್ ಗುರುವಾಯನಕೆರೆ ಇದರ ಕಾರ್ಯ ಚಟುವಟಿಕೆಗಳು ಎಷ್ಟರಮಟ್ಟಿಗೆ ಜನರ ಸಮಸ್ಯೆಗಳಿಗೆ ಸ್ಪಂದಿಸುವಲ್ಲಿ ಯಶಸ್ವಿಯಾಗಿವೆ ಎಂಬುದನ್ನು ತಿಳಿಯುವುದು ಅಧ್ಯಯನಕಾರನ ಆಸಕ್ತಿಯಾಗಿದ್ದೂ ಈ ನೆಲೆಯಲ್ಲಿ ಯಾವುದೇ ಅಧ್ಯಯನಗಳು ನಡೆದಿಲ್ಲವೆಂಬುದು ಅಧ್ಯಯನಕಾರನ ಊಹೆಯಾಗಿದೆ. ಈ ಅಧ್ಯಯನದವನ್ನು ಆರು ಅಧ್ಯಾಯಗಳಾಗಿ ವಿಂಗಡಿಸಲಾಗಿದೆ.

ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ವ್ಯಾಪ್ತಿ, ಕಾರ್ಯ ವಿಧಾನ, ತಾತ್ವಿಕ ಹಿನ್ನೆಲೆ ಮತ್ತು ಮೂಲಾಧಾರಗಳ ಲಭ್ಯತೆಯ ಕುರಿತು ಮಾಹಿತಿಯನ್ನು ನೀಡಲಾಗಿದೆ. ಇತಿಹಾಸಕ್ಕೆ ಪೂರಕಾವಾದ ಅಧ್ಯಯನವಾದುದರಿಂದ ತಾಲೂಕಿನ ಭೌಗೋಳಿಕ ಅಂಶಗಳು, ಪ್ರಾದೇಶಿಕ ಇತಿಹಾಸ, ಐತಿಹಾಸಿಕ ಮನೆತನಗಳು, ಪ್ರವಾಸಿತಾಣಗಳು ಮುಂತಾದವುಗಳ ಮೇಲೆ ಬೆಳಕು ಚೆಲ್ಲುವ ಪ್ರಯತ್ನದೊಂದಿಗೆ ಸ್ವಾಂತತ್ರ್ಯ ಹೋರಾಟದ ಕುರಿತು ವಿವರಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಬೆಳ್ತಂಗಡಿ ತಾಲೂಕಿನ ಜನರ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಧಾರ್ಮಿಕ ಸ್ಥಿತಿಗತಿಯ ಕುರಿತು ವಿವರಿಸಲಾಗಿದೆ. ಮೇಲಿನ ವಿವಿಧ ಕ್ಷೇತ್ರಗಳಲ್ಲಿ ಜನರು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ವಿಶ್ಲೇಷಣೆಯನ್ನು ಮಾಡಲಾಗಿದೆ. ಈ ಸಮಸ್ಯೆಗಳಿಗೆ ಸರಕಾರೇತರ ಸಂಸ್ಥೆಗಳು ಹೇಗೆ ಸ್ಪಂದಿಸಬಹುದು ಎಂಬುದನ್ನು ವಿವರಿಸಲಾಗಿದೆ. ಈ ಅಧ್ಯಯನವು ಮುಖ್ಯವಾಗಿ ಸಣ್ಣ ಕೃಷಿಕರ, ಕೃಷಿಕೂಲಿಗಳ, ದಲಿತರ, ಹಿಂದುಳಿದ ವರ್ಗಗಳ ಮತ್ತು ಮಹಿಳೆಯರ ಸಮಸ್ಯೆಗಳ ಕುರಿತಾದ ಅಧ್ಯಯನವಾಗಿದೆ. ಈ ಎಲ್ಲಾ ವರ್ಗಗಳ ಜನರ ಸ್ಥಿತಿಗತಿಯು ತುಂಬಾ ಶೋಚನೀಯವಾಗಿದೆ ಎಂಬುದನ್ನು ಅಧ್ಯಯನಕ್ಕಾಗಿ ಬಳಸಲಾದ ಪ್ರಶ್ನಾವಳಿಯಿಂದ ತಿಳಿದುಬಂದಿದೆ.

ಅಧ್ಯಾಯ ಮೂರರಲ್ಲಿ ಬೆಳ್ತಂಗಡಿ ತಾಲೂಕಿನ ಪ್ರಮುಖ ಸರಕಾರೇತರ ಸಂಸ್ಥೆಗಳ ಬಗ್ಗೆ ಮಾಹಿತಿಯನ್ನು ನೀಡಲಾಗಿದೆ. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಕಾಪುಜಿನ್ ಕೃಷಿಕ ಸೇವಾ ಕೇಂದ್ರ ಮತ್ತು ನಾಗರಿಕ ಸೇವಾ ಟ್ರಸ್ಟ್ ಗುರುವಾಯನಕೆರೆ ಇವುಗಳು ಪ್ರಮುಖ ಸರಕಾರೇತರ ಸಂಸ್ಥೆಗಳು ಎಂಬುದಾಗಿ ಗುರುತಿಸಲಾಗಿದೆ. ಈ ಅಧ್ಯಯನಲದಲ್ಲಿ ನಾಗರಿಕ ಸೇವಾ ಟ್ರಸ್ಟ್ ಗುರುವಾಯನಕೆರೆ ಇದರ ಚಟುವಟಿಕೆಗಳ ಮೇಲೆ ಹೆಚ್ಚು ಒತ್ತನ್ನು ನೀಡಲಾಗಿದ್ದು ಅದರ ದ್ಯೇಯೋದ್ದೇಶಗಳು ಮತ್ತು ಕಾರ್ಯ ವೈಖರಿಯ ಕುರಿತು ವಿವರಿಸಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ಸಾಮಾಜಿಕ ಬದಲಾವಣೆಗಾಗಿ ಸರಕಾರೇತರ ಸಂಸ್ಥೆಗಳು ಹಮ್ಮಿಕೊಳ್ಳುವ ವಿವಿಧ ಕಾರ್ಯಕ್ರಮಗಳ ಮತ್ತು ಹೋರಾಟಗಳ ಕುರಿತು ವಿವರಿಸಲಾಗಿದೆ. ಕಾರ್ಯಕ್ರಮಗಳು ಮುಖ್ಯವಾಗಿ ಸಾಮಾಜಿಕ ಮತ್ತು ಆರ್ಥಿಕ ನೆಲೆಯದ್ದಾಗಿವೆ. ಈ ಅಧ್ಯಾಯ ರಚನೆಯಲ್ಲಿ ಪ್ರಶ್ನಾವಳಿ ಮತ್ತು ಸಂದರ್ಶನಗಳು ಪ್ರಮುಖ ಆಧಾರಗಳಾಗಿದ್ದು

ಜನರ ಪ್ರತಿಕ್ರಿಯೆಯನ್ನು ಸೂಚಿಸುತ್ತದೆ. ಸರಕಾರೇತರ ಸಂಸ್ಥೆಗಳ ಪ್ರಜಾಸತ್ತಾತ್ಮಕ ಮಾದರಿಯ ಹೋರಾಟವನ್ನು ಸಂಘಟಿಸುತ್ತವೆ ಎಂಬುದರ ಒಂದು ಮಾದರಿ ಈ ಅಧ್ಯಾಯದಲ್ಲಿದೆ.

ಐದನೇಯ ಅಧ್ಯಾಯದಲ್ಲಿ ಸಾಮಾಜಿಕ ಬದಲಾವಣೆಯ ಕುರಿತು ವಿವರಣೆ ನೀಡಲಾಗಿದ್ದು ಈ ಬದಲಾವಣೆಯ ಪ್ರಕ್ರಿಯೆಯಲ್ಲಿ ಸರಕಾರೇತರ ಸಂಸ್ಥೆಗಳು ಹೇಗೆ ತೊಡಗಿಸಿಕೊಳ್ಳುತ್ತವೆ ಎಂಬುದನ್ನು ವಿವರಿಸಲಾಗಿದೆ. ಸರಕಾರೇತರ ಸಂಸ್ಥೆಗಳು ಸಾಮಾಜಿಕ ಬದಲಾವಣೆಯ ಕುರಿತಂತೆ ಹಮ್ಮಿಕೊಂಡ ಕಾರ್ಯಕ್ರಮಗಳಿಗೆ ಜನರ ಪ್ರತಿಕ್ರಿಯೆ ಏನೆಂಬುದನ್ನು ಸೂಚಿಸಲಾಗಿದೆ.

ಕೊನೆಯ ಅಧ್ಯಾಯದಲ್ಲಿ ಸರಕಾರೇತರ ಸಂಸ್ಥೆಗಳ ಕಾರ್ಯ ವೈಖರಿಯ ಕುರಿತು ವಿಮರ್ಶೆಯನ್ನು ಮಾಡಲಾಗಿದೆ. ಈ ವಿಮರ್ಶೆಯನ್ನು ಮಾಡುವ ಹಂತದಲ್ಲಿ ವಿವಿಧ ಮಾದರಿಗಳೊಂದಿಗೆ ತುಲನೆಯನ್ನು ಕೂಡಾ ಮಾಡಲಾಗಿದ್ದು, ಸರಕಾರೇತರ ಸಂಸ್ಥೆಗಳ ಕಾರ್ಯ ನಿರ್ವಹಣೆಗೆ ಕೆಲವೊಂದು ಸಲಹೆಗಳನ್ನು ನೀಡುವ ಪ್ರಯತ್ನವನ್ನು ಮಾಡಲಾಗಿದೆ. ಇದೇ ಅಧ್ಯಾಯದಲ್ಲಿ ಮುಂದಿನ ಅಧ್ಯಯನಗಳ ಕುರಿತಾದ ಮುನ್ನೋಟವನ್ನು ನೀಡುವ ಪ್ರಯತ್ನವನ್ನು ಮಾಡಲಾಗಿದೆ. ಒಟ್ಟಿನಲ್ಲಿ ಸರಕಾರೇತರ ಸಂಸ್ಥೆಗಳು ತಮ್ಮ ವ್ಯವಸ್ಥಿತವಾದ ಕಾರ್ಯ ಚಟುವಟಿಕೆಗಳೊಂದಿಗೆ ಜನರ ಸಮಸ್ಯೆಗಳಿಗೆ ಸ್ಪಂದಿಸಬಹುದು ಮತ್ತು ಸಾಮಾಜಿಕ ಬದಲಾವಣೆಯ ಅಸ್ತ್ರಗಳಾಗಬಹುದೆಂಬ ಸಮರ್ಥನೆಯೊಂದಿಗೆ ಅಧ್ಯಯನವನ್ನು ಕೊನೆಗೊಳಿಸಲಾಗಿದೆ.

೧.೩. ಬೆಳ್ತಂಗಡಿ ತಾಲೂಕು ಭೌಗೋಳಿಕ ಲಕ್ಷಣಗಳು:

ಪೂರ್ವ ಕಾಲದಲ್ಲಿ ತುಳು ನಾಡೆಂದು ಪ್ರಸಿದ್ಧವಾಗಿದ್ದ ದಕ್ಷಿಣ ಕನ್ನಡ ಜಿಲ್ಲೆಗೆ ಸೇರಿದ ಅಮೋಘ ನಿಸರ್ಗ ಸೌಂದರ್ಯದಿಂದ ಕಂಗೊಳಿಸುತ್ತಿರುವ ನಾಡು ಬೆಳ್ತಂಗಡಿ. ಇದರ ಪೂರ್ವ ದಿಕ್ಕಿನಲ್ಲಿ ಮುಗಿಲು ಮುಟ್ಟುವ ಸಹ್ಯಾದ್ರಿ ಪರ್ವತ ಶ್ರೇಣಿಗಳು ತಲೆಯೆತ್ತಿ ನಿಂತಿವೆ. ದಟ್ಟವಾದ ಅಡವಿ, ಹಳ್ಳಿ, ಕೊಂಪೆ, ಕಣಿವೆ, ಕುಗ್ರಾಮಗಳಿಂದ ಕೂಡಿದ ಈ ನಾಡು ಪ್ರಕೃತಿಯ ಸೌಂದರ್ಯದ ನೆಲೆಬೀಡಾಗಿದೆ. ಎಲ್ಲಿ ನೋಡಿದರೂ ಹಚ್ಚ ಹಸುರಾಗಿ ಕಂಗೊಳಿಸುವ ಈ ನಾಡು ಮಾನವನಿಗೆ ಬೇಕಾದ ಪರಿಶುದ್ಧವಾದ ಪ್ರಾಣವಾಯುವನ್ನು ನೀಡುತ್ತದೆ. ನೇತ್ರಾವತಿ, ಫಲ್ಗುಣಿ, ಕಪಿಲಾ, ಕುಮಾರಧಾರ ಮತ್ತು ಅವುಗಳ ಹಲವಾರು ಉಪನದಿಗಳು ಈ ನಾಡಿನಲ್ಲಿ ಹರಿಯುತ್ತಿದ್ದು ಪ್ರಾಣಿ, ಪಕ್ಷಿ ಮತ್ತು ಮತ್ಸ್ಯಸಂಕುಲಕ್ಕೆ ಆಶ್ರಯತಾಣವಾಗಿವೆ. ಕೃಷಿ ಚಟುವಟಿಕೆಗೆ ವಿಪುಲವಾದ ನೀರಾವರಿ ಅವಕಾಶಗಳನ್ನು ಈ ನದಿಗಳು ಒದಗಿಸುತ್ತವೆ. ಇಲ್ಲಿಯ ಅರಣ್ಯಗಳು ವಿವಿಧ ರೀತಿಯ ಬೆಲೆ ಬಾಳುವ ಮರಗಳನ್ನು, ಔಷಧ ಮೂಲಿಕೆಗಳನ್ನು, ಗಿಡ–ಬಳ್ಳಿಗಳನ್ನು ಹೊಂದಿವೆ. ತೇಗ, ಗಂಧ, ಬೀಟೆ, ಹೊನ್ನೆ, ದೇವದಾರೆ ಮುಂತಾದವುಗಳ ಪ್ರಮುಖ ಬೆಲೆಬಾಳುವ ಮರಗಳು. ಕಾಡಿನಲ್ಲಿ ಸಸ್ತನಿಗಳು, ಹಕ್ಕಿಗಳು ಮತ್ತು ಪ್ರಾಣಿಗಳನ್ನು ಗುರುತಿಸಬಹುದು. ಆನೆ, ಕಾಡುಹಂದಿ, ಕರಡಿ, ಕಾಡುಪಾಪ, ಜಿಂಕೆ, ಕಡವೆ, ಮುಳ್ಳಹಂದಿ, ಮೊಲ ಮುಂತಾದ ಪ್ರಾಣಿಗಳಿವೆ.

ಬೆಳ್ತಂಗಡಿ ತಾಲೂಕು ಒಂದು ರಮಣೀಯ ಪರಿಸರವನ್ನು ಹೊಂದಿದೆ. ಹೊರ ಪ್ರದೇಶದಿಂದ ಜನರ ಈ ಪ್ರದೇಶಕ್ಕೆ ವಲಸೆ ಬಂದವರಂತೂ ಹಚ್ಚ ಹಸುರಾಗಿ ಕಂಗೊಳಿಸುತ್ತಿರುವ ಈ ನಾಡನ್ನು ಮುಚ್ಚದೆ ಇರಲಾರರು. ಒಂದು

ಕಡೆಯಿಂದ ಅತ್ಯಂತ ಎತ್ತರವಾದ ಜಮಲಾಬಾದ್, ಮತ್ತೊಂದು ಕಡೆಯಿಂದ ಬಲ್ಲಾಳರಾಯನದುರ್ಗ, ಸುಮಾರು 1700 ಅಡಿಗಳಷ್ಟು ಎತ್ತರದಿಂದ ಧುಮುಕುವ ಬಂಡಾಜೆ ಫಾಲ್ಸ್, ತಿರುವು ಮುರುವುಗಳಿಂದ ಕೂಡಿದ ಚಾರ್ಮಾಡಿ ಘಾಟಿ ಮುಂತಾದವುಗಳು ಕವಿ, ಸಾಹಿತಿ ಮತ್ತು ಸಾಹಸಿಗಳಿಗೆ ವಿಶೇಷ ಆಕರ್ಷಣೀಯವಾಗಿದೆ. ಮಳೆಗಾಲದಲ್ಲಿ ನಿರಂತರ ಮಳೆಯಾಗುತ್ತಿರುವುದರಿಂದ ಇಲ್ಲಿನ ಪ್ರಕೃತಿ ಸೌಂದರ್ಯಕ್ಕೆ ಮತ್ತಷ್ಟು ಮೆರುಗು ದೊರೆಯುತ್ತದೆ. ವಿವಿಧ ಕಡೆಗಳಿಂದ ಜನರು ಬೆಳ್ತಂಗಡಿಗೆ ಆಗಮಿಸುತ್ತಾರೆ.

ಈ ಪ್ರದೇಶದಲ್ಲಿ ಹಲವಾರು ಜಾತಿ, ಧರ್ಮ ಮತ್ತು ಜನಾಂಗಗಳಿಗೆ ಸೇರಿದ ಜನರಿದ್ದಾರೆ. ಮಲೆಕುಡಿಯರು, ಪೂಜಾರಿ, ಜೈನರು, ಗೌಡರು, ಹೊಲೆಯರು, ಮೇರರು, ನಲಿಕೆಯವರು, ಪರವರು, ಮೋಪ್ಲಿ, ಆಚಾರಿ, ಕ್ಷೌರಿಕ ಮುಂತಾದ ಜನರು ಈ ಪ್ರದೇಶದ ಮೂಲ ನಿವಾಸಿಗಳೆಂದು ನಂಬಲಾಗಿದೆ. ಈ ವಿವಿಧ ಜಾತಿ ಜನಾಂಗಕ್ಕೆ ಸೇರಿದ ಜನರು ವಿವಿಧ ವೃತ್ತಿಗಳಲ್ಲಿ ತೊಡಗಿದ್ದಾರೆ. ಪ್ರಾಕೃತಿಕ ಸಂಪನ್ಮೂಲಗಳನ್ನು ಬಳಸಿ ತಮ್ಮ ಜೀವನವನ್ನು ನಿರ್ವಹಿಸುವ ಗುಂಪುಗಳಿವೆ. ಇವುಗಳನ್ನು ಅನುಬೋಗಿಗಳ ಗುಂಪುಗಳೆಂದು ಕರೆಯಲಾಗಿದೆ. ಕೃಷಿಕರು ಹೆಚ್ಚಿನ ಸಂಖ್ಯೆಯಲ್ಲಿರುವುದನ್ನು ಅಧ್ಯಯನದ ವರದಿಗಳಿಂದ ತಿಳಿದು ಬಂದಿದೆ. ಸಾಂಪ್ರದಾಯಿಕ ಭತ್ತದ ಕೃಷಿ ಮಾಯವಾಗುತ್ತಿದ್ದು, ಜನರು ವಾಣಿಜ್ಯ ಬೆಳೆಗಳ ಕಡೆಗೆ ಬಲವನ್ನು ತೋರುತ್ತಿದ್ದಾರೆ. ಮೂರ್ತೆದಾರರು, ಮುಠ್ಠಾಳೆ ತಯಾರಕರು, ಚಾಪೆ ಹೆಣೆಯುವವರು, ಅರಣ್ಯ ಉತ್ಪನ್ನಗಳ ಸಂಗ್ರಾಹಕರು, ಮೀನು ಹಿಡಿಯುವವರು, ಗಿಡಮೂಲಿಕೆ ಬಳಕೆದಾರರು, ಸೌದೆ ಸಂಗ್ರಾಹಕಾರು, ಗೊರಬೆ ತಯಾರಕರು, ಮರ ಸಿಗಿಯುವವರು, ಬುಟ್ಟಿ ಮತ್ತು ಕುಡುಪು ತಯಾರಕರು, ಸಣ್ಣ ಕೃಷಿಕರು, ಕುಂಬಾರರು, ರಬ್ಬರು ಬೆಳೆಗಾರರು, ಕುಶಲಕರ್ಮಿಗಳು, ಬೀಡಿ ಕಟ್ಟುವವರು ಮುಂತಾದ ವೃತ್ತಿಯಲ್ಲಿ ತೊಡಗಿಸಿಕೊಂಡ ಜನರಿದ್ದಾರೆ.

ಬೆಳ್ತಂಗಡಿ ಪ್ರದೇಶ ಅಭಿವೃದ್ಧಿಯ ಪಥದಲ್ಲಿ ಮುನ್ನಡೆಯುತ್ತಿದ್ದಂತೆ ಬೇರೆ ಬೇರೆ ಜಾತಿ, ಧರ್ಮ, ಮತ್ತು ಜನಾಂಗಕ್ಕೆ ಸೇರಿದ ಜನರು ವಿವಿಧ ಕಡೆಗಳಿಂದ ವಲಸೆ ಬಂದಿರುತ್ತಾರೆ. ಹೀಗೆ ವಲಸೆ ಬಂದವರಲ್ಲಿ ಮಹಾರಾಷ್ಟ್ರದ ರತ್ನಗಿರಿ ಜಿಲ್ಲೆಯಿಂದ ಬಂದಂತಹ ಚಿತ್ಪಾವನ ಬ್ರಾಹ್ಮಣರು, ಕೇರಳದಿಂದ ಬಂದ ಮಲೆಯಾಳಿ-ಕ್ರಿಶ್ಚನ್ನರು, ಶೆಟ್ಟರು, ನಾಯ್ಕರು, ಮುಸಲ್ಮಾರು, ಹವ್ಯಕರು ಮತ್ತು ಶಿವಳ್ಳಿ ಬ್ರಾಹ್ಮಣರು ಪ್ರಮುಖರು. ಇವರು ಇಲ್ಲಿಗೆ ಆಗಮಿಸಿ ವಿವಿಧ ಉದ್ಯೋಗಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಈ ತರಹದ ವಲಸೆ ಇಂದಿಗೂ ನಿರಂತರವಾಗಿ ನಡೆದು ಬಂದಿದೆ. ಅದೇ ರೀತಿಯಲ್ಲಿ ಈ ಪ್ರದೇಶದಿಂದ ಕೂಡಾ ಎಷ್ಟೋ ಮಂದಿ ಇತರ ಪ್ರದೇಶಗಳಿಗೆ ವಲಸೆ ಹೋದ ದಾಖಲೆಗಳೂ ಇವೆ. ಹೀಗೆ ವಲಸೆ ಬಂದು ಇಲ್ಲಿ ನೆಲೆನಿಂತವರು ವಿವಿಧ ಉದ್ಯೋಗಗಳಲ್ಲಿ ತೊಡಗಿ ಕೊಂಡಿದ್ದಾರೆ.

ಕೃಷಿ ಚಟುವಟಿಕೆ ಬೆಳ್ತಂಗಡಿ ತಾಲೂಕಿನ ಜನತೆಯ ಜೀವನಾಧಾರವಾಗಿದೆ. ಬಹು ಪ್ರಾಚೀನ ಕಾಲದಲ್ಲಿ ಇಲ್ಲಿನ ಕೃಷಿಕರು ಕೇವಲ ಸಾಂಪ್ರದಾಯಿಕ ಭತ್ತದ ಕೃಷಿಯನ್ನು ಮಾತ್ರ ಅವಲಂಬಿಸಿದ್ದರು. ಕ್ರಮೇಣವಾಗಿ ವಲಸೆ ಬಂದ ಜನರಿಂದ ಇದು ಬದಲಾಯಿತು. ತೆಂಗು, ಅಡಿಕೆ, ಬಾಳೆ, ನೇರಳೆ, ನೆಲ್ಲಿ, ಪೇರಳೆ ಮುಂತಾದ ಫಲಭರಿತ ಮರಗಳನ್ನು

ಬೆಳೆಸುವುದಕ್ಕೆ ಆದ್ಯತೆ ನೀಡಲಾಯಿತು. ಕೇಧಗೆ, ಮಲ್ಲಿಗೆ, ಜಾಜಿ, ಸುಗಂಧಿ, ಪಾರಿಜಾತ ಮುಂತಾದ ಪುಷ್ಪವರ್ಗಗಳು ಈ ಪ್ರದೇಶದಲ್ಲಿ ಕೂಡಿಕೊಂಡವು. ರಬ್ಬರ್, ಕೊಕ್ ಮುಂತಾದ ವಾಣಿಜ್ಯ ಬೆಳೆಗಳು ತಾಲೂಕಿಗೆ ಪಾದಾರ್ಪಣೆ ಮಾಡಿದವು. ಗೇರು, ಕರಿಮೆಣಸು, ನೇಂದ್ರ ಬಾಳೆ, ಶುಂಠಿ, ಎಣ್ಣೆಹುಲ್ಲು, ಮರಗೆಣಸು, ಮುಂತಾದ ಬೆಳೆಗಳನ್ನು ಬಂಜರು ಭೂಮಿಯಲ್ಲಿ ಬೆಳೆಸಿ ಬಂಜರು ಭೂಮಿಯನ್ನು ಫಲವತ್ತಾದ ಭೂಮಿಯನ್ನಾಗಿ ಪರಿವರ್ತಿಸಿದ ಕೀರ್ತಿ ಮಲೆಯಾಳಿ ಕ್ರಿಶ್ಚನ್ನರಿಗೆ ಸಲ್ಲುತ್ತದೆ. ಆದುದರಿಂದ ಹಚ್ಚ ಹಸುರಿನಿಂದ ಕೂಡಿದ ಈ ಪ್ರಕೃತಿ ವರಪ್ರದೆಯಾಗಿ ಇಲ್ಲಿಯ ಜನತೆಯನ್ನು ಪೋಶಿಸುವಳೆಂದು ಕವಿ ಸಾಹಿತಿಗಳ ಬರವಣಿಗೆಗಳಲ್ಲಿ ವರ್ಣಿಸಲಾಗಿದೆ.

ತಾಲೂಕಿನ ಜಲ ಸಂಪನ್ಮೂಲಗಳ ಮೇಲೆ ಒಂದು ದೃಷ್ಟಿ ಹಾಯಿಸಿದಾಗ ನೇತ್ರಾವತಿ, ಫಲ್ಗುಣಿ, ಕಪಿಲಾ, ಕುಮಾರಧಾರಾ, ಮುಂತಾದ ಪ್ರಮುಖ ನದಿಗಳ ನೆನಪಿಗೆ ಬರುತ್ತದೆ. ಈ ನದಿಗಳಲ್ಲಿ ನೇತ್ರಾವತಿ ತಾಲೂಕಿಗೆ ಜೀವನದಿಯಾಗಿ ಪರಿಣಮಿಸಿದೆ. ಈ ಪ್ರದೇಶದಲ್ಲಿ ಪ್ರಾಚೀನ ಕಾಲದಿಂದಲೂ ಸ್ಥಳೀಯ ನೀರಾವರಿ ಪದ್ಧತಿಗಳು ಜಾರಿಯಲ್ಲಿದ್ದವು. ನದಿಗಳಿಗೆ ತಾತ್ಕಾಲಿಕವಾಗಿ ಸಣ್ಣ ಕಟ್ಟಗಳನ್ನು ನಿರ್ಮಿಸಿ ಅತೀ ಕಡಿಮೆ ಖರ್ಚಿನಲ್ಲಿ ಕೃಷಿ ಭೂಮಿಗೆ ನೀರಾವರಿ ಸೌಲಭ್ಯವನ್ನು ಒದಗಿಸಲಾಗುತ್ತಿತ್ತು. ಹೀಗೆ ಕಟ್ಟಿದ ಕಟ್ಟಗಳಿಗೆ ನಿರ್ವಹಣಾ ವೆಚ್ಚ ಅತ್ಯಂತ ಕನಿಷ್ಠವಾಗಿದ್ದು, ಇವುಗಳನ್ನು ಸ್ಥಳೀಯ ಜನರೇ ನಿರ್ಮಿಸುವುದು ರೂಢಿಯಾಗಿತ್ತು. ಇಂತಹ ಕಟ್ಟಗಳು ವನ್ಯಜೀವಿಗಳಿಗೆ ಮತ್ತು ಮತ್ಸ್ಯ ಸಂಕುಲಕ್ಕೆ ಆಸರೆಯಾಗಿದ್ದವು. ಇವುಗಳಿಂದ ಅಂತರ್ಜಲ ಮಟ್ಟ ವೃದ್ಧಿಯಾಗುವುದಲ್ಲದೆ, ನೀರಾವರಿಗೆ ತಗಲುವ ವೆಚ್ಚ ಕನಿಷ್ಠವಾಗಿತ್ತು. ಆದರೆ, ಕ್ರಮೇಣವಾಗಿ ಅಭಿವೃದ್ಧಿಯ ಸಂಕೇತವೆಂಬಂತೆ, ವೆಂಟೆಡ್ ಡ್ಯಾಂ ಗಳನ್ನು ನಿರ್ಮಿಸುವ ಪ್ರವೃತ್ತಿ ಹುಟ್ಟಿಕೊಂಡಿತ್ತು. ಅದೇ ರೀತಿ ಇತ್ತೀಚಿನ ದಿನಗಳಲ್ಲಿ ಮಳೆಯ ಅಭಾವದಿಂದಾಗಿ ಈ ನದಿಗಳು ಸಂಪೂರ್ಣವಾಗಿ ಬತ್ತಿಹೋಗುತ್ತಿದ್ದು ಜನರ ಇತರ ಮೂಲಗಳಾದ ಕೆರೆ, ಬಾವಿ ಮತ್ತು ಕೊಳವೆ ಬಾವಿಗಳನ್ನು ಅವಲಂಬಿಸಬೇಕಾದ ಅನಿವಾರ್ಯ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಕಾರಣದಿಂದ ನಾಡಿನ ಅಂತರ್ಜಲ ಮಟ್ಟ ಕುಸಿಯುತ್ತಿದೆ. ನದಿ ನೀರನ್ನು ಪೋಲು ಮಾಡುತ್ತಿರುವ ದಾಖಲೆಗಳಿವೆ. ವಾಹನಗಳನ್ನು ತೊಳೆಯುವ ಉದ್ದೇಶದಿಂದ ಅವುಗಳನ್ನು ನೇರವಾಗಿ ನದಿಗಳಿಗೆ ಇಳಿಸುವ ಪ್ರವೃತ್ತಿಯಂತೂ ಈ ಪ್ರಕೃತಿಯ ಮೇಲಿನ ಸವಾರಿ ಅಂದರೆ ತಪ್ಪಾಗಲಾರದು. ಇದರಿಂದಾಗಿ ನದಿ ನೀರು ಕಲುಷಿತಗೊಂಡು ಮತ್ಸ್ಯ ಸಂಕುಲಕ್ಕೆ ಹಾನಿಯಾಗುವುದು ಖಚಿತವಾಗಿದೆ. ಅರಣ್ಯಗಳ ನಾಶ ಮತ್ತು ಮಳೆಯ ಅಭಾವ ಕೂಡ ಈ ಅಂತರ್ಜಲ ಮಟ್ಟದ ಕುಸಿತಕ್ಕೆ ಕಾರಣವಾಗಿದೆ.

೧.೪ ಬೆಳ್ತಂಗಡಿ ಒಂದು ಪ್ರವಾಸಿ ತಾಣ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರ:

ಬೆಳ್ತಂಗಡಿ ತಾಲೂಕು ಒಂದು ಪ್ರವಾಸಿ ತಾಣ ಮತ್ತು ಸಾಂಸ್ಕೃತಿಕ ಕೇಂದ್ರವಾಗಿ ರೂಪುಗೊಂಡಿದೆ. ಹಲವಾರು ಪ್ರವಾಸಿ ಕೇಂದ್ರಗಳನ್ನು ಈ ನಾಡು ಹೊಂದಿದೆ. ಶ್ರೀ ಕ್ಷೇತ್ರ ಧರ್ಮಸ್ಥಳ ಈ ಪ್ರದೇಶದ ಒಂದು ಪ್ರಮುಖ ಆಕರ್ಷಣೀಯಾಗಿದೆ. ಪೂಜ್ಯರಾದ ಡಾ। ವಿರೇಂದ್ರ ಹೆಗ್ಡೆಯವರ ಅವಿರತ ಪ್ರಯತ್ನದಿಂದಾಗಿ ತುಳುನಾಡಿನ ಹೆಸರು ದೇಶ ವಿದೇಶಗಳಲಿ ರಾರಾಜಿಸುತ್ತಿದೆ. ಶ್ರೀ ಕ್ಷೇತ್ರ ಧರ್ಮಸ್ಥಳವು ಧರ್ಮ, ಶಿಕ್ಷಣ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಿಗೆ ವಿಶೇಷ ಕೊಡುಗೆಯನ್ನು ನೀಡುವುದರೊಂದಿಗೆ ಒಂದು ಪ್ರವಾಸಿ ಮತ್ತು ಯಾತ್ರಾ ಕೇಂದ್ರವಾಗಿ ರೂಪುಗೊಂಡಿದೆ. ದೇಶ

ವಿದೇಶದಿಂದ ಪ್ರವಾಸಿಗರು, ಯಾತ್ರಿಕರು, ಇಲ್ಲಿಗಾಗಮಿಸುತ್ತಿದ್ದಾರೆ. ಕ್ಷೇತ್ರದ ವತಿಯಿಂದ ನಡೆಯುವ ಹಲವಾರು ಯೋಜನೆಗಳು ತಳಸ್ಥರದ ಜನರಿಗೆ ನೇರವಾಗಿ ಸಹಾಯಕವಾಗುತ್ತವೆ, ಅನ್ನದಾನ, ವಿದ್ಯಾದಾನ, ಔಷಧದಾನ, ಅಭಯದಾನ ಮುಂತಾದವುಗಳನ್ನು ನೀಡಿದ ಹೆಗ್ಗಳಿಕೆಗೆ ಶ್ರೀ ಕ್ಷೇತ್ರವು ಪಾತ್ರವಾಗಿದ್ದು ದೇಶ ವಿದೇಶಗಳಿಂದ ಬಂದ ಯಾತ್ರಿಕರು ಈ ವ್ಯವಸ್ಥೆಗಳನ್ನು ಹೊಗಳಿ ಕೊಂಡಾಡಿದ್ದಾರೆ. ಶ್ರೀ ಕ್ಷೇತ್ರದ ವತಿಯಿಂದ ನಡೆಸಲ್ಪಡುವ ಯೋಜನೆಗಳಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ಪ್ರಪಂಚಕ್ಕೆ ಮಾದರಿಯಾಗಿದೆ. ಇಲ್ಲಿರುವ ವಸ್ತು ಸಂಗ್ರಹಾಲಯ, ಗೋಮಟೇಶ್ವರನ ಪ್ರತಿಮೆ, ಮತ್ತು ಮಂಜುನಾಥ ಸ್ವಾಮಿ ದೇವಾಲಯ ಈ ಕ್ಷೇತ್ರದ ವಿಶೇಷ ಆಕರ್ಷಣೀಯಾಗಿದೆ. ವೇಣೂರಿನ ಜೈನ ಬಸದಿಗಳು ಮತ್ತು ತಿಮ್ಮಣ್ಣ ಅಜಿಲರ ಕಾಲಕ್ಕೆ ಸೇರಿದ ಗೋಮಟೇಶ್ವರನ ವಿಗ್ರಹ ಜೈನ್ ಭಕ್ತಾದಿಗಳನ್ನು ಆಕರ್ಷಿಸುತ್ತದೆ.

ಇತಿಹಾಸ ಪ್ರಸಿದ್ಧ ಶ್ರೀ ಅನಂತೇಶ್ವರ ಕ್ಷೇತ್ರ ಬಳ್ಳಮಂಜ, ಶ್ರೀ ದೇವಿ ಭಗತೀ ಕ್ಷೇತ್ರ, ಕಾಜೂರು ಧರ್ಗಾ ಶರೀಫ್, ಸೇಕ್ರೆಡ್ ಹಾರ್ಟ್ ಚರ್ಚ್ ಮಡಂತ್ಯಾರು ಮುಂತಾದ ಧಾರ್ಮಿಕ ಕೇಂದ್ರಗಳಿಗೆ ಊರ ಪರವೂರ ಭಕ್ತಾದಿಗಳು ಆಗಮಿಸುತ್ತಿದ್ದಾರೆ. ಬಂಡಾಜೆ ಪಾಲ್ಸ್, ಜಮಾಲಾಬಾದ್ ಮತ್ತು ಚಾರ್ಮಾಡಿ ಪ್ರದೇಶಗಳು ಚಾರಣ ಮತ್ತು ಸಾಹಸೀ ಶಿಬಿರಗಳಿಗೆ ಪೂರಕವಾಗಿದೆ. ಜಮಾಲಾಬಾದ್ ಕೋಟೆಯನ್ನು ಏರಿ ಬೆಳ್ತಂಗಡಿ ತಾಲೂಕಿನ ಸೌಂದರ್ಯವನ್ನು ವೀಕ್ಷಿಸುವುದು ಪ್ರಕೃತಿ ಪ್ರೇಮಿಗೊಂದು ರಸದೌತಣ. ಬಂಗಾಡಿಯಿಂದ ಕುದುರೆಮುಖದ ಬಲ್ಲಾಳರಾಯನ ದುರ್ಗಕ್ಕೆ ಸಾಹಸೀ ಶಿಬಿರಗಳನ್ನು ಮತ್ತು ಚಾರಣಗಳನ್ನು ಏರ್ಪಡಿಸಲಾಗುತ್ತದೆ. ಬೆಳ್ತಂಗಡಿ ತಾಲೂಕಿನ ಚಾರ್ಮಾಡಿ ಘಾಟಿಯ ಮೂಲಕ ಚಿಕ್ಕಮಗಳೂರು ಜಿಲ್ಲೆಗೆ ಸಂಪರ್ಕ ಕಲ್ಪಿಸಲಾಗಿದ್ದು, ಘಾಟಿ ರಸ್ತೆಯ ತಿರುವು ಮುರುವುಗಳ ಮೂಲಕ ವಾಹನ ಚಲಾವಣೆ ಒಂದು ವಿಶೇಷ ಅನುಭವ.

ಬೆಳ್ತಂಗಡಿ ತಾಲೂಕು ಒಂದು ಸಾಂಸ್ಕೃತಿಕ ಕೇಂದ್ರವಾಗಿದೆ. ತುಳುನಾಡ ಸಂಸ್ಕೃತಿ ಮತ್ತು ಪರಂಪರೆಯನ್ನು ಎತ್ತಿ ಹಿಡಿದುದರಲ್ಲಿ ಬೆಳ್ತಂಗಡಿಯ ಪಾತ್ರ ಹಿರಿದಾದದು. ಸ್ಪಷ್ಟವಾಗಿ ತುಳು ಶಬ್ದಗಳ ಉಪಯೋಗದೊಂದಿಗೆ ತುಳು ಮಾತನಾಡುತ್ತಿರುವ ಜನರು ತಮ್ಮ ಸಂಪ್ರದಾಯಗಳನ್ನು ಭಕ್ತಿ ಪೂರ್ವಕವಾಗಿ ಆಚರಿಸುತ್ತಾರೆ. ಹಿಂದೂ, ಮುಸ್ಲಿಂ, ಮತ್ತು ಕ್ರೈಸ್ತ ಧರ್ಮಗಳಿಗೆ ಸೇರಿದ ಜನರು ಈ ಪ್ರದೇಶದಲ್ಲಿದ್ದಾರೆ. ಅಳಿಯ ಕಟ್ಟಿನ ವಿವಾಹ ಪದ್ದತಿ ಅಸ್ತಿತ್ವದಲ್ಲಿದೆ. ಹಬ್ಬಗಳನ್ನು ಸಂಪ್ರದಾಯ ಬದ್ಧವಾಗಿ ಆಚರಿಸಲಾಗುತ್ತದೆ. ದೀಪಾವಳಿಯ ಸಂದರ್ಭದಲ್ಲಿ "ಬುಲೆಕ್ಕ್ ಮರ್ದ್" ಹಾಕುವ ಸಂಪ್ರದಾಯ ಇಲ್ಲಿ ಮಾತ್ರ ಉಳಿದಿದೆ. ದೊಂಪದ ಬಲಿ, ಭೂತದ ಕೋಲ, ಪುರುಷವೇಶ, ಗೊಂದೋಲು ಪೂಜೆ ಮುಂತಾದವುಗಳು ಆಚರಣೆಯಲ್ಲಿವೆ. ಕರಂಗೋಲು, ಆಟಿ ಕಳೆಂಜ, ಸೋಣ ಮದ್ಮಲ್, ಮುಂತಾದವುಗಳು ಅಪರೂಪವಾಗಿ ಚಾಲ್ತಿಯಲ್ಲಿವೆ. ಕೋಳಿ ಅಂಕ, ಕಂಬಳ ಕ್ರೀಡೆ, ಯಕ್ಷಗಾನ ಆಚರಣೆಯಲ್ಲಿದೆ. ಯಕ್ಷಗಾನದ ಮೂಲಕ ನಮ್ಮ ದೇಶದ ಭವ್ಯ ಐತಿಹಾಸಿಕ ಪರಂಪರೆಯನ್ನು ಜನರಿಗೆ ನೆನಪಿಸುವ ಪ್ರಯತ್ನವನ್ನು ಮಾಡಲಾಗುತ್ತದೆ. ಸಂಗೀತ, ಚಿತ್ರಕಲೆ, ಕಾವ್ಯ, ಸಾಹಿತ್ಯ ಮುಂತಾದ ಕ್ಷೇತ್ರಗಳಲ್ಲಿ ಜನರು ವಿಶೇಷ ಪರಿಣತಿಯನ್ನು ಹೊಂದಿದ್ದಾರೆ. ಅಖಿಲ ಭಾರತೀಯ ಮಟ್ಟದ ನಾಟ್ಯ ಮತ್ತು ಸಂಗೀತ ಕಲಾವಿಧವನ್ನು ಈ ನಾಡು ಹೊಂದಿದೆ. ಒಟ್ಟಿನಲ್ಲಿ ಹೇಳುವುದಾದರೆ ಬೆಳ್ತಂಗಡಿ ಒಂದು ಭವ್ಯ ಮತ್ತು ವಿಶಿಷ್ಟ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿದೆ ಎಂದರೆ ತಪ್ಪಾಗಲಾರದು.

೧.೫ ಐತಿಹಾಸಿಕ ನಿವೇಶನಗಳು:

ಬೆಳ್ತಂಗಡಿ ಒಂದು ಭವ್ಯ ಐತಿಹಾಸಿಕ ಪರಂಪರೆಯುಳ್ಳ ನಾಡಾಗಿದೆ. ಇಲ್ಲಿ ಹಲವಾರು ಐತಿಹಾಸಿ ನಿವೇಶನಗಳಿವೆ. ಇತಿಹಾಸ ಪ್ರಸಿದ್ಧ ಜಮಾಲಾಬಾದ್ ಕೋಟೆ, ಬಂಗರಸರ-ಭದ್ರ ನೆಲೆಯಾಗಿರುವ ಬಂಗಾಡಿ ಮತ್ತು ಅಜಿಲ ಮನೆತನಕ್ಕೆ ಸೇರಿದ ವೇಣೂರು ಇಲ್ಲಿಯ ಪ್ರಮುಖ ಐತಿಹಾಸಿಕ ನಿವೇಶನಗಳಾಗಿವೆ. ಇವುಗಳಲ್ಲದೆ, ಪವಿತ್ರ ಯಾತ್ರಾ ಸ್ಥಳವಾದ ಧರ್ಮಸ್ಥಳ ಈ ನಾಡಿನ ಒಂದು ವಿಶೇಷ ಧಾರ್ಮಿಕ ಕೇಂದ್ರವಾಗಿದೆ.

ಜಮಲಾಬಾದ್ ಕೋಟೆ:

ಬೆಳ್ತಂಗಡಿಯಿಂದ ಸುಮಾರು ಎಂಟು ಕಿ.ಮಿ. ಉತ್ತರಕ್ಕೆ ಸಮುದ್ರ ಮಟ್ಟದಿಂದ ಸುಮಾರು 1788 ಅಡಿಗಳಷ್ಟು ಎತ್ತರದಲ್ಲಿರುವ ಇತಿಹಾಸ ಪ್ರಸಿದ್ದ ಕೋಟೆಯೇ ಜಮಾಲಾಬದ್, ಗ್ರಾನೈಟ್ ಕಲ್ಲುಗಳಿಂದ ಕೂಡಿದ ಈ ಪ್ರದೇಶವನ್ನು ನರಸಿಂಹ ಗಡ ಎಂಬುದಾಗಿ ಕರೆಯಲಾಗುತ್ತಿತ್ತು. ಈ ಕೋಟೆಯನ್ನು 1794ರಲ್ಲಿ ಮೈಸೂರಿನ ಪ್ರಖ್ಯಾತ ಅರಸನಾದ ಟಿಪ್ಪುಸುಲ್ತಾನ್‌ನಿಂದ ಕಟ್ಟಲಾಯಿತು. ಈ ಕೋಟೆಯ ಪೂರ್ವದ ಬದಿಯಿಂದ ಕಲ್ಲಿನ ಮೆಟ್ಟಿಲುಗಳಿವೆ. ಈ ಕೋಟೆಯ ಗೋಡೆಯನ್ನು ಮತ್ತು ಪ್ರವೇಶ ದ್ವಾರವನ್ನು ಅಮ್ರತ ಶಿಲೆಯನ್ನು ಉಪಯೋಗಿಸಿ ನಿರ್ಮಿಸಲಾಗಿದೆ. ಸುಮಾರು 1876 ಮೆಟ್ಟಿಲುಗಳನ್ನು ಹೊಂದಿರುವ ಈ ಕೋಟೆಯ ನಿರ್ಮಾಣ ಕಾಮಗಾರಿಯನ್ನು ಪ್ರಾನ್ಸಿನ ಎಂಜಿನಿಯರುಗಳ ಸಹಾಯದಿಂದ ನಿರ್ಮಿಸಲಾಗಿದೆ. ಎಂಬುದಾಗಿ ನಂಬಲಾಗಿದೆ. ಕೋಟೆಯ ಒಳಗೆ ಎರಡು ನೀರಿನ ಬುಗ್ಗೆಗಳೂ ಮತ್ತು ತೊಟ್ಟಿಗಳೂ ಇವೆ. ಯುರೋಪಿನ ಮಾದರಿಯಲ್ಲಿ ರಚಿಸಲಾದ ಕಬ್ಬಿಣದ ಫಿರಂಗಿಗಳನ್ನು ಹೊಂದಿದೆ. ಬ್ರಿಟಿಷರು ಈ ಕೋಟೆಯನ್ನು 1799ರಲ್ಲಿ ವಶಪಡಿಸಿದರು. ಐತಿಹಾಸಿಕ ವೃತ್ತಾಂತಗಳು ಹೇಳುವ ಪ್ರಕಾರ ಟಿಪ್ಪು ಸುಲ್ತಾನ್ ತನ್ನ ಶತ್ರುಗಳನ್ನು ಈ ಕೋಟೆಯಿಂದ ಕೆಳಕ್ಕೆ ಎಸೆದು ಶಿಕ್ಷಿಸುತ್ತಿದ್ದ ಎಂದು ತಿಳಿದು ಬರುತ್ತದೆ.

ಜಮಾಲಾಬಾದ್ ಒಂದು ಚಾರಣದ ಕೇಂದ್ರವಾಗಿ ಪರಿಣಮಿಸಿದೆ. ಇಲ್ಲಿಂದ ಕುದುರೆಮುಖ ಪರ್ವತ ಪ್ರದೇಶಶವು ಬಹು ರಮಣೀಯವಾಗಿ ತೋರುತ್ತದೆ. ಇತ್ತೀಚಿನ ದಿನಗಳಲಿ ಈ ಪ್ರದೇಶದಲ್ಲಿ ಕೆಲವೊಂದು ಕಾನೂನು ಬಾಹಿರ ಚಟುವಟಿಕೆಗಳು ನಡೆಯುತ್ತಿರುವ ಬಗ್ಗೆ ವದಂತಿಗಳಿದ್ದೂ ಪ್ರವೇಶ ಮತ್ತು ಆಗಮನದ ಬಗ್ಗೆ ಕೆಲವು ನಿರ್ಬಂಧಗಳನ್ನು ಹಾಕಲಾಗಿದೆ.

ವೇಣೂರು:

ವೇಣೂರು ಅಜಿಲ ಮನೆತನದ ಮೂಲ ನೆಲೆಯಾಗಿದ್ದು, ಐತಿಹಾಸಿಕ ಪ್ರಾಮುಖ್ಯತೆಯನ್ನು ಹೊಂದಿದೆ. ಜೈನ ಕಲೆ, ವಾಸ್ತು ಶಿಲ್ಪದ ಕೇಂದ್ರವೂ ಆಗಿರುವ ವೇಣೂರು 35 ಅಡಿ ಎತ್ತರದ ಗೋಮಟೇಶ್ವರನ ಪ್ರತಿಮೆಯನ್ನು ಹೊಂದಿದೆ. ಸುಮಾರು ಐದು ಅಡಿ ಎತ್ತರದ ವೇದಿಕೆಯ ಮೇಲೆ ಪ್ರತಿಷ್ಠಾಪಿಸಲಾದ ಈ ವಿಗ್ರಹ ಕಾರ್ಕಳದ ಗೋಮಟೇಶ್ವರನ ವಿಗ್ರಹಕದಕೆ ಹೋಲುತ್ತದೆ. ದೇಹದ ಪ್ರತೀ ಅಂಗಾಂಗಳನ್ನು ಅತ್ಯಂತ ವಿಶಿಷ್ಟವಾಗಿ ಕೆತ್ತಲಾಗಿದ್ದು ಶಿಲ್ಪಿಯ ಪ್ರಾವಿಣ್ಯತೆಯನ್ನು ಅದು ಸೂಚಿಸುತ್ತದೆ. ಪೂರ್ವ ದಿಕ್ಕಿಗೆ ಮುಖ ಮಾಡಿ ಪ್ರತಿಸ್ಥಾಪಿಸಲಾದ ಈ ವಿಗ್ರಹವು ಅಜಿಲ ಮನೆತನದ ತಿಮ್ಮರಾಜನ ಕಾಲಕ್ಕೆ ಸೇರಿದ್ದಾಗಿದೆ. (1604). ಪ್ರಪಂಚದ ವಿವಿಧ ಕಡೆಯಿಂದ ಈ ಸ್ಥಳಕ್ಕೆ ಯಾತ್ರಾರ್ಥಿಗಳು ಬೇಟಿ ನೀಡುತ್ತಿದ್ದಾರೆ.

ಅಳದಂಗಡಿ:

ಅಜಿಲ ಮನೆತನದ ಅತ್ಯಾದುನಿಕ ಕೇಂದ್ರ ಅಳದಂಗಡಿ. ಇಲ್ಲಿ ಅಜಿಲ ಮನೆತನಕ್ಕೆ ಸೇರಿದ ಅರಮನೆಯಿದೆ. ಅದು ಅವರ ಮನೆತನದ ಐತಿಹಾಸಿಕ ಪರಂಪರೆಯಿನ್ನ ಪ್ರತಿಬಿಂಬಿಸುತ್ತದೆ. ತಿಮ್ಮಣ್ಣ ಅರಸರಾದ ಡಾ। ಪದ್ಮಪ್ರಸಾದ ಅಜಿಲರು ಈಗಿನ ಅರಸರಾಗಿದ್ದು ಅಳದಂಗಡಿ ಅರಮನೆಯಲ್ಲಿ ವಾಸವಾಗಿದ್ದಾರೆ.

ಬಂಗಾಡಿ:

ಬಂಗರ ಮೂಲ ಕೇಂದ್ರವಾಗಿದೆ. ಬಂಗರ ಕಾಲಕ್ಕೆ ಸೇರಿದ ಅರಮನೆಯು ಶಿಥಿಲಗೊಂಡ ಸ್ಥಿತಿಯಲ್ಲಿ ಕಂಡುಬರುತ್ತದೆ. ಬಂಗರ ಕಾಲದ ಕೆಲವೊಂದು ವಿಶೇಷತೆಗಳನ್ನು ಈ ಪ್ರದೇಶದಲ್ಲಿ ಗುರುತಿಸಬಹುದು. ಬಂಗರಸರು ಈ ಪ್ರದೇಶದಲ್ಲಿ ಅರಮನೆ, ದೇವಾಲಯಗಳು ಮತ್ತು ಬಸದಿಗಳನ್ನು ನಿರ್ಮಾಣ ಮಾಡಿರುವರು. ಹೆಚ್ಚಿನ ಕಟ್ಟಡಗಳು ಹಾಳಾಗಿದ್ದು ಅವುಗಳ ಅವಶೇಷಗಳು ಸ್ವಲ್ಪ ಮಟ್ಟಿಗೆ ಅವರ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತಿವೆ.

೧.೬ ಪ್ರಮುಖ ರಾಜವಂಶಗಳು:

ಕರ್ನಾಟಕ ರಾಜ್ಯದಲ್ಲಿ ಹಲವಾರು ಪ್ರಾದೇಶಿಕ ಸಾಮ್ರಾಜ್ಯಗಳು ಉದಯಿಸಿ ಪತನವನ್ನು ಕಂಡಿವೆ. ಅದರೇ ಕೆಲವೊಂದು ಕ್ಷೇತ್ರದಲ್ಲಿ ಇವರು ನೀಡಿದ ಕೊಡುಗೆ ಇಂದಿಗೂ ಅಚ್ಚಳಿಯದೆ ಉಳಿದಿದೆ. ಬೆಳ್ತಂಗಡಿ ತಾಲೂಕು ಕೂಡ ಈ ರೀತಿಯ ಪರಂಪರೆಯಿಂದ ಹೊರತಾಗಿಲ್ಲ. ಇಲ್ಲಿ ಕೂಡ ಹಲವಾರು ರಾಜಮನೆತನಗಳು ಅಸ್ತಿತ್ವದಲ್ಲಿದ್ದು ಬೆಳ್ತಂಗಡಿ ತಾಲೂಕಿನ ಪ್ರಾದೇಶಿಕ ಇತಿಹಾಸವನ್ನು ಉಳಿಸಿ ಬೆಳೆಸುವಲ್ಲಿ ಯಶಸ್ವಿಯಾಗಿವೆ. ತುಳುನಾಡಿನ ಇತಿಹಾಸ ರಚನೆಗೆ ಸಂಬಂಧಪಟ್ಟಂತೆ ಗಣಪತಿರಾವ್ ಐಗಳ್, ಡಾ। ಗುರುರಾಜ ಭಟ್, ಡಾ। ವಸಂತ ಮಾಧವ, ಡಾ। ಕೆ.ವಿ. ರಮೇಶ್, ಡಾ। ಸೂರ್ಯನಾಥ್ ಕಾಮತ್, ಬಿ.ಎ. ಸಾಲೆತ್ತೂರೆ ಮತ್ತು ಅನಂತರಾಮ ಬಂಗಾಡಿ ಮುಂತಾದವರ ಕೊಡುಗೆ ವಿಶೇಷವಾದುದು. ಶಾಸನಗಳ ಆಧಾರದಲ್ಲಿ ರಚಿತವಾದ ಇವರ ಬರವಣಿಗೆಗಳು ಸ್ಥಳೀಯ ರಾಜವಂಶಗಳ ಇತಿಹಾಸ ರಚನೆಗೆ ಮಹತ್ವ ನೀಡಿವೆ. ಗಣಪತಿರಾವ್ ಐಗಳ್ ಮತ್ತು ಅನಂತರಾಮ ಬಂಗಾಡಿ ಇವರು ಬೆಳ್ತಂಗಡಿ ತಾಲೂಕಿನ ಐತಿಹಾಸಿಕ ರಾಜಮನೆತನಗಳ ಇತಿಹಾಸ ರಚನೆಗೆ ಗಮನವನ್ನು ನೀಡಿದ್ದಾರೆ. ಇಂತಹ ಐತಿಹಾಸಿಕ ರಾಜ ಮನೆತನಗಳಲ್ಲಿ ಬಂಗಾಡಿಯ ಬಂಗರು ಮತ್ತು ವೇಣೂರಿನ ಅಜಿಲರು ಪ್ರಮುಖರೆಂದು ಗುರುತಿಸಲಾಗಿದೆ.

ಬಂಗಾಡಿಯ ಬಂಗರು:

ಒಂದು ಸಿದ್ಧಾಂತದ ಪ್ರಕಾರ ಇವರ ಮೂಲವು ಹೊಯ್ಸಳರಿಗೆ ಸೇರುತ್ತದೆ ಎಂದು ನಂಬಲಾಗಿದೆ. ಗಂಗ ಅರಸನಾದ ಚಂದ್ರಶೇಖರ ಅರಸನು ಹೊಯ್ಸಳರಾಜನಿಂದ ಸೋಲನ್ನು ಅನುಭವಿಸಿದಾಗ ಅವನ ಸೈನಿಕರು ರಾಜಕುಮಾರ ಮತ್ತು ರಾಜ ಕುಟುಂಬದೊಂದಿಗೆ ಮಲೆನಾಡಿನಲ್ಲಿ ಅಡಗಿಕೊಂಡರು. ಮುಂದೆ ಹೊಯ್ಸಳ ಅರಸನಾದ ತ್ರಿಭುವನಮಲ್ಲ ವೀರಗಂಗನು ತನ್ನ ಸೀಮೆಯ ಬಗ್ಗೆ ವಿಚಾರಣೆ ಮಾಡುವ ಸಲುವಾಗಿ ಬಂಗಾಡಿಗೆ ಬಂದನು. ಈ ಸಂದರ್ಭದಲ್ಲಿ ಚಂದ್ರಶೇಖರ ಅರಸನ ಸೈನಿಕರು ರಾಜಕುಮಾರನೊಂದಿಗೆ ವೀರಗಂಗನಿಗೆ ಬೇಟಿಯಾದಾಗ ಬೇಸರಪಟ್ಟ, ಅರಸನು ಬಂಗಾಡಿ ಸೇರಿದಂತೆ 15 ಮಾಗಣೆಗಳನ್ನು ಈ ರಾಜಕುಮಾರನಿಗೆ ಬಿಟ್ಟು ಕೊಟ್ಟನು. ಅವನೇ ಮುಂದಕ್ಕೆ ವೀರ ನರಸಿಂಹ ಬಂಗರಾಜ ಎಂಬುದಾಗಿ ಕರೆಯಲ್ಪಟ್ಟಿದ್ದು, ಬಂಗರ ಸ್ಥಾಪಕ ಎಂದು ಹೇಳಲಾಗಿದೆ.

ಬಂಗಾಡಿ ಪಟ್ಟಣವನ್ನು ನಿರ್ಮಿಸಿದ ಕೀರ್ತಿ ಇವನಿಗೆ ಸಲ್ಲುತ್ತದೆ. ಇಲ್ಲಿ ಹಲವಾರು ದೇವಸ್ಥಾನಗಳನ್ನು ಮತ್ತು ಬಸದಿಗಳನ್ನು ಕಟ್ಟಿಸಿದನು.

ವೀರನರಸಿಂಹ ಬಂಗರಾಜನ ಮರಣಾ ನಂತರ ಚಂದ್ರಶೇಖರ ಬಂಗರಾಜ, ಪಾಂಡ್ಯಪ್ಪ ಬಂಗರಾಜ, ವಿಠಲದೇವಿ, ಒಂದನೇಯ ಕಾಮರಾಯ, ಪದುಮಲ ದೇವಿ, ಹಾವಳಿ ಬಂಗರಾಜ, ಶಂಕಾರಾದೇವಿ ಮುಂತಾದವರು ರಾಜ್ಯವಾಳದರು. ಎರಡನೇಯ ಕಾಮರಾಯನ ಕಾಲದಲ್ಲಿ ಬಂಗರಸರಿಗೆ ಪೋರ್ಚುಗೀಸರ ಹಾವಳಿ ಎದುರಿಸಬೇಕಾಯಿತು. ಕಡೆಗೆ ಒಂದು ಒಪ್ಪಂದದ ಪ್ರಕಾರ ಬಂಗರಾಜನು ಪೋರ್ಚುಗೀಸರಿಗೆ ಅಕ್ಕಿ ಮತ್ತು ಎಣ್ಣೆಯ ರೂಪದಲ್ಲಿ ಸುಂಕವನ್ನು ಕೊಡಲಾರಂಭಿಸಿದನು. ಬಂಗರ ಅರಸರಾದ ಮೂರನೇಯ ಕಾಮರಾಯನ ಕಾಲದಲ್ಲಿ ಕಾರ್ಕಳದ ಭೈರರಾಯನಿಗೂ, ಬಂಗರಸರಿಗೂ ವೈವಾಹಿಕ ಸಂಬಂಧದ ವಿಷಯದಲ್ಲಿ ಅಸಮಾಧಾನವೇರ್ಪಟ್ಟಿತು. ಕೊನೆಗೆ ಕ್ಯೊಲ ಗ್ರಾಮದಲ್ಲಿ ನಡೆದ ಯುದ್ಧದಲ್ಲಿ ಕಾಮರಾಯನು ಸೋಲಿಸಲ್ಪಟ್ಟನು. ಬಂಗರ ಕುಟುಂಬಕ್ಕೆ ಸೇರಿದ ಲಕ್ಷ್ಮಣ ಬಂಗರಾಜನು ಚೌಟರರಾಣಿಯಾದ ಅಬ್ಬಕ್ಕಾ ದೇವಿಯನ್ನು ವಿವಾಹವಾಗಿದ್ದನು. ಆದರೇ ಅಬ್ಬಕ್ಕಾದೇವಿಯು ಉಳ್ಳಾಲ ಅರಮನೆಯಲ್ಲಿಯೇ ಇದ್ದಳು. ಇದೇ ಕುಟುಂಬಕ್ಕೆ ಸೇರಿದ ನಾಲ್ಕನೇ ಲಕ್ಷ್ಮಪ್ಪರಸ ಬಂಗರಾಜನು ಹೈದರಾಲಿಯನ್ನು ಮಂಗಳೂರಿನಲ್ಲಿ ಬೇಟೆಯಾಗಿದ್ದನೆಂದು ತಿಳಿದುಬರುತ್ತದೆ. ಹೀಗೆ ಬೆಳ್ತಂಗಡಿ ಮತ್ತು ದಕ್ಷಿಣ ಕನ್ನಡದ ಪ್ರಾದೇಶಿಕ ಇತಿಹಾಸ ಬೆಳವಣಿಗೆ ಬಂಗರ ಕೊಡುಗೆ ಅಪಾರವಾದುದು.

ವೇಣೂರಿನ ಅಜಿಲರು.

ತುಳುನಾಡನ್ನು ಆಳಿದ ಜೈನರಾಜರ ವಂಶಗಳಲ್ಲಿ ಬೆಳ್ತಂಗಡಿ ತಾಲೂಕಿನ ವೇಣೂರಲ್ಲಿ ಅಸ್ತಿತ್ವಕ್ಕೆ ಬಂದಿದ್ದ ಅಜಿಲರ ವಂಶವು ಒಂದಾಗಿದೆ. ವೇಣೂರಿನಲ್ಲಿ ಇವರ ಅರಮನೆಯಿದ್ದು ಇದೇ ಅವರ ಮೂಲ ನೆಲೆಯಾಗಿತ್ತು. ಇವರ ವಂಶದ ಬಗ್ಗೆ ಸಿಕ್ಕಿದ ದಾಖಲೆ ಮತ್ತು ಶಾಸನಗಳ ಪ್ರಕಾರ ಒಂದನೇ ತಿಮ್ಮಣ್ಣಾಜಿಲರು ಕ್ರಿ.ಶ. 1154 ರಿಂದ 1180 ವರೆಗೆ ಆಳಿದರು ಎಂದು ತಿಳಿದು ಬರುತ್ತದೆ. ಇದೇ ವಂಶಕ್ಕೆ ಸೇರಿದ ಮದುರಕ್ಕದೇವಿಯನ್ನು ಗಂಗವಂಶದ ಅರಸರ ಕುಟುಂಬದವರಾದ ಚಾವುಂಡರಾಯನು ಮದುವೆ ಮಾಡಿ ಕೊಂಡಿದ್ದನು. ಮುಂದೆ ಒಂದನೇ ರಾಜಕುಮಾರನ ತರುವಾಯ 4ನೇ ವೀರ ತಿಮ್ಮಣ್ಣಾಜಿಲನು 1550 ರಲ್ಲಿ ಅಧಿಕಾರಕ್ಕೆ ಬಂದನು. ಇವನ ಕಾಲದಲ್ಲಿ ತುಳು ರಾಜ್ಯದಲ್ಲಿ ಶಿಲ್ಪಕಲೆಯು ಬಹಳ ಅಭಿವೃದ್ಧಿಯನ್ನು ಹೊಂದಿತ್ತು. ಇವನ ಆದೇಶದ ಮೇರೆಗೆ ಶಂಭು ಕಲ್ಕುಡನ ಕುಟುಂಬದವನೊಬ್ಬನನ್ನು ಕರೆಸಿ ಕಲ್ಯಾಣಿ ಎಂಬ ಸ್ಥಳದಲ್ಲಿರುವ ಶಿಲೆಯಲ್ಲಿ ಗೋಮಟೇಶ್ವರನ ಪ್ರತಿಮೆಯನ್ನು ತಯಾರಿಸಿದನು. ಆದರೆ ಈ ಪ್ರತಿಮೆಯನ್ನು ಪ್ರತಿಸ್ಥಾಪಿಸುವ ಸಂದರ್ಭದಲ್ಲಿ ಕಾರ್ಕಳದ ಭೈರವರಾಯನಿಗೂ ತಿಮ್ಮಣ್ಣರಾಜನಿಗೂ ಭಿನ್ನಾಭಿಪ್ರಾಯ ಸೃಷ್ಟಿಯಾಯಿತು. ಈ ಸಂದರ್ಭದಲ್ಲಿ ಗೋಮಟೇಶ್ವರನ ಪ್ರತಿಮೆಯನ್ನು ರಕ್ಷಿಸುವುದಕ್ಕಾಗಿ ಹೊಯಿಗೆ ರಾಶಿಯಲ್ಲಿ ಹೂತು ಹಾಕಲಾಯಿತು. ತಿಮ್ಮಣ್ಣಾಜಿಲನಿಗೂ ಭೈರಾವರಾಯನಿಗೂ ನಡೆದ ಯುದ್ಧದಲ್ಲಿ ಭೈರವರಾಯನು ಸೋತು ಹೋದನು. ಆಮೇಲೆ ಪ್ರತಿಮೆಯನ್ನು ಹೊಯಿಗೆ ರಾಶಿಯಿಂದ ತೆಗೆದು ಈಗಿರುವ ಸ್ಥಳದಲ್ಲಿ ಪ್ರತಿಸ್ಥಾಪಿಸಿದನು.

ಅಜಿಲರು ದಕ್ಷಿಣ ಕನ್ನಡದ ಕಲೆ ವಾಸ್ತು ಶಿಲ್ಪಕ್ಕೆ ಅಪಾರ ಕೊಡುಗೆಯನ್ನು ನೀಡಿದ್ದಾರೆ. ವೇಣೂರಿನಲ್ಲಿ ಅವರು ಕಟ್ಟಿಸಿದ ಅರಮನೆಯು ಪೂರ್ಣ ಹಾಳಾಗಿದೆ. ಅಳದಂಗಡಿಯಲ್ಲಿ ಇವರು ಕಟ್ಟಿಸಿದ ಅರಮನೆ ಇಂದಿಗೂ ಉಳಿದಿದ್ದೂ ತಿಮ್ಮಣ್ಣಾರಸರಾದ ಡಾ। ಪದ್ಮಪ್ರಸಾದ ಅಜಿಲರ ಪಟ್ಟಧಾರಣೆ ಕಾರ್ಯವು ಇತ್ತೀಚೆಗೆ ವಿಜೃಂಭಣೆಯಿಂದ ನಡೆದಿದೆ.

ವೇಣೂರಿನಲ್ಲಿ ಗೋಮಟೇಶ್ವರನ ಬಸದಿಯನ್ನು ಕಟ್ಟಲಾಗಿದ್ದು ಬಸದಿಯ ಒಳಗಡೆ 24 ತೀರ್ಥಂಕರರ ಪ್ರತಿಮೆಗಳಿವೆ. ಇದರ ಹತ್ತಿರದಲ್ಲಿ ಚಂದ್ರನಾಥ ಬಸದಿ ಮತ್ತು ಬಿನ್ನಾಣಿ ಬಸದಿಗಳಿವೆ. ಗೋಮಟನ ಪ್ರತಿಮೆಯು ಸುಮಾರು 33 ಅಡಿ ಎತ್ತರದಲ್ಲಿದ್ದೂ ಐದು ಅಡಿ ಎತ್ತರದ ಪೀಠದ ಮೇಲೆ ಪ್ರತಿಸ್ಥಾಪಿಸಲಾಗಿದೆ.

ಮೇಲಿನ ರಾಜ ಮನೆತನಗಳಲ್ಲದೆ, ಬೆಳ್ತಂಗಡಿ ತಾಲೂಕಿನಲ್ಲಿ ಇನ್ನೂ ಹಲವಾರು ಗಣ್ಯ ಕುಟುಂಬಗಳಿವೆ. ಮುಂಡಾಜೆಯ ಬಿಡೆ ಕುಟುಂಬ, ನಡದ ಅಜ್ರಿ ಕುಟುಂಬ, ಪಡಂಗಡಿ ಹೆಗ್ಡೆ ಕುಟುಂಬ ಮುಂತಾದವುಗಳು ಪ್ರಮುಖವಾಗಿವೆ. ಪ್ರಾದೇಶಿಕ ಇತಿಹಾಸ ಮತ್ತು ಸಂಸ್ಕೃತಿಗೆ ಇವರ ಕೊಡುಗೆ ವಿಶೇಷವಾದುದು.

ಸ್ವಾತಂತ್ರ್ಯ ಹೋರಾಟ ಮತ್ತು ಹೋರಾಟಗಾರರು:

ಭಾರತದ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಪ್ರತಿಯೊಂದು ರಾಜ್ಯಗಳ ಮಟ್ಟದಲ್ಲಿ ಕೂಡಾ ಹೋರಾಟಗಳು ನಡೆದಿವೆ. ಗಾಂಧೀಜಿಯವರು ಕರ್ನಾಟಕ್ಕೆ ಬಂದು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾಲ್ಗೊಂಡ ಉದಾಹರಣೆಯಿದೆ. ದಕ್ಷಿಣ ಕನ್ನಡದ ಸ್ವಾತಂತ್ರ್ಯ ಹೋರಾಟದಲ್ಲಿ ಕಾರ್ನಾಡ್ ಸದಾಶಿವರಾಯರ ಹೆಸರು ಅಚ್ಚಳಿಯದೆ ಉಳಿದಿದೆ. ಬೆಳ್ತಂಗಡಿಯ ಹಲವಾರು ಮನೆತನಗಳು ಕೂಡಾ ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿಸಿಕೊಂಡ ದಾಖಲೆಗಳಿವೆ. ಮುಂಡಾಜೆಯ ಆರ್. ಎನ್.ಬಿಡೆ. ಮಡಂತ್ಯಾರಿನ ಪಿ.ಎನ್. ಅಧಿಕಾರಿ ಮತ್ತು ಪಡಂಗಡಿಯ ಭೋಜರಾಜ ಹೆಗ್ಡೆ ಮುಂತಾದ ಸ್ವಾತಂತ್ರ್ಯ ಹೋರಾಟಗಾರನ್ನು ಸೃಷ್ಟಿಸಿದ ಕೀರ್ತಿಯನ್ನು ಬೆಳ್ತಂಗಡಿ ತಾಲೂಕು ಹೊಂದಿದೆ. ಈ ಮೂವರನ್ನು ಕೂಡಾ ಭಾರತದ ಸ್ವಾತಂತ್ರ್ಯೋತ್ಸವದ ಸ್ವರ್ಣ ಮಹೋತ್ಸವದ ಆಚರಣೆಯ ಸಂದರ್ಭದಲ್ಲಿ ಮಡಂತ್ಯಾರು ಸೇಕ್ರೆಡ್ ಹಾರ್ಟ್ ಕಾಲೇಜಿನ ವತಿಯಿಂದ ಸನ್ಮಾನಿಸಲಾಗಿತ್ತು.

೧.೭ ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಕಾರ್ಯ ವಿಧಾನ

ಸಾಮಾಜಿಕ ಬದಲಾವಣೆಯೆಂಬುದು ಒಂದು ನಿರಂತರವಾದ ಪ್ರಕ್ರಿಯೆ. ಪ್ರತಿ ಕಾಲಘಟ್ಟದಲ್ಲಿ ಸಾಮಾಜಿಕ, ಆರ್ಥಿಕ, ರಾಜಕೀಯ ಸ್ಥಿತ್ಯಂತರಗಳು ಸಾಮಾಜದ ಸಂರಚನೆಯೊಳಗೆ ಹಲವು ಬದಲಾವಣೆಗಳನ್ನು ನಿರೀಕ್ಷಿಸುತ್ತಿರುತ್ತವೆ. ಈ ಬದಲಾವಣೆಗಳು ಕ್ರಾಂತಿಕಾರಕವಾಗಿದ್ದು ಸಮುದಾಯದ ತಕ್ಷಣದ ಸ್ಪಂದನವನ್ನು ಬಯಸುತ್ತಿರಬಹುದು, ಅಥವಾ ಈ ಬದಲಾವಣೆಗಳು ನಿಧಾನಗತಿಯಿಂದ ಕೂಡಿದ್ದು, ಆ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳುವ ಜನರಿಂದ ಬೇರೆಯೇ ರೀತಿಯ ಪ್ರತಿಕ್ರಿಯೆಯನ್ನು ಅಪೇಕ್ಷಿಸಬಹುದು.

ಸಾಮಾಜಿಕ ಬದಲಾವಣೆಗಳು ಪ್ರಕೃತಿಯ ನಿಯಮವೆಂಬ ರೀತಿಯಲ್ಲಿ ಚಿತ್ರಿಸುವುದರಿಂದ ಸಮಾಜದೊಳಗಿನ ವೈರುಧ್ಯಗಳು, ದ್ವಂದ್ವಗಳು, ಹಾಗೂ ಸಮಸ್ಯೆಗಳ ನಿಜವಾದ ಚಿತ್ರಣ ಲಭ್ಯವಾಗುವುದಿಲ್ಲ. ಬದಲಾವಣೆ ನೈಸರ್ಗಿಕ ನಿಯಮವೆನ್ನುವುದರಿಂದ ಅದಕ್ಕೆ ಕಾರಣವಾಗಿರುವ ಸಾಮಾಜಿಕ, ಆರ್ಥಿಕ, ರಾಜಕೀಯ, ಧಾರ್ಮಿಕ ಕಾರಣಗಳ ಹುಡುಕಾಟವನ್ನು ಮರೆಮಾಚುವ ಹುನ್ನಾರವೂ ನಡೆಯುತ್ತಿರುತ್ತದೆ. ಈ ವಿಚಾರಗಳನ್ನು ಮನಸ್ಸಿನಲ್ಲಿಟುಕೊಂಡು ಸಾಮಾಜಿಕ ಬದಲಾವಣೆಯ ಬಗ್ಗೆ ಚರ್ಚಿಸುವಾಗ ಅದಕ್ಕೆ ಕಾರಣೀಭೂತವಾಗಿರುವ ಸಮಾಜ ಹಾಗೂ ಅಲ್ಲಿಯ ಸ್ಥಿತಿಗತಿಗಳ ಜ್ಞಾನ ತುಂಬಾ ಮುಖ್ಯವಾಗುತ್ತದೆ.

ಬೆಳ್ತಂಗಡಿ ತಾಲೂಕಿನ ಸಾಮಾಜಿಕ ಸಂದರ್ಭದೊಳಗೆ ಸರಕಾರೇತರ ಸಂಸ್ಥೆಗಳ ಪಾತ್ರವೇನು? ಯಾವ ರೀತಿಯಲ್ಲಿ ಈ ಸಂಸ್ಥೆಗಳು ತಮ್ಮನ್ನು ತಾವೇ ತೊಡಗಿಸಿಕೊಂಡಿವೆ? ಇದರಿಂದ ಜನರ ನಿತ್ಯ ಜನಜೀವನದಲ್ಲಿ ಯಾವ ಬದಲಾವಣೆಗಳಾಗಿವೆ? ಈ ಸಂಘಟನೆಗಳು ಹುಟ್ಟಿಕೊಳ್ಳಲು ಕಾರಣಗಳೇನು? ಯಾರು ಈ ಸಂಸ್ಥೆಗಳನ್ನು ಮುನ್ನಡೆಸುತ್ತಾರೆ? ಸಮಾಜದ ಯಾವ ವರ್ಗದ ಜನರು ಇವುಗಳಲ್ಲಿ ತೊಡಗಿಸಿಕೊಂಡಿದ್ದಾರೆ? ಈ ಎಲ್ಲಾ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರದ ಹುಡುಕಾಟವೇ ಈ ಅಧ್ಯಯನದ ಪ್ರಯತ್ನವಾಗಿದೆ.

ಉದ್ದೇಶಗಳು:

ಪ್ರಸ್ತುತ ಅಧ್ಯಯನವು ಈ ಕೆಳಗಿನ ಉದ್ದೇಶಗಳನ್ನೊಳಗೊಂಡಿದೆ.

೧. ಭಾರತೀಯ ಸಮಾಜದ ಸಂರಚನೆಯನ್ನು ಅರ್ಥೈಸುವುದು.

೨. ಅಭಿವೃದ್ಧಿ ಮಾದರಿಗಳ ಮತ್ತು ಸಾಮಾಜಿಕ ಬದಲಾವಣೆಗೆ ಪೂರಕವಾಗುವ ಅಂಶಗಳ ಗುರುತಿಸುವಿಕೆ.

೩. ಸಾಮಾಜಿಕ ಬದಲಾವಣೆಯಲ್ಲಿ ಸಂಘ ಸಂಸ್ಥೆಗಳ ಪಾತ್ರವೇನು ಎಂಬುದನ್ನು ತಿಳಿಯುವುದು.

೪. ಬೆಳ್ತಂಗಡಿ ತಾಲೂಕಿನ ಸಾಮಾಜಿಕ, ಆರ್ಥಿಕ, ಧಾರ್ಮಿಕ ಸ್ಥಿತಿಗತಿಗಳ ಅಧ್ಯಯನ.

೫. ತಾಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಸರಕಾರೇತರ ಸಂಸ್ಥೆಗಳ ಸ್ಥೂಲ ಪರಿಚಯ.

೬. ಸಾಮಾಜಿಕ ಬದಲಾವಣೆಯಲ್ಲಿ ಸರಕಾರೇತರ ಸಂಸ್ಥೆಗಳ ಪಾತ್ರ

೭. ಭವಿಷ್ಯತ್‌ನಲ್ಲಿ ಯಾವ ಪಾತ್ರ ವಹಿಸಬಹುದೆಂಬುದರ ಕುರಿತಂತೆ ಸಲಹೆ ಮಾರ್ಗ ಸೂಚಿಗಳು

ಅಧ್ಯಯನದ ವ್ಯಾಪ್ತಿ ಮತ್ತು ಕಾರ್ಯವಿಧಾನ:

ಪ್ರಸ್ತುತ ಅಧ್ಯಯನವು ಬೆಳ್ತಂಗಡಿ ತಾಲೂಕಿಗೆ ಸೀಮಿತವಾಗಿದೆ. ಅಧ್ಯಯನದ ಸಂಬಂಧಿ ಬೆಳ್ತಂಗಡಿ ತಾಲೂಕಿನ ಸರಕಾರೇತರ ಸಂಸ್ಥೆಗಳ ಬಗ್ಗೆ ಮತ್ತು ಅವುಗಳ ಕಾರ್ಯವೈಖರಿಯ ಬಗ್ಗೆ ಮಾಹಿತಿಯನ್ನು ಪಡೆಯಲಾಗಿದೆ. ಈ ಅಧ್ಯಯನವು ಬೆಳ್ತಂಗಡಿ ತಾಲೂಕಿನ ಒಂದು ಪ್ರಮುಖ ಸರಕಾರೇತರ ಸಂಸ್ಥೆಯಾದ ನಾಗರಿಕ ಸೇವಾ ಟ್ರಸ್ಟ್ ಗುರುವಾಯನಕೆರೆ ಇದರ ಫಲಾನುಭವಿಗಳ ಕುರಿತಾದ ಒಂದು ಅಧ್ಯಯನವಾಗಿದೆ. ಸರಕಾರೇತರ ಸಂಸ್ಥೆಗಳ ಅಧ್ಯಯನಕ್ಕಾಗಿ ಅವುಗಳ ಬಗ್ಗೆ ಲಭ್ಯವಿರುವ ಸಾಹಿತ್ಯ ಆಧಾರಗಳನ್ನು ಪರಾಮರ್ಶಿಸಲಾಗಿದೆ.

ಪ್ರಸ್ತುತ ಅಧ್ಯಯನದ ಸಂದರ್ಭದಲ್ಲಿ ಮಾಹಿತಿ ಸಂಗ್ರಹಿಸಲು ಪ್ರಶ್ನಾವಳಿಯನ್ನು ಬಳಸಲಾಗಿದೆ. ಪ್ರಶ್ನಾವಳಿಯನ್ನು ಸರಕಾರೇತರ ಸಂಸ್ಥೆಗಳ ಬಗ್ಗೆ ಮತ್ತು ಅವುಗಳ ಫಲಾನುಭವಿಗಳ ಬಗ್ಗೆ ಸಿದ್ಧಪಡಿಲಾಗಿದೆ. ಸರಕಾರೇತರ ಸಂಸ್ಥೆಗಳ ಧ್ಯೇಯ ಮತ್ತು ಕಾರ್ಯಸಾಧನೆಯ ಮಾಹಿತಿಯೊಂದಿಗೆ ಅವುಗಳ ಉಗಮ ಯಾರ ಪರವಾಗಿರುತ್ತದೆ ಎಂಬುದನ್ನು ಕಂಡುಕೊಳ್ಳುವ ಪ್ರಯತ್ನವನ್ನು ಮಾಡಲಾಗಿದೆ. ಅಧ್ಯಯನದಲ್ಲಿ ಕೇಂದ್ರಿಕೃತ ವರ್ಗಗಳ ಸಾಮಾಜಿಕ, ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಸ್ಥಾನಮಾನವನ್ನು ಕಂಡುಕೊಳ್ಳುವ ಪ್ರಯತ್ನವನ್ನು ಮಾಡಲಾಗಿದೆ. ಪ್ರಶ್ನಾವಳಿಗಳನ್ನು ವೈಯುಕ್ತಿಕವಾಗಿ ಸಂಬಂಧಿತರಿಗೆ ಒಪ್ಪಿಸಿ ಮಾಹಿತಿಯನ್ನು ಪಡೆಯಲಾಗಿದೆ.

ಪ್ರಶ್ನಾವಳಿಯನ್ನು ಹೊರತುಪಡಿಸಿ ನೇರ ಸಂದರ್ಶನ ವಿದಾನವನ್ನು ಬಳಸಲಾಗಿದೆ. ಸರಕಾರೇತರ ಸಂಸ್ಥೆಗಳ ಅಧಿಕಾರಿಗಳನ್ನು ಬೇಟೆ ಮಾಡಿ ಕೆಲವೊಂದು ಆಯ್ದ ಪ್ರಶ್ನೆಗಳ ಬಗ್ಗೆ ಮಾಹಿತಿಯನ್ನು ಪಡೆಯಲಾಗಿದೆ. ಈ ವಿದಾನವು ಅಧ್ಯಯನದ ಕುರಿತು ನಿಖರವಾದ ಮತ್ತು ವಸ್ತುನಿಷ್ಠವಾದ ಮಾಹಿತಿಯನ್ನು ಪಡೆಯವುದಕ್ಕೆ ಸಹಕಾರಿಯಾಗಿದೆ.

ಮೇಲಿನ ಎಲ್ಲಾ ವಿದಾನಗಳಿಂದ ಪಡೆದ ಮಾಹಿತಿಯನ್ನು ಅಂಕಿ ಅಂಶಗಳ ರೂಪದಲ್ಲಿ ಕ್ರೋಢಿಕರಿಸಿ ಅಧ್ಯಯನಕ್ಕಾಗಿ ಬಳಸಲಾಗಿದೆ. ಈ ಪ್ರಕ್ರಿಯೆಯು ಕೇಂದ್ರಿಕೃತ ವರ್ಗಗಳ ಭೌತಿಕ ಪರಿಸ್ಥಿತಿಯನ್ನು ತಿಳಿಯಪಡಿಸುವಲ್ಲಿ ಸಹಕಾರಿಯಾಗಿದೆ. ಅಧ್ಯಯನದ ಸಂದರ್ಭ ಮುಂದಿನ ಅಧ್ಯಯನಗಳ ಬಗ್ಗೆ ಮತ್ತು ಕಾರ್ಯಕ್ರಮಗಳ ಬಗ್ಗೆ ಸಲಹೆಗಳನ್ನು ನೀಡುವ ಪ್ರಯತ್ನ ಮಾಡಲಾಗಿದೆ. ತಳಸ್ಥರದ ಸಮೂದಾಯಗಳ ದ್ರಷ್ಟಿಕೋನದಿಂದ ಈ ಅಧ್ಯಯನದ ಮಾದರಿಯನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ರಣಜಿತ್ ಗುಹಾರವರ ಸಬಾಲ್ಟರ್ನ್ ಸ್ಟಡೀಸ್ ಸಂಪುಟಗಳ ಮಾದರಿಯನ್ನು ಅನುಸರಿಸಲಾಗಿದೆ. ಸಬಾಲ್ಟರ್ನ್, ಅಧ್ಯಯನ ಮಾದರಿಗಳಲ್ಲಿ ರೈತರು, ಕಾರ್ಮಿಕರು, ಮಹಿಳೆಯರು, ಸಣ್ಣ ಉದ್ದಿಮೆದಾರರು, ವ್ಯಾಪಾರಸ್ಥರು, ಮತ್ತು ಬುಡಕಟ್ಟು ಜನಾಂಗದವರಂತ ವರ್ಗಗಳು ಮಹತ್ವನ್ನು ಪಡೆದಿದ್ದು ಅಂತವರ ಸ್ಥಿತಿಗತಿಯ ಅಧ್ಯಯನವನ್ನು ಮಾಡುವ ಪ್ರಯತ್ನ ಈ ಅಧ್ಯಯನದ ಉದ್ದೇಶವಾಗಿದೆ. ಇಂತಹ ಅಧ್ಯಯನಗಳು ಇತ್ತೀಚೆಗೆ ಹೆಚ್ಚು ಜನಪ್ರಿಯವಾಗುತ್ತಿವೆ.

೧.೮ ಅಧ್ಯಯನದ ಪ್ರಾಮುಖ್ಯತೆ ಮತ್ತು ತಾತ್ವಿಕ ದೃಷ್ಟಿಕೋನ:

ಪ್ರಸ್ತುತ ಅಧ್ಯಯನವು ಸಮಾಜದ ತಳಸ್ಥರದ ವರ್ಗಗಳ ದೃಷ್ಟಿಯಲ್ಲಿ ಪ್ರಾಮುಖ್ಯವಾಗಿದೆ.

- ಪ್ರಸ್ತುತ ಅಧ್ಯಯನವು ಸರಕಾರೇತರ ಸಂಸ್ಥೆಗಳ ಫಲಾನುಭವಿಗಳ ಸಾಮಾಜಿಕ, ಮತ್ತು ಆರ್ಥಿಕ ಸ್ಥಾನಮಾನದ ಕುರಿತು ಮಾಹಿತಿಯನ್ನು ನೀಡುತ್ತದೆ.
- ಈ ಅಧ್ಯಯನವು ಸಮಾಜದ ನಿರ್ಲಕ್ಷಿತರ ಅಭ್ಯುದಯ ಅಗತ್ಯವೆಂದು ಅಧಿಕಾರ ಶಾಹಿಗೆ ಮನದಟ್ಟು ಮಾಡುವ ಒಂದು ಪ್ರಯತ್ನವಾಗಿದೆ.
- ಈ ಅಧ್ಯಯನವು ಸರಕಾರೇತರ ಸಂಸ್ಥೆಗಳಲ್ಲದೆ ಇತರ ಸಂಘಟನೆಗಳಿಗೆ ಜನಸೇವೆ ಮಾಡುವ ಒಂದು ಪ್ರೇರೇಪಣೆಯಾಗಿದೆ.
- ಕೇಂದ್ರಿಕೃತ ಜನರು ಅನುಭವಿಸುತ್ತಿರುವ ಸಮಸ್ಯೆ ಮತ್ತು ಸವಾಲುಗಳಿಗೆ ಉತ್ತರವನ್ನು ಕಂಡುಕೊಳ್ಳುವ ಪ್ರಯತ್ನವಾಗಿದೆ.
- ಈ ಅಧ್ಯಯನವು ತಾಲೂಕಿನ ಇತರೆಡೆ ಮತ್ತು ಹೊರಕ್ಕೂ ಅಂತಹ ಪರಿಸ್ಥಿತಿಯ ಅಧ್ಯಯನಕ್ಕೆ ಸಹಕಾರಿಯಾಗಿದೆ.
- ಕೇಂದ್ರಿಕೃತ ವರ್ಗಗಳ ಸ್ಥಾನಮಾನಗಳನ್ನು ಅರ್ಥೈಸುವುದರೊಂದಿಗೆ ಸಮಾಜದ ರಚನೆಯನ್ನು ಅರ್ಥೈಸಲು ಸಾಧ್ಯವಿದೆ.

- ಸಮಾಜದ ಅಂತರಿಕ ಸಂಕೀರ್ಣತೆಗಳನ್ನು ತಿಳಿಯಲು ಸಹಕಾರಿಯಾಗಿದೆ ಮತ್ತು ಸಾಮಾಜಿಕ ಜ್ಞಾನವನ್ನು ಸಂಪಾದಿಸಲು ಸಾಧ್ಯವಿದೆ.

ಸಾಮಾಜಿಕ ಬದಲಾವಣೆಯಲ್ಲಿ ಸರಕಾರೇತರ ಸಂಸ್ಥೆಗಳ ಪಾತ್ರ – ಬೆಳ್ತಂಗಡಿ. ಈ ವಿಷಯವನ್ನು ಹಲವು ದೃಷ್ಟಿಕೋನಗಳಿಂದ ಅಧ್ಯಯನ ಮಾಡಬಹುದಾಗಿದೆ. ಒಂದು ಸಮಾಜವನ್ನು ಒಟ್ಟಾರೆಯಾಗಿ ಒಂದು ಗುಂಪು ಎಂದು ಪರಿಗಣಿಸಿ, ಸಮಸ್ಯೆಗಳು ಅಲ್ಲಿರುವ ಎಲ್ಲರನನ್ನು ಒಂದೇ ರೀತಿಯಲ್ಲಿ ಕಾಡುತ್ತದೆಯೆಂಬಂತೆ ಪರಿಗಣಿಸಿ ಅವುಗಳಿಗೆ ಪರಿಹಾರ / ಪ್ರತಿಕ್ರಿಯಗಳನ್ನು ಹೇಗೆ ಸರಾಕಾರೇತರ ಸಂಸ್ಥೆಗಳು ನೀಡುತ್ತಿವೆಯೆಂಬುದನ್ನು ಪರಿಶೀಲಿಸುವುದು ಸರ್ವೆ ಸಾಮಾನ್ಯವಾಗಿದೆ. ಈ ರೀತಿಯ ಅಧ್ಯಯನ ಉದಾರವಾದಿ ಪ್ರಜಾಪ್ರಭುತ್ವ ಮಾದರಿಯಲ್ಲಿ ನಡೆಸುವ ವಿಧಾನವಾಗಿದೆ. ಚರಿತ್ರೆಯನ್ನು ಈ ರೀತಿ ಅಧ್ಯಯನ ನಡೆಸುವುದರಿಂದ ಬಹುಮುಖಿ ಸಮಾಜದಲ್ಲಿರುವ ವರ್ಗ, ಜಾತಿ, ಲಿಂಗಾಧಾರಿತ ಅಧಿಕಾರ ಸಂಬಂಧಗಳು ಹೇಗೆ ಅಧಿಕಾರ ಚಲಾಯಿಸುವುದಕ್ಕಾಗಿ ಹಾಗೂ ಅದನ್ನು ಮುನ್ನಡೆಸಿಕೊಂಡು ಹೋಗಲು ಕಾರ್ಯತಂತ್ರಗಳನ್ನು ರೂಪಿಸುತ್ತವೆ ಎಂಬುದನ್ನು ತಿಳಿಯಬಹುದು.

ಆದ್ದರಿಂದ, ರಣಜಿತ್ ಗುಹಾ, ದಿಪೇಶ್ ಚಕ್ರವರ್ತಿ, ಸಮಿತ್ ಸರ್ಕಾರ್, ಮೊದಲಾದ ಇತಿಹಾಸಕಾರರು ಚರಿತ್ರೆಯನ್ನು ತಳಸ್ಥರದ ಜನಸಮುದಾಯಗಳ (Subalturn) ದೃಷ್ಟಿಕೋನದಿಂದ ಅಧ್ಯಯನ ನಡೆಸಬೇಕೆಂಬ ಅಗತ್ಯದ ಕುರಿತಂತೆ ಸಬಾಲ್ಟರ್ನ್ ಸ್ಟಡೀಸ್ (Subalturn Studies) ಸಂಪುಟಗಳ ಮುಖಾಂತರ ಗಮನ ಸೆಳೆದಿದ್ದಾರೆ. ಮಿಶೆಲ್ ಫುಕೊ, ಜ್ಯಾಕ್ಸ್ ಡೆರೀಡಾ, ಅಂಟೊನಿಯೊಗ್ರಾಮ್ಸಿ, ಮುಂತಾದ ಪಾಶ್ಚಾತ್ಯ ಚಿಂತಕರಿಂದ ಪ್ರಭಾವಿತರಾಗಿರುವ ಇವರು ವರ್ಗ, ಜಾತಿ, ಲಿಂಗಾದರಿತ ಹಿತಾಸಕ್ತಿಗಳು ಶ್ರೇಣೀಕೃತ ವ್ಯವಸ್ಥೆಯನ್ನು ರೂಪಿಸಿ, ನಿಯಮಗಳನ್ನು ಕ್ರೋಢಿಕರಿಸಿ, ಅಧಿಕಾರ ಕೇಂದ್ರಗಳನ್ನು ಮುಂದುವರೆಸಿಕೊಂಡು ಹೋಗುವಂತೆ ಮಾಡುತ್ತಿರುತ್ತವೆಯೆಂಬುದನ್ನು ತಮ್ಮ ಅಧ್ಯಯನಗಳ ಮುಖಾಂತರ ಕಂಡುಕೊಂಡಿದ್ದಾರೆ. ಇಲ್ಲಿ ಹೇಗೆ ಮೇಲ್ವರ್ಗದ ಜಾತಿ ಸಮುದಾಯಗಳು ಕೆಳ ಜಾತಿ ಸಮುದಾಯಗಳ ಮೇಲೆ ಅಧಿಕಾರವನ್ನು ಚಲಾಯಿಸುತ್ತಿರುತ್ತವೆಯೆಂಬುದನ್ನು ಕೆಲವು ತಳಸ್ಥರದ ಸಮುದಾಯಗಳ ಅಧ್ಯಯನದ ಮುಖಾಂತರ ತೋರಿಸಿಕೊಟ್ಟಿದ್ದಾರೆ.

ಈ ವರ್ಗ, ಜಾತಿ, ಲಿಂಗಾಧಾರಿತ ಅಧಿಕಾರ ಏಕರೂಪಿಯಾಗಿರುವುದಿಲ್ಲ. ಮೇಲು–ಕೀಳು ಸಮುದಾಯಗಳ ಮಧ್ಯೆ, ವಿವಿಧ ರೀತಿಯ ಸಂಬಂಧಗಳು ಏಕಕಾಲದಲ್ಲಿ ಏರ್ಪಾಡಾಗಿರುತ್ತದೆ. ಈ ಸಂಬಂಧಗಳು ಯಾವ ನೆಲೆಗಳಲ್ಲಿ ರೂಪಿತವಾಗಿವೆ, ಅಲ್ಲಿರುವ ದ್ವಂದ್ವ ವೈರುಧ್ಯಗಳೇನು ಎಂಬುದನ್ನು ಅಧ್ಯಯನ ಮಾಡುವುದೇ ಸಬಾಲ್ಟರ್ನ್ ಅಧ್ಯಯನಗಳ ಉದ್ದೇಶಗಳಲ್ಲೊಂದಾಗಿದೆ.

ಇಂತಹ ವ್ಯವಸ್ಥೆಯಲ್ಲಿ ಸರಕಾರೇತರ ಸಂಸ್ಥೆಗಳು ಎಲ್ಲಿ ನಿಂತಿವೆಯೆಂಬುದನ್ನು ತಿಳಿಯಬೇಕಾಗಿದೆ. ಯಾಕೆಂದರೆ, ಸರಕಾರೇತರ ಸಂಸ್ಥೆಗಳ ಕಟ್ಟುವಿಕೆಯು ಏಕರೂಪಿಯಾದಲ್ಲಿ, ಕೆಲವೊಂದು ಸಂಸ್ಥೆಗಳು ಇಡೀ ವ್ಯವಸ್ಥೆಯನ್ನು ಕಾಯ್ದುಕೊಂಡು ಹೋಗುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುತ್ತವೆ. ವ್ಯವಸ್ಥೆಯೊಳಗಿನ ಸಮಸ್ಯೆಗಳಿಗಿಂತಲೂ ಜನರು ಆ ವ್ಯವಸ್ಥೆಯೊಳಗೆ ಹೇಗೆ ತೊಡಗಿಸಿಕೊಳ್ಳಬೇಕೆಂಬುದರ ಕಡೆಗೆ ಅವರ ಗಮನ ಕೇಂದ್ರಿಕೃತವಾಗಿರುತ್ತದೆ. ಇಲ್ಲಿ ಸಾಮಾಜಿಕ ಬದಲಾವಣೆ ಎಂದರೆ ಜನರು ವ್ಯವಸ್ತೆಯೊಂದಿಗೆ ಹೇಗೆ ರಾಜಿ ಮಾಡಿಕೊಳ್ಳುವುದು ಹಾಗೂ ಅದರ

ಮುಖಾಂತರ ಈ ಜನ ಸಮುದಾಯಗಳು ಅಥವಾ ಅಲ್ಲಿರುವ ಕೆಲವು ಹಿತಾಸಕ್ತಿಗಳು ಅಲ್ಪಸ್ವಲ್ಪ ಲಾಭ / ಪರಿಹಾರಗಳನ್ನು ಪಡಕೊಳ್ಳುವುದು ಎಂಬ ಅರ್ಥವನ್ನು ಕಲ್ಪಿಸುತ್ತದೆ.

ಇನ್ನು ಕೆಲವು ಸರಕಾರೇತರ ಸಂಸ್ಥೆಗಳು ತಳಸ್ಥರದ ಜನಸಮುದಾಯಗಳ ದೃಷ್ಟಿಕೋನದಿಂದ ಸುತ್ತಮುತ್ತಲಿನ ಸಾಮಾಜಿಕ, ರಾಜಕೀಯ, ಆರ್ಥಿಕ ಆಗುಹೋಗುಗಳನ್ನು ಗಮನಿಸುತ್ತಾ, ಇದರಿಂದ ಈ ಸಮುದಾಯಗಳು ಹೇಗೆ ಪ್ರಭಾವಿತವಾಗಿವೆಯೆಂಬುದನ್ನು ತಿಳಿದು ತಮ್ಮ ಕಾರ್ಯಕ್ರಮ, ಕಾರ್ಯತಂತ್ರಗಳನ್ನು ರೂಪಿಸುತ್ತವೆ. ಈ ಇಡೀ ಪ್ರಕ್ರಿಯೆಯಲ್ಲಿ ಸಮುದಾಯಗಳನ್ನು ಪ್ರಜಾತಾಂತ್ರಿಕವಾಗಿ ತೊಡಗಿಸಿಕೊಳ್ಳುವಂತೆ ಎಚ್ಚರಿಕೆ ವಹಿಸಿಕೊಳ್ಳುತ್ತಾರೆ. ಇಲ್ಲದಿದ್ದರೆ, ಈ ಸಂಸ್ಥೆಗಳು ಪುನಃ ಶ್ರೇಣೀಕೃತ ವ್ಯವಸ್ಥೆಯನ್ನು ಮುಂದುವರಿಸಿಕೊಂಡು ಹೋದಂತೆ ಆಗುತ್ತದೆ.

ಆದ್ದರಿಂದ, ಈ ಅಧ್ಯಯನ ಸರಕಾರೇತರ ಸಂಸ್ಥೆಗಳು ಹೇಗೆ ಕಾರ್ಯನಿರ್ವಹಿಸುತ್ತದೆಯಂಬುದರ ಬಗ್ಗೆಯೂ ಬೆಳಕು ಚೆಲ್ಲುವ ಪ್ರಯತ್ನ ಮಾಡುತ್ತದೆ. ಒಟ್ಟಾರೆ ಸಾಮಾಜಿಕ ಸಂದರ್ಭದಲ್ಲಿ ಪ್ರಜಾತಾಂತ್ರಿಕ ಮೌಲ್ಯಗಳಿಂದ ಸಮಾನತೆ, ಅಧಿಕಾರದ ಹಂಚಿಕೆ, ಸಂಪತ್ತಿನ ಹಂಚಿಕೆಯಲ್ಲಿ ಸರಕಾರೇತರ ಸಂಸ್ಥೆಗಳು ಯಾವ ಪಾತ್ರ ವಹಿಸುತ್ತವೆಯೆಂಬುದರ ಪರಿಶೀಲನೆ ಈ ಅಧ್ಯಯನದ ಗುರಿಯಾಗಿದೆ.

ಪ್ರಸಕ್ತ ಅಧ್ಯಾಯದಲ್ಲಿ ಕೈಗೊಂಡ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿಯನ್ನು ಸಂಕ್ಷಿಪ್ತವಾಗಿ ವಿವರಿಸುವ ಪ್ರಯತ್ನವನ್ನು ಮಾಡಲಾಗಿದೆ. ಈ ಅಧ್ಯಯನದ ಸ್ಥೂಲ ಪರಿಚಯವನ್ನು ನೀಡುವ ಹಂತದಲ್ಲಿ ಅಧ್ಯಯನದ ವಿಷಯವು ವಿಶಾಲವಾಗಿದೆ ಎಂಬುದಾಗಿ ಅಧ್ಯಯನಕಾರನಿಗೆ ಮನವರಿಕೆಯಾಯಿತು. ಸರಕಾರೇತರ ಸಂಸ್ಥೆಗಳು ಮತ್ತು ಅವುಗಳ ಕಾರ್ಯಚಟುವಟಿಕೆಗಳು ತುಂಬಾ ವಿಶಾಲವಾದ ವ್ಯಾಪ್ತಿಯನ್ನು ಹೊಂದಿದ್ದು, ಬೆಳ್ತಂಗಡಿ ತಾಲೂಕು ಮಟ್ಟದ ಸರಕಾರೇತರ ಸಂಸ್ಥೆಗಳ ಸಮೀಕ್ಷೆಯಿಂದ ತಿಳಿದು ಬಂದಿದೆ. ಆದುದರಿಂದ ಅಧ್ಯಯನದಲ್ಲಿ ಕೇವಲ ನಾಗರಿಕ ಸೇವಾ ಟ್ರಸ್ಟ್ ಗುರುವಾಯನಕೆರೆ ಇದರ ಕರ್ಯಚಟುವವಟಿಕೆಗಳ ಪ್ರಭಾವದ ಬಗ್ಗೆ ಅಧ್ಯಯನ ನಡೆಸುವ ತೀರ್ಮಾನವನ್ನು ಕೈಗೊಳ್ಳಲಾಯಿತು. ಸಮಾಜದ ತಳಸ್ಥರದ ಜನರಾದ, ಸಣ್ಣ ಕೃಷಿಕರು, ಕೃಷಿ ಕೂಲಿಗಳು, ದಲಿತರು ಮತ್ತು ಮಹಿಳೆಯರ ಬಗ್ಗೆ ಈ ಅಧ್ಯಯನವು ಬೆಳಕು ಚೆಲ್ಲುತ್ತದೆ. ಕ್ಷೇತ್ರ ಕಾರ್ಯ, ವೈಯುಕ್ತಿಕ ಸಂದರ್ಶನ, ಸಾಹಿತ್ಯ ಸಮೀಕ್ಷೆ ಮುಂತಾದುವುಗಳ ಆಧಾರದಲ್ಲಿ ಅಧ್ಯಯನ ನಡೆಸುವ ಪ್ರಯತ್ನವನ್ನು ಮಾಡಲಾಗಿದೆ. ಸರಕಾರೇತರ ಸಂಸ್ಥೆಗಳು ಸಮಾಜಿಕ ಬದಲಾವಣೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ ಎಂಬ ಧೋರಣೆಯೊಂದಿಗೆ ಅಧ್ಯಯನವನ್ನು ಕೈಗೊಳ್ಳುವ ಪ್ರಯತ್ನವನ್ನು ಮಾಡಲಾಗಿದೆ.

ಇತಿಹಾಸಕ್ಕೆ ಪೂರಕವಾದ ಅಧ್ಯಯನವಾದುದರಿಂದ ಬೆಳ್ತಂಗಡಿ ತಾಲೂಕಿನ ಭೌಗೋಳಿಕ ಲಕ್ಷಣಗಳ, ಪ್ರಾಕೃತಿಕ ಸಂಪನ್ಮೂಲಗಳ ಬಗ್ಗೆ ತಿಳಿದುಕೊಳ್ಳುವ ಪ್ರಯತ್ನ ಮಾಡಲಾಗಿದೆ. ಬೆಳ್ತಂಗಡಿ ಒಂದು ಭವ್ಯವಾದ ಐತಿಹಾಸಿಕ ಪರಂಪರೆಯನ್ನು ಹೊಂದಿದ್ದು ಹಲವಾರು ಐತಿಹಾಸಿಕ ಮನೆತನಗಳು ಇರುವಿಕೆ ಇದಕ್ಕೆ ಸಾಕ್ಷಿಯಾಗಿದೆ. ತಾಲೂಕಿನಲ್ಲಿ ಹಲವಾರು ಧರ್ಮ ಮತ್ತು ಸಂಪ್ರದಾಯಗಳುಳ್ಳ ಜನರಿದ್ದಾರೆ ಎಂಬುದನ್ನು ತಿಳಿದುಕೊಳ್ಳಬಹುದು. ಒಟ್ಟಿನಲ್ಲಿ ಸಮಾಜದಲ್ಲಿ ನಿರ್ಲಕ್ಷಿಸಲ್ಪಟ್ಟ ಜನರನ್ನು ಸಮಾಜದ ಮುಖ್ಯವಾಹಿನಿಗೆ ತರುವ ಅಭಿವೃದ್ಧಿ ಮಾದರಿಗಳ ಬಗ್ಗೆ ಬೆಳಕು ಚೆಲ್ಲುವ ಪ್ರಯತ್ನ ಮಾಡಲಾಗಿದೆ. ಸರಕಾರೇತರ ಸಂಸ್ಥೆಗಳು ಸಮಾಜಿಕ ಬದಲಾವಣೆಯಲ್ಲಿ ಯಾವ ರೀತಿಯ ಪಾತ್ರವನ್ನು ನಿರ್ವಹಿಸುತ್ತೆ ಎಂಬ ವಾಸ್ತವಿಕ ಸತ್ಯವನ್ನು ಅರಿತುಕೊಳ್ಳುವುದು ಈ ಅಧ್ಯಯನದ ಮೂಲ ಉದ್ದೇಶ.

* * * * * * * * * *

ಅಧ್ಯಾಯ: ಎರಡು

ಬೆಳ್ತಂಗಡಿ ತಾಲೂಕಿನ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಸ್ಥಿತಿಗತಿ ಮತ್ತು ಸಂಪ್ರದಾಯಗಳು

೨.೧ ಸಣ್ಣ ಕೃಷಿಕರು ಮತ್ತು ಕೃಷಿಕಾರ್ಮಿಕರು

೨.೨ ಪ್ರಮುಖ ಬೆಳೆಗಳು, ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿ

೨.೩ ಮಹಿಳೆಯರು – ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಸ್ಥಿತಿಗತಿ ಸಮಸ್ಯೆಗಳು

೨.೪ ದಲಿತರು – ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಪರಿಸ್ಥಿತಿ ಸಮಸ್ಯೆಗಳು

೨.೫ ತಾಲೂಕಿನ ಧಾರ್ಮಿಕ ಸ್ಥಿತಿಗತಿ

೨.೬ ಜನರ ಸಂಸ್ಕೃತಿ ಮತ್ತು ಸಂಪ್ರದಾಯಗಳು

೨.೭ ಬೆಳ್ತಂಗಡಿ ತಾಲೂಕಿನ ಗ್ರಾಮೀಣ ಬದುಕಿನಲ್ಲಿ ಹೊರಗಿನವರ ಪಾತ್ರ

೨.೮ ಸಮಸ್ಯೆಗಳು – ವಿಮರ್ಶೆ

ಅಧ್ಯಾಯ ಎರಡು

ಬೆಳ್ತಂಗಡಿ ತಾಲೂಕಿನ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಸ್ಥಿತಿಗತಿ ಮತ್ತು ಸಂಪ್ರದಾಯಗಳು

ಭಾರತ ದೇಶ ವೈವಿಧ್ಯತೆಯಲ್ಲಿ ಏಕತೆಗೆ ಹೆಸರುವಾಸಿಯಾಗಿದ್ದಂತೆ ಬೆಳ್ತಂಗಡಿ ತಾಲೂಕು ಕೂಡ ವೈವಿಧ್ಯೆಯಲ್ಲಿ ಏಕತೆಗೆ ಹೆಸರು-ವಾಸಿಯಾದ ನಾಡಾಗಿದೆ. ಜನಾಂಗೀಯ ವೈವಿಧ್ಯ, ಹಲವಾರು ಧರ್ಮಗಳು ವೈವಿಧ್ಯಮಯ ಸಂಸ್ತ್ರತಿ ಮತ್ತು ಸಂಪ್ರದಾಯಗಳು ಈ ನಾಡಿನ ವಿಶೇಷತೆಗಳಾಗಿವೆ. ನಾಗರಿಕ ಸೇವಾ ಟ್ರಸ್ಟ್ ಗುರುವಾಯನಕೆರೆ, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ (ರಿ.) ಮತ್ತು ಸರಕಾರಿ ಇಲಾಖೆಗಳಿಂದ ಕೈಗೊಂಡ ಸಮೀಕ್ಷೆಗಳು ನಾಡಿನ ಆರ್ಥಿಕ, ಸಾಮಾಜಿಕ ಮತ್ತು ಸಂಸ್ಕೃತಿಯ ವಿವರಗಳನ್ನು ನೀಡುತ್ತವೆ. ಜನಾಂಗೀಯ ವೈವಿಧ್ಯತೆಗೆ ಹೆಸರಾಗಿರುವ ಬೆಳ್ತಂಗಡಿ ತಾಲೂಕಿನಲ್ಲಿ ಬ್ರಾಹ್ಮಣ, ದಲಿತ, ಗೌಡ, ನಲ್ಕೆ, ನಾಯಕ, ಜೈನ, ಬಿಲ್ಲವ, ಕ್ರಿಶ್ಚನ್, ಮತ್ತಿತರ ಸಮುದಾಯಗಳನ್ನು ಗುರುತಿಸಬಹುದು. ಈ ಎಲ್ಲಾ ಸಮುದಾಯಗಳು ವಿವಿಧ ವೃತ್ತಿಯಲ್ಲಿ ತೊಡಗಿಕೊಂಡಿವೆ. ಅವರುಗಳನ್ನು ಬೀಡಿ ಕಾರ್ಮಿಕರು, ಕೃಷಿಕೂಲಿಗಳು ಮತ್ತು ಸಣ್ಣ ಕೃಷಿಗರಾಗಿ ವಿಂಗಡಿಸಬಹುದು. ಪ್ರಸ್ತುತ ಅಧ್ಯಯನದಲ್ಲಿ ತಾಲೂಕಿನ ಕೃಷಿಕರ, ಮಹಿಳೆಯರ ಮತ್ತು ದಲಿತರ ಸ್ಥಿತಿಗತಿಯ ಬಗ್ಗೆ ಬೆಳಕು ಚೆಲ್ಲುವ ಪ್ರಯತ್ನವನ್ನು ಮಾಡಲಾಗಿದೆ. ಜನತಾ ಜೀವವೈವಿಧ್ಯ ದಾಖಲಾತಿ ಮಿತ್ತಬಾಗಿಲು, ದುಡಿಮೆಯ ಕೊಡಿಮರ, ಮುನ್ನೆಡೆಯ ಕಹಳೆ, ತಳಪರಿಗೆ, ಮುಂತಾದ ಗ್ರಂಥಗಳು ಮೇಲಿನ ಸಮುದಾಯಗಳ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ಸಂಪ್ರದಾಯಗಳ ಕುರಿತು ಸ್ಪಷ್ಟ ಚಿತ್ರಣವನ್ನು ನೀಡುತ್ತವೆ. ಸಮೀಕ್ಷೆಗಳು ಮತ್ತು ಸಾಹಿತ್ಯಿಕ ಅಧ್ಯಯನಗಳು ಸೂಚಿಸುವಂತೆ ತಾಲೂಕಿನ ಜನರು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿರುವಂತೆ ಕಂಡು ಬರುತ್ತದೆ. ಇಂಥವರ ಏಳಿಗೆಗಾಗಿ ನಾಗರಿಕ ಸೇವಾ ಟ್ರಸ್ಟ್ ವಿಶೇಷ ಆಸಕ್ತಿಯನ್ನು ವಹಿಸುತ್ತದೆ.

೨.೧ ಸಣ್ಣ ಕೃಷಿಕರು ಮತ್ತು ಕೃಷಿ ಕಾರ್ಮಿಕರು

ಕೃಷಿಯು ಭಾರತೀಯ ಆರ್ಥಿಕತೆಯ ಅವಿಭಾಜ್ಯ ಅಂಗವಾಗಿದೆ. ಆದರೆ, ಜಾಗತೀಕರಣದ ಪ್ರಭಾವದಿಂದಾಗಿ ಭಾರತೀಯ ಕೃಷಿಕರ ಪರಿಸ್ಥಿತಿ ದಯನೀಯವಾಗಿದೆ. ಸ್ವಾತಂತ್ರ್ಯ ನಂತರದಲ್ಲಿ ಕೃಷಿಯನ್ನು ವ್ಯವಸ್ಥಿತವಾಗಿ ತಿರಸ್ಕರಿಸಲಾಗಿದೆ. ಭಾರತದ ಪ್ರಥಮ ಪ್ರಧಾನಿಗಳಾದ ಪಂಡಿತ್ ಜವಾಹರ್‌ಲಾಲ್ ನೆಹರೂರವರು ಸೋವಿಯಟ್ ಮಾದರಿಯಲ್ಲಿ ನವಭಾರತದ ನಿರ್ಮಾಣ ಮಾಡಬೇಕೆಂಬ ಕನಸನ್ನು ಹೊತ್ತವರು ಎಂಬುದು ನಾವೆಲ್ಲಾ ತಿಳಿದುಕೊಂಡ ಅಂಶವಾಗಿದೆ. ಕೈಗಾರಿಕೆಗಳ ಅಭಿವೃದ್ಧಿಯ ಮೂಲಕ ದೇಶದ ಅಭಿವೃದ್ಧಿಗೆ ಮುಂದಾದ ನೆಹರೂರವರ ಕಾಲದಲ್ಲಿ ಪಂಚವಾರ್ಷಿಕ ಯೋಜನೆಗಳನ್ನು ಜಾರಿಗೊಳಿಸಲಾಯಿತು. ಪಂಚವಾರ್ಷಿಕ ಯೋಜನೆಗಳ ಮೂಲಕ ಕೃಷಿಯನ್ನು ವ್ಯವಸ್ಥಿತವಾಗಿ ಅಂಚಿಗೆ ತಳ್ಳುವ ಪ್ರಯತ್ನವನ್ನು ನಾವು ಅಂಕಿ ಅಂಶಗಳಿಂದ ತಿಳಿದುಕೊಳ್ಳಬಹುದು. ಉದಾ: ಮೊದಲ ಪಂಚಾವಾರ್ಷಿಕ ಯೋಜನೆಯಲ್ಲಿ ಕೃಷಿ ಕ್ಷೇತ್ರಕ್ಕೆ ಶೇ 14.9 ಪಾಲು ದೊರೆಯಿತು. ಒಂಬತ್ತನೆಯ ಪಂಚವಾರ್ಷಿಕ ಯೋಜನೆಯಲ್ಲಿ ಇದರ ಪ್ರಮಾಣ ಗಣನೀಯವಾಗಿ ಕುಸಿದಿದ್ದು ಕೇವಲ ಶೇ 5.2 ಆಗಿತ್ತು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ

ಶೇ 50 ಕ್ಕಿಂತ ಹೆಚ್ಚು ಜನ ಕೃಷಿಯನ್ನೇ ಅವಲಂಬಿಸಿದ್ದಾರೆ. ಬೆಳ್ತಂಗಡಿ ತಾಲೂಕಿನಲ್ಲಿ ಕೂಡ ಕೃಷಿ ಜನರ ಪ್ರಮುಖ ಕಸುಬಾಗಿದೆ. ಆದರೆ ಸಣ್ಣ ಕೃಷಿಕರ ಮತ್ತು ಕೃಷಿಕಾರ್ಮಿಕರ ಪರಿಸ್ಥಿತಿ ತುಂಬಾ ಶೋಚನೀಯವಾಗಿದೆ. ಸಣ್ಣ ಕೃಷಿಕರು ಎಂದರೆ ಇಲ್ಲಿ ಕೃಷಿ ಚಟುವಟಿಕೆಯಲ್ಲಿ ತೊಡಗಿಕೊಂಡ 5 ಎಕ್ರೆಯೊಳಗೆ ಭೂಮಿಯನ್ನು ಹೊಂದಿದವರಾಗಿದ್ದಾರೆ.

೨.೨ ಪ್ರಮುಖ ಬೆಳೆಗಳು, ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿ:

ಒಂದು ಕಾಲದಲ್ಲಿ ಬೆಳ್ತಂಡಿ ತಾಲೂಕಿನಲ್ಲಿ ಭತ್ತದ ಕೃಷಿ ಬಹುಪಾಲು ಕೃಷಿಕರ ಪ್ರಮುಖ ಬೆಳೆಯಾಗಿತ್ತು. ಆದರೆ ನಗರೀಕರಣದ ಪ್ರಭಾವದಿಂದಾಗಿ ಮತ್ತು ಜಾಗತೀಕರಣದ ಓಂಸೆಯಿಂದಾಗಿ ಜನರು ವಾಣಿಜ್ಯ ಬೆಳೆಗಳ ಕಡೆಗೆ ಆಕರ್ಷಿತರಾದರು. ಭತ್ತ ಬೆಳೆಯುವ ಪ್ರದೇಶ ಕ್ರಮೇಣವಾಗಿ ಕಡಿಮೆಯಾಯಿತು. ಭತ್ತದ ಕೃಷಿಯಲ್ಲಿ ತೊಡಗಿಸಿಕೊಳ್ಳಲು ಕಾರ್ಮಿಕರ ಅನಾಸಕ್ತಿ, ಕ್ರಿಮಿ ಕೀಟಗಳ ಬಾಧೆ, ಕಾಡು ಪ್ರಾಣಿಗಳ ಹಾವಳಿ, ನೆರೆಹೊರೆಯವರೊಂದಿಗಿನ ಕ್ಷುಲ್ಲಕ ಕಾರಣಕ್ಕಾಗಿ ಜಗಳಗಳು ಮುಂತಾದ ಕಾರಣಗಳು ಭತ್ತದ ಕೃಷಿಯ ಅವನತಿಗೆ ಕಾರಣವಾದುವು. ಭತ್ತದ ಕೃಷಿಯ ಅವನತಿಯೊಂದಿಗೆ ರಬ್ಬರ್, ಅಡಿಕೆ, ತೆಂಗು, ಅರಸಿನ, ಶುಂಠಿ, ನೇಂದ್ರ ಬಾಳೆ, ಕಾಳು ಮೆಣಸು, ವೀಳ್ಯದೆಲೆ ಮುಂತಾದ ಬೆಳೆಗಳನ್ನು ಬೆಳೆಸಲಾಗುತ್ತದೆ. ಜನರು ದನ, ಎಮ್ಮೆ, ಎತ್ತುಗಳನ್ನು ಸಾಕಿಕೊಂಡು ಜೀವನ ಸಾಗಿಸುತ್ತಿದ್ದಾರೆ. ಇವರಲ್ಲಿ ಹೆಚ್ಚಿನವರು 5 ಎಕ್ರೆಗಿಂತ ಕಡಿಮೆ ಭೂಮಿಯನ್ನು ಹೊಂದಿದವರಾಗಿದ್ದು, ಸಣ್ಣ ಕೃಷಿಕರ ಸಾಲಿನಲ್ಲಿ ಗುರುತಿಸಲ್ಪಟ್ಟಿದ್ದಾರೆ. ಕೃಷಿಕರ ಅಧೀನದಲ್ಲಿ ಗದ್ದೆ ಬಿತ್ತನೆ, ಅಡಿಕೆ ಕ್ಯೊಲು, ಮದ್ದು ಸಿಂಪಡಣೆ, ಗೊಬ್ಬರ ಹೊರುವಿಕೆ, ಅಡಿಕೆ ಸುಲಿಯುವುದು ಮುಂತಾದ ಕೆಲಸಗಳಲ್ಲಿ ತೊಡಗಿಕೊಂಡಿರುವ ಕಾರ್ಮಿಕರನ್ನು ಸಣ್ಣ ಕೃಷಿ ಕಾರ್ಮಿಕರು ಎಂಬುದಾಗಿ ಗುರುತಿಸಬಹುದು.

ಆರ್ಥಿಕ ಪರಿಸ್ಥಿತಿ:

ಸಣ್ಣ ಕೃಷಿಕರ ಮತ್ತು ಕೃಷಿಕಾರ್ಮಿಕರ ಆರ್ಥಿಕ ಪರಿಸ್ಥಿತಿ ಶೋಚನೀಯವಾಗಿದೆ. ಬೆಳೆದ ಬೆಳೆಗಳಿಗೆ ಸೂಕ್ತ ಬೆಲೆ ಇಲ್ಲದಿರುವುದು, ಮಾರುಕಟ್ಟೆ ವ್ಯವಸ್ಥೆಯಲ್ಲಿ ಗೊಂದಲ, ಅನುಕೂಲಕರವಾದ ವಿದ್ಯುತ್ ನೀತಿ ಇಲ್ಲದಿರುವುದು, ಭೂಮಿಯ ಫಲವತ್ತಿಕೆ ಕಡಿಮೆಯಾಗುತ್ತಿರುವುದು, ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳು ಬಳಕೆಯ ಪ್ರತಿಕೂಲವಾದ ಪರಿಣಾಮ, ನೀರಿನ ಸಮಸ್ಯೆ, ನದಿ ತಿರುಗಣೆಯಂತ ಅವೈಜ್ಞಾನಿಕ ಯೋಜನೆಗಳು, ಕೃಷಿ ನಾಶಕ್ಕೆ ಪರಿಹಾರ ಇಲ್ಲದಿರುವುದು, ಅರಣ್ಯಗಳ ಒತ್ತುವರಿಯಿಂದ ಕೃಷಿ ಭೂಮಿಯ ಕುಗ್ಗುವಿಕೆ, ಮುಂತಾದವುಗಳು ಸಣ್ಣ ಕೃಷಿಕರು ಎದುರಿಸುತ್ತಿರುವ ಪ್ರಮುಖ ಸಮಸ್ಯೆಗಳು. ಇಂತಹ ಸಂದಿಗ್ಧ ಪರಿಸ್ಥಿತಿಗಳಲ್ಲಿ ಸರಕಾರ ಕೃಷಿಕರ ರಕ್ಷಣೆಗೆ ಬಾರದಿರುವುದು ಕೃಷಿಕರಲ್ಲಿ ಆತ್ಮ ವಿಶ್ವಾಸದ ಕೊರತೆಗೆ ಕಾರಣವಾಗಿದ್ದು, ಇದ್ದಂತಹ ಸಮಸ್ಯೆಗಳನ್ನು ದ್ವಿಗುಣಗೊಳಿಸಿದೆ. ಇವುಗಳಿಂದಾಗಿ ಕೃಷಿಕರ ಅದಾಯವು ಕುಂಠಿತವಾಗಿದೆ ಹಾಗೂ ಸಾಲ ಭಾದೆ ಹೆಚ್ಚಿದೆ.

ಕೃಷಿ ಕಾರ್ಮಿಕರು ಕೂಡಾ ಹಲವಾರು ಸಮಸ್ಯೆಗಳಿಗೆ ತುತ್ತಾಗಿದ್ದಾರೆ. ಅವರ ಪ್ರಮುಖ ಸಮಸ್ಯೆಗಳಲ್ಲಿ ನಿರಂತರ ಉದ್ಯೋಗದ ಸಮಸ್ಯೆ ರಕ್ಷಿತಾರಣ್ಯದಿಂದ ಒಕ್ಕಲೆಬ್ಬಿಸುವಿಕೆ, ಮುಂತಾದ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಕೃಷಿ ಉತ್ಪನ್ನಗಳ ಬೆಲೆ ಕುಸಿಯುತ್ತಿರುವುದರಿಂದ ಕೆಲಸಕ್ಕೆ ಸಿಗುವ ಕೂಲಿ ಕಡಿಮೆಯಾಗಿದೆ. ಹಣದುಬ್ಬರದ ಪ್ರಮಾಣ ದಿನದಿಂದ ದಿನಕ್ಕೆ ನಿರಂತರವಾಗಿ ಹೆಚ್ಚುತ್ತಿದ್ದು, ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರಿದೆ. ಆದುದರಿಂದ ಕೃಷಿ ಕೂಲಿಗಳಿಗೆ ದೊರೆಯುವ ಕನಿಷ್ಟ ಕೂಲಿಯು ಅವರ ದಿನನಿತ್ಯದ ಅವಶ್ಯಕತೆಗಳನ್ನು ಪೂರೈಸಲು ಸಾಕಾಗುತ್ತಿಲ್ಲ. ಇಂತವರ ರಕ್ಷಣೆಗೆ

ಸರಕಾರ ಆಸಕ್ತಿ ವಹಿಸದಿರುವುದು ಸಮಸ್ಯೆಯ ತೀವ್ರತೆಯನ್ನು ಮತ್ತಷ್ಟು ಹೆಚ್ಚಿಸಿದೆ. ಇಂತಹ ಸಮಸ್ಯೆಗಳನ್ನು ಪರಿಹರಿಸುವುದು ಸರಕಾರದ ಕರ್ತವ್ಯವಾಗಿದ್ದು ಸರಕಾರದ ಕೃಷಿ ನೀತಿಯನ್ನು ಈ ಸಮುದಾಯಗಳ ರಕ್ಷಣೆಯ ದೃಷ್ಟಿಯಲ್ಲಿ ಸಿದ್ಧಪಡಿಸಬೇಕಾಗಿದೆ.

ಸಾಮಾಜಿಕ ಸ್ಥಿತಿಗತಿ:

ಸಣ್ಣ ಕೃಷಿಕರು ಮತ್ತು ಕೃಷಿ ಕಾರ್ಮಿಕರ ಆರ್ಥಿಕ ದುಸ್ಥಿತಿ ಹಲವಾರು ಸಾಮಾಜಿಕ ಸಮಸ್ಯೆಗಳನ್ನು ಸೃಷ್ಟಿಸಿದೆ. ಜಾತಿ ಸಂಘರ್ಷಗಳು, ವರದಕ್ಷಿಣೆ, ಮದ್ಯಪಾನ, ಧೂಮಪಾನ, ಮಹಿಳಾ ದೌರ್ಜನ್ಯ, ಸಾಂಕ್ರಾಮಿಕ ರೋಗಗಳ ಹರಡುವಿಕೆ, ಮಾನಸಿಕ ಖಿನ್ನತೆ ಮುಂತಾದುವುಗಳು ಸಮಸ್ಯೆಗಳ ಸಾಲಿನಲ್ಲಿ ಮುಂಚೂಣಿಯಲ್ಲಿವೆ. ಸಣ್ಣ ಕೃಷಿಕರು ಮತ್ತು ಕೃಷಿ ಕಾರ್ಮಿಕರು ಕೆಲವೆಡೆ ದೊಡ್ಡ ಜಮೀನುನ್ದಾರರಿಂದ ಶೋಷಣೆಯನ್ನು ಎದುರಿಸುತ್ತಿದ್ದಾರೆ. ಈ ಎಲ್ಲಾ ಒತ್ತಡಗಳ ನಡುವೆ ಸಾಕಷ್ಟು ರೈತರು ಮತ್ತು ಕಾರ್ಮಿಕರು ಮಾರಕ ರೋಗಗಳಿಗೆ ಬಲಿಯಾಗುತ್ತಿದ್ದಾರೆ. ಆತ್ಮಹತ್ಯೆಗಳಂತ ಘೋರ ಕೃತ್ಯಗಳಿಗೆ ಹಿಂಜರಿಯುತ್ತಿಲ್ಲ. ಇವರ ಸಮಸ್ಯೆಗಳು ದ್ವಿಗುಣವಾಗುವುದಕ್ಕೆ ಸಂಘಟನೆ ಮತ್ತು ಅರಿವಿನ ಕೊರತೆ ಮುಖ್ಯ ಕಾರಣಗಳಾಗಿವೆ. ಕಾರ್ಮಿಕರು ಮತ್ತು ಸಣ್ಣ ಕೃಷಿಕರು ಒಳಗೊಂಡಂತೆ ಪ್ರಭಲ ಸಂಘಟನೆಯನ್ನು ರೂಪಿಸಿ ಹೋರಾಟದ ಹಾದಿನ್ನು ಹಿಡಿದರಷ್ಟೆ ಇವರ ಅಭಿವೃದ್ಧಿ ಸಾಧ್ಯ.

೨.೩ ಮಹಿಳೆಯರ ಸ್ಥಿತಿಗತಿ ಮತ್ತು ಸಮಸ್ಯೆಗಳು:

ಹೆಣ್ಣು ಮನುಕುಲದ ಮೂಲಭೂತ ಅಂಶ ಮತ್ತು ಸಮಾಜದ ಆಸ್ತಿಯಾಗಿದ್ದಾಳೆ. ಹೆಣ್ಣನ್ನು ಭೂಮಿ, ಪ್ರಕೃತಿ ಮತ್ತು ದೇವರೆಂದು ಪೂಜಿಸಲಾಗುತ್ತಿದೆ. ಆದರೆ ವಾಸ್ತವಿಕ ಸ್ಥಿತಿಯನ್ನು ಅರಿತುಕೊಂಡಾಗ ಹೆಣ್ಣಿನ ಬಗ್ಗೆ ಸಮಾಜ ಅನುಸರಿಸುತ್ತಿರುವ ದ್ವಿಮುಖ ನೀತಿಯ ಅರಿವಾಗುತ್ತದೆ. ಈ ದೇಶದಲ್ಲಿ ಹೆಣ್ಣನ್ನು ಎರಡನೇಯ ದರ್ಜೆಯ ಪ್ರಜೆಯಾಗಿ ಕಾಣಲಾಗುತ್ತಿದ್ದು, ತನ್ನ ಜೀವನದ ಪ್ರತೀ ಮೆಟ್ಟಿಲಿನಲ್ಲಿ ತನ್ನ ಬದುಕಿನ ಹಕ್ಕುಗಳಿಗೆ ಸತತ ಹೋರಾಡುವ ಅನಿವಾರ್ಯ ಪರಿಸ್ಥಿತಿ ಸೃಷ್ಟಿಯಾಗಿದೆ. ಆಕೆಗೆ ಲಭಿಸುತ್ತಿರುವ ಶಿಕ್ಷಣ, ಸಾಮಾಜಿಕ ಸ್ಥಾನಮಾನ, ರಾಜಕೀಯದಲ್ಲಿ ಪಾಲ್ಗೊಳ್ಳುವಿಕೆ, ಆರ್ಥಿಕ ಸ್ವಾತಂತ್ರ್ಯ ಮುಂತಾದುವುಗಳಲ್ಲಿ ಗಣನೀಯ ಸುಧಾರಣೆ ಅಗತ್ಯವಾಗಿದ್ದು ಈ ಎಲ್ಲಾ ಸಮಸ್ಯೆಗಳಿಂದ ಮುಕ್ತಿ ಪಡೆಯಲು ಹೆಣ್ಣು ಸತತ ಹೋರಾಟದ ಹಾದಿಯನ್ನು ಹಿಡಿಯಬೇಕಾದುದು ಅತ್ಯಂತ ಖೇಧನೀಯ ವಿಚಾರ. ಬೆಳ್ತಂಡಿ ತಾಲೂಕಿನ ಮಹಿಳೆಯರ ಸ್ಥಿತಿಗತಿ ಕೂಡಾ ರಾಜ್ಯದ ಇತರೆಡೆ ಮಹಿಳೆಯ ಎದುರಿಸುತ್ತಿರುವ ಸಮಸ್ಯೆ ಮತ್ತು ದೌರ್ಜನ್ಯಗಳಿಂದ ಹೊರತಾಗಿಲ್ಲ. ಅವರ ಹಕ್ಕುಗಳ ಬಗ್ಗೆ ನಿರ್ಲಕ್ಷಧೋರಣೆಯನ್ನು ತಾಳಲಾಗಿದೆ.

ರಾಜಕೀಯದಲ್ಲಿ ಮಹಿಳೆಯರು:

ಮಹಿಳೆಯರು ಇಂದು ಪುರುಷರ ಸ್ವಾಮ್ಯದಲ್ಲಿಯೇ ಇದ್ದ ಅನೇಕ ವಲಯಗಳಲ್ಲಿ ಪ್ರವೇಶಿಸಿ ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಂಡಿದ್ದಾರೆ. ಸತತ ಹೋರಾಟದಿಂದಾಗಿ ರಾಜಕೀಯ ಕ್ಷೇತ್ರದಲ್ಲಿ ಕೂಡ ಇಂದು ತನ್ನ ಹಕ್ಕನ್ನು ಪಡೆದು ಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಪುರುಷರ ಬಿಗಿಮುಷ್ಟಿಯಲ್ಲಿಯೇ ಇದ್ದ ರಾಜಕೀಯ ಕ್ಷೇತ್ರದಲ್ಲಿ ಸಂವಿಧಾನದ ಮೂಲಕ ಮೀಸಲಾತಿಯನ್ನು ಪಡೆಯುವಲ್ಲಿ ಮಹಿಳೆಯರು ಯಶಸ್ವಿಯಾಗಿದ್ದಾರೆ. ಮಹಿಳೆಯರ

ಸಕ್ರೀಯ ಭಾಗವಹಿಸುವಿಕೆ ಇಲ್ಲದೆ, ಪಂಚಾಯತ್ ರಾಜ್ ವ್ಯವಸ್ಥೆ ತನ್ನ ಆರಂಭಿಕ ಹೆಜ್ಜೆಗಳಲ್ಲಿಯೇ ಎಡವಿತ್ತು. ಆದುದರಿಂದ ದೇಶದ ಜನಸಂಖ್ಯೆಯ ಅರ್ಧಾಂಶದಷ್ಟಿರುವ ಮಹಿಳೆಯರನ್ನು ನೇಮಕಾತಿ ಮಾಡುವ ಮೂಲಕ ಪಂಚಾಯತ್ ಸಂಸ್ಥೆಗಳಲ್ಲಿ ತೊಡಗಿಸಲಾಯಿತು. ಕ್ರಮೇಣವಾಗಿ 1987 ರ ಪಂಚಾಯತ್ ಚುನಾವಣೆಗಳಲ್ಲಿ ಮಹಿಳೆಯರಿಗೆ ಶೇ 25 ರಷ್ಟು ಮೀಸಲಾತಿಯನ್ನು ಘೋಷಿಸಲಾಯಿತು. 1993 ರಲ್ಲಿ ಜಾರಿಗೆ ಬಂದ ಸಂವಿಧಾನದ 73 ನೇ ತಿದ್ದುಪಡಿಯ ಪ್ರಕಾರ ಮಹಿಳೆಯರಿಗೆ ಪಂಚಾಯತ್ ಸಂಸ್ಥೆಗಳಲ್ಲಿ ಶೇ 33 ಮೀಸಲಾತಿ ದೊರೆಯುವಂತಾಯಿತು. ಆ ಮೂಲಕ ಮಹಿಳೆಯರಿಗೆ ಗ್ರಾಮ, ತಾಲೂಕು ಮತ್ತು ಜಿಲ್ಲಾ ಪಂಚಾಯತ್‌ಗಳಲಿ ಸಕ್ರಿಯವಾಗಿ ಭಾಗವಹಿಸುವ ಹಕ್ಕು ದೊರೆಯಿತು. ರಾಜಕೀಯಕ್ಕೆ ಧುಮುಕುವ ಮಹಿಳೆಯರ ಸಂಖ್ಯೆ ಗಣನೀಯವಾಗಿ ಹೆಚ್ಚಳವಾಯಿತು.

ಮಹಿಳೆಯರ ರಾಜಕೀಯ ಪಾಲ್ಗೊಳ್ಳುವಿಕೆಯನ್ನು ಗಮನಿಸುವಾಗ ಆಕೆ ಸವಾಲುಗಳನ್ನು ಎದುರಿಸಿಯೂ ರಾಜಕೀಯದಲ್ಲಿ ತನ್ನ ಹೆಜ್ಜೆಗಳನ್ನು ಮೂಡಿಸಲು ಯತ್ನಿಸುವುದನ್ನು ಗಮನಿಸಬಹುದು. ಅವರನ್ನು ಕಾಡುತ್ತಿರುವ ಪ್ರಮುಖ ಸಮಸ್ಯೆಗಳೆಂದರೆ, ಅನಕ್ಷರತೆ, ಪುರುಷ ಪ್ರಧಾನ ವ್ಯವಸ್ಥೆ ಮತ್ತು ಸಾಮಾಜಿಕ ಕಟ್ಟುಪಾಡುಗಳು. ಪುರುಷರನ್ನು ಹೋಲಿಸುವಾಗ ಮಹಿಳೆಯರಲ್ಲಿ ಹೆಚ್ಚು ಅನಕ್ಷರತೆ ಕಂಡುಬರುತ್ತದೆ. ಹಳ್ಳಿಯ ಪಂಚಾಯತ್ ಸಂಸ್ಥೆಗಳಲ್ಲಿ ಸ್ಥಾನವನ್ನು ಪಡೆದ ಮುಕ್ಕಾಲು ಪಾಲು ಮಹಿಳೆಯರು ಅನಕ್ಷರಸ್ಥರು ಹಾಗೂ ತಮ್ಮ ಹಕ್ಕುಗಳ ಬಗ್ಗೆ ಅರಿವಿಲ್ಲದವರು. ರಾಜಕೀಯದ ಬಗ್ಗೆ ಜ್ಞಾನವೇ ಇಲ್ಲದ ಕಾರಣ ಶೋಷಣೆಗೆ ಒಳಗಾಗುವ ಅಪಾಯಗಳು ಹೆಚ್ಚು. ಪಂಚಾಯತಿಗಳಲ್ಲಿ ಮಹಿಳೆಯರ ಇರುವಿಕೆ ಒಂದು ರೀತಿಯ ಶಿಸ್ತನ್ನು ತಂದು ಕೊಟ್ಟಿದ್ದರೂ ನಿರ್ಧಾರಗಳನ್ನು ಕೈಗೊಳ್ಳುವ ಹಂತದಲ್ಲಿ ಇತರರ ಪ್ರಭಾವಕ್ಕೊಳಗಾಗುವ ಅನಿವಾರ್ಯತೆಗೆ ಮಹಿಳೆ ಸಿಲಕಬೇಕಾಗುತ್ತದೆ. ಇತರರ ಕೈಗೊಂಬೆಯಾಗಿ ಕಾರ್ಯ ನಿರ್ವಹಿಸಬೇಕಾಗುತ್ತದೆ. ಆದುದರಿಂದ ಮಹಿಳೆಯರು ತಮ್ಮ ರಾಜಕೀಯ ಹಕ್ಕುಗಳಿಗಾಗಿ ನಿರಂತರ ಹೋರಾಡಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ.

ಮಹಿಳೆಯರ ಸಾಮಾಜಿಕ ಸ್ಥಿತಿಗತಿ:

ಮಹಿಳೆಯರ ಸಾಮಾಜಿಕ ಸ್ಥಿತಿಗತಿ ಶೋಚನೀಯವಾದುದು. ಭಾರತದ ಇತಿಹಾಸ ಪುಟಗಳನ್ನು ತಿರುಗಿಸಿದಾಗ ಮಹಿಳೆಯ ಶೋಷಣೆ ಮತ್ತು ದೌರ್ಜನ್ಯದ ಹಲವಾರು ನಿದರ್ಶನಗಳನ್ನು ಕಾಣಬಹುದು. ಮಹಿಳೆಯರನ್ನು ಇತಿಹಾಸ ವ್ಯಾಪ್ತಿಯಿಂದ ಸಂಪೂರ್ಣವಾಗಿ ಹೊಡಗಿಡಲಾಗಿತ್ತು. ಒಂದು ಕಾಲದಲ್ಲಿ ಸಮಾಜದ ಆಸ್ತಿಯೆಂದು ಪರಿಗಣಿಸಲ್ಪಟ್ಟ ಮಹಿಳೆ ಸಮಾಜಕ್ಕೆ ಹೊರೆಯಾಗಿ ಪರಿಣಮಿಸಿರುವುದನ್ನು ಉತ್ತರ ವೈದಿಕ ಕಾಲದ ಚರಿತ್ರೆಯಿಂದ ನಾವು ಅರ್ಥೈಸಬಹುದು. ಅಂತಹ ಹಲವಾರು ನಿದರ್ಶನಗಳು ಇಂದಿನ ಸಮಾಜದ ಅವಿಭಾಜ್ಯ ಅಂಗವಾಗಿರುವುದು ದುಖನೀಯ ವಿಷಯವಾಗಿದೆ. ಮಹಿಳೆಯರ ಮೇಲೆ ವೇದಗಳ ಮತ್ತು ರಜಪುತ ಯುಗದಲ್ಲಿ ಹೇರಲಾಗಿದ್ದ ಕೆಲವೊಂದು ಸಮಾಜಿಕ ಕಟ್ಟು ಪಾಡುಗಳು ಲಿಖಿತ ರೀತಿಯಲ್ಲಿ ಅಸ್ತಿತ್ವದಲ್ಲಿವೆ.

ಆಧುನಿಕ ಸಾಮಾಜಿಕ ವ್ಯವಸ್ಥೆಯಲ್ಲಿ ಕೂಡ ಮಹಿಳೆ ಉತ್ತಮ ಸ್ಥಾನವನ್ನು ಹೊಂದಿಲ್ಲ. ಬಹು ಪತ್ನಿತ್ವ, ದೇವದಾಶಿ, ಪದ್ದತಿಗಳು ಇಂದಿಗೂ ಅಸ್ತಿತ್ವದಲ್ಲಿವೆ. ವರದಕ್ಷಿಣೆಯ ಪಿಡುಗು ಮಹಿಳೆಯರಿಗೆ ಇಂದಿಗೂ ಕಾಡುತ್ತಿದೆ.

ಆಸ್ತಿಯ ಹಕ್ಕಿನ ನಿರಾಕರಣೆ, ವಿವಾಹದ ಆಯ್ಕೆಯ ಸ್ವಾತಂತ್ರ್ಯದ ನಿರಾಕರಣೆ, ವಿವಾಹದ ನಂತರ ಅತ್ತೆ ಮಾವಂದಿರ ಕಿರುಕುಳದ ಘಟನೆಗಳು ಇಂದು ವ್ಯವಸ್ಥಿತವಾಗಿ ನಡೆಯುತ್ತಿವೆ. ಮಹಿಳೆಯರಲ್ಲಿ ನಿರುದ್ಯೋಗದ ಸಮಸ್ಯೆ ಪುರುಷರಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಕಂಡು ಬರುತ್ತಿದೆ. ಮಹಿಳೆಯರು ಇನ್ನೂ ಲಿಂಗ ತಾರತಮ್ಯದಿಂದ ನಲುಗುತ್ತಿದ್ದಾರೆ. ಮಹಿಳೆಯರ ಶ್ರಮಕ್ಕೆ ತಕ್ಕ ಮೌಲ್ಯವಿಲ್ಲ. ದುಡಿಮೆಯಲ್ಲಿ ತಾರತಮ್ಯತೆ, ಕೆಲಸ ಮಾಡುವ ಸ್ಥಳಗಳಲ್ಲಿ ದೌರ್ಜನ್ಯ ಮುಂತಾದವುಗಳನ್ನು ಎದುರಿಸಬೇಕಾಗುತ್ತದೆ. ಕೋಮು ಗಲಭೆ, ಮಧ್ಯಪಾನ, ಆತ್ಮಹತ್ಯೆ ಮುಂತಾದ ಎಲ್ಲಾ ಪ್ರಕರಣಗಳ ಬಲಿಪಶು ಮಹಿಳೆ ಎಂಬ ವಿಷಯನ್ನಂತು ತಳ್ಳಿ ಹಾಕುವಂತಿಲ್ಲ. ಇಂತಹ ಸಂದಿಗ್ದತೆಯಿಂದ ಮಹಿಳೆಯರನ್ನು ರಕ್ಷಿಸಿ ಸಮಾಜವು ಸಂಪೂರ್ಣವಾಗಿ ರೋಗ ಗ್ರಸ್ತವಾಗುವ ಪರಿಸ್ಥಿತಿಯಿಂದ ರಕ್ಷಿಸುವುದು ನಮ್ಮೆಲ್ಲರ ಹೊಣೆಯಾಗಿದೆ. ಈ ನಿಟ್ಟಿನಲ್ಲಿ ಸಂಘ ಸಂಸ್ಥೆಗಳು ಮತ್ತು ಸಮಾಜ ಸುಧಾರಕರು ಮಾಡುವಂತಹ ಸೇವೆಯು ಶ್ಲಾಘನೀಯ.

ಆರ್ಥಿಕ ಸ್ಥಿತಿಗತಿ:

ಮಹಿಳೆಯರು ಆರ್ಥಿಕವಾಗಿ ಅಸಮಾನತೆಯನ್ನು ಎದುರಿಸುತ್ತಿದ್ದಾರೆ. ಭಾರತೀಯ ಆರ್ಥಿಕ ವ್ಯವಸ್ಥೆಯಲ್ಲಿ, ಸಾವಿರಾರು ವರ್ಷಗಳಿಂದ ದನಿ-ಒಕ್ಕಲು, ಧನಿ-ಕೂಲಿಯವ, ಹೆಣ್ಣಾಳು-ಗಂಡಾಳು ಎಂಬ ಚೌಕಟ್ಟಿನಲ್ಲಿ ಆರ್ಥಿಕ ಅಸಮಾನತೆಯನ್ನು ಗುರುತಿಸಬಹುದು. ಈ ರೀತಿಯ ಆರ್ಥಿಕ ಶೋಷಣೆಯ ಸಂಬಂಧಗಳಿಂದ ನಾವು ಇನ್ನೂ ಹೊರ ಬಂದಿಲ್ಲ. ಕೃಷಿ ಭೂಮಿಯ ಒಡೆತನ, ಉತ್ಪಾದನೆಯ ನಿಯಂತ್ರಣ, ಪುರುಷ ಯಾಜಮಾನಿಕೆ, ಕೃಷಿ ಕೂಲಿಯಲ್ಲಿ ತಾರತಮ್ಯ, ಮಾರುಕಟ್ಟೆಯ ನಿಯಂತ್ರಣ, ಕೃಷಿ ಬೆಳೆಯಿಂದ ಬಂದ ಹಣದ ಉಪಯೋಗ ಮುಂತಾದುವುಗಳು ಸಂಪೂರ್ಣವಾಗಿ ಪುರುಷರ ಯಜಮಾನಿಕೆಗೆ ಒಳಗಾಗಿದೆ. ಈ ತಾರತಮ್ಯವನ್ನು ಕೈಗಾರಿಕೆಗಳಲ್ಲಿ ಮತ್ತು ಸೇವಾ ರಂಗಗಳಲ್ಲಿ ನಾವು ಗಮನಿಸಬಹುದು. ಜಾಗತೀಕರಣ ಮತ್ತು ಖಾಸಗೀಕರಣದಂತಹ ಪ್ರಕ್ರಿಯೆಗಳಿಂದ ಹೆಣ್ಣಿನ ಪರಿಸ್ಥಿತಿ ಮತ್ತಷ್ಟು ಅದೋಗತಿಗೆ ತಲುಪುತ್ತಿದೆ.

ಬೀಡಿ ಉದ್ಯಮವು ಮಹಿಳೆಯ ಉದ್ಯೋಗ ಕ್ಷೇತ್ರದಲ್ಲಿ ಕಂಡುಬರುವಂತಹ ಪ್ರಮುಖ ಉದ್ಯಮ. ಇಲ್ಲಿ ತೊಡಗಿಸಿಕೊಂಡಿರುವ ಮಹಿಳೆಯರು ಸಾಕಷ್ಟು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಬೀಡಿ ಕಾರ್ಮಿಕರಿಗೆ ಭದ್ರತೆಯ ಕೊರತೆಯಿದೆ. ಅವರಿಗೆ ಯಾವುದೇ ಪರ್ಯಾಯ ಉದ್ಯೋಗ ಒದಗಿಸುವುದು ಅಸಾಧ್ಯವಾದುದರಿಂದ ಬೀಡಿ ಉದ್ಯಮವನ್ನು ರಕ್ಷಿಸುವ ನಿಟ್ಟಿನಲ್ಲಿ ಹೋರಾಟಗಳು ನಡೆಯಬೇಕಾಗಿವೆ. ಬೀಡಿ ಗುತ್ತಿಗೆದಾರರಿಂದ ಕಾನೂನಿನ ಉಲ್ಲಂಘನೆಯಾಗುತ್ತಿರುವ ಅಂಶವು ಬೆಳಕಿಗೆ ಬಂದಿದೆ.

ಕಾರ್ಮಿಕರು ಕಟ್ಟಿದ ಬೀಡಿಯನ್ನು ತೂಕ ಮಾಡಿ ಅದು ಸಾಕಷ್ಟು ಗುಣಮಟ್ಟಕ್ಕೆ ತಕ್ಕುವುದಿಲ್ಲ ಎಂಬ ಸಾಮಾನ್ಯ ಮತ್ತು ಅನಾವಶ್ಯಕ ನೆಪಗಳನ್ನೊಡ್ಡಿ ಕಷ್ಟದಲ್ಲಿ ಕಟ್ಟದ ಬೀಡಿಯನ್ನು ಮುರಿದು ಹಾಕುವುದು, ಇಲ್ಲವೇ ಒಂದು ಸಾವಿರಕ್ಕೆ ಇಂತಿಷ್ಟು ಬೀಡಿಯನ್ನು ಲೆಕ್ಕಕ್ಕಿಲ್ಲದೆ ತೆಗೆದಿರುವುದು, ವರ್ಷಗಟ್ಟಲೆ ಬೀಡಿ ಕಟ್ಟಿದರೂ ಪಾಸ್ ಪ್ರಸ್ತಕ ನೀಡದೆ ಇರುವುದು, ಗುರುತು ಚೀಟಿ ನೀಡಲು ನಿರಾಕರಿಸುವುದು, ಬೋನಸ್ ಲೆಕ್ಕದಲ್ಲಿ ಕಡಿತ, ಕನಿಷ್ಟ ವೇತನಕ್ಕಿಂತ ತೀರಾ ಕಡಿಮೆ ವೇತನ, ಹೆರಿಗೆ ಬತ್ತೆ ನಿರಾಕರಣೆ ಮುಂತಾದವುಗಳ ಮೂಲಕ ಬಡ ಬೀಡಿ ಕಾರ್ಮಿಕರನ್ನು

ಶೋಷಣೆಗೊಳಪಡಿಸುವುದು ಸಾಮಾನ್ಯವಾಗಿದೆ. ಈ ರೀತಿಯ ಕಿರುಕುಳ ಮತ್ತು ಶೋಷಣೆಯಿಂದ ಬೀಡಿ ಕಾರ್ಮಿಕರನ್ನು ರಕ್ಷಿಸಬೇಕಾದರೆ ಹೋರಾಟಗಳು ಅನಿವಾರ್ಯವಾಗುತ್ತದೆ.

ಶಿಕ್ಷಣ ಮತ್ತು ಆರೋಗ್ಯ:

ಮಹಿಳೆಯರ ಹಲವಾರು ಸಮಸ್ಯೆಗಳಿಗೆ ಅನಕ್ಷರತೆ ಮೂಲಕಾರಣವಾಗಿದೆ. ಅನಕ್ಷರತೆಯು ಮಹಿಳೆಯರಿಗೆ ಒಂದು ಸಾಮಾಜಿಕ ಪಿಡುಗಾಗಿ ಕಾಡುತ್ತಿದೆ. ಸೌಲಭ್ಯಗಳಿಂದ ವಂಚನೆ ಮತ್ತು ದೌರ್ಜನ್ಯಕ್ಕೆ ಮಹಿಳೆಯರಲ್ಲಿ ಶಿಕ್ಷಣದ ಕೊರತೆಯೇ ಕಾರಣವಾಗಿದೆ. ಲಿಂಗ ತಾರತಮ್ಯತೆಯನ್ನು ಬದಿಗಿಟ್ಟು ಶಿಕ್ಷಣವನ್ನು ಪ್ರೋತ್ಸಾಹಿಸಬೇಕಾಗಿದೆ. ಕಡ್ಡಾಯ ಶಿಕ್ಷಣ ನೀತಿಯನ್ನು ಜಾರಿಗೊಳಿಸಿ ಮಹಿಳೆಯರ ಸಮಸ್ಯೆಗಳನ್ನು ನಿವಾರಿಸಲು ಪ್ರಯತ್ನಿಸಬೇಕಾಗಿದೆ. ಲಿಂಗತ್ವ ವಿಚಾರಗಳು, ಕೋಮು ಸಾಮರಸ್ಯ ಮತ್ತು ಇನ್ನಿತರ ಸಾಮಾಜಿಕ ಪಿಡುಗುಗಳ ಕುರಿತು ಶಿಕ್ಷಣ ನೀಡುವುದು ಅಗತ್ಯವಾಗಿದೆ. ಮಹಿಳೆಯ ಆರೋಗ್ಯದ ಕಡೆಗೆ ಹೆಚ್ಚಿನ ಗಮನ ನೀಡಬೇಕಾಗಿದೆ. ಡೆಂಗು, ಮಲೇರಿಯಾ, ಚಿಕುನ್ ಗುನ್ಯಾ ಮುಂತಾದ ಮಾರಕ ಸಾಂಕ್ರಾಮಿಕ ರೋಗಗಳು ಕಾಡುತ್ತಿವೆ. ಹಲವಾರು ಮಹಿಳೆಯರು ಏಡ್ಸ್‌ನಂತಹ ಮಾರಕ ರೋಗಕ್ಕೆ ಬಲಿಯಾಗುತ್ತಿದ್ದಾರೆ. ಇಂತಹ ಸಮಸ್ಯೆಗಳಿಂದ ಮಹಿಳೆಯರನ್ನು ರಕ್ಷಿಸುವುದು ಅನಿವಾರ್ಯವಾಗಿದೆ. ಮಹಿಳೆಯರ ಆರೋಗ್ಯ ಕಾಪಾಡುವುದರಿಂದ ಸಮಾಜದ ಆರೋಗ್ಯ ಕಾಪಾಡಿದಂತಾಗುತ್ತದೆ. ಬೆಳ್ತಂಗಡಿ ತಾಲೂಕು ವ್ಯಾಪ್ತಿಯಲ್ಲಿ ಕೂಡ ಮಹಿಳೆಯರು ಮೇಲಿನ ಸಮಸ್ಯೆಗಳಿಂದ ಮುಕ್ತರಾಗಿಲ್ಲ.

೨.೪ ದಲಿತರ ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಪರಿಸ್ಥಿತಿ:

ದಲಿತ ಎಂಬ ಪದದ ಅರ್ಥವನ್ನು ಹಲವಾರು ರೀತಿಯಲ್ಲಿ ವಿಶ್ಲೇಶಿಸಬಹುದು. ಸಂಸ್ಕೃತ ಬಾಷಾರ್ಥದಲ್ಲಿ ದಲಿತ ಎಂಬ ಪದವು 'ದಳ್' ಎಂಬ ಮೂಲಪದದಿಂದ ಬಂದಿದ್ದು ವಿಭಜಿಸಲ್ಪಟ್ಟ ಎಂಬ ಅರ್ಥವನ್ನು ಕೊಡುತ್ತದೆ. ದಲಿತ ಎಂಬ ಪದವನ್ನು ಬೇರೆ ಬೇರೆ ದ್ರಾವಿಡ ಭಾಷೆಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ಪ್ರಯೋಗಿಸಲಾಗಿದೆ. ಡ್ರಾವಿಡ ಎಂಬ ಪದವು ಹಲವಾರು ಭಾಷೆಗಳಲ್ಲಿ ಕಂಡುಬಂದಿದ್ದು, ದಲಿತ ಎಂಬ ಪದದಿಂದ ಬಂದಿದೆ ಎಂದು ತಿಳಿದುಕೊಳ್ಳಲಾಗಿದೆ. ಇವರನ್ನು ಅಸ್ಪಶ್ಯರು ಎಂಬುದಾಗಿಯೂ ಸಂಭೋದಿಸಲಾಗುತ್ತದೆ. **ಎಸ್. ಕೆ. ಚಟರ್ಜಿ** ಎಂಬ ಇತಿಹಾಸಕಾರರ ಅಭಿಪ್ರಾಯದ ಪ್ರಕಾರ "ಮೂಲ ಭಾರತೀಯರು ಶೂದ್ರರಾಗಿದ್ದು ಅವರೇ ಇಂದು ದಲಿತರೆಂದು ಕರೆಯಲ್ಪಟ್ಟಿದ್ದಾರೆ". ಇವರು ಆರ್ಯರಿಗಿಂತ ಸಾವಿರಾರು ವರ್ಷಗಳ ಹಿಂದೆ ಭಾರತದಲ್ಲಿದ್ದರು. ಹಾಗೂ ದಲಿತರು ಭಾರತದ ಮೂಲ ನಿವಾಸಿಗಳ ಅನುಯಾಯಿಗಳು ಎಂದು ಕರೆಯಲ್ಪಟ್ಟಿದ್ದಾರೆ. ಹೀಗೆ ದಲಿತರು ಎಂಬುದು ಒಂದು ಪ್ರತ್ಯೇಕ ಸಮುದಾಯವಾಗಿರದೆ ಸಮಾಜದ ಕಟ್ಟುಪಾಡುಗಳಿಂದ ರಚಿತವಾದ ಒಂದು ಪರಿಕಲ್ಪನೆ. ಇದು ಉನ್ನತ ವರ್ಗದವರಿಂದ ನಿರಂತರ ತುಳಿತಕ್ಕೊಳಗಾದ ಸಮುದಾಯವಾಗಿದೆ. ಇವರ ಚಾರಿತ್ರಿಕ ಹಿನ್ನೆಲೆಯನ್ನು ಗಮನಿಸುವಾಗ ಕೂಡ ಈ ವರ್ಗವು ನಿರಂತರ ತುಳಿತಕ್ಕೊಳಗಾಗಿರುವ ವರ್ಗ ಎಂಬುದು ಸಾಭಿತಾಗಿದೆ. ಚಾರಿತ್ರಿಕವಾಗಿ ಅಸ್ಪಶ್ಯತೆ ಎನ್ನುವುದು ಭಾರತೀಯ ಸಮಾಜದಲ್ಲಿ ಹಿಂದೆ ಆಚರಣೆಯಲ್ಲಿ ಇತ್ತಾದರೂ ಇಪ್ಪತ್ತನೇ ಶತಮಾನದಲ್ಲಿ ಒಂದು ವಿಶಿಷ್ಟ ಸಾಮಾಜಿಕ ಸಂಗತಿಯಾಗಿ ಹೊರಹೊಮ್ಮಿತು. ಭಾರತದ ಸಂವಿಧಾನದಲ್ಲಿ ಸಮಾನತೆ, ಸ್ವಾತಂತ್ರ್ಯ ಮತ್ತು ಭಾತೃತ್ವದ

ಬಗ್ಗೆ ಸ್ಪಷ್ಟವಾದ ಉಲ್ಲೇಖವಿದೆ. ಅಸ್ಪೃಶ್ಯತೆಯನ್ನು ಸಂವಿಧಾನದ ಮೂಲಕವೇ ರದ್ದುಗೊಳಿಸಲಾಗಿದ್ದು ಒಂದು ಚಾರಿತ್ರಿಕ ಸಾಧನೆಯೇ ಸರಿ. **ಡಾ। ಬಾಬಾ ಸಾಹೇಬ್ ಅಂಬೇಡ್ಕರ್**ರವರು ಅಭಿಪ್ರಾಯ ಪಡುವಂತೆ 'ಭ್ರಾತೃತ್ವ ಮತ್ತು ಸ್ವಾತಂತ್ರ್ಯ ಎರಡು ನಿರ್ಣಯ ನಂಬಿಕೆಗಳಾಗಿದ್ದು ಸಮಾನತೆ ಮತ್ತು ಮಾನವ ವ್ಯಕ್ತಿಯ ಬಗೆಗಿನ ಗೌರವದಲ್ಲಿ ತಮ್ಮ ಬೇರುಗಳನ್ನು ಕಂಡುಕೊಂಡಿವೆ. ಆದುದರಿಂದ ಸಮಾನತೆಯನ್ನ ನಿರಾಕರಿಸುವುದೆಂದರೆ, ಮಿಕ್ಕೆಲ್ಲವನ್ನೂ ನಿರಾಕರಿಸುವುದು ಎಂಬ ಅರ್ಥವನ್ನು ಕಲ್ಪಿಸುತ್ತದೆ.'

ಈ ಅಸ್ಪೃಶ್ಯತೆಯ ವಿರುದ್ಧ ನಿರಂತರವಾಗಿ ಹೋರಾಡಿ ದಲಿತರಿಗೆ ಸಂವಿಧಾನತ್ಮಕ ಸ್ಥಾನಮಾನವನ್ನು ಕಲ್ಪಿಸಿ ಕೊಡುವಲ್ಲಿ ಡಾ। ಬಿ.ಆರ್ ಅಂಬೇಡ್ಕರ್ ಅವರ ಕೊಡುಗೆ ಶ್ಲಾಘನೀಯ. ದಲಿತರ ದೃಷ್ಟಿಯಲ್ಲಿ ಅಂಬೇಡ್ಕರ್‌ವರು "ಪಂಡಿತರಲ್ಲಿ ಮಹಾನ್ ಪಂಡಿತರು" ಅಮಾನವೀಯ ತುಳಿತಕ್ಕೊಳಗಾದ ದಲಿತರನ್ನು ದಾಸ್ಯದಿಂದ ಬಿಡುಗಡೆ ಮಾಡಿದ ದೇವಮಾನವ. ಅವರು ತಮ್ಮ ಜೀವಿತದ ಪ್ರತಿಯೊಂದು ಗಳಿಗೆಯನ್ನು ದಲಿತರ ಏಳಿಗಾಗಿ ಮುಡಿಪಾಗಿಟ್ಟದದಾರೆ. ಅವರ ಒಳಿತಿಗಾಗಿ ಹೋರಾಟ ಮತ್ತು ಚಿಂತನೆಯಲ್ಲಿ ತೊಡಗಿಸಿಕೊಂಡವರು. ಜಾತಿ ಆಧಾರಿತ ಶ್ರೇಷ್ಠತೆಯನ್ನು ಧಿಕ್ಕರಿಸಿ, ಅನೇಕ ಶತಮಾನದಗಳ ನಂತರ ದಲಿತರೂ ಮಾನವ ಜಾತಿಗೆ ಸೇರಿದವರೆಂದು ತೋರಿಸಿಕೊಟ್ಟ ಮಹಾನ್ ಚೇತನ. ಜಾತಿ ಆಧಾರಿತ ಅಸಮಾನತೆಯನ್ನ ವಿರೋಧಿಸಿ ತನಗೆ ಸುಲಭವಾಗಿ ದಕ್ಕಬಹುದಾದ ಎಲ್ಲಾ ಜೀವನ ಸೌಕರ್ಯಗಳನ್ನು ತಿಸ್ಕರಿಸಿದರು. ದಲಿತರಲ್ಲಿ ಮಾನವ ಸಹಜವಾದ ಸ್ವಾಭಿಮಾನದ ಮೊಳಕೆ ಚಿಗುರುವಂತೆ ಮಾಡಿದ್ದು, ದಾಸ್ಯದಲ್ಲಿ ತೊಳಲಾಡಿದ ಜೀತದಾಳುಗಳನ್ನು ಸರಕಾರದ ಉನ್ನತ ಹುದ್ದೆಗಳನ್ನು ಗಳಿಸುವಷ್ಟು ಎತ್ತರಕ್ಕೆ ಕೊಂಡೊಯ್ದ ಕೀರ್ತಿ ಅವರಿಗೆ ಸಲ್ಲುತ್ತದೆ.

ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿ ಸಾಕಷ್ಟು ವರ್ಷಗಳಾದರೂ ದಲಿತರ ಅಭಿವೃದ್ಧಿ ಮತ್ತು ಸ್ಥಾನ–ಮಾನದಲ್ಲಿ ಗಣನೀಯವಾದ ಸುಧಾರಣೆ ಕಂಡು ಬಂದಿಲ್ಲ, ದಲಿತರಲ್ಲಿ ವ್ಯವಸ್ಥಿತವಾಗಿ ರಾಜಕೀಯ, ಆರ್ಥಿಕ, ಸಾಮಾಜಿಕ, ಮತ್ತು ಸಾಂಸ್ಕೃತಿಕ ಕ್ಷೇತ್ರಗಳಿಂದ ದೂರವಿಡುವುದರ ಮೂಲಕ ಅಂಬೇಡ್ಕರ್‌ರವರು ಪ್ರತಿಪಾದಿಸಿದ ಸಮಾನತೆಯ ಕೂಗು ಮರೀಚಿಕೆಯಾಗಿದೆ. ದೇಶದ ಹಲವಾರು ಭಾಗಗಳಲ್ಲಿ ದೌರ್ಜನ್ಯ, ಶೋಷಣೆ, ಕೊಲೆ, ಅತ್ಯಾಚಾರ ಮುಂತಾದ ಪ್ರಕರಣಗಳು ಬೆಳಕಿಗೆ ಬರುತ್ತಿವೆ. ಜಾತಿ ವ್ಯವಸ್ಥೆಯು ಒಂದು ಆರ್ಥಿಕ ವ್ಯವಸ್ಥೆ. ಇದು ಜನರನ್ನು ಭೂ ಒಡೆತನದಿಂದ ಮತ್ತು ಶಿಕ್ಷಣದಿಂದ ತಡೆಯುತ್ತದೆ. ಜಾತಿ ವ್ಯವಸ್ಥೆಯು ಜೀವ ಭದ್ರತೆಯ ಹಕ್ಕಿನ ಮೇಲೆ ಪರಿಣಾಮವನ್ನು ಬೀರುತ್ತದೆ. ಅದೊಂದು ವಿಷಚಕ್ರ ಮತ್ತು ಆರ್ಥಿಕ ಶೋಷಣೆಯ ಕೂಟ. ಮೇಲು ಜಾತಿ ವ್ಯಕ್ತಿಗೂ ಭೂಮಾಲಿಕತ್ವಕ್ಕೂ ಪರಸ್ಪರ ಸಂಬಂಧವಿದೆ. ಹಾಗೆಯೇ ಕೆಳಜಾತಿಗೂ ಮತ್ತು ಭೂಮಿ ಇಲ್ಲದೆ ಇರುವವನಿಗೂ ಸಂಬಂಧವಿದೆ. ಜಾತಿಯು ಆರ್ಥಿಕ ಶೋಷಣಾ ಪದ್ಧತಿಯನ್ನು ಶಾಶ್ವತವಾಗಿಸುವ ಸಾಧನ. ದಲಿತರಿಗೆ ರಾಜಕೀಯ ಮತ್ತು ನಾಗರಿಕ ಹಕ್ಕನ್ನು ನಿರಾಕರಿಸುವುದರ ಮೂಲಕ ಅವರಿಗೆ ರಾಜಕೀಯ ಮತ್ತು ಆರ್ಥಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಿಕೆಯ ಸ್ವಾತಂತ್ರ್ಯದ ಮೇಲೆ ನಿರ್ಬಂಧ ಹೇರಿದಂತಾಗಿದೆ. ಇದು ಜಾತಿಯಾಧಾರಿತ ತಾರತಮ್ಯವಾಗಿದೆ. ಈ ಪ್ರಕ್ರಿಯೆಯು ದಲಿತರನ್ನು ತಮ್ಮ ಹಕ್ಕು ಮತ್ತು ಕಸುಬಿನ ಆಧಾರದ ಮೇಲೆ ಹಿಂಸೆಗೆ ಗುರಿಪಡಿಸುತ್ತವೆ.

ಭಾರತದ ಆರ್ಥಿಕ ಪರಿಸ್ಥಿತಿಯಲ್ಲಿ ತೀವ್ರ ಸುಧಾರಣೆ ತಂದಿರುವ ಜಾಗತೀಕರಣದ ಬದಲಾವಣೆ ಪ್ರಕ್ರಿಯೆಯು ದಲಿತರ ಸಮಸ್ಯೆಯನ್ನು ಮತ್ತಷ್ಟು ಜಟಿಲಗೊಳಿಸಿದೆ. ಹಿಂದೂ ವರ್ಣ ವ್ಯವಸ್ಥೆಯ ಕೂಸುಗಳಾದ ಅಸ್ಪೃಶ್ಯತೆ, ಜೀತ, ಬಹಿಷ್ಕಾರ, ಅತ್ಯಾಚಾರ, ದೌರ್ಜನ್ಯ ಇವೆಲ್ಲಾ ಸಂವಿಧಾನಾತ್ಮಕ ಕಾನೂನುಗಳ ಹೊರತಾಗಿಯೂ ಇನ್ನೂ ನಿರಂತರವಾಗಿ ಸಾಗಿವೆ. ಮಾನವ ಹಕ್ಕುಗಳ ರಾಷ್ಟ್ರೀಯ ಆಯೋಗದ ಸಮೀಕ್ಷೆಯಂತೆ ಪ್ರತೀ ದಿನ 3 ಮಂದಿ ದಲಿತ ಮಹಿಳೆಯರನ್ನು ಅತ್ಯಾಚಾರಕ್ಕೊಳಪಡಿಸಲಾಗುತ್ತಿದೆ ಅಲ್ಲದೆ, ಇಬ್ಬರನ್ನು ಕೊಲೆ ಮಾಡಲಾಗುತ್ತದೆ ಮತ್ತು ಎರಡು ಕುಟುಂಬಗಳನ್ನು ಸುಟ್ಟು ನಾಶಪಡಿಸಲಾಗುತ್ತದೆ. ಕೇಂದ್ರದ ಗ್ರಹಸಚಿವಾಲಯದ ವರದಿಯ ಪ್ರಕಾರ 1997 ರಲ್ಲಿ ವಿವಿಧ ರೀತಿಯ ಸುಮಾರು 27944 ಪ್ರಕರಣಗಳನ್ನು ಪತ್ತೆಹಚ್ಚಲಾಗಿದೆ. ಹೀಗೆ ತಳಮಟ್ಟದಲ್ಲಿ ದಲಿತರು ತಮ್ಮ ಬದುಕನ್ನು ಭಯದಲ್ಲಿ ದೂಡುವಂತಾಗುತ್ತದೆ. ಜಾತಿ ಪದ್ಧತಿಯೆಂಬ ಕ್ರೂರ ವ್ಯವಸ್ಥೆ ದಲಿತರ ಮೇಲಿನ ದೌರ್ಜನ್ಯಕ್ಕೆ ಹಾದಿಯನ್ನು ಸುಗಮಗೊಳಿಸುತ್ತದೆ.

ಭೂಮಿ, ಆಸ್ತಿ, ನೀರಿಗೆ ಸಂಬಂಧಿಸಿದ ಸಂಗತಿಗಳು, ವೇತನ ಪಾವತಿ, ಸಾಲ, ಜೀತ ಮತ್ತು ಒತ್ತಾಯ ಕೂಲಿ ಪದ್ದತಿ, ಹೆಣ್ಣು ಮಕ್ಕಳ ಮೇಲೆ ದಬ್ಬಾಳಿಕೆ, ದೇವಾಲಯಗಳಿಗೆ ಪ್ರವೇಶ ನಿರ್ಬಂದ, ಸಾರ್ವಜನಿಕ ಸ್ಥಳಗಳಲ್ಲಿ ಬಟ್ಟೆ ಒಗೆಯಲು ಬಿಡದಿರುವುದು, ಸ್ನಾನ ಮಾಡಲು ನಿರ್ಬಂದ, ಸಾರ್ವಜನಿಕ ಹೋಟೆಲುಗಳಿಗೆ ಪ್ರವೇಶ ನಿರಾಕರಣೆ, ಸಾರ್ವಜನಿಕ ಸ್ಥಳಗಳಾದ ಬಸ್ ನಿಲ್ದಾಣ, ಪಂಚಾಯತಿ ಕಟ್ಟೆಯಲ್ಲಿ ಇತರರೊಂದಿಗೆ ಕೂರಲು ಬಿಡದಿರುವುದು, ರಸ್ತೆಯಲ್ಲಿ ಓಡಾಡಲು ನಿಷೇಧ, ಚಪ್ಪಲಿ ಮತ್ತು ಶುಭ್ರ ಬಟ್ಟೆ ಧರಿಸಲು ನಿರ್ಬಂಧ, ದೋಬಿ ಮತ್ತು ಕ್ಷೌರಿಕ ಸೇವೆಯ ನಿರಾಕರಣೆ ಹೀಗೆ ಅನೇಕ ಸಮಸ್ಯೆಗಳನ್ನು ಒಂದಲ್ಲ ಒಂದು ರೀತಿಯಲ್ಲಿ ದಲಿತರ ಮೇಲೆ ಹೇರಲಾಗುತ್ತಿದ್ದು ಅವರನ್ನು ಸಮಾಜದ ಮುಖ್ಯ ವಾಹಿನಿಯಂದ ದೂರವಿಡುವುದಕ್ಕೆ ಕಾರಣವಾಗಿದೆ.

ರಾಜಕೀಯದಲ್ಲಿ ಕೂಡ ದಲಿತರು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ರಾಜಕೀಯ ಹಕ್ಕಿನ ಪ್ರತಿಪಾದನೆ ಪ್ರಭಲ ವರ್ಗಗಳ ಸಿಟ್ಟಿಗೆ ಕಾರಣವಾಗುತ್ತದೆ. ಚುನಾವಣೆಯ ಸಂದರ್ಭದಲ್ಲಿ ಮೀಸಲಾತಿ ನೀತಿಯ ಕುರಿತು ಉದ್ಭವವಾಗುವ ಘರ್ಷಣೆಗಳು, ನಾಟಿ ಮತ್ತು ಪೈರು ಕೀಳುವ ಸಂದರ್ಭದಲ್ಲಿ ಉದ್ಭವಿಸುವ ಸಮಸ್ಯೆಗಳು ಸರಕಾರ ತಮಗೆ ನೀಡಿದ ಭೂಮಿಯನ್ನು ಸ್ವಾಧೀನ ಪಡಿಸುವ ಹಂತದಲ್ಲಿ ಎದುರಾಗುವ ಸಮಸ್ಯೆಗಳು, ಮೇಲ್ಜಾತಿಗಳು ಬಲವಂತವಾಗಿ ದಲಿತರ ಮೇಲೆ ಹೇರುವ ಕೆಲಸ ಮುಂತಾದವುಗಳು ದಲಿತ ಚಳವಳಿಗೆ ದಲಿತರನ್ನು ಕಾಡುತ್ತಿರುವ ಸಮಸ್ಯೆಗಳಾಗಿವೆ. ವಿಜ್ಞಾನ, ತಂತ್ರಜ್ಞಾನ ಮತ್ತು ಪ್ರಜಾಪ್ರಭುತ್ವದಲ್ಲಿ ಭಾರತ ಎಷ್ಟೇ ಪ್ರಗತಿ ಸಾಧಿಸಿದರೂ ದಲಿತರು ಮಾನಕುಲಕ್ಕೆ ಸೇರಿದವರು ಎಂದು ಒಪ್ಪಿಕೊಳ್ಳುವುದು ಕಷ್ಟಕರವಾಗಿದೆ. ಈ ಎಲ್ಲಾ ಸಮಸ್ಯೆಗಳೂ ದಲಿತ ಚಳುವಳಿಗೆ ಮೂಲಕಾರಣವಾಗಿದ್ದೂ ದಲಿತರನ್ನು ಶೋಷಣೆಯಿಂದ ಮುಕ್ತಗೊಳಿಸುವಂತಹ ಪ್ರಯತ್ನಗಳನ್ನು ಮಾಡಿವೆ. ಕರ್ನಾಟಕದಲ್ಲಿ ದಲಿತ ಸಂಘರ್ಷ ಸಮಿತಿ ಸಾಕಷ್ಟು ಹೋರಾಟಗಳನ್ನು ಯಶಸ್ವಿಯಾಗಿ ಸಂಘಟಿಸಿದೆ.

ಬೆಳ್ತಂಗಡಿ ತಾಲೂಕಿನ ದಲಿತ ಸಮುದಾಯದವರು ಕೂಡ ಮೇಲಿನ ಸಮಸ್ಯೆಗಳಿಂದ ಮುಕ್ತರಾಗಿಲ್ಲ. ರಾಜಕೀಯ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಅಸಮಾನತೆಗಳನ್ನು ಅವರು ಎದುರಿಸುತ್ತಿದ್ದಾರೆ. ಇವರ ಸಮಸ್ಯೆಗಳಿಗೆ ಸ್ಪಂದಿಸಿದ ಸಂಘಟನೆಗಳಲ್ಲಿ ನಾಗರಿಕ ಸೇವಾ ಟ್ರಸ್ಟ್ ಗುರುವಾಯನಕೆರೆ ಮುಂಚೂಣಿಯಲ್ಲಿದೆ.

ದಲಿತ ಅಭಿವೃದ್ಧಿ ಸಂಘಟನೆಯನ್ನು ಇದೇ ಕಾರಣಕ್ಕೆ ಸ್ಥಾಪಿಸಲಾಗಿದ್ದು ದಲಿತರ ಸಾಮಾಜಿಕ, ರಾಜಕೀಯ ಶೈಕ್ಷಣಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಬೆಳವಣಿಗೆ ಇದರ ಪ್ರಮುಖ ಉದ್ದೇಶವಾಗಿದೆ. ದಲಿತ ಅಭಿವೃದ್ಧಿ ಸಮಿತಿಯ ಸಂಚಾಲಕರಾದ ಕೆ.ಸೋಮರವರ ಅಭಿಪ್ರಾಯದ ಪ್ರಕಾರ "ದಲಿತರು ಹಿಂದೂ ಸಮಾಜದ ಮೇಲ್ಜಾತಿಯವರಿಗಿಂತ ಹೆಚ್ಚಾಗಿ ಕೆಳಜಾತಿಯವರಿಂದ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ" ಎಂಬುದನ್ನು ಗುರುತಿಸಬಹುದು.

ನಾಗರಿಕ ಸೇವಾ ಟ್ರಸ್ಟ್ ಗುರುವಾಯನಕೆರೆ ಮತ್ತು ಇದರಿಂದ ಪ್ರಯೋಜಿಸಲ್ಪಟ್ಟ ಸಂಘಟನೆಗಳಿಂದ ಬೆಳ್ತಂಗಡಿ ತಾಲೂಕಿನ ದಲಿತರ ಸ್ಥಿತಿಗತಿಯ ಬಗ್ಗೆ ಅಧ್ಯಯನವನ್ನು ಮಾಡಲಾಗಿದೆ. ಈ ಅಧ್ಯಯನದ ವರದಿಯು ದಲಿತರ ಸಾಮಾಜಿಕ, ಶೈಕ್ಷಣಿಕ, ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ಸ್ಥಿತಿಗತಿಯ ಸ್ಪಷ್ಟ ಚಿತ್ರಣವನ್ನು ಅಂಕಿ ಅಂಶಗಳ ಮತ್ತು ಕಂಪ್ಯೂಟರೀಕೃತ ರೇಖಾ ಚಿತ್ರಗಳ ಮೂಲಕ ನೀಡುತ್ತದೆ. ಈ ವರದಿಯ ಪ್ರಕಾರ ಬೆಳ್ತಂಗಡಿ ತಾಲೂಕಿನಲ್ಲಿ ವಿವಿಧ ದಲಿತ ಜಾತಿಗಳಿಗೆ ಸೇರಿದ ಜನಸಂಖ್ಯೆ ಸೇರಿದಂತೆ ಒಟ್ಟು ದಲಿತ ಜನ ಸಂಖ್ಯೆಯು ಸುಮಾರು 19762 ಆಗಿದೆ. ಇವರಲ್ಲಿ ಪ್ರತಿ 1000 ಪುರುಷರಿಗೆ 1038 ಸ್ತ್ರೀಯರಿದ್ದು, ಲಿಂಗ ಅನುಪಾತ ಹೆಚ್ಚು ಕಡಿಮೆ ಸಮಾನವಾಗಿದೆ.

ಬೆಳ್ತಂಗಡಿ ತಾಲೂಕಿನಲ್ಲಿ ದಲಿತರ ರಾಜಕೀಯ ಸ್ಥಿತಿಗತಿ:

ದಲಿತರು ರಾಜಕೀಯದಲ್ಲಿ ಭಾಗವಹಿಸಲು ಆಸಕ್ತಿ ವಹಿಸುತ್ತಿಲ್ಲ. ಸರಕಾರದ ಮೀಸಲಾತಿ ನೀತಿ ದಲಿತರಿಗೆ ರಾಜಕೀಯದಲ್ಲಿ ಸಕ್ರೀಯವಾಗಿ ಭಾಗವಹಿಸಲು ಅವಕಾಶ ಕಲ್ಪಿಸುತ್ತಿಲ್ಲ. ಸರಕಾರವು ಕಾಲದಿಂದ ಕಾಲಕ್ಕೆ ದಲಿತರ ಮೀಸಲು ಕ್ಷೇತ್ರವನ್ನು ಬದಲಾಯಿಸುವ ಅಗತ್ಯವಿದೆ. ಮೀಸಲಾತಿ ಆಧಾರದಲ್ಲಿ ರಾಜಕೀಯಕ್ಕೆ ಪ್ರವೇಶಿಸಿದ ದಲಿತರು ಕೂಡ ಅನುಭವ ಮತ್ತು ತರಬೇತಿಯ ಕೊರತೆಯಿಂದ ಸಕ್ರೀಯವಾಗಿ ಭಾಗವಹಿಸುತ್ತಿಲ್ಲ. ಅವರಿಗೆ ಅವರ ಜವಾಬ್ದಾರಿ ಏನೆಂಬುದರ ಬಗ್ಗೆ ಅರಿವಿಲ್ಲ. ಪ್ರಜಾಪ್ರಭುತ್ವದ ಬಗ್ಗೆ ಸ್ಪಷ್ಟವಾದ ಮಾಹಿತಿಯ ಕೊರತೆಯಿಂದ ದಲಿತರು ರಾಜಕೀಯದಲ್ಲಿ ಕೂಡ ಗುಲಾಮಗಿರಿಯನ್ನು ಅನುಭವಿಸುತ್ತಿದ್ದಾರೆ. ನಾಗರಿಕ ಸೇವಾ ಟ್ರಸ್ಟ್ ವತಿಯಿಂದ ಹಮ್ಮಿಕೊಂಡ ಸಮೀಕ್ಷೆಯ ಪ್ರಕಾರ ಚುನಾವಣೆಗಳಲ್ಲಿ ಸ್ಪರ್ಧಿಸುತ್ತಿರುವ ದಲಿತರು ಶೇ 04.78 ಮಂದಿ ಮಾತ್ರ, ಇದರಲ್ಲಿ ಆರ್ಧಾಂಶದಷ್ಟು ಜಯಶಾಲಿಗಳಾಗಿದ್ದರೆ, ಉಳಿದವರು ಸೋತವರು. ಕೆಲವರಿಗೆ ರಾಜಕೀಯದ ಬಗ್ಗೆ ನಿರಾಸಕ್ತಿ, ಇನ್ನು ಕೆಲವರಿಗೆ ಅರಿವಿನ ಕೊರತೆ ಮತ್ತು ಹಲವರು ಶಿಕ್ಷಣದ ಕೊರತೆಯಿಂದ ರಾಜಕೀಯದಿಂದ ದೂರವುಳಿದಿದ್ದಾರೆ. ಅದುದರಿಂದ ದಲಿತ ಸಮುದಾಯದವರಲ್ಲಿ ಪರಿಣಾಮಕಾರಿಯಾದ ರಾಜಕೀಯ ಭಾಗವಹಿಸುವಿಕೆ ಕಾಣುತ್ತಿಲ್ಲ.

ದಲಿತರ ಸಾಮಾಜಿಕ ಸ್ಥಿತಿಗತಿ:

ದಲಿತರ ಸಾಮಾಜಿಕ ಸ್ಥಿತಿಗತಿಯು ಶೋಚನೀಯವಾಗಿದೆ. ಅವರನ್ನು ಪ್ರಭಲ ಜಾತಿಗಳಿಂದ ಬೇರ್ಪಡಿಸಿ ಸಮಾಜದ ಮುಖ್ಯವಾಹಿನಿಯಿಂದ ಹೊರಗಿಡಲಾಗಿದೆ. ಜಾತೀಯತೆ, ಅಸ್ಪಶ್ರ್ಯತೆ, ನಿಂದನೆ, ಸಾಮಾಜಿಕ ಬಹಿಷ್ಕಾರ ಮುಂತಾದುವುಗಳ ಮೂಲಕ ದಲಿತರ ಮಾನಹಾನಿ ಮಾಡಲಾಗುತ್ತಿದೆ. ದೇವಸ್ಥಾನ ಪ್ರವೇಶ ಮಡಿದುದಕ್ಕಾಗಿ, ಸಾರ್ವಜನಿಕ ಬಾವಿಯಿಂದ ನೀರು ಸೇದಿದಕ್ಕಾಗಿ, ಸಾರ್ವಜನಿಕ ಹೋಟೆಲುಗಳಿಗೆ ಪ್ರವೇಶ ನಿಷೇಧ, ಬೆತ್ತಲೆ

ಮೆರವಣಿಗೆ, ಕೊಲೆ, ಅತ್ಯಾಚಾರ ಮುಂತಾದವುಗಳು ದಲಿತರ ಸಾಮಾಜಿಕ ಸಮಸ್ಯೆಗಳಾಗಿವೆ. ದಲಿತರ ಮತಗಳನ್ನು ಪಡೆದು ವಿಜಯಿಯಾದ ಜನ ಪ್ರತಿನಿಧಿಗಳು ಕೂಡ ದಲಿತರ ಸಮಸ್ಯೆಗಳಿಗೆ ಸ್ಪಂದಿಸುವಲ್ಲಿ ವಿಫಲರಾಗಿದ್ದಾರೆ.

ದಲಿತರಿಗಾಗಿ ಶ್ರಮಿಸಬೇಕಾದ ಸರಕಾರಿ ಇಲಾಖೆಗಳ ಕಾರ್ಯ ವೈಖರಿ ತೀರಾ ಅತೃಪ್ತಿದಾಯಕವಾಗಿದೆ. ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ನಿರ್ದಿಷ್ಟಕ್ರಮಗಳನ್ನು ಕೈಗೊಳ್ಳುವಲ್ಲಿ ವಿಳಂಭ ನೀತಿಯನ್ನು ಅನುಸರಿಸಲಾಗುತ್ತದೆ. ಪರಿಶಿಷ್ಟ ಪಂಗಡದವರಿಗೆ ಸಂಬಂಧಪಟ್ಟ ಯೋಜನೆಗಳು ಸಮರ್ಪಕವಾಗಿ ಅನುಷ್ಠಾನಗೊಳ್ಳುತ್ತಿಲ್ಲ. ಅವರ ಜನ ಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ನಿರ್ಧಾರವಾಗುತ್ತಿಲ್ಲ. ಸರಕಾರದ ವತಿಯಿಂದ ನಡೆಸಲ್ಪಡುವ ದೇವಸ್ಥಾನಗಳ ಆಡಳಿತ ಮಂಡಳಿಗಳಲ್ಲಿ ದಲಿತರಿಗೆ ಪ್ರಾತಿನಿಧ್ಯವಿಲ್ಲ. ಕೆಲವೊಂದು ಸರಕಾರಿ ಸಮಿತಿಗಳಲ್ಲಿ ಸ್ಥಾನ ಪಡೆದ ದಲಿತರ ಅಭಿಪ್ರಾಯಗಳಿಗೆ ಅವಕಾಶ ನಿರಾಕರಿಸಲಾಗುತ್ತಿದೆ. ಸಾಕಷ್ಟು ಸಂಖ್ಯೆಯಲ್ಲಿ ದಲಿತರು ಮನೆ ನಿವೇಶನಗಳನ್ನು ಹೊಂದಿಲ್ಲ. ಉದ್ಯೋಗ ಕ್ಷೇತ್ರದಲ್ಲಿ ಉನ್ನತ ವರ್ಗದವರು ಅಸಹ್ಯ ಪಡುವಂತಹ ಉದ್ಯೋಗಗಳನ್ನು ದಲಿತರ ಮೇಲೆ ಹೇರಲಾಗುತ್ತದೆ. ದಲಿತರಿಗೆ ಸಂಬಂಧಪಟ್ಟ ಕೇಸುಗಳು ತ್ವರಿತಗತಿಯಲ್ಲಿ ಇತ್ಯರ್ಥವಾಗುತ್ತಿಲ್ಲ.

ಮೀಸಲಾತಿ ವ್ಯವಸ್ಥೆಯನ್ನು ಅರಿವಿನ ಕೊರತೆಯಿಂದ ದಲಿತ ಸಮೂದಾಯ ಸಮರ್ಥವಾಗಿ ಉಪಯೋಗಿಸುತ್ತಿಲ್ಲ. ದುಶ್ಚಟಗಳಿಗೆ ಬಲಿಯಾಗಿ ಆರೋಗ್ಯವನ್ನು ಕಳೆದುಕೊಳ್ಳುತ್ತಿರುವ ದಲಿತರ ಬಗ್ಗೆ ಯಾರೂ ಕನಿಕರ ತೋರುತ್ತಿಲ್ಲ. ಆರೋಗ್ಯಕ್ಕಾಗಿ ಸರಕಾರ ಮೀಸಲಾಗಿಟ್ಟ ಅನುದಾನ ದಲಿತರ ಆರೋಗ್ಯ ಸುಧಾರಣೆಗೆ ತಲುಪುತ್ತಿಲ್ಲ. ದಲಿತ ಕಾಲೋನಿಗಳಲ್ಲಿ ಆರೋಗ್ಯ ಸೇವೆಗೆ ಖಾಸಗಿಯವರು ಹಿಂಜರಿಯುತ್ತಿದ್ದಾರೆ. ಒಟ್ಟಿನಲ್ಲಿ ದಲಿತ ಸಮೂದಾಯದ ಮೇಲೆ ಸಮಾಜ ಹೇರಿದ ಅಲಿಖಿತ ಕಟ್ಟುಪಾಡುಗಳಿಂದ ದಲಿತ ಸಮುದಾಯದ ಅಭಿವೃದ್ಧಿಗೆ ಮಾರಕವಾಗಿದೆ.

ಆರ್ಥಿಕ ಸ್ಥಿತಿಗತಿ:

ಆರ್ಥಿಕವಾಗಿ ದಲಿತರ ಪರಿಸ್ಥಿತಿಯೂ ಉತ್ತಮವಾಗಿಲ್ಲ. ಸಾಕಷ್ಟು ಸಂಖ್ಯೆಯಲ್ಲಿ ದಲಿತ ಕುಟುಂಬಗಳು ಭೂಮಿಯ ಹಕ್ಕಿನಿಂದ ವಂಚಿಸಲ್ಪಟ್ಟಿವೆ. ಸಂವಿಧಾನದ 388 ರ ವಿಧಿಯ ಆಶಯದಂತೆ ರಚಿತವಾಗಿರುವ ಪರಿಶಿಷ್ಟ ಜಾತಿ / ಪಂಗಡಗಳ ಅಯೋಗಗಳ ಶಿಫಾರಸುಗಳು ಕಟ್ಟುನಿಟ್ಟಾಗಿ ಜಾರಿಗೊಳ್ಳುತ್ತಿಲ್ಲ. ದಲಿತರಿಗೆ ಭೂಅಭಿವೃದ್ಧಿಗಾಗಿ ಸಹಕಾರಿ ಬ್ಯಾಂಕುಗಳಿಂದ ಲಭಿಸುತ್ತಿರುವ ಸಾಲದ ಯೋಜನೆಗಳು ಸಮರ್ಪಕವಾಗಿ ಅನುಷ್ಠಾನವಾಗುತ್ತಿಲ್ಲ. ದಲಿತರಿಗಾಗಿ ಮೀಸಲಾಗಿಟ್ಟ ಭೂಮಿ ಅರಣ್ಯ ಇಲಾಖೆ ಮತ್ತು ಮೇಲ್ವರ್ಗದವರ ಅಕ್ರಮಣಕ್ಕೊಳಗಾಗಿದೆ. ಕರಕುಶಲ ಕಚ್ಚಾ ವಸ್ತುಗಳಿಗಾಗಿ ಸ್ಥಳೀಯ ರಕ್ಷತಾರಣ್ಯ ರಾಷ್ಟ್ರೀಯ ಉದ್ಯಾನವನ ಇತ್ಯಾದಿ ಅರಣ್ಯಗಳನ್ನು ಪ್ರವೇಶಸುವುದರ ವಿರುದ್ಧ ಅರಣ್ಯ ಅಧಿಕಾರಿಗಳಿಂದ ನಿತ್ಯ ಕಿರುಕುಳ ಎದುರಿಸಬೇಕಾಗುತ್ತದೆ. ಮಹಿಳೆಯರು ಮತ್ತು ಪುರುಷರಿಗೆ ನೀಡಲಾಗುತ್ತಿರುವ ದಿನಗೂಲಿಯಲ್ಲಿ ತಾರತಮ್ಯತೆ, ಸ್ವ ಉದ್ಯೋಗ ಮಾಡಲು ಸ್ಥಳಾವಕಾಶ ಮತ್ತು ತರಬೇತಿಯ ಕೊರತೆ, ಪಡಿತರ ಚೀಟಿ ವಿತರಣೆಯಲ್ಲಿ ಗೊಂದಲ ಎದುರಸಬೇಕಾಗಿದೆ. ನಾಗರಿಕ ಸೇವಾ ಟ್ರಸ್ಟ್ ವತಿಯಿಂದ ನಡೆಸಲಾದ ಸಮೀಕ್ಷೆಯ ಪ್ರಕಾರ ಬೆಳ್ತಂಗಡಿ ತಾಲೂಕಿನ ಶೇ 87.21 ದಲಿತ ಕುಟುಂಬಗಳ ವಾರ್ಷಿಕ ಆದಾಯ ರೂ. 1000 ರಿಂದ 15,000 ರೂ.ಗಳ ನಡುವೆ ಇದೆ. ಹೀಗೆ ನೋಡಿದರೆ ಬಹು ಸಂಖ್ಯಾ ಜನರು ದಾರಿದ್ರ್ಯ ರೇಖೆಗಿಂತ ಕೆಳಗಿದ್ದಾರೆ. ಕೃಷಿ ಕೂಲಿ ಮತ್ತು ಬೀಡಿ ಇವರ ಪ್ರಮುಖ ಆದಾಯದ ಮೂಲಗಳಾಗಿವೆ.

ಭೂ ಒಡೆತನದ ಸಮಸ್ಯೆಯನ್ನು ಗಮನಿಸಿದಾಗ ಶೇ 16.35 ರಷ್ಟು ದಲಿತರು ಭೂಮಿ ಹೊಂದಿಲ್ಲ ಹಾಗೂ 24.18% ದಲಿತರು ಹೊಂದಿರುವ ಭೂಮಿಗೆ ಹಕ್ಕು ಪತ್ರವಿಲ್ಲ. 28.58% ರಷ್ಟು ದಲಿತರು ವರಮಾನರಹಿತ ಭೂಮಿಯನ್ನು ಹೊಂದಿದ್ದು ಕೇವಲ 1.36% ರಷ್ಟು ದಲಿತರು 1 ಎಕ್ರೆಯಿಂದ 5 ಎಕ್ರೆಯಷ್ಟು ಭೂಮಿಯನ್ನು ಹೊಂದಿರುತ್ತಾರೆ. ನೀರಿನ ಸಮಸ್ಯೆ, ಮಾರುಕಟ್ಟೆ ಸಮಸ್ಯೆ, ಕೃಷಿ ಚಟುವಟಿಕೆಗಳಿಗೆ ಬೆಂಬಲದ ಅಭಾವ, ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ತಾರತಮ್ಯತೆ ಮತ್ತು ಜಾಗೃತಿಯ ಕೊರತೆಗಳು ದಲಿತರನ್ನು ಕಾಡುತ್ತಿವೆ.

ಶಿಕ್ಷಣ ಮತ್ತು ಸಾಂಸ್ಕೃತಿಕ ಸ್ಥಿತಿಗತಿ:

ದಲಿತರ ಶಿಕ್ಷಣಾಭಿವೃದ್ಧಿಗಾಗಿ ಮೀಸಲಾಗಿಟ್ಟ ಅನುದಾನವು ತೀರಾ ಕಡಿಮೆ. ದಲಿತರ ಉನ್ನತ ಶಿಕ್ಷಣಕ್ಕೆ ಸರಕಾರ ಪ್ರೋತ್ಸಾಹ ನೀಡುತ್ತಿಲ್ಲ. ದಲಿತರಿಗೆ ನೀಡಲಾಗುತ್ತಿರುವ ವಿದ್ಯಾರ್ಥಿ ವೇತನದ ಪ್ರಮಾಣ ಕಡಿಮೆಯಾಗಿದ್ದು, ಅದನ್ನು ಹೆಚ್ಚಿಸುವ ಅವಶ್ಯಕತೆಯಿದೆ. ಸರಕಾರದ ವತಿಯಿಂದ ನಡೆಸಲ್ಪಡುವ ವಸತಿ ಶಾಲೆಗಳ ಮತ್ತು ವಿದ್ಯಾರ್ಥಿನಿಲಯಗಳ ನಿರ್ವಹಣೆ ಸಮರ್ಪಕವಾಗಿಲ್ಲ. ಸರಕಾರಿ ಶಾಲೆಗಳಲ್ಲಿ ಶಿಕ್ಷರ ಕೊರತೆ, ಮೂಲಭೂತ ಸೌಲಭ್ಯದ ಕೊರತೆ ಎದ್ದು ಕಾಣುತ್ತದೆ. ಖಾಸಗೀ ಶಿಕ್ಷಣ ಸಂಸ್ಥೆಗಳಲ್ಲಿ ಮೀಸಲಾತಿ ಆಧಾರದಲ್ಲಿ ದಲಿತರಿಗೆ ಅವಕಾಶಗಳು ಸಮರ್ಪಕವಾಗಿ ಲಭಿಸುತ್ತಿಲ್ಲ. ದಲಿತರ ಸಂಸ್ಕೃತಿ ಮತ್ತು ಪರಂಪರೆಗಳನ್ನು ಉಳಿಸಿಕೊಳ್ಳುವಲ್ಲಿ ಸರಕಾರ ಆಸಕ್ತಿ ವಹಿಸುತ್ತಿಲ್ಲ. ಇವರಲ್ಲಿ ಜಾಗೃತಿಯನ್ನು ಮುಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ದಲಿತರ ಏಳಿಗೆಯನ್ನು ಸಾಧಿಸಬಹುದಾಗಿದೆ.

೨.೫ ಬೆಳ್ತಂಗಡಿ ತಾಲೂಕಿನ ಧಾರ್ಮಿಕ ಸ್ಥಿತಿಗತಿ:

"ಪ್ರಾಣಿ ಮಾತ್ರದ ಪ್ರಾಪಂಚಿಕ ಸುಖ, ಪರಮಾರ್ಥಿಕ ಸುಖ ಹಾಗೂ ಸುವ್ಯವಸ್ಥಿತ ಸುಂದರ ಸಮಾಜ, ಈ ಮೂರು ಯಾವುದರಿಂದ ಸಾಧ್ಯವಾಗುತ್ತದೆಯೋ ಅದೇ ಧರ್ಮ ಎಂದು ಶಂಕರಾಚಾರ್ಯರು ಅಭಿಪ್ರಾಯ ಪಟ್ಟಿದ್ದರು." ಆದರೆ, ಧರ್ಮಸಿದ್ಧಾಂತದ ಪ್ರಕಾರ "ಭಗವಂತನಿಂದ ಧಾರಣೆ ಮಾಡಲ್ಪಟ್ಟಿದುದೇ ಧರ್ಮ ಎನಿಸುವುದು. ಮೌರ್ಯ ಚಕ್ರವರ್ತಿ ಅಶೋಕನ ಧರ್ಮದ ಕಲ್ಪನೆಯ ಪ್ರಕಾರ "ಧರ್ಮವೆಂಬುದು ಕರ್ತವ್ಯ ಪಾಲನೆ ಎಂಬ ಅರ್ಥವನ್ನು ಕೊಡುತ್ತದೆ." ರಾಮಕೃಷ್ಣ ಪರಮಹಂಸರು ನಂಬಿದ್ದ ಪ್ರಕಾರ, "ಬಡವರ, ಅಜ್ಞಾನಿಗಳ ಮತ್ತು ಅನಕ್ಷರಸ್ಥರಿಗೆ ನೀಡುವ ಸೇವೆಯೇ ಪರಮ ಧರ್ಮ." ಭಾರತ ವಿವಿಧ ಧರ್ಮಗಳ ಮತ್ತು ಧಾರ್ಮಿಕ ಸಂಪ್ರದಾಯಗಳ ನೆಲೆಬೀಡಾಗಿದೆ. ಬೆಳ್ತಂಗಡಿ ತಾಲೂಕು ಕೂಡಾ ಹಲವಾರು ಧರ್ಮಗಳ ನೆಲೆಬೀಡಾಗಿದೆ. ಹಿಂದೂ, ಕ್ರೈಸ್ತ, ಜೈನ, ಇಸ್ಲಾಂ ಮುಂತಾದ ಪ್ರಮುಖದರ್ಮಗಳಲ್ಲದೆ, ಹಲವಾರು ಉಪಧರ್ಮಗಳು ಕೂಡಾ ಹುಟ್ಟಿಕೊಂಡಿವೆ.

ಹಿಂದೂ ಧರ್ಮ ಬೆಳ್ತಂಗಡಿ ತಾಲೂಕಿನ ಒಂದು ಪ್ರಮುಖ ಧರ್ಮವಾಗಿದೆ. ಹಿಂದೂ ಸಂಪ್ರದಾಯದಂತೆ ಈ ಧರ್ಮದ ಜನರು ಬಹುದೇವತಾ ಆರಾಧಕರು, ಆದರೂ ಈ ಬಹು ದೇವರು ದೇವತೆಗಳೂ ಏಕದೇವರ ವಿವಿಧ ರೂಪಗಳು ಅಥವಾ ಅವತಾರಗಳಾಗಿವೆ ಎಂಬ ನಂಬಿಕೆ ಇದೆ. ಪ್ರಮುಖ ದೇವರು ದೇವತೆಗಳ ಆರಾಧನೆಯ ಹೊರತಾಗಿ ಪ್ರತಿಯೊಂದು ಗ್ರಾಮದಲ್ಲಿ, ಗ್ರಾಮ್ಯ ದೇವತೆಗಳನ್ನು ಆರಾಧಿಸುತ್ತಾರೆ. ತಾಲೂಕಿನಲ್ಲಿ ಹಲವಾರು

ದೇವಾಲಯಗಳು ಮತ್ತು ಯಾತ್ರಾ ಸ್ಥಳಗಳಿವೆ. ಶ್ರೀ ಕ್ಷೇತ್ರ ಧರ್ಮಸ್ಥಳ ತಾಲೂಕಿನ ಪ್ರಮುಖ ಧಾರ್ಮಿಕ ಮತ್ತು ಯಾತ್ರಾ ಕೇಂದ್ರವಾಗಿದ್ದು, ದೇಶ ವಿದೇಶದಿಂದ ಭಕ್ತಾದಿಗಳು ದರ್ಶನಕ್ಕಾಗಿ ಬರುತ್ತಿದ್ದಾರೆ. ಧರ್ಮಸ್ಥಳದ ಧರ್ಮಾಧಿಕಾರಿಗಳಾದ ಪೂಜ್ಯ ಡಾ। ವಿರೇಂದ್ರ ಹೆಗ್ಗಡೆಯವರ ಅವಿರತ ಸೇವೆಯಿಂದ ಧರ್ಮಸ್ಥಳವು ಇಡೀ ಜಗತ್ತಿಗೆ ಪರಿಚಯಿಸಲ್ಪಟ್ಟದೆ ಎಂದರೆ ಅತಿಶಯೋಕ್ತಿಯಾಗಲಾರದು. ಈ ಕ್ಷೇತ್ರವು ಕೇವಲ ಒಂದು ಧಾರ್ಮಿಕ ಕೇಂದ್ರವಾಗಿರದೆ, ಸಂಸ್ಕೃತಿಯ ನೆಲೆಬೀಡಾಗಿದೆ. ಕ್ಷೇತ್ರದ ವತಿಯಿಂದ ನಡೆಯುವ ಸೇವಾ ಯೋಜನೆಗಳು ಇಡೀ ಭಾರತಕ್ಕೆ ಮಾದರಿಯಾಗಿವೆ. ಇದಲ್ಲದೆ, ಶ್ರೀ ಜನಾರ್ಧನ ಸ್ವಾಮಿ ದೇವಾಲಯ ಉಜಿರೆ, ಶ್ರೀ ಅನಂತೇಶ್ವರ ದೇವಾಲಯ ಳ್ಳಮಂಜ, ಶ್ರೀ ಮಹಿಷಾಮರ್ದಿನಿ ದೇವಾಲಯ ಪಾರೆಂಕಿ, ಶ್ರೀ ಬಸವೇಶ್ವರ ದೇವಾಲಯ ಬಸವನಗುಡಿ, ಮುಂತಾದವುಗಳು ತಾಲೂಕಿನಲ್ಲಿರುವ ಇತರ ಪ್ರಮುಖ ದೇವಾಲಯಗಳು. ಈ ಎಲ್ಲಾ ದೇವಾಲಯಗಳಲ್ಲಿ ವರ್ಷಾವಧಿ ಜಾತ್ರೆ ನಡೆಯುತ್ತಿದ್ದು, ಭಕ್ತಾದಿಗಳ ಆಗಮನಕ್ಕೆ ಅವಕಾಶವನ್ನು ಕಲ್ಪಿಸುತ್ತಿವೆ. ಇಲ್ಲಿ ನಡೆಯುವ ಜಾತ್ರಾ ಉತ್ಸವಗಳಲ್ಲಿ ಧರ್ಮಸ್ಥಳದ 'ಲಕ್ಷದೀಪೋತ್ಸವ' ಮತ್ತು 'ಬಳ್ಳಮಂಜದ ಷಷ್ಠಿ' ಉತ್ಸವಗಳು ಪ್ರಮುಖ ಆಕರ್ಷಣೆಯಾಗಿವೆ. ಜಾತ್ರೆಗಳ ಹೊರತಾಗಿ ಹಲವಾರು ಹಬ್ಬಗಳನ್ನು ಜನರು ಆಚರಿಸುತ್ತಿದ್ದಾರೆ.

ಜೈನ ಧರ್ಮ ಕೂಡಾ ಈ ತಾಲೂಕಿನಲ್ಲಿ ಐತಿಹಾಸಿಕ ಪರಂಪರೆಯನ್ನು ಹೊಂದಿವೆ. ತಾಲೂಕಿನಾದ್ಯಾಂತ ಹಲವಾರು ಪ್ರಸಿದ್ಧ ಜಿನ ಧಾರ್ಮಿಕ ಕೇಂದ್ರಗಳಿವೆ. ಜೈನ ಸಂಪ್ರದಾಯದ ಪ್ರಕಾರ ತಾಲೂಕಿನಲ್ಲಿ ಜೈನರು 'ನೂಲಶ್ರಾವಣ' ಎಂಬ ವಿಶೇಷ ಆಚರಣೆಯನ್ನು ಮಾಡುತ್ತಾರೆ. ಅಹಿಂಸಾ ತತ್ವಕ್ಕೆ ಹೆಚ್ಚು ಅದ್ಯತೆಯನ್ನು ಕೊಡುತ್ತಾ ಕತ್ತಲಾಗುವುದರೊಳಗಾಗಿ ಉಟೋಪಚಾರಗಳನ್ನು ಮುಗಿಸುವ ಸಂಪ್ರದಾಯವನ್ನು ಪಾಲಿಸುತ್ತಾರೆ. ತಾಲೂಕಿನ ಬಂಗಾಡಿ, ಧರ್ಮಸ್ಥಳ, ಸವಣಾಲು, ಅಳದಂಗಡಿ, ನಾರಾವಿ, ವೇಣೂರು, ಬಳ್ಳಮಂಜ, ನಡ, ಪಡಂಗಡಿ ಮುಂತಾದೆಡೆ ಜೈನ ಬಸದಿಗಳಿವೆ. ವೇಣೂರು ಮತ್ತು ಧರ್ಮಸ್ಥಳಗಳಲ್ಲಿ ಬಾಹುಬಲಿ ಪ್ರತಿಮೆಗಳನ್ನು ಪ್ರತಿಸ್ಥಾಪಿಸಲಾಗಿದೆ.

ತನ್ನ ವಿಶಿಷ್ಟ ಮತ್ತು ವಿಶೇಷ ಸಂಪ್ರದಾಯಗಳೊಂದಿಗೆ ಬೆಳೆದು ಬಂದ ಮತ್ತೊಂದು ಧರ್ಮವೆ ಇಸ್ಲಾಂ. ತಾಲೂಕಿನಾದ್ಯಾಂತ ಹಲವಾರು ಮಸೀದಿಗಳಿದ್ದೂ, ಪ್ರತೀ ಶುಕ್ರವಾರ ಮುಸ್ಲಿಮರು ಇಲ್ಲಿ ಪುಜಾವಿಧಿಗಳಲ್ಲಿ ಭಾಗವಹಿಸುತ್ತಿದ್ದಾರೆ. ಪುಂಜಾಲಕಟ್ಟೆ, ಕುಲ್ಫತಾಬೈಲ್, ಗುರುವಾಯನಕೆರೆ, ಅಳದಂಗಡಿ, ಬೆಳ್ತಂಗಡಿ, ಮತ್ತು ಉಜಿರೆಗಳಲ್ಲಿ ಮಸೀದಿಗಳಿವೆ. ಇಸ್ಲಾಂ ಧರ್ಮದ ಸಂಪ್ರದಾಯದಂತೆ ಕೇವಲ ಪುರುಷರು ಮಸೀದಿಗಳಿಗೆ ಹೊಗುತ್ತಿದ್ದು, ಮಹಿಳೆಯರು ಮನೆಯಲ್ಲಿಯೇ ಅಲ್ಲಾನಿಗೆ ತಮ್ಮ ಪ್ರಾರ್ಥನೆಯನ್ನು ಸಲ್ಲಿಸುತ್ತಿದ್ದಾರೆ. ಇಸ್ಲಾಂ ಧರ್ಮದ ಅನುಯಾಯಿಗಳಿಗೆ ಎಳವೆಯ್ಲಲಿಯೇ ಧರ್ಮಶಿಕ್ಷಣವನ್ನು ನೀಡಲಾಗುತ್ತದೆ. ಹಲವಾರು ಹಬ್ಬಗಳನ್ನು ಆಚರಿಸುವುದರೊಂದಿಗೆ ಪರಸ್ಪರ ಸಂಭ್ರಮವನ್ನು ಹಂಚುಕೊಳ್ಳುತ್ತಿದ್ದಾರೆ. ಕಾಜೂರು ದರ್ಗಾದಲ್ಲಿ ನಡೆಯುವ 'ಊರುಸ್‌ಮುಭಾರಕ್' ಪ್ರಸಿದ್ಧ ಹಬ್ಬವಾಗಿದೆ.

ತನ್ನ ವೈವಿಧ್ಯಮಯ ಚಿಂತನೆಗೆ ಹೆಸರುವಾಸಿಯಾಗಿರುವ ಮತ್ತು ಶಾಂತಿ ಪ್ರಿಯತೆಗೆ ಹೆಚ್ಚು ಬಲವನ್ನು ಕೊಡುವ ಕ್ರೈಸ್ತ ಧರ್ಮ ಕೂಡಾ ಸಾಕಷ್ಟು ಬೆಳೆದು ಬಂದಿದೆ. ಸಾಮಾನ್ಯವಾಗಿ ಎಲ್ಲಾ ಕ್ರೈಸ್ತ ಬಾಂಧವರು ತಮ್ಮ ಪೂಜಾವಿಧಿಗಳಲ್ಲಿ ಭಾಗವಹಿಸುವುದು. ಭಾನುವಾರ ವಿಶೇಷ ಪ್ರಾರ್ಥನೆಗಳಲ್ಲಿ ತೊಡಗುವುದು ರೂಢಿಯಾಗಿದೆ.

ಬೆಳ್ತಂಗಡಿ ಧರ್ಮಪ್ರಾಂತ್ಯದ ಅಧೀನದಲ್ಲಿ ಹಲವಾರು ಮಳೆಯಾಳಿ ಕಾಥೋಲಿಕ್ ಕುಟುಂಬಗಳಿವೆ. ಅವರ ಸಂಪ್ರದಾಯಗಳು ಕೇರಳದ ಮಾದರಿಯಲ್ಲಿವೆ. ಉಳಿದಮತೆ ಮಂಗಳೂರು ಧರ್ಮಪ್ರಾಂತ್ಯಕ್ಕೆ ಒಳಪಟ್ಟ ಕ್ರೈಸ್ತರು ಮತ್ತು ಬಾಸೆಲ್ ಮಿಷನ್ ಚರ್ಚಿನ ಅನುಯಾಯಿಗಳು ತಮ್ಮ ತಮ್ಮ ಸಂಪ್ರದಾಯಗಳನ್ನು ಅನುಸರಿಸುತ್ತಿದ್ದಾರೆ. ಹಲವಾರು ಹಬ್ಬಗಳನ್ನು ಆಚರಿಸುತ್ತಿದ್ದು ಸೌಹರ್ದಯುತ ಬದಿಕಿಗೆ ಹೆಚ್ಚು ಆದ್ಯತೆಯನ್ನು ನೀಡಲಾಗುತ್ತದೆ. ತಾಲೂಕಿನ ಮಡಂತ್ಯಾರು, ಬೆಳ್ತಂಗಡಿ, ಅಳದಂಗಡಿ, ವೇಣೂರು, ಇಂದಬೆಟ್ಟು, ಉಜಿರೆ ಮುಂತಾದೆಡೆ ಚರ್ಚ್‌ಗಳು ಮತ್ತು ಪ್ರಾರ್ಥನಾ ಮಂದಿರಗಳಿವೆ. ಹೀಗೆ ಧಾರ್ಮಿಕವಾಗಿ ಬೆಳ್ತಂಗಡಿ ಒಂದು ಬಹು ಧರ್ಮಗಳ ನೆಲೆಬೀಡಾಗಿದೆ.

೨.೬ ಜನರ ಸಂಸ್ಕೃತಿ – ಸಂಪ್ರದಾಯಗಳು:

ಜನಾಂಗೀಯ ಮತ್ತು ಧಾರ್ಮಿಕ ವೈವಿಧ್ಯಕ್ಕೆ ಹೆಸರುವಾಸಿಯಾಗಿರುವ ಬೆಳ್ತಂಗಡಿಯ ಜನರು ವಿಶಿಷ್ಟ ಸಂಸ್ಕೃತಿ ಮತ್ತು ಸಂಪ್ರದಾಯಗಳನ್ನು ಬೆಳೆಸುವಲ್ಲಿ ಯಶಸ್ವಿಯಾಗಿದ್ದಾರೆ. ವಿವಿಧ ಧರ್ಮಿಯರು ಅವರ ನಂಬಿಕೆಗಳಿಗನುಸಾರವಾಗಿ ಈ ಸಂಪ್ರದಾಯಗಳನ್ನು ಅನುಸರಿಸುತ್ತಿದ್ದಾರೆ. ಧಾರ್ಮಿಕ ಆಚರಣೆಗಳ ಸಂದರ್ಭಗಳಲ್ಲಿ ಅಂಗಳಕ್ಕೆ ಸೆಗಣೆಸರಿಸಿ ಮಾವಿನೆಲೆಯ ತೊರಣ ಕಟ್ಟುತ್ತಾರೆ. ಬಾಳೆ ಗಿಡವನ್ನು ಎದುರಿನ ತೋರಣಕ್ಕೆ ಬಳಸುತ್ತಾರೆ. ಶ್ರದ್ಧೆ ಗೌರವಗಳಿಂದ ಪೂಜೆಯನ್ನು ಮಾಡಿ ಸಿಹಿ ಅಡುಗೆಯನ್ನು ಸವಿಯುತ್ತಾರೆ. ನೆರೆ ಹೊರೆಯವರೊಂದಿಗೆ ಮತ್ತು ಬಂಧು ಬಾಂದವರೊಂದಿಗೆ ಬೆರೆತು ಶುಭಾಶಯಗಳನ್ನು ಹಂಚಿಕೊಳ್ಳುತ್ತಾರೆ. ತಾಲೂಕಿನ ಜನರ ಪ್ರಮುಖ ಆಚರಣೆಗಳಲ್ಲಿ ಚಾಂದ್ರಮಾನ ಯುಗಾದಿ, ಕೈ ಬಿತ್ತ್ ಸಂಪ್ರದಾಯ, ಅಷಾಡ ಏಕಾದಶಿ, ಆಟಿ–ಅಮವಾಸ್ಯೆ, ಶ್ರಾವಣ ಮಾಸದ ವಿಶೇಷ ಹಬ್ಬಗಳು, ತುಳಸಿ ಪೂಜೆ, ನಾಗರ ಪಂಚಮಿ, ಅಷ್ಟಮಿ, ಗೌರಿ ಗಣೇಶಹಬ್ಬ, ಅನಂತ ಚತುರ್ದಶಿ, ನವರಾತ್ರಿ, ದೀಪಾವಳಿ, ಕಾವೇರಿ ಸಂಕ್ರಮಣ, ಮಕ್ಕಳ ಹುಣ್ಣಿಮೆ, ತುಳಸಿ ಪೂಜೆ, ಷಷ್ಟಿ, ಖೆಡ್ಡಸ ಮುಂತಾದವುಗಳ ಹಿಂದೂ ಸಂಪ್ರದಾಯದ ಪ್ರಕಾರ ನಡೆಯುವ ಹಬ್ಬಗಳು.

ನಾಗಾರಾಧನೆ ತಾಲೂಕಿನಲ್ಲಿ ವಿಶೇಷವಾಗಿ ಕಂಡುಬರುತ್ತದೆ. ತುಳುನಾಡನ್ನು ನಾಗಲೋಕ ಎನ್ನುತ್ತಾರೆ. ಭೂತ ಸಂದಿಗಳಲ್ಲಿಯೂ ನಾಗ ಬೆರ್ಮರೆ ರಾಜ್ಯ ಎಂಬ ಉಲ್ಲೇಖವಿದೆ. ದೈವ ದೇವರುಗಳ ಅಭರಣಗಳಲ್ಲಿ, ಮನೆಯ ಪಕ್ಕಾಸಿನಲ್ಲಿ ಮತ್ತು ನೊಗಗಳಲ್ಲಿ ನಾಗನ ಆಕಾರಗಳನ್ನು ರಚಿಸುವುದು ರೂಡಿ. ತಲೆಕೂದಲನ್ನು ನೇಯ್ದು ಜಡೆ ಹಾಕುವ ಮಹಿಳೆಯರನ್ನು ಕವಿಭಾಷೆಗಳಲ್ಲಿ ನಾಗವೇಣಿಯರು ಎಂದು ಕರೆದ ಉದಾಹರಣೆಗಳಿವೆ.

ಭೂತಾರಾಧನೆಗೆ ತಾಲೂಕಿನಲ್ಲಿ ವಿಶೇಷ ಮಹತ್ವವಿದೆ. ಭೂತಗಳನ್ನು ನಂಬದೆ ಇರುವ ಮನೆಗಳಿಲ್ಲ ಎಂದರೆ ತಪ್ಪಾಗಲಾರದು. ನಲ್ಕೆ ಮತ್ತು ಪರವ ಪಂಗಡಕ್ಕೆ ಸೇರಿದವರು ಭೂತ ಕಟ್ಟುತ್ತಾರೆ. ಭೂತದ ವೇಷಕ್ಕೆ ಎಣ್ಣೆ, ಮಸಿ ಮತ್ತು ಸುಣ್ಣವನ್ನು ಬಳಸುತ್ತಾರೆ. ಅವರ ಉಡುಗೆ ತೊಡಿಗೆಯಲ್ಲಿಯೂ ಸಾಂಪ್ರದಾಯಿಕತೆ ಇದೆ.

ತುಳುವರಲ್ಲಿ 'ಬರಿ' ಅಥವಾ 'ಬಿಳಿ' ಪದ್ಧತಿ ಇಂದಿಗೂ ಆಚರಣೆಯಲ್ಲಿದೆ. ಬರಿಗಳ ಬಗ್ಗೆ ಅನೇಕ ದಂತಕತೆಗಳಿವೆ. ಹಿಂದೂ ಜಾತಿ ವ್ಯವಸ್ಥೆಯಲ್ಲಿ ಪ್ರತಿಯೊಂದು ಮುಖ್ಯ ಜಾತಿಯು ಹಲವಾರು ಉಪಜಾತಿಗಳನ್ನು ಹೊಂದಿದೆ. ಉದಾಹರಣೆಗಾಗಿ ಬ್ರಾಹ್ಮಣ ವರ್ಗದಲ್ಲಿ ಶಿವಳ್ಳಿ, ಗೌಡ ಸರಸ್ವತ, ತೋಟಿಗ ಮುಂತಾದ ಪಂಗಡಗಳಿವೆ.

ಇದನ್ನೇ ಬರಿ ಪದ್ಧತಿ ಎನ್ನುವರು. ಅಂತರ್ಜಾತಿ ವಿವಾಹಗಳು ಅಧಿಕವಾಗುತ್ತಿರುವ ಇಂದಿನ ದಿನಗಳಲ್ಲಿ ಕಟ್ಟು ನಿಟ್ಟಾದ ಬರಿಯ ಆಚರಣೆ ತುಳುವರು ಸಂಸ್ಕೃತಿಗೆ ನೀಡಿರುವ ಮಹತ್ವವನ್ನು ಸೂಚಿಸುತ್ತದೆ. ಜಾನಪದ ಕ್ರೀಡೆಗಳಾದ ಕಂಬಳ, ಕೋಳಿ ಅಂಕಗಳು, ಜನ ಪ್ರಿಯವಾಗಿವೆ. ಜೈನ ಅರಸರ ಆಳ್ವಿಕೆಯ ಪತನದೊಂದಿಗೆ ಕೋಳಿ-ಅಂಕ ಹಿಂಸಾರೂಪವನ್ನು ತಾಳಿದೆ ಎಂಬ ಆಪಾದನೆ ಕೇಳಿಬರುತ್ತಿದೆ. ಆಟಿ ಕಳೆಂಜ, ಸೋಣ ಮದ್ಮೆಲ್, ಸುಗ್ಗಿ ಕಂಗರ್ಲ್ ಇತ್ಯಾದಿ ವೇಷಗಳು ಚಾಲ್ತಿಯಲ್ಲಿವೆ. ವೇದ, ಪುರಾಣ ಮತ್ತಿತರ ಐತಿಹಾಸಿಕ ಕಥೆಗಳನ್ನು ಮತ್ತು ಭಾರತೀಯ ಸಂಸ್ಕೃತಿಯನ್ನು ಜನರಿಗೆ ಪರಿಚಯಿಸುವ ಯಕ್ಷಗಾನ ಕಲಾವಿಧರು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ.

ತಾಲೂಕಿನಲ್ಲಿರುವ ಕ್ರೈಸ್ತ ಸಮುದಾಯದವರು ಹಲವಾರು ಹಬ್ಬಗಳನ್ನು ಆಚರಿಸುತ್ತಾರೆ. ತೆನೆ ಹಬ್ಬ, ಕ್ರಿಸ್ಮಸ್, ಗುಡ್‌ಫ್ರೈಡೆ, ಈಸ್ಟರ್, ಸಾಂತ್‌ಮಾರಿ, ಮುಂತಾದವುಗಳನ್ನು ಆಚರಿಸಲಾಗುತ್ತದೆ. ಮಲೆಯಾಳಿ ಕ್ರಿಶ್ಚನ್ನರು ಓಣಂ ಹಬ್ಬವನ್ನು ಸಂಭ್ರಮದಿಂದ ಆಚರಿಸುತ್ತಾರೆ. ತಾಲೂಕಿನಲ್ಲಿರುವ ಮುಸಲ್ಮಾನರು ಮೊಹರಂ, ರಮ್ಜಾನ್, ಈದ್ ಉಲ್ ಫಿತರ್ ಮತ್ತು ಈದ್‌ಮಿಲಾದ್ ಹಬ್ಬಗಳನ್ನು ಸಂಭ್ರಮದಿಂದ ಆಚರಿಸುತ್ತಾರೆ.

೨.೭ ಬೆಳ್ತಂಗಡಿ ತಾಲೂಕಿನ ಗ್ರಾಮೀಣ ಬದುಕಿನಲ್ಲಿ ಹೊರಗಿನವರ ಪಾತ್ರ:

ಬೆಳ್ತಂಗಡಿ ತಾಲೂಕಿಗೆ ರಾಜ್ಯದ ಬೇರೆ ಬೇರೆ ಪ್ರದೇಶಗಳಿಂದ ಮತ್ತು ಹೊರ ರಾಜ್ಯಗಳಿಂದ ಸಾಕಷ್ಟು ಸಂಖ್ಯೆಯಲ್ಲಿ ವಲಸಿಗರು ಬರುತ್ತಿದ್ದು, ಗ್ರಾಮೀಣ ಜನಜೀವನದಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಿದ್ದಾರೆ. ಕೆಲವರು ಸಕಾರಾತ್ಮಕ ರೀತಿಯಲ್ಲಿ ಕಾರ್ಯನಿರ್ವಹಿಸಿ ಜನರ ಜೀವನ ಕ್ರಮವನ್ನು ಸುಧಾರಿಸಲು ಸಹಕಾರಿಯಾಗಿದ್ದಾರೆ. ಹೆಚ್ಚಿನವರು ಸಂಪತ್ತನ್ನು ಕೊಳ್ಳೆ ಹೊಡೆದು ಜನರ ಬದುಕನ್ನು ಮತ್ತಷ್ಟೂ ಜಟಿಲಗೊಳಿಸಿದ್ದಾರೆ.

ಬೆಳ್ತಂಗಡಿ ತಾಲೂಕಿನ ವಿವಿಧ ಭಾಗಗಳಲ್ಲಿ ಹೊರರಾಜ್ಯಗಳಿಂದ ಬಂದಂತಹ ವಲಸಿಗರು ಭೂಮಿಯನ್ನು ಖರೀದಿಸಿ ಕೃಷಿ ಚಟುವಟಿಕೆಯಲ್ಲಿ ತೊಡಗಿದ್ದಾರೆ. ಇಂಥವರು ಪ್ರಭಾವ ಶಾಲಿಯಾಗಿ ಬೆಳೆದು ಬಂದಿದ್ದು ಆರ್ಥಿಕವಾಗಿ ಸುಸ್ಥಿತಿಯಲ್ಲಿದ್ದಾರೆ. ವಾಣಿಜ್ಯ ಬೆಳೆಗಳಾದ ರಬ್ಬರ್ ಮತ್ತು ಅಡಿಕೆ ಕೃಷಿ ಇವರ ಪ್ರಮುಖ ಆಧಾಯದ ಮೂಲಗಳಾಗಿವೆ. ಇಂಥಹ ವಲಸಿಗರಲ್ಲಿ ಹೆಚ್ಚಿನವರು ಕೇರಳ ಮೂಲದ ಕ್ರೈಸ್ತರಾಗಿದ್ದು, ಗಂಡಿ ಬಾಗಿಲು, ನೆರಿಯ, ಕಕ್ಕಿಂಜೆ, ಮುಂಡಜೆ, ಚಾರ್ಮಾಡಿ, ಮಿತ್ತಬಾಗಿಲು ಮುಂತಾದ ಪ್ರದೇಶಗಳಲ್ಲಿ ನೆಲೆ ನಿಂತಿದ್ದಾರೆ. ಇವರಲ್ಲಿ ಕೇರಳ ಮೂಲದ ವ್ಯಾಪಾರಿಗಳು ಇಲ್ಲಿಗೆ ಆಗಮಿಸಿ ಶುಂಠಿ, ಅರಶಿನ, ನೇಂದ್ರಬಾಳೆ, ಕಾಳು ಮೆಣಸು ಮುಂತಾದ ಕೃಷಿ ಬೆಳೆಗಳನ್ನು ಖರೀದಿಸುತ್ತಾರೆ. ಪ್ಲಾಸ್ಟಿಕ್, ವಸ್ತುಗಳಾದ ಬಕೆಟ್, ಚಾಪೆ, ಹಾಸಿಗೆ, ಬಿಂದಿಗೆ, ಅಲ್ಯೂಮಿನಿಯಂ, ಪಾತ್ರೆ ಮುಂತಾದವುಗಳನ್ನು ಮಂಗಳೂರು ಮತ್ತಿತರ ಕಡೆಯಿಂದ ತಂದು ಮಾರಲಾಗುತ್ತದೆ. ಗುರುಪುರ, ಮಂಗಳೂರು ಮುಂತಾದ ಕಡೆಯಿಂದ ಬರುವ ಸಣ್ಣವ್ಯಾಪಾರಸ್ಥರು ಕಂತುಗಳಲ್ಲಿ ಹಣಪಾವತಿಸುವ ಶರತ್ತುಗಳ ಆಧಾರದಲ್ಲಿ ಬಟ್ಟೆ ಹಾಗೂ ದೋತಿಗಳನ್ನು ತಂದು ಮಾರುತ್ತಾರೆ. ವಾಣಿಜ್ಯ ಬೆಳೆಗಳಾದ ರಬ್ಬರ್, ಅಡಿಕೆ, ಕೋಕಾ, ಮುಂತಾದವುಗಳನ್ನು ಖರಿದಿಸಲು ಕೇರಳ ಮೂಲದ ವ್ಯಾಪಾರಸ್ಥರು ಆಗಮಿಸುತ್ತಾರೆ. ಶಿರಸಿಯಿಂದ ಬರುವ ಜನರು ಉತ್ತಮ ತಳಿಯ ತೆಂಗಿನ ಸಸಿಗಳನ್ನು ಹಾಗೂ ಇತರ ಕಡೆಯಿಂದ ಸಾಗುವಾನಿ ಸಸಿಗಳನ್ನು ತಂದು ಮಾರಲಾಗುತ್ತದೆ.

ಬೆಳ್ತಂಗಡಿ ತಾಲೂಕಿನಾದ್ಯಂತ ಕೆಲವೊಂದು ಕಾನೂನು ಬಾಹಿರ ಚಟುವಟಿಕೆಗಳು ನಡೆಯುತ್ತಿರುವುದು ಇತ್ತೀಚಿನ ದಿನಗಳಲ್ಲಿ ಬೆಳಕಿಗೆ ಬಂದಿದೆ. ತಾಲೂಕಿನ ರಕ್ಷಿತಾರಣ್ಯಗಳಿಂದ ಬೆಲೆಬಾಳುವ ಮರಗಳು ಕಳ್ಳಸಾಗಾಣಿಕೆಯಾಗುತ್ತಿದೆ. ತಾಲೂಕಿನ ರಕ್ಷಿತಾರಣ್ಯಗಳಲ್ಲಿ ಕಾನೂನು ಬಾಹಿರವಾಗಿ ಗಾಂಜಾ ಬೆಳೆಸಲಾಗುತ್ತಿದ್ದು, ಗಾಂಜಾವನ್ನು ನೆರೆ ರಾಜ್ಯಗಳಿಗೆ ಕಳ್ಳಸಾಗಣಿಕೆ ಮಾಡುವಂತಹ ಅಪಾಧನೆಗಳು ಕೇಳಿಬರುತ್ತಿವೆ. ಹಲವಾರು ಸಂದರ್ಭಗಳಲ್ಲಿ ಹೀಗೆ ಕಾನೂನು ಬಾಹಿರವಾಗಿ ಬೆಳೆದ ಗಾಂಜಾ ಬೆಳೆಯನ್ನು ಪತ್ತೆಹಚ್ಚಿ ಅರಣ್ಯ ಇಲಾಖಾ ವತಿಯಿಂದ ನಾಶ ಪಡಿಸಿದ ನಿದರ್ಶನಗಳಿವೆ. ಬೇರೆ ಪ್ರದೇಶಗಳಿಂದ ಲೇವಾದೇವಿಗಳು ಬೆಳ್ತಂಗಡಿಗೆ ಬರುತ್ತಿದ್ದು, ಹೆಚ್ಚಿನ ಬಡ್ಡಿದರದಲ್ಲಿ ಸಾಲವನ್ನು ನೀಡುತ್ತಿರುವ ದಾಖಲೆಗಳಿವೆ. ಪರವೂರಿನ ಜನರು ಗ್ರಾಮದ ನೇತ್ರಾವತಿ ಮತ್ತು ಅದರ ಉಪನದಿಗಳಲ್ಲಿ ನೀರಿನ ಹೊಂಡಗಳಿಗೆ ವಿಷಹಾಕಿ ಮೀನು ಹಿಡಿದು ಮಾರಾಟಮಾಡುತ್ತಾರೆ. ಕೆಲವು ವರ್ಷಗಳ ಹಿಂದೆ ಶಿಶಿಲದಲ್ಲಿ ಇಂಥಹ ದುಷ್ಕೃತ್ಯವನ್ನು ಎಸಗಿ ಸಾವಿರಾರು ಸಂಖ್ಯೆಯಲ್ಲಿ ದೇವರ ಮೀನುಗಳನ್ನು ನಾಶಪಡಿಸಲಾಗಿತ್ತು. ಇತ್ತೀಚೆಗೆ ನೆರಿಯ ಪ್ರದೇಶದಲ್ಲಿ ಹರಳು ಕಲ್ಲು ದಂದೆ ವ್ಯಾಪಾಕವಾಗಿ ನಡೆಯುತ್ತಿದ್ದು, ಬೇರೆ ರಾಜ್ಯಗಳ ವ್ಯಾಪಾರಸ್ಥರನ್ನು ನೆರಿಯದ ಕಡೆಗೆ ಸೆಳೆಯುತ್ತಿವೆ. ಹಲವಾರು ಬಡಕುಟುಂಬಗಳು ಈ ವ್ಯಾಪಾರದಲ್ಲಿ ತೊಡಗಿ ತಮ್ಮ ಆರ್ಥಿಕ ಪರಿಸ್ಥಿತಿಯನನು ಸುಧಾರಿಸಿಕೊಂಡಿವೆ. ಇತ್ತೀಚೆಗೆ ಸುರಿದ ವ್ಯಾಪಾಕ ಮಳೆಯ ಪರಿಣಾಮವಾಗಿ ನೆರಿಯಾ ಪ್ರದೇಶದಲ್ಲಿ ಭೂಕುಸಿತ ಸಂಭವಿಸಿದ್ದೂ, ಅದು ಹರಳು ಕಲ್ಲು ಗಣಿಗಾರಿಕೆಯ ಪ್ರಭಾವ ಎಂಬ ಮಾತು ಕೇಳಿ ಬರುತ್ತಿದೆ. ಎಕ್ರೆಗಟ್ಟಲೆ ಅರಣ್ಯ ಭೂಮಿಯನ್ನು ಒತ್ತುವರಿ ಮಾಡಿ ರಬ್ಬರ್ ಕೃಷಿ ಮಾಡಲಾಗಿದ್ದು ಇತ್ತೀಚಿಗೆ ಇದನ್ನು ಅರಣ್ಯ ಇಲಾಖೆಯ ವತಿಯಿಂದ ನಾಶಪಡಿಸಲಾಗಿದೆ. ಒಟ್ಟಿನಲ್ಲಿ ಬೆಳ್ತಂಗಡಿ ಪ್ರದೇಶದ ಜನಜೀವನದಲ್ಲಿ ಹೊರಗಿನವರ ಪಾತ್ರ ಹಿರಿದಾದುದು. ಅದು ಒಳ್ಳೆಯ ಪ್ರಭಾವಕ್ಕಿಂತ ಹೆಚ್ಚಾಗಿ ಸಮಸ್ಯೆಗಳನ್ನು ಹುಟ್ಟು ಹಾಕುವಲ್ಲಿ ಕಾರಣವಾಗಿದೆ.

೨.೮ ಸಮಸ್ಯೆಗಳು – ವಿಮರ್ಶೆ:

ಒಟ್ಟಿನಲ್ಲಿ ಹೇಳುವುದಾದರೆ, ಮಹಿಳೆಯರು, ದಲಿತರು, ಹಿಂದುಳಿದ ವರ್ಗದವರು ಮತ್ತು ಕೃಷಿ ಕೂಲಿಗಳು ಹಲವಾರು ಸಾಮಾನ್ಯ ಸಮಸ್ಯೆಗಳನ್ನು ಎದುರಿಸುತ್ತಿರುವುದನ್ನು ಕ್ಷೇತ್ರಕಾರ್ಯ ಮತ್ತು ಸಂದರ್ಶನಗಳ ವರದಿಗಳು ಸೂಚಿಸುತ್ತದೆ. ಇಂತಹ ಸಂದಿಗ್ದ ಪರಿಸ್ಥಿತಿಯಲ್ಲಿ ಸರಕಾರೇತರ ಸಂಸ್ಥೆಗಳು ಸಮಸ್ಯೆಗಳಿಂದ ತತ್ತರಿಸುತ್ತಿರುವ ಜನರಿಗೆ ಸಹಾಯಾಸ್ತವನ್ನು ನೀಡಿರುದನ್ನು ಗಮನಿಸಬಹುದು. ಸಮಸ್ಯೆಗಳು ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಸ್ವಭಾವದ್ದಾಗಿದ್ದು, ಈ ಕೆಳಗಿನಂತೆ ಪಟ್ಟಿ ಮಾಡಬಹುದು.

- ಶಿಕ್ಷಣದ ವ್ಯಾಪರೀಕರಣದಿಂದ ಶಿಕ್ಷಣದ ಮಟ್ಟ ಕುಸಿತ.
- ಆರೋಗ್ಯದ ಕಡೆಗೆ ನಿರ್ಲಕ್ಷ್ಯ ಮತ್ತು ಮಾರಕ ರೋಗಗಳಿಗೆ ಬಲಿ ಬೀಳುವಿಕೆ.
- ಮದ್ಯ ಮುಂತಾದ ಅಮಲು ಸೇವನೆಗಳಿಗೆ ಬಲಿ ಬೀಳುವಿಕೆ.
- ಉದ್ಯೋಗಾವಕಾಶಗಳ ಕೊರತೆ
- ನೀರು ಸರಬರಾಜು ಮತ್ತು ವಿದ್ಯುಚ್ಛಕ್ತಿಯ ಕೊರತೆ

- ಸ್ವಚ್ಚತೆಯ ಬಗ್ಗೆ ನಿರಾಸಕ್ತಿಯಿಂದ ಪರಿಸರ ಮಾಲಿನ್ಯದ ಸಂಭವ.
- ರಸ್ತೆ ಸಂಪರ್ಕದ ಕೊರತೆ ಮತ್ತು ರಸ್ತೆಗಳ ಅಧೋಗತಿ
- ಮನೆ, ಶೌಚಾಲಯ ಮತ್ತು ಒಳಚರಂಡಿ ವ್ಯವಸ್ಥೆಯ ಅಸಮರ್ಪಕ ನಿರ್ವಹಣೆ
- ಸರಕಾರದಿಂದ ಸಿಗಬಹುದಾದ ಸೌಲಭ್ಯಗಳ ಬಗ್ಗೆ ಅಜ್ಞಾನ
- ಕಠಿಣವಾದ ಸಾಮಾಜಿಕ ರೂಢಿಗಳು, ನಂಬಿಕೆಗಳು ಮತ್ತು ಅಭಿರುಚಿಗಳು.
- ಕೃಷಿ ಉತ್ಪನ್ನಗಳ ಬೆಲೆ ಕುಸಿತ ಮತ್ತು ದಿನನಿತ್ಯ ಬಳಕೆಯ ವಸ್ತುಗಳ ಬೆಲೆ ಹೆಚ್ಚಳ.
- ಧಾರ್ಮಿಕ ಮತ್ತು ನೈತಿಕ ಮೌಲ್ಯಗಳ ಪತನ
- ಭ್ರಷ್ಟರಾಜಕಾರಣ ಮತ್ತು ಮತಚಲಾವಣೆಯ ಬಗ್ಗೆ ಅಜ್ಞಾನ
- ಲಿಂಗತಾರತಮ್ಯತೆ ಮತ್ತು ಭೂಹಿಡುವಳಗಳ ಅಸಮರ್ಪಕ ನಿರ್ವಹಣೆ

ಈ ಮೇಲ್ಕಾಣಿಸಿದ ಹೆಚ್ಚಿನ ಸಮಸ್ಯೆಗಳಿಗೆ ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆ ಮತ್ತು ಸಂಪ್ರದಾಯಗಳೇ ಪ್ರಮುಖ ಕಾರಣವಾಗಿವೆ. ಸಮಸ್ಯೆಗಳಲ್ಲಿ ಹಲವಾರು ಸಮಸ್ಯೆಗಳನ್ನು ಸರಕಾರದ ಹಸ್ತಕ್ಷೇಪದಿಂದ ಶಾಸನಾತ್ಮಕ ರೀತಿಯಲ್ಲಿ ಪರಿಹರಿಸಲಾಗಿದೆ. ಮತ್ತಷ್ಟು ಸಮಸ್ಯೆಗಳ ಪರಿಹಾರಕ್ಕಾಗಿ ಸರಕಾರೇತರ ಸಂಸ್ಥೆಗಳು ಪ್ರಯತ್ನಿಸುತ್ತಿವೆ.

ಬೆಳ್ತಂಗಡಿ ತಾಲೂಕಿನ ರಾಜಕೀಯ, ಆರ್ಥಿಕ, ಧಾರ್ಮಿಕ ಮತ್ತು ಸಾಮಾಜಿಕ ಸ್ಥಿತಿಗತಿಯನ್ನು ಅವಲೋಕಿಸಿದಾಗ ತಾಲೂಕಿನ ಹೆಚ್ಚನ ಜನ ಸಣ್ಣ ಕೃಷಿಕ ಕುಟುಂಬಗಳಿಗೆ ಮತ್ತು ಕಾರ್ಮಿಕ ಕುಟುಂಬಗಳಿಗೆ ಸೇರಿದ್ದಾರೆ ಎಂಬ ಅಂಶವನ್ನು ತಿಳಿದುಕೊಳ್ಳಬಹುದು. ಸಣ್ಣ ಕೃಷಿಕರು, ಮಹಿಳೆಯರು ದಲಿತರು ಮತ್ತು ಆದಿವಾಸಿಗಳು ಬಹು ಸಂಖ್ಯೆಯಲ್ಲಿದ್ದು, ಅವರ ಜೀವನ ಶೈಲಿ ಸೂಚಿಸುವಂತೆ ಹಲವಾರು ಸಮಸ್ಯೆಗಳಿಗೆ ಮತ್ತು ಚಟಗಳಿಗೆ ಬಲಿಯಾಗಿರುವುದು ಗೋಚರಿಸುತ್ತದೆ. ಸಮಾಜದಲ್ಲಿ ಹಲವು ವರ್ಗಗಳ ಜನರಿದ್ದು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಬಡತನ, ನಿರುದ್ಯೋಗ, ದುಶ್ಚಟಗಳಿಗೆ ಬಲವಿದ್ದು ಆರೋಗ್ಯ ಕ್ಷೀಣಿಸುವಿಕೆ, ಮಾನಸಿಕ ಖಿನ್ನತೆ ಮುಂತಾದ ಸಾಮಾಜಿಕ ಸಮಸ್ಯೆಗಳನ್ನು ಎದುರಿಸುತ್ತಾರೆ. ಸಣ್ಣ ಕೃಷಿಕರು, ಮತ್ತು ಕೃಷಿ ಕೂಲಿಗಳು ಮೇಲಿನ ಸಮಸ್ಯೆಗಳಿಂದ ಮುಕ್ತರಾಗಿಲ್ಲ. ಶ್ರೀಮಂತ ವರ್ಗದವರಿಂದ ಶೋಷಣೆಯನ್ನು ಎದುರಿಸಬೇಕಾದಂತಹ ಹಲವಾರು ಸಂದರ್ಭಗಳು ಒದಗಿ ಬರುತ್ತಿವೆ. ಕೃಷಿ ಕೂಲಿಗಳು ಪಡೆಯುತ್ತಿರುವ ವೇತನವು ಕನಿಷ್ಟ ವಾಗಿದ್ದು, ಅವರ ದೈನಂದಿನ ಅಗತ್ಯತೆಗಳನ್ನು ಪೂರೈಸಲು ಸಾಕಾಗುತ್ತಿಲ್ಲ. ಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ಸಿಗುತ್ತಿಲ್ಲ. ಸಾಂಕ್ರಾಮಿಕ ರೋಗಗಳು ಅಗಿಂದ್ದಾಗ್ಗೆ ಕಾಡುತ್ತಿದ್ದು ಸಮಸ್ಯೆಗಳನ್ನು ದ್ವಿಗುಣಗೊಳಿಸಿದೆ.

ಮಹಿಳೆಯರ ಸ್ಥಿತಿಗತಿ ಉತ್ತಮ ವಾಗಿಲ್ಲ. ಹೆಚ್ಚಿನ ಮಹಿಳೆಯರು ಬೀಡಿ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಈ ವೃತ್ತಿಯಲ್ಲಿ ಅವರು ಗುತ್ತಿಗೆದಾರರಿಂದ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಸಮಾನ ಕೆಲಸಕ್ಕೆ ಸಮಾನ ವೇತನವನ್ನು ಪಡೆಯುತ್ತಿಲ್ಲ. ರಾಜಕೀಯದಲ್ಲಿ ಭಾಗವಹಿಸುವ ಹಕ್ಕು ಸಂವಿಧಾನದ ಮೂಲಕ ಲಭಿಸಿದರೂ ಅವರ ಪ್ರವೇಶ ಕೇವಲ ಹೆಸರಿಗಾಗಿ ಕಂಡುಬರುತ್ತಿವೆ. ಗಂಡಸರಿಗೆ ಜವಾಬ್ದಾರಿಯಿಂದ ನುಣುಚಿಕೊಳ್ಳಲು ಮಹಿಳೆಯರನ್ನು

ಉಪಯೋಗಿಸಲಾಗುತ್ತದೆ. ಸಾಮಾಜಿಕ ಪಿಡುಗಳಾದ ವರದಕ್ಷಿಣೆ, ದೇವದಾಸಿ ಪದ್ದತಿಗಳು, ಮಹಿಳೆಯರ ಸ್ಥಾನಮಾನವನ್ನು ಪ್ರಶ್ನಿಸುವಂತಿವೆ.

ದಲಿತರ ಸ್ಥಿತಿಗತಿ ಕೂಡಾ ಉತ್ತಮವಾಗಿಲ್ಲ. ಒಂದಲ್ಲ ಒಂದು ರೀತಿಯಲ್ಲಿ ದಲಿತ ಸಮಾಜ ಮೇಲ್ವರ್ಗದವರ ಶೋಷಣೆಗೆ ಒಳಗಾಗುತ್ತದೆ. ಕಡಿಮೆ ವೇತನ, ಭೂಕಬಳುಸುವಿಕೆ, ಅಸ್ಪಶ್ರ್ಯತೆ, ಮುಂತಾದ ಸಮಸ್ಯೆಗಳು ಇನ್ನೂ ಜೀವಂತವಾಗಿವೆ. ರಾಜಕೀಯದಲ್ಲಿ ಭಾಗವಹಿಸಲು ಪ್ರೋತ್ಸಾಹ ಲಭಿಸುತ್ತಿಲ್ಲ. ಶಿಕ್ಷಣ ಮಟ್ಟದಲ್ಲಿ ಸುಧಾರಣೆಯಾಗಿಲ್ಲ. ಸಂಸ್ಕೃತಿ–ಸಂಪ್ರದಾಯಗಳು ನಾಶ ವಾಗುತ್ತಿವೆ. ದುಶ್ಚಟಗಳಿಂದ ಹೊರಬರಲು ಪ್ರೋತ್ಸಾಹ ಸಾಕಾಗುತ್ತಿಲ್ಲ. ಮೀಸಲಾತಿ ಸೌಲಭ್ಯ ಮತ್ತು ಸರಕಾರಿ ಯೋಜನೆಗಳನ್ನು ಸಮರ್ಥವಾಗಿ ಬಳಸುವ ಪ್ರೇರಣೆ ಲಭಿಸುತ್ತಿಲ್ಲ.

ಇಂತಹ ಸಂಧಿಗ್ದ ಪರಿಸ್ಥಿತಿಯಿಂದ ಕೃಷಿಕರನ್ನು, ಕೃಷಿಕೂಲಿಗಳನ್ನು, ಆದಿವಾಸಿಗಳನ್ನು, ದಲಿತರನ್ನು ಮತ್ತು ಮಹಿಳೆಯರನ್ನು ರಕ್ಷಿಸುವಲ್ಲಿ ಸಂಘ ಸಂಸ್ಥೆಗಳ ಪ್ರಮುಖ ಪಾತ್ರವನ್ನು ನಿರ್ವಹಿಸಬೇಕಾಗಿದೆ. ಸರಕಾರೇತರ ಸಂಸ್ಥೆಗಳು ಈ ಜನರ ಸಮಸ್ಯೆಗಳಿಗೆ ಸ್ಪಂದಿಸುತ್ತಿದ್ದು ಸಮಾಜದಲ್ಲಿ ತಕ್ಕ ಮಟ್ಟಿಗೆ ಬದಲಾವಣೆಗೆ ಕಾರಣವಾಗಿದೆ. ಸ್ವಸಹಾಯ ಗುಂಪುಗಳ ರಚನೆ ಮತ್ತು ವಿವಿಧ ಹೋರಾಟ ಸಮಿತಿಗಳ ಮೂಲಕ ಜಾಗೃತಿ ಮೂಡಿಸಲು ಸಹಕರಾರಿಯಾಗುತ್ತದೆ. ಸ್ವಸಹಾಯ ಗುಂಪುಗಳ ರಚನೆ ಆರ್ಥಿಕ ಪರಿಸ್ಥಿತಿಯನ್ನು ಕೂಡಾ ಉತ್ತಮ ಪಡಿಸಲು ಸಹಕಾರಿಯಾಗುತ್ತಿದೆ. ಈ ನಿಟ್ಟಿನಲ್ಲಿ ಅವಲೋಕಿಸುವಾಗ ನಾಗರಿಕ ಸೇವಾ ಟ್ರಸ್ಟ್ ಅದ್ಭುತವಾದ ಕಾರ್ಯವನ್ನು ಮಾಡಿದೆ ಎನ್ನಬಹುದು. ಆದರೂ ಜನರ ಕೆಲವೊಂದು ಸಮಸ್ಯೆಗಳಿಗೆ ಇನ್ನು ಪರಿಹಾರಗಳನ್ನು ಕಂಡುಕೊಳ್ಳಬೇಕಾಗಿದೆ.

* * * * * * * * * * *

ಅಧ್ಯಾಯ : ಮೂರು

ಬೆಳ್ತಂಗಡಿ ತಾಲೂಕಿನ ಸರಕಾರೇತರ ಸಂಸ್ಥೆಗಳು ಮತ್ತು ಅವುಗಳ ಕಾರ್ಯಗಳು

೩.೧ ಸರಕಾರೇತರ ಸಂಸ್ಥೆಗಳ ಉದ್ದೇಶಗಳು

೩.೨ ಹಣಕಾಸಿನ ನೆರವು ಮತ್ತು ಕಾರ್ಯಕ್ರಮಗಳ ಸ್ವರೂಪ

೩.೩ ಬೆಳ್ತಂಗಡಿ ತಾಲೂಕಿನ ಪ್ರಮುಖ ಸರಕಾರೇತರ ಸಂಸ್ಥೆಗಳು

- ೧. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ (ರಿ.)
- ೨. ಕಾಪುಚಿನ್ ಕೃಷಿಕ ಸೇವಾ ಕೇಂದ್ರ (ರಿ) ದಯಾಳ್‌ಬಾಗ್
- ೩. ಜಮಿಯ್ಯತುಲ್ ಫಲಾಹ್, ಬೆಳ್ತಂಗಡಿ ಶಾಖೆ
- ೪. ಸಿಯೋನ್ ಆಶ್ರಮ್ – ಗಂಡಿಬಾಗಿಲು
- ೫. ಕ್ರೈಸ್ತ ಸಮನ್ವಯ ಸಮಿತಿ (ರಿ.) ಮಡಂತ್ಯಾರು
- ೬. ನಾಗರಿಕ ಸೇವಾ ಟ್ರಸ್ಟ್ (ರಿ) ಗುರುವಾಯನಕೆರೆ

೩.೪ ಧ್ಯೇಯಗಳು ಮತ್ತು ನಿಯಮಾವಳಿಗಳು

೩.೫ ಆಡಳಿತ ಮಂಡಳಿ ಮತ್ತು ನೌಕರ ವರ್ಗ

೩.೬ ಹಮ್ಮಿಕೊಳ್ಳುವ ಯೋಜನೆಗಳು

೩.೭ ಸಂಪನ್ಮೂಲ ಕ್ರೋಢಿಕರಣ ಮತ್ತು ಉಪಯೋಗ

೩.೮ ನಾಗರಿಕ ಸೇವಾ ಟ್ರಸ್ಟ್‌ನ ಕಾರ್ಯ ವೈಖರಿ

೩.೯ ಸದಸ್ಯತ್ವ ಹೊಂದಿದ ಸರಕಾರಿ ಇಲಾಖೆಗಳು

೩.೧೦ ಸದಸ್ಯತ್ವ ಹೊಂದಿದ ಇತರ ಇಲಾಖೆಗಳು

ಅಧ್ಯಾಯ : ಮೂರು

ಬೆಳ್ತಂಗಡಿ ತಾಲೂಕಿನ ಸರಕಾರೇತರ ಸಂಸ್ಥೆಗಳು ಮತ್ತು ಅವುಗಳ ಕಾರ್ಯಗಳು

ಜನರಿಂದ ಜನರಿಗಾಗಿ ಕಟ್ಟಿದ ಸಂಸ್ಥೆಗಳನ್ನು ಸರಕಾರೇತರ ಸಂಸ್ಥೆಗಳೆಂದು ಗುರುತಿಸಬಹುದು. ಇವುಗಳನ್ನು ಸ್ವಯಂ ಸೇವಾ ಸಂಸ್ಥೆಗಳೆಂದು (Service Organisations) ಎಂಬುದಾಗಿ ಹೆಸರಿಸಿದರೂ ತಪ್ಪಾಗಲಾರದು. ಸಾಮಾನ್ಯವಾಗಿ ಸರಕಾರೇತರ ಸಂಸ್ಥೆಗಳು ಜನರಿಂದ ರಚಿತವಾದ ಸಂಸ್ಥೆಗಳಾಗಿದ್ದು, ಒಂದು ಅಥವಾ ಒಂದಕ್ಕಿಂತ ಹೆಚ್ಚು ಉದ್ದೇಶಗಳನ್ನು ಹೊಂದಿವೆ. ಇವುಗಳು ಸರಕಾರದ ನಿಯಂತ್ರಣದಿಂದ ಮುಕ್ತವಾಗಿದ್ದು, ತಮ್ಮ ಸದಸ್ಯರ ಮತ್ತು ಕೇಂದ್ರಕೃತ ಸಮುದಾಯದ ಹೀತಾಸಕ್ತಿಯನ್ನು ಕಾಪಾಡುವ ಉದ್ದೇಶವನ್ನು ಹೊಂದಿರುತ್ತವೆ. ಜಾಗತಿಕ ಮಟ್ಟದಲ್ಲಿ ಸರಕಾರೇತರ ಸಂಸ್ಥೆಗಳು ತುಂಬಾ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತವೆ. ಭಾರತದ ದೃಷ್ಟಿಯಲ್ಲಿ ಹೇಳುವುದಾದರೆ ಈ ಸರಕಾರೇತರ ಸಂಸ್ಥೆಗಳು ಜನರ ದೈನಂದಿನ ಬದುಕಿನ ಅವಿಭಾಜ್ಯ ಅಂಗವಾಗಿವೆ. ಅವುಗಳ ಸದಸ್ಯರಿಂದ ನಡೆಸಲ್ಪಡುತ್ತಿದ್ದೂ ಯಾವುದೇ ಬಾಹ್ಯ ನಿಯಂತ್ರಣಗಳಿಗೆ ಒಳಪಟ್ಟಿಲ್ಲ. ಅವುಗಳು ಸಂಘಟಿತವಾಗಿಯೋ ಅಥವಾ ಅಸಂಘಟಿತವಾಗಿಯೋ ತಮ್ಮ ಉದ್ದೇಶಿತ ವರ್ಗದ ಮತ್ತು ಪ್ರದೇಶದ ಒಳಿತನ್ನು ಕಾಪಾಡಲು ಶ್ರಮಿಸುತ್ತವೆ.

ಸರಕಾರೇತರ ಸಂಸ್ಥೆಗಳನ್ನು ಹಲವಾರು ರೀತಿಯಲ್ಲಿ ವ್ಯಾಖ್ಯಾನಿಸಲಾಗಿದೆ. ಅಮೇರಿಕಾದ ಪರಿಕಲ್ಪನೆಯಲ್ಲಿ ಅವುಗಳನ್ನು 'ಸರಕಾರೇತರ ಸಂಸ್ಥೆಗಳೆಂದು' ಕರೆಯಲಾಗಿದೆ. ಭಾರತೀಯ ದೃಷ್ಟಿಯಲ್ಲಿ ಅವುಗಳು 'ಸ್ವಯಂ ಸೇವಾ ಸಂಸ್ಥೆಗಳು' ಎಂಬುದಾಗಿ ಹೆಚ್ಚು ಪ್ರಚಾರದಲ್ಲಿವೆ. ಹೀಗೆ ಸರಕಾರೇತರ ಸಂಸ್ಥೆಗಳು ಎಂಬ ಶಬ್ದ ಬೇರೆ ಬೇರೆ ಅರ್ಥಗಳನ್ನು ಸೂಚಿಸುತ್ತದೆ. ಅವುಗಳ ಬಗ್ಗೆ ಇರುವ ವ್ಯಾಖ್ಯೆಗಳ ಆಧಾರದಲ್ಲಿ ಮತ್ತು ಲಭ್ಯವಿರುವ ಸಾಹಿತ್ಯದ ಆಧಾರದಲ್ಲಿ ಸರಕಾರೇತರ ಸಂಸ್ಥೆಗಳು ಈ ಕೆಳಗಿನ ಉದ್ದೇಶಗಳನ್ನು ಹೊಂದಿವೆ ಎಂದು ಅರ್ಥೈಸಬಹುದು.

೩.೧ ಸರಕಾರೇತರ ಸಂಸ್ಥೆಗಳ ಉದ್ದೇಶಗಳು:

- ಸಮಾಜದ ಒಳಿತನ್ನು ಕಾಪಾಡುವುದು.
- ಒಂದು ನಿರ್ದಿಷ್ಟ ಸಮುದಾಯದ ಅಭಿವೃದ್ಧಿ
- ಕೆಲವು ನಿರ್ದಿಷ್ಟ ಸಮಸ್ಯೆಗಳಿಗೆ ಪರಿಹಾರ
- ಒಂದು ನಿರ್ದಿಷ್ಟ ಪ್ರದೇಶವನ್ನು ಗುರುತಿಸಿ ಅದರ ಅಭಿವೃದ್ಧಿ
- ಪ್ರಜಾಸತ್ತಾತ್ಮಕ ರೀತಿಯಲ್ಲಿ ಕಟ್ಟಲ್ಪಟ್ಟು ಜನರ ಅವಶ್ಯಕತೆಗಳಿಗೆ ಸ್ಪಂದನ
- ಜನಶಕ್ತಿಯನ್ನು ಜನರ ಒಳಿತಿಗಾಗಿ ಸದ್ಬಳಕೆ
- ಜನರೊಂದಿಗೆ ನೇರ ಸಂಪರ್ಕ
- ಸಾಮಾಜಿಕ ಬದಲಾವಣೆಗಾಗಿ ಕಾರ್ಯಕ್ರಮಗಳ ಅನುಷ್ಠಾನ
- ಲಿಂಗತಾರತಮ್ಯತೆ ನಿವಾರಣೆ

- ಪ್ರಾದೇಶಿಕ ಅಸಮಾನತೆಯ ನಿವಾರಣೆ
- ಕೋಮು ಸೌಹಾರ್ದತೆಗಾಗಿ ಕಾರ್ಯಕ್ರಮಗಳು
- ಯಶಸ್ಸಿನ ಫಲ.

ಒಟ್ಟಿನಲ್ಲಿ ಸರಕಾರದೊಂದಿಗೆ ನೊಂದಾಯಿಸಲ್ಪಟ್ಟ ಕೆಲವು ನಿರ್ದಿಷ್ಟ ಧ್ಯೇಯಗಳೊಂದಿಗೆ ಜನರೊಂದಿಗೆ ಸ್ಪಂದಿಸಿ ಪ್ರಜಾ ಸತ್ತಾತ್ಮಕ ರೀತಿಯಲ್ಲಿ ಕಾರ್ಯನಿರ್ವಹಿಸುವುದು ಅವುಗಳ ಪ್ರಮುಖ ಗುರಿ. ಬಾಹ್ಯ ನಿಯಂತ್ರಣಗಳಿಂದ ಮುಕ್ತವಾಗಿ ಸುಲಭ ನೀತಿ–ನಿಯಮಗಳೊಂದಿಗೆ ಧೈರ್ಯ ಶಾಲಿಯಾಗಿ ಮುನ್ನುಗ್ಗವಂತಹ ಛಲವನ್ನು ಹೊಂದಿವೆ. ಒಂದು ನಿರ್ಧಿಷ್ಟ ಕಾರ್ಯ ಕ್ಷೇತ್ರದಲ್ಲಿ ತಮ್ಮ ಯೋಜನೆಗಳನ್ನು ಅನಷ್ಟಾನಗೊಳಿಸುವ ನಿಟ್ಟಿನಲ್ಲಿ ಶ್ರಮಿಸುತ್ತಿವೆ.

೩.೨ ಹಣಕಾಸಿನ ನೆರವು ಮತ್ತು ಕಾರ್ಯಕ್ರಮಗಳ ಸ್ವರೂಪ:

ತಮ್ಮ ಧ್ಯೇಯೋದ್ದೇಶಗಳನ್ನು ಕಾರ್ಯಗತಗೊಳಿಸುವ ಉದ್ದೇಶದಿಂದ ಸರಕಾರೇತರ ಸಂಸ್ಥೆಗಳ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿವೆ. ಸಂಘಟನೆ, ಜಾಗೃತಿ ಮತ್ತು ಹೋರಾಟಗಳು ಇವರ ಪ್ರಮುಖ ಕಾರ್ಯಗಳು. ಸರಕಾರದ ಕಾರ್ಯಕ್ರಮಗಳು ಮತ್ತು ಸೌಲಭ್ಯಗಳ ಕುರಿತು ಜನರಿಗೆ ನಿಖರವಾದ ಮಾಹಿತಿಯನ್ನು ನೀಡುತ್ತವೆ. ಜನರನ್ನು ಹೋರಾಟಗಳಿಗೆ ಮತ್ತು ಆಂದೋಲನಗಳಿಗೆ ಸಿದ್ಧಪಡಿಸುತ್ತಿವೆ. ಲಭ್ಯವಿರುವ ಸಂಪನ್ಮೂಲಗಳನ್ನು ಯಶಸ್ವಿಯಾಗಿ ಜನರ ಅಪೇಕ್ಷೆಯಂತೆ ಉಪಯೋಗಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಗ್ರಾಮೀಣ ಜನರನ್ನು ಸರಕಾರ ಮತ್ತು ಸೇವಾ ಸಂಸ್ಥೆಗಳತ್ತ ಸೆಳೆಯುವ ಪ್ರಯತ್ನವನ್ನು ಮಾಡುತ್ತವೆ. ಗ್ರಾಮೀಣ ಜನರು ಸರಕಾರದ ಕಾರ್ಯಕ್ರಮಗಳ ಪ್ರಯೋಜವನ್ನು ಪಡೆಯದಿದ್ದ ಸಂದರ್ಭದಲ್ಲಿ ಅಥವಾ ವಂಚನೆಗೊಳಪಟ್ಟ ಸಂದರ್ಭದಲ್ಲಿ ಅಂತಹ ಕೊರತೆಗಳನ್ನು ನೀಗಿಸುತ್ತಿವೆ. ಸಾಮಾಜಿಕ ಬೆಳವಣಿಗೆ, ಬಡವರ ಕಾಳಜಿ, ನಿರಾಶ್ರಿತರಿಗೆ ಆಶ್ರಯ, ದುರ್ಬಲ ಮತ್ತು ಶೋಷಣೆಗೆ ಒಳಪಟ್ಟವರಿಗೆ ಸಹಾಯವನ್ನು ನಿರಂತರ ಮಾಡುತ್ತವೆ.

ನಮ್ಮ ದೇಶದಲ್ಲಿ ಅಂಥಹ ಹಲವಾರು ಸ್ವಯಂ ಸೇವಾ ಸಂಸ್ಥೆಗಳು ಅಸ್ತಿತ್ವದಲ್ಲಿವೆ. ಆದರೆ ಸರಕಾರೇತರ ಸಂಸ್ಥೆಗಳ ಹೆಚ್ಚಿನ ಕಾರ್ಯಕ್ರಮಗಳು ಜನರಿಂದ ಪ್ರಯೋಜಿಸಲ್ಪಡುತ್ತವೆ. ಸದಸ್ಯತ್ವ ಶುಲ್ಕ, ಸಾರ್ವಜನಿಕ ದೇಣಿಗೆ, ಬ್ಯಾಂಕ್ ಸಾಲ ಬಡ್ಡಿ ಮುಂತಾದವುಗಳ ಮೂಲಕ ಸಂಪನ್ಮೂಲಗಳನ್ನು ಕ್ರೋಢಿಕರಿಸುತ್ತವೆ. ಕೆಲವೊಂದು ನಿರ್ದಿಷ್ಟ ಕಾರ್ಯಕ್ರಮಗಳಿಗೆ ಸರಕಾರದಿಂದ ಅನುದಾನವನ್ನು ಕೂಡಾ ಪಡೆಯುತ್ತವೆ. ಇಂಥಹ ಅನುದಾನವು ಸಾಮಾನ್ಯವಾಗಿ ಸಂಬಂಧಪಟ್ಟ ಕಾರ್ಯಕ್ರಮದ ಶೇಕಡಾ 50 ರಷ್ಟು ಆಗಿರುತ್ತದೆ. ಅಂತಹ ಅನುದಾನವನ್ನು ಸಮರ್ಪಕವಾಗಿ ಉಪಯೋಗಿಸಿ ಸರಕಾರಕ್ಕೆ ಲೆಕ್ಕ ಪರಿಶೋಧಕರಿಂದ ತಪಾಸಣೆಗೊಳಪಟ್ಟ ಲೆಕ್ಕ ಪತ್ರವನ್ನು ನೀಡಲಾಗುತ್ತದೆ.

ಅನೇಕ ಸಂಘ ಸಂಸ್ಥೆಗಳು ಕೂಡಾ ಸೇವಾ ಸಂಸ್ಥೆಗಳ ಚಟುವಟಿಕೆಗಳಿಗೆ ಮತ್ತು ಗ್ರಾಮಾಭಿವೃದ್ಧಿ ಯೋಜನೆಗಳಿಗೆ ಆರ್ಥಿಕ ನೆರವನ್ನು ನೀಡುತ್ತವೆ. ಬ್ಯಾಂಕ್‌ಗಳು ಕೂಡಾ ಕಡಿಮೆ ಬಡ್ಡಿದರದಲ್ಲಿ ಸಾಲವನ್ನ ನೀಡಲು ಮುಂದಾಗುತ್ತಿವೆ. ಸರಕಾರಿ ಇಲಾಖೆಗಳಾದ ಗ್ರಾಮಾಭಿವೃದ್ಧಿ ಸಚಿವಾಲಯ, ಶಿಶು ಮತ್ತು ಮಹಿಳಾ ಅಭಿವೃದ್ಧಿ ಇಲಾಖೆ, ಸಮಾಜ ಕಲ್ಯಾಣ ಇಲಾಖೆ ಮುಂತಾದ ಸರಕಾರಿ ಇಲಾಖೆಗಳು ಗ್ರಾಮಾಭಿವೃದ್ಧಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ, ದಲಿತ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ, ಅಲ್ಪಸಂಖ್ಯಾತರ ಅಭಿವೃದ್ಧಿ ಮುಂತಾದ ಕಾರ್ಯಕ್ರಮಗಳಿಗೆ ಆರ್ಥಿಕ ನೆರವನ್ನು ನೀಡುತ್ತವೆ. ಆದರೆ ಈ ನಿಟ್ಟಿನಲ್ಲಿ ಸಹಾಯವನ್ನು ಪಡೆಯಲಿಚ್ಚಿಸುವ ಎಲ್ಲಾ ಸ್ವಯಂ ಸೇವಾ ಸಂಸ್ಥೆಗಳು

ಸರಕಾರದೊಂದಿಗೆ ಕಡ್ಡಾಯವಾಗಿ ನೊಂದಾಯಿಸಲ್ಪಡತಕ್ಕದ್ದು. ಸರಕಾರ ನಿಗದಿ ಪಡಿಸಿದ ಷರತ್ತುಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು. ಅವುಗಳು ವ್ಯವಸ್ಥಿತವಾದ ನಿರ್ವಹಣಾ ಮತ್ತು ನಿರ್ದೇಶಕ ಮಂಡಳಿಗಳನ್ನು ಹೊಂದಿರತಕ್ಕದ್ದು. ಹಣಕಾಸಿನ ವ್ಯವಹಾರಕ್ಕೆ ಸಂಬಂಧಿಸಿದ ಎಲ್ಲಾ ದಾಖಲೆ ಪತ್ರಗಳನ್ನು ಹೊಂದಿರತಕ್ಕದ್ದು. ಮಾತ್ರವಲ್ಲದೆ, ವಾರ್ಷಿಕವಾಗಿ ಲೆಕ್ಕ ಪರಿಶೋಧಕರಿಂದ ತಪಾಸಣೆಗೆ ಒಳಪಡತ್ಕದ್ದು. ಈ ಷರತ್ತುಗಳನ್ನು ಪಾಲಿಸಲು ವಿಫಲವಾದ ಸಂಸ್ಥೆಗಳಿಗೆ ಸರಕಾರದಿಂದ ಅನುದಾನ ಬಿಡುಗಡೆ ಮಾಡಲಾಗುವುದಿಲ್ಲ ಮಾತ್ರವಲ್ಲದೆ ಕಾನೂನು ಉಲ್ಲಂಘನೆಗಾಗಿ ದಂಡವನ್ನು ವಿಧಿಸಬಹುದಾಗಿದೆ.

ಸಾಮಾನ್ಯವಾಗಿ ಗ್ರಾಮೀಣ ಪ್ರದೇಶದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸೇವಾ ಸಂಸ್ಥೆಗಳು ಅವರು ಕಾರ್ಯ ನಿರ್ವಹಿಸುವ ವ್ಯಾಪ್ತಿ ಮತ್ತು ಜನರನ್ನು ಹೊರತುಪಡಿಸಿ ಸಂಪನ್ಮೂಲಗಳ ಕ್ರೋಢಿಕರಣಕ್ಕೆ ಮುಂದಾಗುತ್ತವೆ. ಇದು ಸಮಾನ್ಯವಾಗಿ ಸೇವಾ ಸಂಸ್ಥೆಯ ಕಾರ್ಯ ಕ್ಷೇತ್ರದ ಜನರೊಂದಿಗೆ ಸೇವಾ ಸಂಸ್ಥೆಯು ಮಾಡಿಕೊಳ್ಳುವ ಒಂದು ಆಂತರಿಕ ಒಪ್ಪಂದವಾಗಿದೆ. ಆದರೂ ಹೆಚ್ಚಾಗಿ ಸೇವಾ ಸಂಸ್ಥೆಯ ಕಾರ್ಯಕ್ರಮಗಳ ಪ್ರಯೋಜನವನ್ನು ಕಾರ್ಯಕ್ಷೇತ್ರದ ಜನರೇ ಪಡೆಯುವಂತದ್ದು ರೂಢಿ. ಆದುದರಿಂದ ಸೇವಾ ಸಂಸ್ಥೆಗಳು ಹೆಚ್ಚಾಗಿ ತಮ್ಮ ಮೂಲವನ್ನು ತಾವು ಕಾರ್ಯನಿರ್ವಹಿಸುವ ಕ್ಷೇತ್ರದಿಂದ ಹೊರಗಡೆ ಹೊಂದಿರುತ್ತವೆ. ತಮ್ಮ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ದಕ್ಷತೆ ಮತ್ತು ಜವಾಬ್ದಾರಿಯನ್ನು ತೋರ್ಪಡಿಸುತ್ತವೆ. ಆದುದರಿಂದ ಸೇವಾ ಸಂಸ್ಥೆಗಳು ಗ್ರಾಮೀಣ ಜನತೆಯ ಬದುಕಿನ ಅವಿಭಾಜ್ಯ ಅಂಗವಾಗಿದ್ದು, ಸಾಮಾಜಿಕ ಬದಲಾವಣೆಯ ಪ್ರಕ್ರಿಯೆಯಲ್ಲಿ ಯಶಸ್ವಿಯಾಗಿ ಭಾಗವಹಿಸುತ್ತವೆ.

೩.೩ ಬೆಳ್ತಂಗಡಿ ತಾಲೂಕಿನ ಪ್ರಮುಖ ಸರಕಾರೇತರ ಸಂಸ್ಥೆಗಳು:

ಬೆಳ್ತಂಗಡಿ ತಾಲೂಕಿನಾದ್ಯಾಂತ ಹಲವಾರು ಸರಕಾರೇತರ ಸಂಸ್ಥೆಗಳು ಕಾರ್ಯನಿರ್ವಹಿಸುತ್ತವೆ. ಸಾಮಾಜಿಕ ಅಭಿವೃದ್ಧಿ ಮತ್ತು ಬದಲಾವಣೆಗಾಗಿ ಹಲವಾರು ಉದ್ದೇಶಗಳನ್ನು ತಮ್ಮ ತಮ್ಮ ಒಪ್ಪಂದ ಕರಾರುಗಳಲ್ಲಿ ಹಾಕಿಕೊಂಡಿವೆ. ಈ ಸಂಸ್ಥೆಗಳು ದುರ್ಬಲ ಮತ್ತು ಕೆಳವರ್ಗದವರನ್ನು ಬೆಳವಣಿಗೆಯ ಪಥದಲ್ಲಿ ಮುನ್ನಡೆಸಲು ಪಣತೊಟ್ಟಿವೆ. ಮಹಿಳೆಯರ ಸಬಲೀಕರಣ, ದೀನ ದಲಿತರ ಏಳಿಗೆ, ನಿರುಧ್ಯೋಗಿಗಳಿಗೆ ಉದ್ಯೋಗ, ಕೋಮು ಸೌಹಾರ್ದತೆ, ಶಿಕ್ಷಣದ ಬೆಳವಣಿಗೆ, ಜಾಗೃತ ಸಮಾಜ, ಮಕ್ಕಳ ಮತ್ತು ಕಾರ್ಮಿಕರ ಕಲ್ಯಾಣ, ಸಣ್ಣ ಕೃಷಿಕರಿಗೆ ಪ್ರೋತ್ಸಾಹ, ಪರಿಸರಾಭಿವೃದ್ಧಿ ಮುಂತಾದವುಗಳು ಈ ಸರಕಾರೇತರ ಸಂಸ್ಥೆಗಳ ಪ್ರಮುಖ ಉದ್ದೇಶಗಳಾಗಿವೆ. ಬೆಳ್ತಂಗಡಿ ತಾಲೂಕಿನಾದ್ಯಾಂತ ಅಸ್ತಿತ್ವದಲ್ಲಿರುವ ಸೇವಾ ಸಂಸ್ಥೆಗಳಲ್ಲಿ ಈ ಕೆಳಗಿನವುಗಳನ್ನು ಪ್ರಮುಖ ಸಂಸ್ಥೆಗಳೆಂದು ಗುರುತಿಸಲಾಗಿದೆ.

೧. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ (ರಿ) ಧರ್ಮಸ್ಥಳ

೨. ಕಾಪುಜಿನ್ ಕೃಷಿಕ ಸೇವಾ ಕೇಂದ್ರ (ರಿ) ವಿಮುಕ್ತಿ ಉಜಿರೆ

೩. ಜಮಿಯ್ಯತುಲ್ ಫಲಾಹ್, ಬೆಳ್ತಂಗಡಿ ಘಟಕ.

೪. ಸಿಯೋನ್ ಆಶ್ರಮ್, ಗಂಡಿಬಾಗಿಲು, ಬೆಳ್ತಂಗಡಿ

೫. ಕ್ರೈಸ್ತ ಸಮನ್ವಯ ಸಮಿತಿ (ರಿ) ಮಡಂತ್ಯಾರು

೬. ನಾಗರಿಕ ಸೇವಾ ಟ್ರಸ್ಟ್ (ರಿ) ಗುರುವಾಯನಕೆರೆ

ಮೇಲಿನ ಎಲ್ಲಾ ಸಂಸ್ಥೆಗಳು ಹಲವಾರು ಸಹಸಂಸ್ಥೆಗಳನ್ನು ಮತ್ತು ಸಮಿತಿಗಳನ್ನು ರಚಿಸಿಕೊಂಡಿವೆ. ಈ ಸಹಸಂಸ್ಥೆಗಳ ಮತ್ತು ಸಮಿತಿಗಳ ಮೂಲಕ ತಮ್ಮ ಕಾರ್ಯಕ್ರಮಗಳನ್ನು ತಮ್ಮ ಉದ್ದೇಶಿತ ವರ್ಗಗಳಿಗೆ ತಲುಪಿಸುವ ಪ್ರಯತ್ನವನ್ನು ಮಾಡುತ್ತವೆ. ಒಟ್ಟಿನಲ್ಲಿ ಕುಟುಂಬ ಕಲ್ಯಾಣ ಮತ್ತು ಸಮುದಾಯ ಅಭಿವೃದ್ಧಿಯಲ್ಲಿ ಈ ಸಂಸ್ಥೆಗಳ ಪಾತ್ರ ಹಿರಿದಾದುದು. ಪ್ರಸ್ತುತ ಅಧ್ಯಯನದಲ್ಲಿ ಮೇಲಿನ ಸಂಘ ಸಂಸ್ಥೆಗಳ ಸಂಕ್ಷಿಪ್ತ ಪರಿಚಯದೊಂದಿಗೆ ನಾಗರಿಕ ಸೇವಾ ಟ್ರಸ್ಟ್ ಗುರುವಾಯನಕೆರೆ, ಇದರ ಕಾರ್ಯ ಚಟುವಟಿಕೆಗಳ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಮಾಡಲಾಗಿದೆ. ಈ ಸಂಸ್ಥೆ ಯಾವ ರೀತಿಯಲ್ಲಿ ಸಾಮಾಜಿಕ ಬದಲಾವಣೆಯಲ್ಲಿ ತೊಡಗಿಕೊಂಡಿದೆ ಎಂಬುದರ ಬಗ್ಗೆ ವಿಶ್ಲೇಷಣೆ ಮಾಡುವ ಪ್ರಯತ್ನವೇ ಈ ಪ್ರಭಂದದ ಪ್ರಮುಖ ಉದ್ದೇಶವಾಗಿದೆ.

೧. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ (ರಿ)

ಶ್ರೀ ಕ್ಷೇತ್ರ ಧರ್ಮಸ್ಥಳ ಒಂದು ಧಾರ್ಮಿಕ ಯಾತ್ರಾ ಕೇಂದ್ರವಾಗಿದೆ. ಡಾ। ವೀರೇಂದ್ರ ಹೆಗ್ಗಡೆಯವರ ನೇತೃತ್ವದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳವು ಜಗತ್ತಿಗೆ ಪರಿಚಯಿಸಲ್ಪಟ್ಟಿದೆ. ಕ್ಷೇತ್ರದ ವತಿಯಿಂದ ಬಡವ ಮತ್ತು ದೀನ ದಲಿತರಿಗಾಗಿ ಹಮ್ಮಿಕೊಂಡಿರುವ ಹಲವಾರು ಯೋಜನೆಗಳಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ (ರಿ) ಕೂಡಾ ಒಂದು. ಈ ಯೋಜನೆಯ ಡಾ। ಡಿ. ವೀರೇಂದ್ರ ಹೆಗ್ಗಡೆಯವರ ದೂರದೃಷ್ಟಿತ್ವದ ಫಲವಾಗಿ 1982 ರಲ್ಲಿ ಸ್ಥಾಪಿಸಲ್ಪಟ್ಟಿತು. ಅದೇ ವರ್ಷದಲ್ಲಿ ಶ್ರೀ ಕ್ಷೇತ್ರದಲ್ಲಿ ಸುಮಾರು 39 ಅಡಿ ಎತ್ತರದ ಬಾಹುಬಲಿ ಪ್ರತಿಮೆಯನ್ನು ಕೂಡಾ ಸ್ಥಾಪಿಸಲಾಗಿತ್ತು. ಪ್ರಸ್ತುತ ಈ ಒಂದು ಯೋಜನೆಯು ಇಡೀ ಕರ್ನಾಟಕ ರಾಜ್ಯಕ್ಕೆ ವಿಸ್ತರಿಸಲ್ಪಟ್ಟಿದ್ದೂ ಗ್ರಾಮೀಣ ಜನತೆಯ ಬದುಕಿನ ಒಂದು ಅವಿಭಾಜ್ಯ ಅಂಗವಾಗಿದೆ. ಈ ಯೋಜನೆಯು ನಿರಂತರವಾಗಿ ಬಡತನ, ಅನಕ್ಷರತೆ, ಅಜ್ಞಾನ, ಮದ್ಯಪಾನ, ಲಿಂಗತಾರತಮ್ಯತೆ ಮುಂತಾದ ಸಾಮಾಜಿಕ ಪಿಡುಗುಗಳ ವಿರುದ್ಧ ಹೋರಾಡುತ್ತದೆ. ಈ ಯೋಜನೆಯು 2007 ರಲ್ಲಿ ತನ್ನ ಹುಟ್ಟಿನ 25 ಸಂವತ್ಸರಗಳನ್ನು ಪೂರೈಸಿದ್ದೂ ಅದರ ಆಚರಣೆಯ ಸಂದರ್ಭದಲ್ಲಿ ತನ್ನ ಫಲಾನುಭವಿಗಳಿಗೆ ಕೆಲವೊಂದು ಹೊಸಯೋಜನೆಗಳನ್ನು ಪ್ರಾರಂಭಿಸಿದೆ. ಅವುಗಳಲ್ಲಿ ಸುಜ್ಞಾನ ನಿಧಿ, ನವಚೇತನ, ಮತ್ತು ಕಾಮಧೇನು ಯೋಜನೆಗಳು ಯಶಸ್ವಿ ಯೋಜನೆಗಳಾಗಿ ಮೂಡಿ ಬಂದಿವೆ. ಗ್ರಾಮೀಣ ಜನರ ಜೀವನ ಮಟ್ಟದ ಸುಧಾರಣೆ, ಸ್ಥಳೀಯ ಪ್ರಾಕೃತಿಕ ಮತ್ತು ಮಾನವ ಸಂಪನ್ಮೂಲಗಳ ಸದ್ಬಳಕೆ, ಲಾಭದಾಯಕ ಕೃಷಿ ಚಟುವಟಿಕೆಗೆ ಪ್ರೋತ್ಸಾಹ ಮತ್ತು ಜನಸಾಮಾನ್ಯರನ್ನು ಸಮುದಾಯ ಅಭಿವೃದ್ಧಿ ಮತ್ತು ಗ್ರಾಮೋದ್ಧಾರಕ ಕಾರ್ಯಕ್ರಮಗಳಲ್ಲಿ ತೊಡಗುವಂತೆ ಪ್ರೇರೇಪಿಸುವುದು ಈ ಯೋಜನೆಯ ಪ್ರಮುಖ ಉದ್ದೇಶಗಳಾಗಿವೆ.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ (ರಿ) ವತಿಯಿಂದ ಹಲವರು ಯೋಜನೆಗಳು ಜಾರಿಯಲ್ಲಿವೆ.

೧. ಪ್ರಗತಿ ಬಂದು ಸ್ವಸಹಾಯ ಸಂಘಗಳ ರಚನೆಯ ಮೂಲಕ ಸಣ್ಣ ಕೃಷಿಕರು ತಮ್ಮ ಅವಶ್ಯಕ ಕೆಲಸಕಾರ್ಯಗಳನ್ನು ಪರಸ್ಪರ ಶ್ರಮದ ಹಂಚುವಿಕೆಯ ಮೂಲಕ ಪೂರೈಸಿಕೊಳ್ಳುತ್ತಿದ್ದಾರೆ. ಹಳ್ಳಿಯ ಮಟ್ಟದಲ್ಲಿ ಪ್ರಗತಿ ಒಂದು ಒಕ್ಕೂಟಗಳನ್ನು ರಚನೆ ಮಾಡಲಾಗುತ್ತದೆ.

೨. ಮಹಿಳೆಯರ ಸಬಲೀನಕರಣಕ್ಕಾಗಿ ಜ್ಞಾನ ವಿಕಾಸ ಮಹಿಳಾ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದೂ, ಆರೋಗ್ಯ, ಕುಟುಂಬ ಕಲ್ಯಾಣ, ಮಕ್ಕಳ ಶಿಕ್ಷಣ, ಗ್ರಾಮೀಣ ಸ್ವಚ್ಚತೆಯ ಕುರಿತು ಅರಿವನ್ನು ಮೂಡಿಸಲಾಗುತ್ತದೆ.

೩. ಒಕ್ಕೂಟದ ಸದಸ್ಯರ ಜೀವನೋಪಾಯದ ಅವಶ್ಯಕತೆಗಳನ್ನು ಪೂರೈಸುವ ನಿಟ್ಟಿನಲ್ಲಿ ಸಹಕರಿಸುವುದಕ್ಕಾಗಿ ಪ್ರಗತಿ ನಿಧಿ ಎಂಬ ಸಣ್ಣ ಉಳಿತಾಯ ಯೋಜನೆಯನ್ನು ಅನುಷ್ಠಾನಗೊಳಿಸಿದೆ. ಹೀಗೆ ಪಡೆದ ಆರ್ಥಿಕ ಸಹಾಯವನ್ನು ವಾರಕ್ಕೊಂದು ಕಂತಿನಂತೆ ಹಿಂತಿರುಗಿಸಲಾಗುತ್ತದೆ.

೪. ಜನರಿಗೆ ಆರೋಗ್ಯ ಸೌಲಭ್ಯವನ್ನು ಒದಗಿಸುವ ಉದ್ದೇಶದಿಂದ ಸಂಪೂರ್ಣ ಸುರಕ್ಷಾ ವಿಮಾ ಯೋಜನೆಯನ್ನು ಜಾರಿಗೆ ತರಲಾಗಿದೆ.

೫. ಸಣ್ಣ ಕೃಷಿಕರನ್ನು ರಕ್ಷಿಸುವ ಉದ್ದೇಶದಿಂದ ಹಲವಾರು ಯೋಜನೆಗಳನ್ನು ಜಾರಿಗೊಳಿಸಲಾಗಿದೆ. ಸಾವಯವ ಕೃಷಿ ಚಟುವಟಿಕೆಗೆ ಪ್ರೋತ್ಸಾಹ ಉತ್ತಮ ತಳಿಯ ಬೀಜಗಳ ಪೂರೈಕೆ, ಮಳೆ ಕ್ಯೊಲು, ಬಂಜರು ಭೂಮಿ ಅಭಿವೃದ್ಧಿ ಯೋಜನೆ, ಕೃಷಿ ಮೇಳ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ.

೬. ಪರಿಸರ ಸಂರಕ್ಷಣೆಯ ಅಂಗವಾಗಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಜನ ಸಂರಕ್ಷಣಾ ಕಾರ್ಯಕ್ರಮಗಳು, ವನಮಹೋತ್ಸವ, ವನವಿಕಾಸ ಯೋಜನೆಗಳನ್ನು ಹಮ್ಮಿಕೊಳ್ಳಲಾಗುತ್ತದೆ.

೭. ಸ್ವ ಉದ್ಯೋಗವನ್ನು ಪ್ರೇರೇಪಿಸುವ ನಿಟ್ಟಿನಲ್ಲಿ ಅಗರ ಬತ್ತಿ, ಸೋಫ್, ಪಿನೈಲ್ ಮತ್ತು ಆಹಾರ ಪದಾರ್ಥಗಳ ತಯಾರಿಕೆಗೆ ಪ್ರೋತ್ಸಾಹ ನೀಡಲಾಗಿದೆ.

೮. ಅಮಲು ಸೇವನೆಯ ವಿರುದ್ಧ ಜನಜಾಗೃತಿ ಅಂದೋಲನಗಳು ಈ ಯೋಜನೆಯ ವಿಶಿಷ್ಟ ಕಾರ್ಯಕ್ರಮಗಳಾಗಿವೆ. ಮಧ್ಯಪಾನ ವಿರೋಧಿ ಶಿಬಿರಗಳನ್ನು ನಡೆಸಿ ಲಕ್ಷಗಟ್ಟಲೆ ಗ್ರಾಮೀಣ ಜನರಿಗೆ ಪುನರ್ಜನ್ಮ ನೀಡಿದ ಕಾರ್ಯ ಶ್ಲಾಘನೀಯ.

೯. ತನ್ನ ಕಾರ್ಯಕರ್ತರನ್ನು ಮತ್ತು ಸೇವಾನಿರತವನ್ನು ತರಬೇತುಗೊಳಿಸುವ ಉದ್ದೇಶದಿಂದ ತರಬೇತಿ ಶೀಬಿರಗಳನ್ನು ಹಮ್ಮಿಕೊಳ್ಳಲಾಗಿದೆ.

೧೦. ಕುಟುಂಬ ಕಲ್ಯಾಣಕ್ಕಾಗಿ ಜ್ಞಾನ ದೀಪ, ಶುದ್ಧ ಕುಡಿಯುವ ನೀರಿನ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ.

೧೧. ಶ್ರೀ ಕ್ಷೇತ್ರ ಗ್ರಾಮಾಭಿವೃದ್ದಿ ಯೋಜನೆಯನ್ನು ರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಲಾಗಿದ್ದು ಹಲವಾರು ಗೌರವಗಳಿಗೆ ಪಾತ್ರವಾಗಿದೆ.

ಒಟ್ಟಿನ್ನಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ದೇಶದ ಎಲ್ಲ ಸರಕಾರೇತರ ಸಂಸ್ಥೆಗಳನ್ನು ಮೀರಿದ ಸಾಧನೆಯನ್ನು ಮಾಡುತ್ತಿದ್ದು ಸಾಮಾಜಿಕ ಬದಲಾವಣೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ.

೨. ಕಪುಜಿನ್ ಕೃಷಿಕ ಸೇವಾ ಕೇಂದ್ರ (ರಿ) ದಯಾಳ್ ಬಾಗ್, ಉಜಿರೆ.

ಕಪುಜಿನ್ ಕೃಷಿಕ ಸೇವಾ ಕೇಂದ್ರ ಉಜಿರೆ, ಒಂದು ಸರಕಾರೇತರ ನೊಂದಾಯಿತ ಸಂಸ್ಥೆಯಾಗಿದ್ದು, 1976ರಲ್ಲಿ ಸ್ಥಾಪಿಸಲ್ಪಟ್ಟಿತು. ಸಮಾಜ ಸೇವೆಯನ್ನು ತನ್ನ ಪ್ರಮುಖ ಗುರಿಯನ್ನಾಗಿಟ್ಟುಕೊಂಡಿದ್ದು, ಬೆಳ್ತಂಗಡಿ ತಾಲೂಕಿನ ಕಡು ಬಡವರ ದೀನ ದಲಿತರ ಮತ್ತು ಮಹಿಳೆಯರ ಅಭಿವೃದ್ಧಿಗಾಗಿ ಅವಿರತ ಶ್ರಮಿಸುತ್ತಿದೆ. ಕೃಷಿಕರಿಗೆ ಅತ್ಯಾಧುನಿಕ ಕೃಷಿಯ ಬಗ್ಗೆ ಈ ಸಂಸ್ಥೆಯ ವತಿಯಿಂದ ತರಬೇತಿಯನ್ನು ನೀಡಲಾಗುತ್ತದೆ. ಗ್ರಾಮೀಣ ಪ್ರದೇಶದ ಬಡ ವಿದ್ಯಾರ್ಥಿಗಳಿಗೆ ಎರಡು ವರ್ಷದ ಮುಕ್ತ ಪದವಿ ಪೂರ್ವ ವಿದ್ಯಾಭ್ಯಾಸವನ್ನು ನೀಡಲಾಗುತ್ತದೆ. ಸ್ಪರ್ಧಾತ್ಮಕ ಜಗತ್ತಿನ

ಸವಾಲುಗಳನ್ನು ಎದುರಿಸಲು ಇಂಗ್ಲಿಷ್, ಕಂಪ್ಯೂಟರ್ ಜ್ಞಾನ, ಮತ್ತು ಇತರ ವಿಷಯಗಳಲ್ಲಿ ತರಬೇತಿಯನ್ನು ನೀಡಲಾಗುತ್ತಿದೆ. ಮಕ್ಕಳ ಪ್ರಾಥಮಿಕ ಶಿಕ್ಷಣದ ಬಗ್ಗೆ ಒಕ್ಕೂಟವು ವಿಶೇಷ ಆಸಕ್ತಿಯನ್ನು ವಹಿಸುತ್ತಿದ್ದು, ಸಿ.ಸಿ.ಎಫ್ ಎಂಬ ಸರಕಾರೇತರ ಸಂಸ್ಥೆಯನ್ನು ಸ್ಥಾಪಿಸಿದೆ. ಈ ಒಕ್ಕೂಟದ ಮೂಲಕ ಮಕ್ಕಳಲ್ಲಿ ಶೈಕ್ಷಣಿಕ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ವ್ಯಕ್ತಿತ್ವ ವಿಕಸನದ ಬಗ್ಗೆ ಕಾಳಜಿಯನ್ನು ಮೂಡಿಸಲಾಗುತ್ತಿದೆ. ಶಾಲೆಯನ್ನು ತ್ಯಜಿಸಿದಂತಹ ಮಕ್ಕಳಿಗೆ ಸ್ವ ಉದ್ಯೋಗ ತರಬೇತಿಯನ್ನು ನೀಡಲಾಗುತ್ತದೆ. ಮಕ್ಕಳ ಹಕ್ಕುಗಳ ಸಪ್ತಾಹ, ಶಿಕ್ಷಣಕ್ಕಾಗಿ ಜಾಗತಿಕ ಆಂದೋಲನ, ಮಕ್ಕಳ ಕೂಟಗಳು, ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳಿಗಾಗಿ ಸಹಾಯಧನ, ಬಡಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹ ಮತ್ತು ಉನ್ನತ ಶಿಕ್ಷಣಕ್ಕೆ ಪ್ರೋತ್ಸಾಹವನ್ನು ನೀಡಲಾಗುತ್ತದೆ. ಮೇಲಿನ ಎಲ್ಲಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಶಿಕ್ಷಕರಿಗೆ, ಸಿಬ್ಬಂದಿಗಳಿಗೆ ಮತ್ತು ಕಾರ್ಯಕರ್ತರಿಗೆ ನಿರಂತರ ತರಬೇತಿ ನೀಡಲಾಗುತ್ತದೆ. ಶಿಕ್ಷಣದ ಸಮಗ್ರ ಗಣಮಟ್ಟವನ್ನು ಸುಧಾರಿಸುವ ಪ್ರಯತ್ನವಾಗಿ ಮಾದರಿ ಶಾಲಾ ಯೋಜನೆಗಳನ್ನು ಜಾರಿಗೆ ತರಲಾಗಿದೆ.

ಮಹಿಳೆಯರ ಅಭಿವೃದ್ಧಿಯ ಮೂಲಕ ಗ್ರಾಮಾಭಿವೃದ್ಧಿಯನ್ನು ಸಾಧಿಸಲು ಮಹಿಳಾ ಸ್ವ ಸಹಾಯ ಸಂಘಗಳ ಒಕ್ಕೂಟವನ್ನು ರಚಿಸಲಾಗಿದೆ. ಸಂಘಟಿತ ಚಿಂತನೆ, ಸಾಮಾಜಿಕ ಅಭಿವೃದ್ಧಿಯೊಂದಿಗೆ ಸಬಲತೆ ಇದರ ಪ್ರಮುಖ ಗುರಿಯಾಗಿದೆ. ಮಹಿಳೆಯರಲ್ಲಿ ಗೌರವ ಮತ್ತು ಸ್ವಾಭಿಮಾನವನ್ನು ಬೆಳೆಸುವ ನಿಟ್ಟಿನಲ್ಲಿ ಈ ಸಂಸ್ಥೆಯು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತದೆ. ಸುಮಾರು 250 ಕ್ಕಿಂತ ಮೇಲ್ಪಟ್ಟು ಸ್ವ ಸಹಾಯ ಸಂಘಗಳನ್ನು ರಚಿಸಲಾಗಿದೆ. ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಹಲವಾರು ಸಮಿತಿಗಳನ್ನು ರಚಿಸಲಾಗಿದೆ. ಇವುಗಳಲ್ಲಿ ಶಿಕ್ಷಣ ಸಮಿತಿ, ಮೇಲ್ವಿಚಾರಣಾ ಸಮಿತಿ ಮತ್ತು ಸಾಲ ಸಮಿತಿಗಳು ಪ್ರಮುಖವಾದ ಸಮಿತಿಗಳಾಗಿವೆ. ಮಹಿಳೆಯರಲ್ಲಿ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಜಾಗೃತಿಯನ್ನು ಮೂಡಿಸುವ ಮೂಲಕ ಸಾಮಾಜಿಕ ಬದಲಾವಣೆಯಲ್ಲಿ ವಿಮುಕ್ತಿ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತದೆ.

ಒಟ್ಟಿನಲ್ಲಿ ಕಾಪುಜಿನ್ ಕೃಷಿಕ ಸೇವಾ ಕೇಂದ್ರವು ಬೆಳ್ತಂಗಡಿ ತಾಲೂಕಿನ ದೀನದಲಿತರ, ದುರ್ಬಲರ, ಮಹಿಳೆಯರ ಮತ್ತು ಮಕ್ಕಳ ಅಭ್ಯುದಯಕ್ಕಾಗಿ ಅವಿರತ ಶ್ರಮಿಸುತ್ತಿದೆ.

೩. ಸಿಯೋನ್ ಆಶ್ರಮ್, ಗಂಡಿಬಾಗಿಲು – ಬೆಳ್ತಂಗಡಿ:

ಬೆಳ್ತಂಗಡಿ ತಾಲೂಕಿನ ಗಂಡಿಬಾಗಿಲು ಎಂಬಲ್ಲಿ ಇತ್ತೀಚಿನ ವರ್ಷಗಳಲ್ಲಿ ಸ್ಥಾಪಿಸಿದ 'ಸಿಯೋನ್ ಆಶ್ರಮ್' ಇಡೀ ದೇಶಕ್ಕೆ ಮಾದರಿಯಾಗಿದೆ. ಮಾನಸಿಕ ರೋಗಗಳಿಂದ ಬಳಲುತ್ತಿರುವ ಆಸಾಹಯಕರಿಗೆ ಇರುವಂತಹ ಒಂದು ಆಶ್ರಯತಾಣ. ಬೀದಿಗಳಲ್ಲಿ, ಬಸ್‌ಸ್ಟ್ಯಾಂಡ್‌ಗಳಲ್ಲಿ ಮತ್ತಿತರ ಸಾರ್ವಜನಿಕ ಸ್ಥಳಗಳಲ್ಲಿ ಅಸಾಹಯಕರಾಗಿ ನರಳುತ್ತಿರುವ ಜನರನ್ನು ಶೋಧಿಸಿ ಈ ಆಶ್ರಮದಲ್ಲಿ ಶುಶ್ರೂಷೆ ಮತ್ತು ಆಶ್ರಯ ನೀಡಲಾಗುತ್ತದೆ. ಈ ಆಶ್ರಮವನ್ನು ಅತ್ಯಂತ ಸ್ವಚ್ಛವಾಗಿ ಮತ್ತು ಕಾಳಜಿಯಿಂದ ನಿರ್ವಹಿಸಲಾಗುತ್ತಿದೆ. ಈ ಆಶ್ರಮವು ಹೊರದೇಶಗಳಲ್ಲಿ ಕೂಡಾ ಪ್ರಚಾರದಲ್ಲಿದೆ. ಇದನ್ನು ನಡೆಸುತ್ತಿರುವ ಮಲೆಯಾಳಿ ಕ್ರಿಶ್ಚನ್ ಸಮುದಾಯಕ್ಕೆ ಸೇರಿದ ಪೌಲೋಸ್ ಅವರ ಸೇವೆ ನಿಜವಾಗಿ ಮೆಚ್ಚತಕ್ಕದ್ದು.

೪. ಜಮೀಯ್ಯತುಲ್ ಫಲಾಹ್:

ಅನಿವಾಸಿ ಭಾರತೀಯ ಸಹೋದರರ ದೂರದೃಷ್ಟಿತ್ವದ ಫಲವಾಗಿ 1988ರಲ್ಲಿ ಜಮೀಯ್ಯತುಲ್ ಫಲಾಹ್ ಸ್ಥಾಪಿಸಲ್ಪಟ್ಟಿತು. ಇದೊಂದು ನೊಂದಾಯಿತ ಸಂಸ್ಥೆಯಾಗಿದ್ದು, ಶಿಕ್ಷಣದ ಸಾರ್ವತ್ರಿಕರಣದ ಮತ್ತು ಉನ್ನತ ಶಿಕ್ಷಣಕ್ಕೆ ಪ್ರೋತ್ಸಾಹ ಇದರ ಪ್ರಮುಖ ಗುರಿಯಾಗಿದೆ. ಈ ಒಂದು ಸಂಸ್ಥೆಯು ಮುಸ್ಲಿಂ ಸಮುದಾಯದ ಅಭಿವೃದ್ಧಿಗಾಗಿ ಶ್ರಮಿಸುತ್ತಿದೆ. ಪ್ರಾಥಮಿಕ ಶಿಕ್ಷಣದಿಂದಲೇ ವಂಚಿಸಲ್ಪಡುವ ಪರಿಸ್ಥಿತಿಯಿಂದ ಮಕ್ಕಳನ್ನು ರಕ್ಷಿಸಿ ಕಾಲೇಜು ಶಿಕ್ಷಣವನ್ನು ಪಡೆಯುವಂತಹ ಭಾಗ್ಯವನ್ನು ಕಲ್ಪಿಸಿಕೊಟ್ಟಿದೆ. ಶಾಲೆಗಳಿಲ್ಲದ ಜನನಿಬಿಡ ಪ್ರದೇಶಗಳಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳನ್ನು ತೆರೆದು ಅವುಗಳನ್ನು ನಿರ್ವಹಿಸುತ್ತದೆ. ಅಬಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ತಾಲೂಕಿಗಳಲ್ಲಿ ಪ್ರತ್ಯೇಕ ಘಟಕಗಳನ್ನು ಈ ಸಂಸ್ಥೆ ಹೊಂದಿದ್ದು ತಾಲೂಕು ಮಟ್ಟದಲ್ಲಿ ರಚನಾತ್ಮಕ ಕಾರ್ಯಕ್ರಮಗಳನ್ನು ನಿರೂಪಿಸಿ ತಳಮಟ್ಟದ ಜನರ ಅಭ್ಯುದಯಕ್ಕಾಗಿ ಶ್ರಮಿಸುತ್ತದೆ. ಮುಸ್ಲಿಂ ಸಮುದಾಯದ ಮಹಿಳಾ ಶಿಕ್ಷಣಕ್ಕೆ ಹೆಚ್ಚು ಪ್ರೋತ್ಸಾವನ್ನು ನೀಡುತ್ತವೆ. ತಮ್ಮ ಕಾರ್ಯಕ್ರಮಗಳನ್ನು ರೂಪಿಸಲು ಜಮೀಯ್ಯತುಲ್ ಫಲಾಹ್ ತಿಂಗಳಿಗೊಂದು ಸಭೆಯನ್ನು ನಡೆಸುತ್ತಿದೆ. ಬೆಳ್ತಂಗಡಿ ತಾಲೂಕು ಮಟ್ಟದ ಈ ಸಂಸ್ಥೆಯ ಘಟಕ ಹಲವಾರು ರಚನಾತ್ಮಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತದೆ. ಜಕತ್ ಫಂಡ್‌ನಿಂದ ವಿದ್ಯಾರ್ಥಿ ವೇತನ, ಬಡರೋಗಿಗಳಿಗೆ ಚಿಕಿತ್ಸೆಗಾಗಿ ಸಹಾಯ, ಆರೋಗ್ಯ ತಪಾಸಣಾ ಶಿಬಿರಗಳು, ಶೈಕ್ಷಣಿಕ ಮಾಹಿತಿ ಶಿಬಿರಗಳು, ಉಚಿತ ಪುಸ್ತಕ ವಿತರಣೆ, ಪ್ರತಿಭಾ ಪುರಸ್ಕಾರ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತದೆ. ಪ್ರತೀ ತಾಲೂಕಿನಲ್ಲಿ ಡ್ರಾಪೌಟ್ ಶಾಲೆಗಳನ್ನು ನಡೆಸುತ್ತಿದ್ದೂ ಶಾಲೆಬಿಟ್ಟ ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡುವುದು ಇದರ ಪ್ರಮುಖ ಗುರಿಯಾಗಿದೆ. ಬೆಳ್ತಂಗಡಿ ತಾಲೂಕಿನಲ್ಲಿ ನಡೆಯುತ್ತಿರುವ ಡ್ರಾಪೌಟ್ ಶಾಲೆಯ ವಿದ್ಯಾರ್ಥಿಗಳು 2008 ಮಾರ್ಚ್‌ನಲ್ಲಿ ನಡೆದಂತಹ ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಹಾಜರಾಗಿದ್ದಾರೆ. ಸರ್ವ ಶಿಕ್ಷಣ ಅಭಿಯಾನ, ಮುಸ್ಲಿಂ ಅಧ್ಯಾಪಕರಿಗೆ ತರಬೇತಿ ಕಾರ್ಯಕ್ರಮಗಳು, ವಿದ್ಯಾರ್ಥಿ ವೇತನ ಕಾರ್ಯಕ್ರಮ, ಕೋಮು ಗಲಭೆ ಸಂತ್ರಸ್ತರಿಗೆ ಪರಿಹಾರ ಕಾರ್ಯಕ್ರಮ ಮುಂತಾದ ಕಾರ್ಯಕ್ರಮಗಳು ಸಂಸ್ಥೆಯ ವತಿಯಿಂದ ನಡೆಯುತ್ತಿದೆ. ಬೀಡಿ ಕಾರ್ಮಿಕರಿಗೆ ವಸತಿ ಸೌಲಭ್ಯಕ್ಕಾಗಿ ಅನುದಾನ ಮತ್ತು ಹೊಲಿಗೆ ತರಬೇತಿ ಕೇಂದ್ರದ ಸ್ಥಾಪನೆ 2007–08 ನೇ ಸಾಲಿನಲ್ಲಿ ಬೆಳ್ತಂಗಡಿ ಘಟಕದ ವತಿಯಿಂದ ಹಮ್ಮಿಕೊಂಡ ವಿಶೇಷ ಕಾರ್ಯಕ್ರಮಗಳು.

ಒಟ್ಟಿನಲ್ಲಿ ಜಮೀಯ್ಯತುಲ್ ಫಲಾಹ್ ತಳಸ್ಥರದ ಜನರ ಶಿಕ್ಷಣ ಮತ್ತು ಸಾಮಾಜಿಕ ಬದಲಾವಣೆಯಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತದೆ. ಸಂಘಟನೆಯ ವತಿಯಿಂದ ನಡೆಯುವ ಕಾರ್ಯಕ್ರಮಗಳು ತಳಸ್ಥರದ ಜನರ ಬೇಡಿಕೆಗಳಿಗೆ ಸ್ಪಂದಿಸುತ್ತಿವೆ ಎಂಬುದರಲ್ಲಿ ಸಂಶವಿಲ್ಲ. ಅನಿವಾಸಿ ಘಟಕಗಳ ಆರ್ಥಿಕ ಸಹಾಯವೊಂದೆ ಬೆಳ್ತಂಗಡಿ ಮಟ್ಟದ ಜಮೀಯ್ಯತುಲ್ ಫಲಾಹ್ ಸಂಸ್ಥೆಗೆ ಇರುವಂತಹ ಆಧಾಯದ ಮೂಲ. ಸಮುದಾಯ ಅಭಿವೃದ್ಧಿಗೆ ಪಣತೊಟ್ಟು ಎಲ್ಲಾ ಜಿಲ್ಲಾ ಮತ್ತು ತಾಲೂಕು ಘಟಕಗಳು ಪರಸ್ಪರ ಕೊಂಡಿಯಂತೆ ಬೆಸೆದು ಕಾರ್ಯನಿರ್ವಹಿಸುತ್ತವೆ. ಈ ಮೂಲಕ ಜಮೀಯ್ಯುತುಲ್ ಫಲಾಹ್ ಇಂದು ಒಂದು ವ್ಯವಸ್ಥಿತ ಶಿಸ್ತುಬದ್ಧ ಸಂಸ್ಥೆಯಾಗಿ ಹೊರ ಹೊಮ್ಮಿದೆ.

೫. ಕ್ರೈಸ್ತ ಸಮನ್ವಯ ಸಮಿತಿ (ರಿ) ಮಡಂತ್ಯಾರು

ಸಮಾಜದಲ್ಲಿರುವ ಅಸಾಹಯಕರ, ದುರ್ಬಲರ ಮತ್ತು ದೀನದಲಿತರ ಏಳಿಗೆಯ ಉದ್ದೇಶದೊಂದಿಗೆ 2004 ರಲ್ಲಿ ಕ್ರೈಸ್ತ ಸಮನ್ವಯ ಸಮಿತಿ (ರಿ) ಮಡಂತ್ಯಾರು ಅಸ್ತಿತ್ವಕ್ಕೆ ಬಂದಿದೆ. ಶಿಕ್ಷಣ, ಸಮಾಜ ಕಲ್ಯಾಣ ಮತ್ತು ಆರ್ಥಿಕ ಸಹಾಯ ಈ ಸಮಿತಿಯ ಪ್ರಮುಖ ಧ್ಯೇಯಗಳಾಗಿವೆ. ತನ್ನ ಧ್ಯೇಯ ಮತ್ತು ಉದ್ದೇಶಗಳನ್ನು ಕಾರ್ಯಗತಗೊಳಿಸುವ ನಿಟ್ಟಿನಲ್ಲಿ ಈ ಸಮಿತಿಯು ಹಲವಾರು ರಚನಾತ್ಮಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತದೆ. ಅಸಹಾಯಕರಿಗೆ ಮತ್ತು ದುರ್ಬಲರಿಗೆ ಆರ್ಥಿಕ ಸಹಾಯವನ್ನು ನೀಡುವುದರ ಹೊರತಾಗಿ ಹಲವಾರು ಸೇವಾಕಾರ್ಯಕ್ರಮಗಳಲ್ಲಿ ತೊಡಗಿಸಿಕೊಳ್ಳುತ್ತದೆ. ರಸ್ತೆ ರಿಪೇರಿ, ಬಸ್‌ಸ್ಟ್ಯಾಂಡ್ ನಿರ್ಮಾಣ, ಬಡವರ ಮನೆ ರಿಪೇರಿ, ವೈದ್ಯಕೀಯ ಚಿಕಿತ್ಸೆಗೆ ನೆರವು, ವಿದ್ಯಾರ್ಥಿ ವೇತನ, ಮುಂತಾದ ಕಾರ್ಯಕ್ರಮಗಳನ್ನು ಜಾತಿ ಬೇಧವಿಲ್ಲದೆ ಮಾಡುತ್ತದೆ. 24 ಗಂಟೆಗಳ ಅಂಬ್ಯುಲೆನ್ಸ್ ಸೇವೆ, ಸಮನ್ವಯ ಹೊಲಿಗೆ ತರಬೇತಿ ಕೇಂದ್ರ, ಶಾಂತಿಧಾಮ ಆಶ್ರಮ, ಸಮನ್ವಯ ಮಾರೇಜ್ ಬ್ಯುರೊ, ಸಮನ್ವಯ ಬ್ಯಾಂಕ್ ಮುಂತಾದ ಸಹ ಸೇವಾ ಸಂಸ್ಥೆಗಳನ್ನು ನಡೆಸುತ್ತದೆ. ಈ ಎಲ್ಲಾ ಚಟುವಟಿಕೆಗಳಿಗೆ ಪೂರಕವಾಗಿ 'ಸಮನ್ವಯ' ಎಂಬ ತ್ರೈಮಾಸಿಕ ಪತ್ರಿಕೆಯನ್ನು ಪ್ರಕಟ ಮಾಡುತ್ತದೆ. ಸಮಾಜದಲ್ಲಿರವ ಸೇವಾ ಮನೋಭಾವದ ಸಮಾನ ಮನಸ್ಕ ನಾಯಕರ ಅವಿರತ ಪ್ರಯತ್ನದೊಂದಿಗೆ ಈ ಸಂಸ್ಥೆ ಪ್ರಗತಿಯ ಪಥದಲ್ಲಿ ಸಾಗುತ್ತಿದೆ.

೬. ನಾಗರಿಕ ಸೇವಾ ಟ್ರಸ್ಟ್, ಗುರುವಾಯನಕೆರೆ

ಬಡವರ ಮತ್ತು ದೀನ ದಲಿತರ ಧ್ವನಿಯಾಗಿ ಬೆಳ್ತಂಗಡಿ ತಾಲೂಕಿನ ಗುರುವಾಯನಕೆರೆ ಎಂಬಲ್ಲಿ 1976 ರಲ್ಲಿ ನಾಗಾರಿಕ ಸೇವಾ ಟ್ರಸ್ಟನ್ನು ಸ್ಥಾಪಿಸಲಾಯಿತು. ತನ್ನ ಪ್ರಾರಂಭಿಕ ಹತ್ತು ವರ್ಷಗಳನ್ನು ತನ್ನ ಉದ್ದೇಶಗಳನ್ನು ಜಾರಿಗೊಳಿಸುವಲ್ಲಿ ಅಭೂತ ಪೂರ್ಣ ಯಶಸ್ಸನ್ನು ಗಳಿಸಿದ ನಾಗರಿಕ ಸೇವಾ ಟ್ರಸ್ಟ್ 1987 ಜುಲಾಯಿ 1 ರಂದು ಸುಭ್ರಾಯ ಶೆಣೈ, ಉಜಿರೆ ಇವರು ದೇಣಿಗೆಯಾಗಿ ನೀಡಿದ ರೂ. 100 ಸಹಾಯ ಧನದೊಂದಿಗೆ ಸರಕಾರದೊಂದಿಗೆ ನೊಂದಾಯಿಸಲ್ಪಟ್ಟಿತು. ರಂಜನ್ ರಾವ್, ಯರ್ಡೂರ್, ಮತ್ತು ಸೋಮನಾಥ್ ನಾಯಕ್ ಯರ್ಡೂರ್ ಇವರುಗಳು ಸ್ಥಾಪಕ ಟ್ರಸ್ಟಿಗಳಾದರು. ತಾವು ಸ್ವೀಕರಿಸಿದ ದೇಣಿಗೆಯನ್ನು ಟ್ರಸ್ಟ್‌ನ ನಿಯಮಾವಳಿಗನುಸಾರವಾಗಿ ಜನಹಿತ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳವುದಕ್ಕಾಗಿ ಸರಕಾರದೊಂದಿಗೆ ಒಪ್ಪಂದವನ್ನು ಮಾಡಿಕೊಂಡರು. ಹೀಗೆ ಸ್ಥಾಪಿಸಲ್ಪಟ್ಟ ಟ್ರಸ್ಟ್ ಇಂದು ನಾಗರಿಕ ಸೇವಾ ಟ್ರಸ್ಟ್ ಗುರುವಾಯನಕೆರೆ ಎಂಬ ಹೆಸರಿನೊಂದಿಗೆ ಇಡೀ ರಾಜ್ಯಕ್ಕೆ ಪರಿಚಯಿಸಲಲ್ಪಟ್ಟಿದೆ. ಸುಮಾರು 32 ವರ್ಷಗಳ ಸುಧಿರ್ಘ ಯಾತ್ರೆಯಲ್ಲಿ ಸಾಮಾಜಿಕ ಸಂಘಟನೆ, ಗ್ರಾಮಾಭಿವೃದ್ಧಿ, ಪರಿಸರ ಸಂರಕ್ಷಣೆ, ಆರೋಗ್ಯ, ಶಿಕ್ಷಣ ಕ್ಷೇತ್ರಗಳಲ್ಲಿ ಮಹಿಳೆಯರ ಮತ್ತು ಹಿಂದುಳಿದ ವರ್ಗಗಳ ಅಭಿವೃದ್ಧಿ ಮತ್ತು ಶಶಕ್ತಿಕರಣದಲ್ಲಿ ಪ್ರಮುಖ ಪಾತ್ರವನ್ನು ವಹಿಸಿದೆ.

ನಾಗರಿಕ ಸೇವಾ ಟ್ರಸ್ಟ್ ಸ್ಥಾಪನೆಯಾದ ದಿನದಿಂದ ಜಾತಿ, ಧರ್ಮ, ವರ್ಗ, ಭಾಷೆ, ಜನಾಂಗ, ಲಿಂಗ ಮತ್ತು ವಯಸ್ಸಿನ ಯಾವುದೇ ಬೇಧವಿಲ್ಲದೆ ಹಾಗೂ ಪರಿಸರಸ್ನೇಹಿಯಾದ ಸಮಾಜದ ಪರಿಕಲ್ಪನೆಯನ್ನು ಬೆಳೆಸಿಕೊಂಡಿದೆ. ಈ ಸೇವಾ ಹಂಬಲಗಳನ್ನು ಸಮಗ್ರಗೊಳಿಸುವ ಹಂತದಲ್ಲಿ ಮಹಿಳೆಯರ, ದಲಿತರ ಮತ್ತು ಆದಿವಾಸಿಗಳ ಅವಶ್ಯಕತೆಗಳನ್ನು

ಈಡೇರಿಸುವುದಕ್ಕೆ ಹೆಚ್ಚು ಒತ್ತನ್ನು ನೀಡುವುದು ಅವಶ್ಯವೆಂದು ಮನಗಂಡಿದೆ. ದಲಿತರ ಮತ್ತು ಆದಿವಾಸಿಗಳ ಬೆಳವಣಿಗೆಗೆ ಪ್ರತ್ಯೇಕ ಸಮಿತಿಗಳು ಅವಶ್ಯಕವಾಗಿವೆ ಎಂಬುದನ್ನು ಟ್ರಸ್ಟ್ ಮನಗಂಡಿದೆ.

೩.೪ ಧ್ಯೇಯೋದ್ದೇಶಗಳು ಮತ್ತು ನಿಯಮಾವಳಿಗಳು (ಒಪ್ಪಂದ ಕರಾರಿನಂತೆ)

ಜುಲಾಯಿ 1, 1987ರಂದು ಸರಕಾರದೊಂದಿಗೆ ನೊಂದಾವಣೆ ಮಾಡುವ ಹಂತದಲ್ಲಿ ನಾಗರಿಕ ಸೇವಾ ಟ್ರಸ್ಟ್ ಈ ಕೆಳಗಿನ ಧ್ಯೇಯೋದ್ದೇಶಗಳನ್ನು ನಿಗದಿಪಡಿಸಿದೆ.

೧. ಗ್ರಾಮೋದ್ಧಾರಕ ಕಾರ್ಯಕ್ರಮಗಳ ಮೂಲಕ ಉದ್ಯೋಗಾವಕಾಶಗಳ ಸೃಷ್ಟಿಯೊಂದಿಗೆ ದುರ್ಬಲ ವರ್ಗದವರ ಆರ್ಥಿಕ ಮತ್ತು ಸಾಮಾಜಿಕ ಸಬಲೀಕರಣ.

೨. ಪರಿಸರ ಸಂರಕ್ಷಣೆ ಮತ್ತು ಸುಧಾರಣೆಗಾಗಿ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಕ್ಕೆ ತರುವುದು.

೩. ಶಿಕ್ಷಣ ಸಂಸ್ಥೆಗಳ ಸ್ಥಾಪನೆ ಮತ್ತು ನಿರ್ವಹಣೆ, ವಸ್ತು ಸಂಗ್ರಹಲಯಾಗಳ ಸ್ಥಾಪನೆ, ಗ್ರಂಥಾಲಯ ಮತ್ತು ಪ್ರವಚನ ಕೊಠಡಿ ಸ್ಥಾಪನೆ ಮತ್ತು ನಿರ್ವಹಣೆ

೪. ಅಗತ್ಯವಿರುವ ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಮತ್ತು ಇತರ ರೀತಿಯ ಆರ್ಥಿಕ ನೆರವು

೫. ಶಿಶು ಪಾಲನಾ ಕೇಂದ್ರಗಳು, ಆಸ್ಪತ್ರೆಗಳು, ಪ್ರಯೋಗಾಲಯಗಳ ಸ್ಥಾಪನೆ ಮತ್ತು ನಿರ್ವಹಣೆಯೊಂದಿಗೆ ಅಗತ್ಯವಿರುವ ವೈದ್ಯಕೀಯ ನೆರವು

೬. ವಿಧವೆಯರಿಗೆ, ನಿರ್ಗತಿಕರಿಗೆ, ಮತ್ತು ದೈಹಿಕವಾಗಿ ಮತ್ತು ಮಾನಸಿಕವಾಗಿ ದುರ್ಬಲರಿಗೆ, ಆಶ್ರಮಗಳ ಸ್ಥಾಪನೆ.

೭. ಪ್ರಾಕೃತಿಕ ವಿಕೋಪಗಳಾದ ನೆರೆ, ಬರ, ಅಗ್ನಿ, ಭೂಕಂಪ ಮುಂತಾದವುಗಳು ಸಂಭವಿಸಿದ ಸಂದರ್ಭದಲ್ಲಿ ಆರ್ಥಿಕ ನೆರವು.

೮. ಸಾರ್ವಜನಿಕ ಉಪಯೋಗಕ್ಕಾಗಿ ರಸ್ತೆಗಳ ನಿರ್ಮಾಣ ಮತ್ತು ನಿರ್ವಹಣೆ, ಕೆರೆ, ಬಾವಿ, ಮತ್ತು ಇತರ ರೀತಿಯ ನೀರಾವರಿ ಸೌಲಭ್ಯಗಳ ಸ್ಥಾಪನೆ

೯. ಕಟ್ಟಡಗಳ ಸ್ಥಾಪನೆ ಮತ್ತು ನಿರ್ವಹಣೆ ಮತ್ತು ಜನಸಾಮನ್ಯರ ಉಪಯೋಗಕ್ಕೆ ಅವಕಾಶ.

೧೦. ಸಭೆಗಳನ್ನು ಕಮ್ಮಟಗಳನ್ನು ವಿಶೇಷ ಉಪನ್ಯಾಸ, ಚರ್ಚೆ, ತರಬೇತಿ ಕಾರ್ಯಕಾರಗಳನ್ನು ಹಮ್ಮಿಕೊಳ್ಳುವ ಮೂಲಕ ಜನ ಸಾಮಾನ್ಯರಿಗೆ ಸಹಕಾರ.

೧೧. ಪುಸ್ತಕ ಮತ್ತು ಇತರ ಸಾಹಿತ್ಯ ಕೃತಿಗಳ ಬಿಡುಗಡೆಯ ಮೂಲಕ ಜ್ಞಾನಾರ್ಜನೆಗೆ ಅವಕಾಶ ಮತ್ತು ಸಾಹಿತ್ಯ ಸಂಘಟನೆಗಳಿಗೆ ಸಹಕಾರ.

೧೨. ಸಂಸ್ಥೆಯ ಸ್ಥಿರ ಆಸ್ತಿಯನ್ನು ಲಾಭರಹಿತವಾಗಿ ಸಮಾನ ಮನಸ್ಕ ಸಂಸ್ಥೆಗಳಿಗೆ ಉಪಯೋಗಕ್ಕೆ ಅವಕಾಶ.

೧೩. ಕೃಷಿ ಚಟುವಟಕೆಯನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ನರ್ಸರಿಗಳ ಸ್ಥಾಪನೆ ಮತ್ತು ನಿರ್ವಹಣೆಯೊಂದಿಗೆ ಗಿಡಗಳನ್ನು ಮತ್ತು ಬೀಜ ವಿತರಣಾ ಕೇಂದ್ರಗಳ ಸ್ಥಾಪನೆ

೧೪. ನಿರಶ್ರಿತರಿಗೆ, ವಿಧವೆಯರಿಗೆ ಮತ್ತು ದೈಹಿಕವಾಗಿ ದುರ್ಬಲರಿಗೆ ಪುನರ್ವಸತಿಗೆ ಸಹಾಯ

೧೫. ಸಾರ್ವಜನಿಕರಿಂದ ದೇಣಿಗೆಯನ್ನು ಸ್ವೀಕರಿಸಿ ಟ್ರಸ್ಟಿನ ಸೇವಾ ಚುಟುವಟಿಕೆಗಳಿಗಾಗಿ ಬಳಕೆ

೧೬. ಬ್ಯಾಂಕ್ ಮತ್ತು ಇತರ ಆರ್ಥಿಕ ಸಂಸ್ಥೆಗಳಿಂದ ಸಾಲವನ್ನು ಪಡೆದು ಅದರ ಸೂಕ್ತ ಮರುಪಾವತಿಯೊಂದಿಗೆ ಸಂಬಂಧಪಟ್ಟ ದಾಖಲೆಗಳ ಸಂರಕ್ಷಣೆ ಮತ್ತು ಸಂಬಂಧಪಟ್ಟ ಅಧಿಕಾರಿಗಳಿಂದ ಲೆಕ್ಕ ಪರಿಶೋಧನೆ

೧೭. ಹಣಕಾಸು ಮತ್ತು ಇತರ ವ್ಯವಹಾರಗಳಿಗೆ ಸಂಬಂಧಪಟ್ಟ ಎಲ್ಲಾ ದಾಖಲೆ ಪತ್ರಗಳನ್ನು ಟ್ರಸ್ಟಿಗಳ ಸಭೆಯಲ್ಲಿ ಹಾಜರುಪಡಿಸಿ ಅವುಗಳ ಅನುಮೋಧನೆ

೧೮. ಟ್ರಸ್ಟ್‌ನ ಹೆಸರಲ್ಲಿ ಬ್ಯಾಂಕ್ ಖಾತೆಯನ್ನು ತೆರೆದು ಅದರ ಅಧ್ಯಕ್ಷರಿಂದ ಅಥವಾ ಅವರಿಂದ ನೇಮಿಸಲ್ಪಟ್ಟ ಪ್ರತಿನಿಧಿಯಿಂದ ಅದರ ನಿರ್ವಹಣೆ

೧೯. ಟ್ರಸ್ಟಿಗೆ ಬಂದ ಎಲ್ಲಾ ಹಣವನ್ನು ಬ್ಯಾಂಕ್‌ಗಳಲ್ಲಿ ಜಮಾವಣೆ ಮತ್ತು ಅದರ ವ್ಯವಸ್ಥಿತವಾದ ನಿರ್ವಹಣೆ

ಮೇಲ್ಕಾಣಿಸಿದ ವಿವರಗಳು ಟ್ರಸ್ಟ್‌ನ ಒಪ್ಪಂದ ಕರಾರಿನಲ್ಲಿ ಕಾಣಿಸಲಾಗಿದ್ದೂ ಅದರ ಸಮರ್ಥವಾದ ಅನುಷ್ಠಾನ ಟ್ರಸ್ಟ್‌ನ ಪ್ರಮುಖ ಉದ್ದೇಶವಾಗಿದೆ.

ನಾಗರಿಕ ಸೇವಾ ಟ್ರಸ್ಟ್‌ನ ನೀತಿ ಮತ್ತು ನಿಯಮಾವಳಿಗಳು:

೧. ಟ್ರಸ್ಟ್‌ನ ಕಾರ್ಯಕ್ರಮಗಳು ಅದರ ಒಪ್ಪಂದದ ಕರಾರಿಗೆ ಪೂರಕವಾಗಿರಬೇಕು.

೨. ಟ್ರಸ್ಟ್‌ನ ಆಡಳಿತ ವರ್ಗದಲ್ಲಿ ಟ್ರಸ್ಟಿಗಳು ಪ್ರಮುಖರಾಗಿದ್ದು ಅವರ ಭಾರತೀಯ ಖಾಯಂ ನಿವಾಸಿಗಳಾಗಿರತಕ್ಕದ್ದು.

೩. ಟ್ರಸ್ಟಿಗಳ ಸದಸ್ಯತ್ವವು ಟ್ರಸ್ಟ್‌ನ ನಿಯಮಾವಳಿಗಳಿಗೆ ಪೂರಕವಾಗಿರತಕ್ಕದ್ದು.

೪. ಟ್ರಸ್ಟ್‌ನ ಹಿತಾಸಕ್ತಿಗೆ ವಿರೋಧವಾಗಿ ವರ್ತಿಸುವ ಟ್ರಸ್ಟಿಯನ್ನು ಟ್ರಸ್ಟ್‌ಗಳ ಸಭೆಯಲ್ಲಿ ನಿರ್ಧಾರವಾದಂತೆ ತೆಗೆದುಹಾಕುವುದು.

೫. ಟ್ರಸ್ಟಿಗಳ ಸಂಖ್ಯೆ ಮೂಲ ಕರಾರಿನ ಪ್ರಕಾರ 13 ಆಗಿರತಕ್ಕದ್ದು.

೬. ಒಬ್ಬ ಟ್ರಸ್ಟಿಯ ಸದಸ್ಯತ್ವ ರದ್ದಾದಾಗ ಟ್ರಸ್ಟಿಗಳ ಸಭೆಯಲ್ಲಿ ನಿರ್ಧಾರವಾದಂತೆ ಇನ್ನೊಬ್ಬನ್ನು ಆಯ್ಕೆ ಮಾಡುವುದು.

೭. ಟ್ರಸ್ಟಿಗಳ ಅಧಿಕಾರ:

- ನೀತಿ ನಿಯಾಮಾವಳಿಗಳ ಅನುಷ್ಠಾನದಲ್ಲಿ ಟ್ರಸ್ಟಿಗೆ ನಿರ್ಧಾರ ಅಂತಿಮ.
- ಟ್ರಸ್ಟಿಗಳ ಸಭೆಯಲ್ಲಿ ಬಹುಮತದೊಂದಿಗೆ ಟ್ರಸ್ಟ್‌ನ ನಿಯಾಮಾವಳಿಗಳಿಗೆ ತಿದ್ದುಪಡಿ ತರಬಹುದು.
- ಉದ್ಯೋಗಿಗಳ ನೇಮಕಾತಿ ಮತ್ತು ರದ್ಧತಿಯ ಅಧಿಕಾರಿವು ಟ್ರಸ್ಟಿಗಳ ಅಧೀನದಲ್ಲಿರುವುದು.
- ಟ್ರಸ್ಟ್‌ನ ಖರ್ಚು ವೆಚ್ಚವನ್ನು ನೋಡಿಕೊಳ್ಳುವ ಸಂಪೂರ್ಣ ಜವಾಬ್ದಾರಿ.
- ಯಾವುದೇ ಬ್ಯಾಂಕ್ ಖಾತೆಯನ್ನು ತೆರೆದು ಅದರ ನಿರ್ವಹಣೆ
- ಟ್ರಸ್ಟ್‌ನ ಆಸ್ತಿಪಾಸ್ತಿಗಳಿಗೆ ಸಂಬಂಧಪಟ್ಟ ಎಲ್ಲಾ ಸಮಸ್ಯೆಗಳ ನಿರ್ವಹಣೆ
- ಆಟಾರ್ನಿಗಳ ಅಥವಾ ಎಜೆಂಟರ ನೇಮಕಾತಿ ಮತ್ತು ಸಮಯದಿಂದ ಸಮಯಕ್ಕೆ ಅವರ ಬದಲಾವಣೆ
- ದಾಖಲೆ ಪತ್ರಗಳ ಸಂರಕ್ಷಣೆ ಮತ್ತು ಲೆಕ್ಕ ಪರಿಶೋಧನೆಗಾಗಿ ಲೆಕ್ಕ ಪರಿಶೋಧಕರ ನೇಮಕಾತಿ

- ಟ್ರಸ್ಟ್‌ನ ಆಸ್ತಿಪಾಸ್ತಿಯ ನಿರ್ವಹಣೆ ಮತ್ತು ನಿಯಂತ್ರಣ
- ಟ್ರಸ್ಟ್‌ನ ಯಾವುದೇ ಆಸ್ತಿಯನ್ನು ಯಾವುದೇ ರೂಪಕ್ಕೆ ಪರಿವರ್ತಿಸುವ ಹೊಣೆಯು ಅಧ್ಯಕ್ಷರದ್ದಾಗಿದ್ದು, ಇತರ ಟ್ರಸ್ಟಿಗಳ ಅನುಮತಿಯನ್ನು ಪಡೆಯತಕ್ಕದ್ದು.

೩.೫ ಆಡಳಿತ ಮಂಡಳಿ ಮತ್ತು ನೌಕರ ವರ್ಗ

೧. ಟ್ರಸ್ಟ್‌ನ ಆಡಳಿತವು ಟ್ರಸ್ಟಿಗಳ ಮಂಡಳಿಗೆ ಒಳಪಟ್ಟಿದ್ದೂ ಅಧ್ಯಕ್ಷರ ಮೂಲಕ ಕಾರ್ಯನಿರ್ವಹಿಸುವುದು.

೨. ಅಗತ್ಯಬಿದ್ದಾಗ ಟ್ರಸ್ಟಿಗಳು ಆಗಿಂದಾಗ್ಗೆ ಸಭೆಗಳನ್ನು ನಡೆಸಬಹುದಾಗಿದ್ದು ಅಂತಹ ಸಭೆಯನ್ನು ನಿರ್ವಹಿಸುವ ಹೊಣೆ ಅಧ್ಯಕ್ಷರದ್ದಾಗಿರುತ್ತದೆ. ಸಭೆಗಳನ್ನು ನಡೆಸಲು ಕನಿಷ್ಠ ಎರಡು ಟ್ರಸ್ಟಿಗಳ ಹಾಜರಾತಿ ಅಗತ್ಯ. ಆದರೂ ಯಾವುದೇ ನಿರ್ಧಾರವನ್ನು ಕೈಗೊಳ್ಳಲು ಟ್ರಸ್ಟಿಗಳ ಮಂಡಳಿಯಲ್ಲಿ ಬಹುಮತ ಅಗತ್ಯವಾಗಿದೆ. ಸಮ ಬಲದ ಸಂದರ್ಭದಲ್ಲಿ ಅಧ್ಯಕ್ಷರು ಎರಡನೇ ಮತವನ್ನು ಹಾಕುವ ಹಕ್ಕನ್ನು ಹೊಂದಿದ್ದಾರೆ.

೩. ಟ್ರಸ್ಟಿಗಳು ಅಗಿಂದಾಗ್ಗೆ ಟ್ರಸ್ಟ್ ನಿಯಮಾವಳಿಗಳಿಗೆ ಹೊಸ ಸೇರ್ಪಡೆಯನ್ನು ಮಾಡುವ ಅಧಿಕಾರ ಹೊಂದಿದ್ದು ಅಂತಹ ಸೇರ್ಪಡೆಗಳು ಟ್ರಸ್ಟಿಗಳ ಸಭೆಯಲ್ಲಿ ಅನುಮೋದನೆ ಪಡೆಯತಕ್ಕದ್ದು.

೪. ಟ್ರಸ್ಟ್‌ಗೆ ಸಂಬಂಧಪಟ್ಟ ಕಾನೂನು ಸಮರವನ್ನು ಟ್ರಸ್ಟ್‌ನ ಅಧ್ಯಕ್ಷರ ಮೂಲಕ ನಿರ್ವಹಿಸತಕ್ಕದ್ದು.

೫. ಟ್ರಸ್ಟಿಗಳ ಮತ್ತು ಉದ್ಯೋಗಿಗಳ ಅನಗತ್ಯ ವೆಚ್ಚವನ್ನು ಹೊರತು ಪಡಿಸಿ ಉಳಿದ ಖರ್ಚು ವೆಚ್ಚವನ್ನು ಟ್ರಸ್ಟ್ ವತಿಯಿಂದ ಬರಿಸತಕ್ಕದ್ದು.

೬. ವ್ಯಕ್ತಿಗಳ ಮತ್ತು ಸಂಘಟನೆಗಳ ದೇಣಿಗೆಯನ್ನು ಪಡೆದು ಅದಕ್ಕೆ ಸಂಬಂಧಪಟ್ಟ ಎಲ್ಲಾ ದಾಖಲೆ ಪತ್ರಗಳನ್ನು ಅಧ್ಯಕ್ಷರು ನಿರ್ವಹಿಸತಕ್ಕದ್ದು.

೭. ಟ್ರಸ್ಟಿಗೆ ಯಾವುದೇ ಆಸ್ತಿಯನ್ನು ಖರೀದಿಸುವುದು, ನಿರ್ವಹಣೆ ಒತ್ತೆ ಇತ್ಯಾದಿಗಳನ್ನು ಅಧ್ಯಕ್ಷರೇ ನಿರ್ವಹಿಸುವುದು.

೮. ಮೇಲ್ಕಂಡ ಎಲ್ಲಾ ಉದ್ದೇಶಗಳ ಈಡೇರಿಕೆಗೆ ಪೂರಕವಾದ ವಾತಾವರಣವನ್ನು ಸೃಷ್ಟಿಸುವುದು.

೯. ಟ್ರಸ್ಟಿಗಳ ಕನಿಷ್ಟ ಸಂಖ್ಯೆ 2 ಆಗಿದ್ದು ಗರಿಷ್ಟ 25 ಮೀರಕೂಡದು.

೧೦. ಟ್ರಸ್ಟ್‌ನ ಯೋಜನೆಗಳು ಎಲ್ಲಾ ಜಾತಿ, ವರ್ಗ ಮತ್ತು ಜನಾಂಗದವರಿಗೆ ಸಮಾನವಾಗಿ ತಲುಪತಕ್ಕದ್ದು.

೧೧. ಟ್ರಸ್ಟ್‌ನ ಆದಾಯದಲ್ಲಿ ಕೇವಲ ಅದರ ಧ್ಯೇಯಗಳ ಈಡೇರಿಕೆಗಾಗಿ ಬಳಸತಕ್ಕದ್ದು.

ಮೇಲ್ಕಾಣಿಸಿದ ಎಲ್ಲಾ ವಿವರಗಳು ಸೂಚಿಸುವಂತೆ ನಾಗರಿಕ ಸೇವಾ ಟ್ರಸ್ಟ್ ಗುರುವಾಯನಕೆರೆ ಒಂದು ನೊಂದಾಯಿತ ಸರಕಾರೇತರ ಸಂಸ್ಥೆಯಾಗಿದ್ದು, ಜಾತಿ, ಮತ ಬೇಧವಿಲ್ಲದೆ ಸೇವೆಯನ್ನು ಮಾಡುವ ಇಚ್ಚೆಯನ್ನು ಹೊಂದಿದೆ. ಟ್ರಸ್ಟ್ ಒಪ್ಪಂದ ಕರಾರಿನಲ್ಲಿ ಕಾಣಿಸಿರುವ ಹಾಗೇ ಈ ಸಂಘಟನೆಯು ಯಾವುದೇ ರೀತಿಯ ಸರಕಾರದ ಧೋರಣೆಯನ್ನು ವಿರೋಧಿಸದೆ, ಅದರ ಯೋಜನೆಗಳನ್ನು ಸಾಮಾನ್ಯ ಜನರಿಗೆ ತಲುಪುವಂತೆ ನೋಡಿಕೊಳ್ಳುತ್ತದೆ. ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವ ಉದ್ದೇಶವನ್ನು ಹೊಂದಿದೆ. ಜನತೆಯಲ್ಲಿ ಸಮಸ್ಯೆಗಳ ಬಗ್ಗೆ

ಜಾಗೃತಿಯನ್ನು ಮೂಡಿಸಿ ಸಂಘಟಿತವಾಗುವುದಕ್ಕೆ ಸಹಾಯವನ್ನು ನೀಡುವ ಯೋಜನೆಯನ್ನು ಹೊಂದಿದೆ. ನೇರವಾಗಿ ಯಾವುದೇ ರೀತಿಯಲ್ಲಿ ಆರ್ಥಿಕ ಸಹಾಯವನ್ನು ನೀಡುವ ಧೋರಣೆಯನ್ನು ಹೊಂದಿಲ್ಲ. ಒಟ್ಟಿನಲ್ಲಿ ಸಾಮಾನ್ಯ ಜನರಿಗೆ ಸ್ವಾವಲಂಬನೆಯ ಬದುಕನ್ನು ಸಾರುವ ನಿಟ್ಟಿನಲ್ಲಿ ಸಹಾಯವಾಗುತ್ತಿದೆ.

ನೌಕರ ವರ್ಗ ಮತ್ತು ಸಲಹಾ ಮಂಡಳಿ:

ಟ್ರಸ್ಟ್‌ನ ವಿವಿಧ ಯೋಜನೆಗಳ ಅನುಷ್ಠಾನ ಮತ್ತು ಸಂಘಟನಾ ಕಾರ್ಯಗಳಿಗೆ ಪೂರಕವಾಗಿ 60 ಪೂರ್ಣಾವಧಿ ಮತ್ತು 51 ಅರೆಕಾಲಿಕ ಟ್ರಸ್ಟಿಗಳು, ಸಂಘಟನಾ ಪದಾಧಿಕಾರಿಗಳು ಮತ್ತು ನೂರಾರು ಕಾರ್ಯಕರ್ತರು ದುಡಿಯುತ್ತಿದ್ದಾರೆ. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ 8 ತಾಲೂಕುಗಳಲ್ಲಿ ಮತ್ತು ಬೆಂಗಳೂರಿನಲ್ಲಿ ಟ್ರಸ್ಟ್‌ನ ಕಛೇರಿಗಳಿವೆ. ಬೆಳ್ತಂಗಡಿ ತಾಲೂಕಿನ ನಾಲ್ಕು ವಲಯಗಳಲ್ಲಿ ಕೂಡಾ ನಾಗರಿಕ ಸೇವಾ ಟ್ರಸ್ಟ್ ತನ್ನ ಕಛೇರಿಗಳನ್ನು ಹೊಂದಿದೆ. ಟ್ರಸ್ಟ್‌ಗೆ ಮಾರ್ಗದರ್ಶನ ಮತ್ತು ಬೆಂಬಲ ನೀಡುವ ಸಲುವಾಗಿ ತಜ್ಞರ, ಚಿಂತಕರ ಮತ್ತು ರಾಜಕೀಯ ಮುಖಂಡರುಗಳನ್ನೊಳಗೊಂಡ ಸಲಹಾ ಸಮಿತಿ ಇದೆ. ಅದಲ್ಲದೆ, ತಜ್ಞರ, ವಿಜ್ಞಾನಿಗಳ, ರಾಜಕೀಯ, ಧಾರ್ಮಿಕ, ಸಾಮಾಜಿಕ ಮುಖಂಡರ ಮತ್ತು ಜನಪ್ರತಿನಿಧಿಗಳನ್ನೊಳಗೊಂಡ ವಿಶಾಲ ತಳಹದಿಯ "ಸಮಾಲೋಚನಾ ವೇದಿಕೆಯನ್ನು ರಚಿಸಲಾಗಿದೆ. ಈ ಸಮಾಲೋಚನಾ ವೇದಿಕೆಯು ವರ್ಷಕ್ಕೊಮ್ಮೆ ಸಪ್ಟೆಂಬರ್‌ನಲ್ಲಿ ಸಭೆ ಸೇರುತ್ತದೆ. ಸರಕಾರದ ವಿವಿಧ ಸಂಘಟನೆಗಳಲ್ಲಿ ಟ್ರಸ್ಟ್ ಸದಸ್ಯತ್ವ ಮತ್ತು ಸಹಭಾಗಿತ್ವ ಹೊಂದಿದ್ದು, ಜನಪರಕಾರ್ಯಗಳಲ್ಲಿ ಯಶಸ್ವಿಯಾಗಿ ತೊಡಗಿಸಿಕೊಂಡಿದೆ.

೩.೬ ಟ್ರಸ್ಟ್ ವತಿಯಿಂದ ಪರಿಣಾಮಕಾರಿಯಾಗಿ ಹಮ್ಮಿಕೊಳ್ಳುವ ಯೋಜನೆಗಳು

ವಿಶಾಲವಾಗಿ ನಾಗರಿಕ ಟ್ರಸ್ಟ್‌ನ ಕಾರ್ಯಕ್ರಮಗಳು ಮತ್ತು ಯೋಜನೆಗಳು ಈ ಕೆಳಗಿನಂತೆ ಜಾರಿಗೊಳ್ಳುತ್ತಿವೆ.

೧. ಮಹಿಳಾ, ಕೃಷಿಕ, ದಲಿತ, ಆದಿವಾಸಿ, ಬೀಡಿ ಕಾರ್ಮಿಕ ಮತ್ತು ಪರಿಸರ ಸಂಘಟನೆಗಳನ್ನು ಬಲಪಡಿಸುವುದು.

೨. ಉತ್ತಮ ಆಡಳಿತಕ್ಕಾಗಿ ಮತದಾರರ ಜಾಗೃತಿಯೊಂದಿಗೆ ಪಂಚಾಯತ್‌ರಾಜ್ ವ್ಯವಸ್ಥೆಯನ್ನು ಬಲಗೊಳಿಸುವುದು.

೩. ದಲಿತ ಮತ್ತು ಆದಿವಾಸಿಗಳ ಸಾಮಾಜಿಕ ತುಳಿತದ ವಿರುದ್ಧ ಜಾಗೃತಿ ಮತ್ತು ಅಭಿವೃದ್ಧಿಯತ್ತ ಮತ್ತು ಗಮನ ನೀಡುವುದು.

೪. ಬೀಡಿ ಕಾರ್ಮಿಕರ ಸಮಸ್ಯೆಗಳ ಪರಿಹಾರಕ್ಕಾಗಿ ಒತ್ತು ನೀಡುವುದು.

೫. ಆರೋಗ್ಯ ಮತ್ತು ವೈದ್ಯಕೀಯ ಸೇವೆಗಳನ್ನು ವಿಸ್ತರಿಸುವುದು.

೬. ಸಣ್ಣ ಕೃಷಿಕರ / ಮತ್ತು ಕೃಷಿಕೂಲಿಗಳ ಅಭಿವೃದ್ಧಿ ಸಾಧಿಸುವುದು ಮತ್ತು ರಾಸಾಯಾನಿಕ ರಹಿತ ಸುಸ್ಥಿರ ಕೃಷಿಯ ಅಭಿಯಾನ.

೭. ಪ್ರಾಕೃತಿಕ ಸಂಪನ್ಮೂಲಗಳ ರಕ್ಷಣೆಗೆ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.

೮. ಪರಿಸರ ಸಂರಕ್ಷಣೆಯ ಬಗ್ಗೆ ಜಾಗೃತಿ ಮೂಡಿಸುವುದು.

೯. ಗ್ರಾಮೀಣ ಯುವಕ ಯುವತಿಯರಿಗೆ ಉದ್ಯೋಗ ಮಾಹಿತಿ ಮತ್ತು ತರಬೇತಿ ನೀಡುವುದು.

೧೦. ಸ್ವ ಉದ್ಯೋಗಕ್ಕಾಗಿ ಅಗತ್ಯವಿರುವ ತರಬೇತಿಯನ್ನು ನೀಡುವುದು,

೧೧. ಸರಕಾರದ ಮತ್ತು ಸಾಮಾಜಿಕ ಸಂಘಟನೆಗಳ ಜನವಿರೋಧಿ ನೀತಿಗಳ ವಿರುದ್ಧ ಹೋರಾಟ ಮತ್ತು ಅಭಿಯಾನ.

೧೨. ಸ್ವ ಸಹಾಯ ಮೂಲ ಪರಿಕಲ್ಪನೆಯ ಪ್ರಕಾರ ಆರ್ಥಿಕ ಅಭಿವೃದ್ಧಿಗೆ ಶ್ರಮಿಸುವುದು.

೧೩. ಮಾಹಿತಿ ಹಕ್ಕು ಕಾಯ್ದೆ, ಉದ್ಯೋಗ ಖಾತರಿ ಕಾಯ್ದೆ ಮತ್ತು ಬಳಕೆದಾರರ ಹಕ್ಕುಗಳ ಸದ್ಬಳಕೆ, ಮುಂತಾದವುಗಳ ಬಗ್ಗೆ ಜಾಗೃತಿ ಮೂಡಿಸುವುದು.

೧೪. ಸರಕಾರದ ವತಿಯಿಂದ ಜನರಿಗಾಗಿ ಲಭ್ಯವಿರುವ ಯೋಜನೆಗಳನ್ನು ಜನರಿಗೆ ಸಮರ್ಪಕವಾಗಿ ವಿವರಿಸಿ ಅವುಗಳನ್ನು ಪಡೆಯುವುದಕ್ಕೆ ಪ್ರೇರೇಪಿಸುವುದು.

೩.೭ ಸಂಪನ್ಮೂಲ ಕ್ರೋಢೀಕರಣ ಮತ್ತು ಉಪಯೋಗ

ನಾಗರಿಕ ಸೇವಾ ಟ್ರಸ್ಟ್ 1976 ರಲ್ಲಿ ಅಸ್ತಿತ್ವಕ್ಕೆ ಬಂದಿದ್ದೂ 1994 ರ ತನಕ ಯಾವುದೇ ಹೊರ ಆರ್ಥಿಕ ನೆರವನ್ನು ಪಡೆಯದೆ ಸ್ಥಳೀಯ ಸಂಪನ್ಮೂಲಗಳಿಂದಲೇ ನಡೆದು ಬಂತು. ಮುಂದೆ ಟ್ರಸ್ಟ್‌ವತಿಯಿಂದ ಹಮ್ಮಿಕೊಳ್ಳುವ ಕಾರ್ಯಕ್ರಮಗಳು ವಿಸ್ತರಿಸಲ್ಪಟ್ಟು ಹೆಚ್ಚು ಜನಪ್ರಿಯವಾದುವು. ಈ ಕಾರಣಗಳಿಂದ ದೇಶ ವಿದೇಶಗಳಿಂದ ಆರ್ಥಿಕ ನೆರವನ್ನು ಪಡೆಯುವುದು, ಅನಿವಾರ್ಯವಾಯಿತು. ಅಂತಹ ಅನಿವಾರ್ಯ ಸಂದರ್ಭಗಳಲ್ಲಿ, ವಿವಿಧ ಸಂಘಟನೆಗಳಿಂದ ಮತ್ತು ಸರಕಾರಿ ಇಲಾಖೆಗಳಿಂದ ಹಣಕಾಸು ನೆರವನ್ನು ಪಡೆಯಲಾಯಿತು. ಹೀಗೆ ಪಡೆದ ನೆರವನ್ನು ಯಶಸ್ವಿಯಾಗಿ ಟ್ರಸ್ಟಿನ ಧ್ಯೇಯೋದ್ದೇಶಗಳ ಮತ್ತು ಅಭಿವೃದ್ಧಿ ಮಾದರಿಗಳ ಅನುಷ್ಠಾನಕ್ಕಾಗಿ ಬಳಸಲಾಗಿದೆ. ಹೀಗೆ ಬಂದ ಆರ್ಥಿಕ ಸಹಾಯಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಸಂರಕ್ಷಿಸಲಾಗುತ್ತದೆ. ವಾರ್ಷಿಕವಾಗಿ ಇಂತಹ ಖರ್ಚುವೆಚ್ಚಗಳು ಪರಿಶೀಲನೆಗೆ ಒಳಪಡುತ್ತಿವೆ. 1995 ರಿಂದ ಸುಮಾರು 19 ವಿವಿಧ ಇಲಾಖೆ ಮತ್ತು ಸಂಘಟನೆಗಳಿಂದ ಆರ್ಥಿಕ ನೆರವನ್ನು ಪಡೆಯಲಾಗಿದೆ. ಈ ಕೆಳಗೆ ಸೂಚಿಸುವ ವಿವರಗಳು ಟ್ರಸ್ಟಿಗೆ ಬರುತ್ತಿರುವ ಆರ್ಥಿಕ ನೆರವಿನ ಕುರಿತು ಮಾಹಿತಿ ನೀಡುತ್ತವೆ. ಈ ವಿವರಗಳು ಸ್ಥಳೀಯವಾಗಿ ಒದಗಿಸಲ್ಪಟ್ಟ ಪರೋಕ್ಷ ದೇಣಿಗೆಯನ್ನು ಹೊರತು ಪಡಿಸಿವೆ.

1993 ರಿಂದ 2007ರ ತನಕ ಪಡೆದ ಅನುದಾನ ಮತ್ತು ಆರ್ಥಿಕ ಸಹಾಯದ ವಿವರ:

ಕ್ರ.ಸಂ	ದಾನಿ ಸಂಸ್ಥೆ	ಪಡೆದ ಅನುದಾನ (ರೂ.ಗಳಲ್ಲಿ)
೧.	ಕಪಾರ್ಟ್, ಧಾರವಾಡ	1,48,6000.00
೨.	ಯುಎನ್‌ಡಿಪಿ, ಸಿಇಇ, ನವದೆಹಲಿ,	6,27,200.00
೩.	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಕರ್ನಾಟಕ	59,355.00
೪.	ಎನ್‌ವಿರೋನ್‌ಮೆಂಟ್ ಫಂಡ್ ಫಾರ್ ಎನ್‌ಜಿಒಸ್	65,000.00
೫.	ಡೆನಿಡಾ – ಇಎಂಪಿಎಸ್	1,55,250.00
೬.	ಅರಣ್ಯ ಮತ್ತು ಪರಿಸರ ಇಲಾಖೆ ಕರ್ನಾಟಕ	3,47,100.00
೭.	ಭಾರತೀಯ ವಿಜ್ಞಾ ಕೇಂದ್ರ ಬೆಂಗಳೂರು	2,88,600.00
೮.	ಸಾಮಾಜಿಕ ಮತ್ತು ಆರ್ಥಿಕ ಪರಿವರ್ತನಾ ಕೇಂದ್ರ ಬೆಂಗಳೂರು	86,180.00
೯.	ನಬಾರ್ಡ್	266,020.00
೧೦.	ಸೈಂಟ್‌ಜಾನ್ಸ್ ಮೆಡಿಕಲ್ ಕಾಲೇಜು, ಬೆಂಗಳೂರು ಕೇಂದ್ರ ಆರೋಗ್ಯ ಇಲಾಖೆ,	1,40,000.00
೧೧.	ರಾಷ್ಟ್ರೀಯ ಜಲಾನಯನ ಅಭಿವೃದ್ಧಿ ಇಲಾಖೆ, ಕರ್ನಾಟಕ	3,30264.00
೧೨.	ಇಎಫ್ ಫಾರ್ ಎನ್‌ಜಿ.ಒಸ್, ನೆದರ್‌ಲ್ಯಾಂಡ್	2,113,571.00
೧೩.	ನೋವಿಬ್, ನೆದರ್‌ಲ್ಯಾಂಡ್	74,194,356.00
೧೪.	ಹೆಚ್‌ಐವಿಒಎಸ್, ನೆದರ್‌ಲ್ಯಾಂಡ್	2,358,160.00
೧೫.	ಸಿಆರ್‌ಎಸ್ (ಹೈದರಾಬಾದ್) ಸ್ವಿಟ್ಜರ್‌ಲ್ಯಾಂಡ್	102,725.00
೧೬.	ಆಕ್ಸ್‌ಫಾರ್ಮ್ (ಇಂಡಿಯಾ) ಟ್ರಸ್ಟ್ ಇಂಗ್ಲೆಂಡ್	2,003,400.00
೧೭.	ಹೆಚ್‌ಇಕೆಎಸ್ (ಬೆಂಗಳೂರು) ಸ್ವಿಟ್ಜರ್‌ಲ್ಯಾಂಡ್	30,000.00
೧೮.	ಮೆಕಾರ್ಥರ್ ಪೌಂಡೇಶನ್ ಯು.ಎಸ್.ಎ	2,005,300.00
	ಒಟ್ಟು	**86,658481.00**

ಸಂಪನ್ಮೂಲಗಳ ಉಪಯೋಗ:

ನಾಗರಿಕ ಸೇವಾ ಟ್ರಸ್ಟ್‌ನ ಆರ್ಥಿಕ ಸ್ಥಾನಮಾನವನ್ನು ಪರಿಶೀಲಿಸಿ ಸಂಸ್ಥೆಯು ವಿವಿಧ ಮೂಲಗಳಿಂದ ಸಂಪನ್ಮೂಲಗಳನ್ನು ಪಡೆಯುತ್ತದೆ ಎಂಬ ವಿಚಾರವನ್ನು ತಿಳಿದುಕೊಳ್ಳಬಹುದು. ದೇಶ–ವಿದೇಶಗಳ ಸಂಸ್ಥೆಗಳು ಟ್ರಸ್ಟ್‌ಗೆ ಹಣಕಾಸಿನ ನೆರವನ್ನು ನೀಡುತ್ತವೆ. ಹೀಗೆ ಪಡೆದ ಅನುದಾನವನ್ನು ಟ್ರಸ್ಟ್ ಸಮರ್ಥವಾಗಿ ಬಳಸುತ್ತಿದೆ ಎಂಬುದನ್ನು ಸಂಸ್ಥೆಯ ಹಣಕಾಸಿಗೆ ಸಂಬಂಧಪಟ್ಟ ದಾಖಲೆ ಪತ್ರಗಳ ಪರಿಶೀಲನೆಯಿಂದ ತಿಳಿದು ಬರುತ್ತದೆ. ಸಂಸ್ಥೆಯ ಹಣಕಾಸಿಗೆ ಸಂಬಂಧಪಟ್ಟ ಎಲ್ಲಾ ಲೆಕ್ಕ ಪತ್ರಗಳು ಲೆಕ್ಕ ಪರಿಶೋಧಕರಿಂದ ತಪಾಸಣೆಯಾಗುತ್ತಿದ್ದು ಎಲ್ಲಾ ದಾಖಲೆಗಳು ನ್ಯಾಯ ಸಮ್ಮತವಾಗಿವೆ ಎಂಬುದನ್ನು ಪರಿಶೋಧಕರ ವರದಿ ಸೂಚಿಸುತ್ತದೆ. ಅದಲ್ಲದೆ, ಟ್ರಸ್ಟ್ ವತಿಯಿಂದ ನಡೆಯುವ

ಕಾರ್ಯಕ್ರಮಗಳು ಸಮಾಜದ ತಳಮಟ್ಟದ ಜನರಿಗೆ ತಲುಪುತ್ತವೆ ಎಂಬುದನ್ನು ದೃಢಪಡಿಸುತ್ತಿವೆ. ಸಂಸ್ಥೆಯ ಖರ್ಚು ವೆಚ್ಚಕ್ಕೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸುವಾಗ ಹಣವನ್ನು ಯಾವುದೇ ರೀತಿಯ ದುರುಪಯೋಗ ಮಾಡಿದ ಆರೋಪಗಳು ಕಂಡುಬರುವುದಿಲ್ಲ.

ಖರ್ಚು ವೆಚ್ಚಗಳ ಮೂಲಗಳನ್ನು ಗಮನಿಸುವಾಗ ಕ್ರೋಢಿಕರಿಸಲ್ಪಟ್ಟ ಸಂಪನ್ಮೂಲಗಳನ್ನು ವಿವಿಧ ಮೂಲಗಳ ಮೇಲೆ ಖರ್ಚು ಮಾಡಲಾಗುತ್ತದೆ ಎಂಬ ಅಂಶವನ್ನು ತಿಳಿದುಕೊಳ್ಳಬಹುದು. 2006 ವಿತ್ತ ವರ್ಷಕ್ಕೆ ಸಂಬಂಧಪಟ್ಟ ಲೆಕ್ಕ ಪತ್ರಗಳು ಈ ಕೆಳಗಿನ ವಿವರಗಳನ್ನು ನೀಡುತ್ತವೆ. ವರ್ಷಕ್ಕೆ ಸಂಬಂಧಪಟ್ಟಂತೆ ವಿವಿಧ ಮೂಲಗಳಿಂದ ಬಂದಂತಹ ಆದಾಯವು 2,05,49761 ಆಗಿತ್ತು.

ಖರ್ಚಿನ	ವಿನಿಯೋಗಿಸಿದ ಹಣ	ಶೇಖಡಾವಾರು
ವೇತನ	39,32066.00	19.1%
ಆಡಳಿತಾತ್ಮಕ ವೆಚ್ಚ	11,17,688.00	5.44%
ಕಾರ್ಯಕ್ರಮಗಳ ವೆಚ್ಚ	81,69004.00	6.05%
ಸ್ಥಿರಾಸ್ತಿ	12,43437.00	39.75%
ಇತರ	5122874.00	24.93%
ಅಂತಿಮ ಉಳಿಕೆ	964692.00	4.69%
ಒಟ್ಟು	**2,05,49761.00**	**100%**

ಮೇಲ್ಕಂಡ ವಿವರಗಳು ಸೂಚಿಸುವ ಪ್ರಕಾರ ನಾಗರಿಕ ಸೇವಾ ಟ್ರಸ್ಟ್ ತನ್ನ ಸಂಪನ್ಮೂಲಗಳನ್ನು ವ್ಯವಸ್ಥಿತವಾಗಿ ಉಪಯೋಗಿಸುತ್ತದೆ ಎಂಬುದನ್ನು ತಿಳಿಯಬಹುದು. ತನ್ನ ಸಂಪನ್ಮೂಲಗಳ ಒಂದು ಹೆಚ್ಚಿನ ಭಾಗವನ್ನು ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಬಳಸುತ್ತದೆ ಎಂಬುದನ್ನು ವಿವರಗಳು ಸೂಚಿಸುತ್ತವೆ. ಆಡಳಿತಾತ್ಮಕ ವೆಚ್ಚವು ಕೇವಲ ಶೇ 5.44 ಆಗಿದ್ದೂ ಸ್ಥಿರಾಸ್ತಿ ಖರೀದಿಗಾಗಿ ಶೇ 6.05% ರಷ್ಟನ್ನು ಬಳಸಲಾಗಿದೆ. ಸಿಬ್ಬಂದಿಗಳ ವೇತನ ಕೂಡ ಖರ್ಚಿನ ಮತ್ತೊಂದು ಪ್ರಮುಖ ಮೂಲವಾಗಿದೆ. ಈ ವಿವರಗಳು ಸೂಚಿಸುವಂತೆ ಟ್ರಸ್ಟ್ ವತಿಯಿಂದ ನೇರವಾಗಿ ಆರ್ಥಿಕ ಸಹಾಯವನ್ನು ನೀಡಲಾಗುವುದಿಲ್ಲ. ತಳಮಟ್ಟದಲ್ಲಿ ಸಂಘಟನೆ, ಜಾಗೃತಿ ಮತ್ತು ತರಬೇತಿ ನೀಡುವ ಕಡೆಗೆ ಟ್ರಸ್ಟ್ ಹೆಚ್ಚಿನ ಗಮನವನ್ನು ನೀಡುತ್ತಿದ್ದೂ ಸಾಮಾಜಿಕ ಪರಿವರ್ತನೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ.

೩.೮ ನಾಗರಿಕ ಸೇವಾ ಟ್ರಸ್ಟ್‌ನ ಕಾರ್ಯ ವೈಖರಿ:

ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿದ ಸುಮಾರು 60 ವರ್ಷಗಳಲ್ಲಿ ಕೇಂದ್ರ ಹಾಗೂ ರಾಜ್ಯ ಮಟ್ಟದಲ್ಲಿ ಹಲವಾರು ಸರಕಾರಗಳು ಆಳ್ವಿಕೆ ನಡೆಸಿವೆ. ಆದರೆ ಬಡವರು ಮತ್ತು ಅಂಚಿಗೆ ತಳ್ಳಲ್ಪಟ್ಟ ಸಮುದಾಯಗಳ ಮೂಲಭೂತ ಸಮಸ್ಯೆಗಳಿಗೆ ಸ್ಪಂದಿಸುವಲ್ಲಿ ವಿಫಲವಾಗಿದೆ. ಆಡಳಿತ ವ್ಯವಸ್ಥೆಯಲ್ಲಿ ಪಾರದರ್ಶಕತೆ ಮತ್ತು ಹೊಣೆಗಾರಿಕೆ ದೂರವಾಗಿದ್ದು ಭ್ರಷ್ಟಾಚಾರ ತಾಂಡವಾಡುತ್ತಿದೆ. ಜಾಗತೀಕರಣದ ಪ್ರಭಾವದಿಂದ ಶ್ರೀಮಂತರ ಮತ್ತು ಬಡವರ

ನಡುವಿನ ಅಂತರ ಹೆಚ್ಚಿದೆ. ಬದಲಾಗುತ್ತಿರುವ ಆರ್ಥಿಕ ವ್ಯವಸ್ಥೆಯೊಂದಿಗೆ ಪೈಪೋಟಿ ನಡೆಸುವುದು ಬಡವರ ಪಾಲಿಗೆ ಕಷ್ಟಕರವಾಗಿದೆ. ಈ ಹಿನ್ನಲೆಯಲ್ಲಿ ರಾಜಕೀಯ ಪಕ್ಷಗಳು ಮತ್ತು ಸರಕಾರಗಳು ಜನಪರ ಮತ್ತು ಪರಿಸರ ಪರವಾಗಿರುವಂತೆ ಹೋರಾಡಲು ಪ್ರೇರೇಪಿಸುವುದು ನಾಗರಿಕ ಟ್ರಸ್ಟ್‌ನ ಉದ್ದೇಶವಾಗಿದೆ. ಈ ನಿಟ್ಟಿನಲ್ಲಿ ಎಲ್ಲಾ ಆಸಕ್ತ ಗುಂಪು, ವ್ಯಕ್ತಿ ಮತ್ತು ಶಕ್ತಿಗಳನ್ನು ಒಂದೇ ವೇದಿಕೆಗೆ ಬರಮಾಡಿಕೊಂಡು ತೊಂದರೆಗೊಳಗಾಗಿರುವ ಬಡಜನರ ಸಮಸ್ಯೆಗಳನ್ನು ಪರಿಹರಿಸಲು ಪ್ರಯತ್ನಿಸುತ್ತದೆ. ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗುತ್ತಾ ಪ್ರಜಾಪ್ರಭುತ್ವ ಮಾದರಿಯಲ್ಲಿ ತನ್ನ ಹೋರಾಟವನ್ನು ಮಾಡುತ್ತದೆ. ರಾಜಕೀಯ ಮುಖಂಡರನ್ನು, ಧಾರ್ಮಿಕ ಮುಂದಾಳುಗಳನ್ನು, ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳನ್ನು, ಮಾಧ್ಯಮ ಬಳಗದವರನ್ನು ಮತ್ತು ಪೋಷಿತ ಜನರನ್ನು ಒಂದೇ ವೇದಿಕೆಗೆ ಅಹ್ವಾನಿಸಿ ಮುಖಾ-ಮುಖಿ ಕಾರ್ಯದ ಮೂಲಕ ಸಂಬಂಧಪಟ್ಟವರ ಮೇಲೆ ಪ್ರಭಾವ ಬೀರುವ ಪ್ರಯತ್ನದಲ್ಲಿ ನಾಗರಿಕ ಸೇವಾ ಟ್ರಸ್ಟ್ ಅಭೂತಪೂರ್ಣ ಯಶಸ್ಸನ್ನು ಸಾಧಿಸಿದೆ.

ನಾಗರಿಕ ಸೇವಾ ಟ್ರಸ್ಟ್ ಆರಿಸಿಕೊಂಡು ಬಂದಿರುವ ವಿಧಾನಗಳಲ್ಲಿ ಕಂಡುಬರುವ ಮುಖ್ಯ ಅಂಶಗಳೆಂದರೆ,

- ಬಾಧಿತ ಜನರನ್ನು ದೊಡ್ಡ ರೀತಿಯಲ್ಲಿ ಸಂಘಟಿಸುವುದು
- ಎಲ್ಲಾ ರಾಜಕೀಯ ಪಕ್ಷಗಳನ್ನು ಒಂದೇ ವೇದಿಕೆಗೆ ತಂದು ಜನರ ಸಮಸ್ಯೆಗಳ ಬಗ್ಗೆ ಗಮನ ಸೆಳೆಯುವುದು.
- ಚುನಾವಣೆಯ ಸಂದರ್ಭದಲ್ಲಿ ಜನರ ಭಾಗವಹಿಸುವಿಕೆಯ ಮೂಲಕ ಜನರ ಪ್ರನಾಳಿಕೆಯನ್ನು ಸಿದ್ಧಪಡಿಸಿ ರಾಜಕೀಯ ಪಕ್ಷಗಳ ಮತ್ತು ಚುನಾವಣಾ ಅಭ್ಯರ್ಥಿಗಳ ಮೇಲೆ ಪ್ರಭಾವ ಬೀರುವುದು.
- ಸರಕಾರದ ಜನವಿರೋಧಿ ಧೋರಣೆಗಳ ವಿರುದ್ಧ ಹೋರಾಡುವುದು
- ಸರಕಾರದ ಯೋಜನೆಗಳ ಬಗ್ಗೆ ಜನರಿಗೆ ತಿಳುವಳಿಗೆ ನೀಡುವುದು.
- ಪ್ರಜಾಧಿಕಾರದ ಮೂಲಕ ತಳಸ್ಥರದಲ್ಲಿರುವ ಜನರನ್ನು ಸಂಘಟಿಸುವುದು.
- ಭೂವಿವಾದಗಳು, ಗಡಿ ಸಮಸ್ಯೆಗಳು, ನೀರಿಗೆ ಸಂಬಂಧಪಟ್ಟ ಸಮಸ್ಯೆ, ಪರಿಸರ ಸಂಬಂಧಿ ಪ್ರಶ್ನೆಗಳ ಬಗ್ಗೆ ಜನರಿಗೆ ಕಾನೂನು ಸಲಹೆ ನೀಡುವುದು.

ಮೇಲ್ಕಾಣಿಸಿದ ವಿಶಿಷ್ಟ ರೀತಿಯ ಹೋರಾಟಗಳ ಮೂಲಕ ನಾಗರಿಕ ಸೇವಾ ಟ್ರಸ್ಟ್ ಜನಪರ ಅಭಿವೃದ್ಧಿ ಕಾರ್ಯಗಳಲ್ಲಿ ತೊಡಗಿದೆ. ಈ ಹೋರಾಟ ಪ್ರಜಾಪ್ರಭುತ್ವ ಮಾದರಿಯಲ್ಲೆ ಸಾಗುತ್ತಿದೆ. ಈ ಹೋರಾಟಗಳ ಸಂದರ್ಭದಲ್ಲಿ ಹಲವಾರು ಜಾಥಾಗಳನ್ನು, ಆಂದೋಲನಗಳನ್ನು, ಪ್ರತಿಭಟನಾ ಸಭೆಗಳನ್ನು, ಅಭಿಯಾನಗಳನ್ನು, ಜಾಗೃತಿ ಉಪನ್ಯಾಸಗಳನ್ನು ಟ್ರಸ್ಟ್ ಪ್ರವರ್ತಿತ ಸಂಘಟನೆಗಳ ಮೂಲಕ ಹಮ್ಮಿಕೊಳ್ಳಲಾಗಿದೆ. ನ್ಯೂನ್ಯತೆಗಳನ್ನು ಪ್ರಜಾಪ್ರಭುತ್ವ ಮಾದರಿಯಲ್ಲಿ ಸರಿಪಡಿಸುವಂತಹ ಪ್ರಯತ್ನಕ್ಕೆ ನಾಗರಿಕ ಸೇವಾ ಟ್ರಸ್ಟ್ ಆದ್ಯತೆಯನ್ನು ನೀಡುತ್ತದೆ. ಈ ಕಾರಣಕ್ಕಾಗಿ ಹಲವಾರು ಸರಕಾರಿ ಇಲಾಖೆಗಳು ಮತ್ತು ಖಾಸಗಿ ಸಂಸ್ಥೆಗಳಲ್ಲಿ ಸದಸ್ಯತ್ವವನ್ನು ಹೊಂದಿದೆ.

೩.೯ ಸದಸ್ಯತ್ವ ಹೊಂದಿರುವ ಸರಕಾರಿ ಇಲಾಖೆಗಳು:

೧. ಜಿಲ್ಲಾ ಸಮಾಲೋಚನಾ ಸಮಿತಿ (DCC) ದ.ಕ ಮತ್ತು ಉಡುಪಿ ಜಿಲ್ಲೆ

೨. ಜಿಲ್ಲಾ ಮಟ್ಟದ ಪರಿಶೀಲನಾ ಸಮಿತಿ (DCRC) ದ.ಕ ಮತ್ತು ಉಡುಪಿ ಜಿಲ್ಲೆ

೩. ಐಸಿಡಿಎಸ್ ತಾಲೂಕು ಮಟ್ಟದ ಸಮನ್ವಯ ಸಮಿತಿ

೪. ಕಾನೂನು ಸೇವೆಗಳ ಸಮಿತಿ, ಬೆಳ್ತಂಗಡಿ ತಾಲೂಕು

೫. ಮಕ್ಕಳ ಮಾರಾಟ ಮತ್ತು ಸಾಗಟ ವಿರುದ್ಧ ಆಂದೋಲನ, ತಾಲೂಕು ಸಮಿತಿ ಬೆಳ್ತಂಗಡಿ

೬. ಫಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮದ ಜಿಲ್ಲಾ ಸಮನ್ವಯ ಸಮಿತಿ (ಡಿ.ಟಿಎಫ್)

೭. ಸಸ್ಯ ತಳಿಗಳ ರಕ್ಷಣೆ ಮತ್ತು ರೈತರ ಹಕ್ಕು ಅಧಿನಿಯಮ ಅನುಷ್ಠಾನ ಸಮಿತಿ

೮. ಸ್ವರ್ಣ ಜಯಂತಿ ಸ್ವರೋಜ್‌ಗಾರ್ ಯೋಜನಾ ಸಮಿತಿ ದ.ಕ ಮತ್ತು ಉಡುಪಿ

೯. ಬೀಡಿ ಕಾರ್ಮಿಕರ ಕನಿಷ್ಠ ವೇತನ ಶಿಫಾರಸು ಸಮಿತಿ

೧೦. ಬ್ಲಾಕ್ ಮಟ್ಟದ ಬ್ಯಾಂಕರ್‌ಗಳ ಬೆಳ್ತಂಗಡಿ ತಾಲೂಕು ಸಮಿತಿ

೧೧. ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಬೀಡಿ ಉದ್ಯಮದ ಬಗೆಗಿನ ಕಾರ್ಯ ಪಡೆ.

೧೨. ಜಿಲ್ಲಾ ಮಟ್ಟದ ನೀರು ಹಾಗೂ ನೈರ್ಮಲ್ಯ ಸಮಿತಿ

೧೩. ರಾಷ್ಟ್ರೀಯ ತೋಟಗಾರಿಕಾ ಮಿಷನ್ – ಜಿಲ್ಲಾ ಸಮಿತಿ

೧೪. ಕೇಬಲ್ ಟಿ.ವಿ. ನೆಟ್‌ವರ್ಕ್, ರೆಗ್ಯಲೇಶನ್ ಆಕ್ಟ್, ಪರಿಶೀಲನಾ ಸಮಿತಿ

೧೫. ದ.ಕ. ಜಿಲ್ಲಾ ಮಟ್ಟದ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ದೌರ್ಜನ್ಯ ತಡೆ ಉಸ್ತುವಾರಿ ಸಮಿತಿ

೧೬. ಮಹಿಳಾ ದೌರ್ಜನ್ಯ ತಡೆ ತಾಲೂಕು ಸಮಿತಿ

೧೭. ವರದಕ್ಷಿಣೆ ನಿಷೇಧ ಕಾಯಿದೆ, ತಾಲೂಕು ಸಲಹಾ ಸಮಿತಿ

೧೮. ಜೀವ ವೈವಿಧ್ಯ ಮಾಹಿತಿ ವ್ಯವಸ್ಥೆ ಕಾರ್ಯಪಡೆ

೧೯. ರಾಜ್ಯದ ಸ್ವಸಹಾಯ ಸಂಘಗಳ ಅಧ್ಯಯನ ತಂಡ

೨೦. ಜಿಲ್ಲಾ ಸಾಂಕ್ರಾಮಿಕ ರೋಗಗಳ ಕಣ್ಗಾವಲು ಸಮಿತಿ

೨೧. ಜಿಲ್ಲಾ ಮಟ್ಟದ ನೀರು ಹಾಗೂ ನೈರ್ಮಲ್ಯ ಸಮಿತಿ

೨೨. ದಕ್ಷಿಣ ಕ್ನನಡ ಗ್ರಾಮೀಣ ಶಕ್ತಿ ಕಾರ್ಯಕ್ರಮದ ಸಮಿತಿ

೨೩. ರಾಷ್ಟ್ರೀಯ ಜಲಾನಯನ ಅಭಿವೃದ್ಧಿ ಯೋಜನೆ

ಮೇಲ್ಕಾಣಿಸಿದ ಸರಕಾರಿ ಇಲಾಖೆಗಳಲಿ ನಾಗರಿಕ ಸೇವಾ ಟ್ರಸ್ಟ್ ಸದಸ್ಯತ್ವವನ್ನು ಹೊಂದಿದೆ. ಈ ವಿಚಾರವು ನಾಗರಿಕ ಸೇವಾ ಟ್ರಸ್ಟ್ ಪ್ರಜಾಪ್ರಭುತ್ವ ಮಾದರಿಯಲ್ಲಿ ಕಾರ್ಯ ನಿರ್ವಹಿಸುತ್ತದೆ ಎಂಬುದನ್ನು ಸೂಚಿಸುತ್ತದೆ. ಮೇಲಿನ ಎಲ್ಲಾ ತಾಲೂಕು ಹಾಗೂ ಜಿಲ್ಲಾ ಸಮಿತಿಗಳು ತಳಮಟ್ಟದ ಜನರ ಸಮಸ್ಯೆಗಳ ಬಗ್ಗೆ ಗಮನ ಹರಿಸುವುದಕ್ಕಾಗಿ ರಚಿಸಲ್ಪಟ್ಟಿವೆ. ಮಕ್ಕಳ ಸಮಸ್ಯೆ, ನೀರಿನ ಸಮಸ್ಯೆ, ಪರಿಸರ ಮತ್ತು ಜಲ ಸಂಬಂಧಿ ಪ್ರಶ್ನೆಗಳು, ಸಾಂಕ್ರಾಮಿಕ ರೋಗಗಳು, ದೌರ್ಜನ್ಯ ತಡೆ, ಕಾರ್ಮಿಕರ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತವೆ. ಈ ಬೆಳವಣಿಗೆಯ ಮಾದರಿಗಳಲ್ಲಿ ನಾಗರಿಕ ಸೇವಾ ಟ್ರಸ್ಟ್ ಸರಕಾರದೊಂದಿಗೆ ಕೈ ಜೋಡಿಸುತ್ತಿದ್ದೂ, ನ್ಯೂನ್ಯತೆಗಳನ್ನು ಸರಿಪಡಿಸಿ ಅವುಗಳನ್ನು ಅನುಷ್ಠಾನಕ್ಕೆ ತರುವಂತಹ ಪ್ರಯತ್ನಗಳನ್ನು ಮಾಡುತ್ತಿದೆ.

೩.೧೦ ಸದಸ್ಯತ್ವ ಹೊಂದಿದ ಇತರ ಇಲಾಖೆಗಳು

೧. ಜನಪರ ವೇದಿಕೆ, ಕರ್ನಾಟಕ

೨. ವೊಲಂಟರಿ ಆಕ್ಷನ್ ನೆಟ್‌ವರ್ಕ್ ಇಂಡಿಯಾ, ನವದೆಹಲಿ,

೩. ಕರ್ನಾಟಕ ರಾಜ್ಯ ಸ್ವಯಂ ಸೇವಾ ಸಂಸ್ಥೆಗಳ ಒಕ್ಕೂಟ

೪. ವೊಲಂಟರಿ ಹೆಲ್ತ್ ಎಸೋಷಿಯೇಷನ್ ಆಫ್ ಕರ್ನಾಟಕ

೫. ಪಶ್ಚಿಮ ಘಟ್ಟ ಉಳಿಸಿ ಅಭಿಯಾನ

೬. ರಿಸರ್ಚ್ ಫೌಂಡೇಶನ್ ಫಾರ್ ಸಾಯನ್ಸ್ ಟೆಕ್ನಾಲಜಿ ಮತ್ತು ಇಕಾಲಜಿ ದೆಹಲಿ

೭. ಮಾನವ ಮತ್ತು ಸಾಂಸ್ಥಿಕ ಅಭಿವೃದ್ಧಿ ಸಂಸ್ಥೆ, ಬೆಂಗಳೂರು

೮. ಪಬ್ಲಿಕ್ ಆಫೇರ್ಸ್, ಸೆಂಟರ್ ಬೆಂಗಳೂರು

೯. ಕರ್ನಾಟಕ ರಾಜ್ಯ ಮಟ್ಟದ ಗ್ರಾಮೀಣ ಮಹಿಳಾ ಒಕ್ಕೂಟ

೧೦. ಪರಿಸರ ವಿಜ್ಞಾನ ಕೇಂದ್ರ ಮತ್ತು ವಿಜ್ಞಾನ ಮಂದಿರ ಬೆಂಗಳೂರು

೧೧. ಸಾಮಾಜಿಕ ಮತ್ತು ಆರ್ಥಿಕ ಪರಿವರ್ತನಾ ಸಂಸ್ಥೆ

೧೨. ಸೆಲ್ಫ್ ಎಂಪ್ಲೊಯ್ಡ್ ವಿಮೆನ್ ಎಸೋಷಿಯೇಶನ್, ಹೈದ್ರಾಬಾದ್

೧೩. ಸ್ವದೇಶಿ ಜಾಗರಣಾ ಮಂಚ್, ಕರ್ನಾಟಕ

೧೪. ಬಳಕೆದಾರರ ವೇದಿಕೆ, ಉಡುಪಿ

೧೫. ಕೆ.ಎಂ.ಸಿ. ಆಸ್ಪತ್ರೆ, ಮಂಗಳೂರು

೧೬. ಶ್ರೀ ಪಾಡುರಂಗ ಸೇವಾ ಪ್ರತಿಷ್ಠಾನ ಬೆಳ್ತಂಗಡಿ

೧೭. ಪರಿವರ್ತನ, ಬೆಳಗಾಂ

೧೮. ಅಖಿಲ ಕರ್ನಾಟಕ ಮೀನುಗಾರರ ಪರಷತ್ತು

೧೯. ದ.ಕ. ಜಿಲ್ಲಾ ವಿಚಾರವಾದಿಗಳ ಸಂಘ, ಮಂಗಳೂರು

೨೦. ಸಮಗ್ರ ವಿಕಾಸ ಬೆಂಗಳೂರು

ಮೇಲೆ ಸೂಚಿಸಿದ ಸಂಘಟನೆಗಳು ಮತ್ತು ಸೇವಾ ಸಂಸ್ಥೆಗಳೊಂದಿಗೆ ನಾಗರಿಕ ಸೇವಾ ಟ್ರಸ್ಟ್ ಸಂಪರ್ಕವನ್ನು ಹೊಂದಿದೆ. ತನ್ನ ಹೋರಾಟ ಮತ್ತು ಅಭಿಯಾನಗಳಲ್ಲಿ ಅವುಗಳನ್ನು ತೊಡಗಿಸಿಕೊಳ್ಳುತ್ತದೆ. ಅಂತಹ ಸಂಘ ಸಂಸ್ಥೆಗಳಲ್ಲಿರುವ ವಿಚಾರವಾದಿಗಳನ್ನು ತನ್ನ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಳ್ಳುತ್ತಿದೆ. ಹಲವಾರು ಸಂಘಟನೆಗಳಿಂದ ಆರ್ಥಿಕ ನೆರವನ್ನು ಕೂಡಾ ಪಡೆಯುತ್ತದೆ. ಈ ರೀತಿಯಾಗಿ ಟ್ರಸ್ಟ್ ತನ್ನ ಅಭಿವೃದ್ಧಿ ಮಾದರಿಗಳನ್ನು ಯಶಸ್ವಿಯಾಗಿ ಜಾರಿಗೊಳಿಸುತ್ತಿದೆ.

ಬೆಳ್ತಂಗಡಿ ತಾಲೂಕಿನ ಕೆಲವೊಂದು ಪ್ರಮುಖ ಸರಕಾರೇತರ ಸಂಸ್ಥೆಗಳ ಧ್ಯೇಯೋದ್ದೇಶಗಳನ್ನು ಮತ್ತು ಕಾರ್ಯ ವೈಖರಿಯನ್ನು ಅವಲೋಕಿಸಿದಾಗ ಈ ಸಂಸ್ಥೆಗಳ ಸಮಾಜದ ತಳಸ್ಥರದ ಜನರ ಅಭಿವೃದ್ಧಿಯ ಕಾಳಜಿಯನ್ನು ಹೊಂದಿವೆ ಎಂಬುದು ಸ್ಪಷ್ಟವಾಗುತ್ತದೆ. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ತನ್ನ

ಅಭಿವೃದ್ಧಿ ಮಾದರಿಗಳ ಮೂಲಕ ಇಡೀ ಜಗತ್ತಿನ ಗಮನ ಸೆಳೆಯುವಲ್ಲಿ ಯಶಸ್ವಿಯಾಗಿದೆ. ನಾಗರಿಕ ಸೇವಾ ಟ್ರಸ್ಟ್ ಗುರುವಾಯನಕೆರೆ ಕೂಡಾ ತನ್ನ ಕಾರ್ಯ ಕ್ಷೇತ್ರಕ್ಕೆ ಸಂಭಂದ ಪಟ್ಟಂತೆ ಕೆಲವು ನಿರ್ದಿಷ್ಟ ಉದ್ದೇಶಗಳನ್ನು ಹೊಂದಿದೆ. ತನ್ನ ಮೂಲ ಶಾಸನದಲ್ಲಿ ನಮೂದಿಸಿದಂತೆ ಬಡವರ, ನಿರ್ಗತಿಕರ, ದೀನದಲಿತರ ಮತ್ತು ಅಂಚಿಗೆ ತಳ್ಳಲ್ಪಟ್ಟ ಜನರ ಅಭ್ಯುದಯವೇ ಇದರ ಮುಖ್ಯ ಗುರಿ. ಜನರಲ್ಲಿ ರಾಜಕೀಯ, ಸಾಮಾಜಿಕ ಮತ್ತು ಸಾಂಸ್ಕೃತಿಕ ಜಾಗೃತಿಯನ್ನು ಮೂಡಿಸಿ ಶಿಸ್ತುಬದ್ಧ ಬದುಕನ್ನು ಸಾರುವುದಕ್ಕೆ ಪ್ರೇರೇಪಣೆಯನ್ನು ನೀಡುತ್ತದೆ. ಗ್ರಾಮೀಣ ಜನರಿಗೆ ಸುಸ್ಥಿರ ಕೃಷಿಯ ಬಗ್ಗೆ ತರಬೇತಿ, ಸ್ವ-ಉದ್ಯೋಗಗಳ ಕುರಿತು ಜಾಗೃತಿ, ಶಿಕ್ಷಣಕ್ಕೆ ಪ್ರೋತ್ಸಾಹ, ಸಹಕಾರದಿಂದ ಸಿಗಬಹುದಾದ ಸೌಲಭ್ಯಗಳ ಕುರಿತು ಮಾಹಿತಿ, ಮಾರಕ ರೋಗಗಳ ಕುರಿತು ಅರಿವು ಮತ್ತು ಸ್ವಸಹಾಯ ಗುಂಪುಗಳ ರಚನೆ ಮುಂತಾದವುಗಳ ಮೂಲಕ ತನ್ನ ಯೋಜನೆಗಳನ್ನು ಜಾರಿಗೊಳಿಸುತ್ತದೆ.

ಮೇಲಿನ ವಿವರಗಳು ಸೂಚಿಸುವಂತೆ ನಾಗರಿಕಾ ಸೇವಾ ಟ್ರಸ್ಟ್ ಗುರುವಾಯನಕೆರೆ ಎಂಬ ಈ ಸರಕಾರೇತರ ಸಂಸ್ಥೆ ಜನಹಿತ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತದೆ. ತನ್ನ ಕಾರ್ಯ ವೈಖರಿಯಲ್ಲಿ ಪ್ರಜಾಪ್ರಭುತ್ವದ ಮಾದರಿಯನ್ನೇ ಎತ್ತಿ ಹಿಡಿಯುತ್ತದೆ ಮತ್ತು ಕಾನೂನು ಚೌಕಟ್ಟಿನಲ್ಲಿಯೇ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತದೆ. ಸರಕಾರದ ಜನವಿರೋಧಿ ನೀತಿಯನ್ನು ವಿರೋಧಿಸುವ ಸಂದರ್ಭದಲ್ಲಿ ಕೂಡಾ ಅಂತಹ ನೀತಿಯ ಕುರಿತು ಜನರಲ್ಲಿ ಜಾಗೃತಿ ಮೂಡಿಸಿಯೇ ಹೋರಾಟಗಳನ್ನು ನಡೆಸುತ್ತದೆ. ಹಲವಾರು ಸೇವಾನಿರತ ಸಂಘಟನೆಗಳಲ್ಲಿ ಮತ್ತು ಸರಕಾರಿ ಇಲಾಖೆಗಳಲ್ಲಿ ತನ್ನ ಸದಸ್ಯತ್ವವನ್ನು ಹೊಂದಿದೆ. ಈ ಪ್ರಕ್ರಿಯೆಯಿಂದ ಸರಕಾರದ ಮತ್ತು ವಿವಿಧ ವಿದೇಶಗಳಲ್ಲಿರುವ ಸಂಘ ಸಂಸ್ಥೆಗಳಿಂದ ಅನುದಾನವನ್ನು ಪಡೆಯುವಲ್ಲಿ ಯಶಸ್ವಿಯಾಗಿದೆ. ಆದರೆ ಟ್ರಸ್ಟ್‌ನ ಕಾರ್ಯಕ್ರಮಗಳು ಜನರ ಮೇಲೆ ಎಷ್ಟರ ಮಟ್ಟಿಗೆ ಪರಿಣಾಮ ಬೀರಿವೆ ಮತ್ತು ಜನರ ಸಾಮಾಜಿಕ ಮತ್ತು ಆರ್ಥಿಕ ಬದುಕಿನಲ್ಲಿ ಎಷ್ಟರಮಟ್ಟಿಗೆ ಬದಲಾವಣೆಗೆ ಕಾರಣವಾಗಿದೆ ಎಂಬ ಸತ್ಯಾಂಶವನ್ನು ಜನರಿಂದಲೇ ತಿಳಿದುಕೊಳ್ಳಬೇಕಾಗಿದೆ. ಒಟ್ಟಿನಲ್ಲಿ ತಳಸ್ಥರದ ಜನರನ್ನು ಸಂಘಟಿಸುವುದು ಮತ್ತು ಅವರುಗಳನ್ನು ಬೆಳವಣಿಗೆಯ ಪಥದಲ್ಲಿ ಕೊಂಡುಯ್ಯುವುದು ಇದರ ಮುಖ್ಯ ಗುರಿಯಾಗಿದೆ.

* * * * * * * * * * *

ಅಧ್ಯಾಯ: ನಾಲ್ಕು

ಸಾಮಾಜಿಕ ಬದಲಾವಣೆಗಾಗಿ ಸರಕಾರೇತರ ಸಂಸ್ಥೆಗಳು ಹಮ್ಮಿಕೊಳ್ಳುವ ಕಾರ್ಯಕ್ರಮಗಳು:

೪.೧ ಮಹಿಳಾ ಜಾಗೃತಿ ವೇದಿಕೆಯ ಪ್ರಮುಖ ಕಾರ್ಯಕ್ರಮಗಳು

೪.೨ ಕೃಷಿಕರ ವೇದಿಕೆ ಬೆಳ್ತಂಗಡಿ ಇದರ ಕಾರ್ಯಕ್ರಮಗಳು

೪.೩ ಪರಿಸರಾಸಕ್ತರ ಒಕ್ಕೂಟ ಮತ್ತು ಅದರ ಹೋರಾಟಗಳು

೪.೪ ದಲಿತ ಅಭಿವೃದ್ಧಿ ಸಮಿತಿ ವತಿಯಿಂದ ಹಮ್ಮಿಕೊಂಡ ಕಾರ್ಯಕ್ರಮಗಳು

೪.೫ ಬಡತನ ಮತ್ತು ನಿರುದ್ಯೋಗ ನಿವಾರಣೆಗೆ ಒತ್ತು.

೪.೬ ಕಾರ್ಯಕ್ರಮಗಳ ಕುರಿತು ಜನರ ಪ್ರತಿಕ್ರಿಯೆ

೪.೭ ಜನ ಜಾಗೃತಿಗಾಗಿ ಸಾಹಿತ್ಯ

೪.೮ ಸಮೀಕ್ಷಾ ವರದಿಗಳು – ಅಂಕಿ ಅಂಶ ಮತ್ತು ರೇಖಾ ಚಿತ್ರಗಳೊಂದಿಗೆ

೪.೯ ಶಿಕ್ಷಣ ಮತ್ತು ಸಾಂಸ್ಕೃತಿಕ ಚಿತ್ರಣ

ಅಧ್ಯಾಯ: ನಾಲ್ಕು

ಸಾಮಾಜಿಕ ಬದಲಾವಣೆಗಾಗಿ ಸರಕಾರೇತರ ಸಂಸ್ಥೆಗಳು ಹಮ್ಮಿಕೊಳ್ಳುವ ಕಾರ್ಯಕ್ರಮಗಳು:

ನಾಗರಿಕ ಸೇವಾ ಟ್ರಸ್ಟ್ ಗುರುವಾಯನಕೆರೆ ಇದರ ವತಿಯಿಂದ ಸಾಮಾಜಿಕ ಬದಲಾವಣೆಗೆ ಪೂರಕವಾಗುವ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ. ಟ್ರಸ್ಟ್ ಪ್ರವರ್ತಿತ ಸಂಘಟನೆಗಳಾದ ಕರಾವಳಿ ಮಹಿಳಾ ಜಾಗೃತಿ ವೇದಿಕೆ, ಕೃಷಿಕರ ವೇದಿಕೆ, ದಕ್ಷಿಣ ಕನ್ನಡ ಪರಿಸರಾಸಕ್ತರ ಒಕ್ಕೂಟ ಮತ್ತು ದಲಿತ ಅಭಿವೃದ್ಧಿ ಸಮಿತಿಗಳು ಯಶಸ್ವಿಯಾಗಿ ಸಾಮಾಜಿಕ ಬದಲಾವಣೆಯ ಪ್ರಕ್ರಿಯೆಯಲ್ಲಿ ಕೈಜೋಡಿಸುತ್ತಿವೆ. ಇವುಗಳಲ್ಲದೆ, ಹಲವಾರು ಹೋರಾಟ ಸಮಿತಿಗಳನ್ನು ರಚಿಸಲಾಗಿದ್ದು, ಇವುಗಳು ಮುಖ್ಯ ಸಮಿತಿಗಳೊಂದಿಗೆ ಸಮನ್ವಯದಿಂದ ಕಾರ್ಯನಿರ್ವಹಿಸುತ್ತವೆ. ಪ್ರತಿಯೊಂದು ಸಮಿತಿಯ ನೇತೃತ್ವದಲ್ಲಿ ಕೆಲವೊಂದು ಅತ್ಯುತ್ತಮ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ವಿವಿಧ ಸಮಿತಿಗಳ ನೇತೃತ್ವದಲ್ಲಿ ಹಮ್ಮಿಕೊಳ್ಳಲಾದ ಕಾರ್ಯಕ್ರಮಗಳ ಒಂದು ಸಂಕ್ಷಿಪ್ತ ನೋಟ ಇಲ್ಲಿದೆ.

೪.೧ ಕರಾವಳಿ ಮಹಿಳಾ ಜಾಗೃತಿ ವತಿಯಿಂದ ಹಮ್ಮಿಕೊಂಡ ಪ್ರಮುಖ ಕಾರ್ಯಕ್ರಮಗಳು:

ನಾಗರಿಕ ಸೇವಾ ಟ್ರಸ್ಟ್‌ನ ಅಂಗ ಸಂಸ್ಥೆಯಾಗಿ 1995 ರಲ್ಲಿ ಬೆಳ್ತಂಗಡಿ ತಾಲೂಕು "ಮಹಿಳಾ ಜಾಗೃತಿ ವೇದಿಕೆ" ಆರಂಭಗೊಂಡಿತು. 1999 ರಿಂದ ಈ ವೇದಿಕೆಯು ಸ್ವತಂತ್ರ್ಯ ವೇದಿಕೆಯಾಗಿ ಕಾರ್ಯನಿರ್ವಹಿಸುತ್ತದೆ. ಶ್ರೀಮತಿ ವಿದ್ಯಾನಾಯಕ್ ಈ ವೇದಿಕೆಯ ಸ್ಥಾಪಕ ಅಧ್ಯಕ್ಷರು. ಮಹಿಳೆಯರ ಸಮಸ್ಯೆಗಳನ್ನು ಆಲಿಸಿ ಅದಕ್ಕೆ ಸೂಕ್ತ ಪರಿಹಾರವನ್ನು ಕಂಡುಕೊಳ್ಳುವ ಪ್ರಯತ್ನದಲ್ಲಿ ಈ ವೇದಿಕೆ ಅಭೂತಪೂರ್ವ ಯಶಸ್ಸನ್ನು ಕಂಡಿದೆ. ಮಹಿಳಾ ಶೋಷಣೆ ತಡೆ, ಲಿಂಗ ಸಮಾನತೆ, ಬೀಡಿ ಕಾರ್ಮಿಕರ ಹಿತರಕ್ಷಣೆ, ಆರೋಗ್ಯ, ನಿಸರ್ಗದತ್ತ ಆಹಾರ, ಸ್ವಸಹಾಯ ಸಂಘಗಳ ರಚನೆಯ ಮೂಲಕ ಆರ್ಥಿಕ ಅಭಿವೃದ್ಧಿ ಇತ್ಯಾದಿ ಕಾರ್ಯಕ್ರಮಗಳಲ್ಲಿ ಯಶಸ್ವಿಯಾಗಿ ತೊಡಗಿಸಿಕೊಂಡಿದೆ. ಇದರ ನೇತೃತ್ವದಲ್ಲಿ ಹಮ್ಮಿಕೊಂಡ ಪ್ರಮುಖ ಕಾರ್ಯಕ್ರಮಗಳು ಮತ್ತು ಸಾಧನೆಗಳು ಈ ಕೆಳಗಿನಂತಿವೆ.

- ಮಹಿಳಾ ಶೋಷಣೆಗೆ ಸಂಭಂದಪಟ್ಟ ಸುಮಾರು 700 ಕ್ಕೂ ಹೆಚ್ಚು ಪ್ರಕರಣಗಳನ್ನು ನಿರ್ವಹಣೆ ಮಾಡಲಾಗಿದ್ದು ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳವಲ್ಲಿ ಯಶಸ್ವಿಯಾಗಿದೆ.
- ಮಹಿಳೆಯರ ಸುತ್ತಮುತ್ತ ಹುದುಗಿಕೊಂಡಿರುವ ಮೂಡನಂಬಿಕೆಗಳನ್ನು ದೂರಗೊಳಿಸಿ ಲಿಂಗಸಮಾನತೆಯ ದೃಷ್ಟಿಯಲ್ಲಿ ಯಶಸ್ವಿ ಹೋರಾಟಗಳನ್ನು ಸಂಘಟಿಸಿದೆ.
- ಬೀಡಿ ಕಾರ್ಮಿಕರ ಬೃಹತ್ ಸಮಾವೇಶವನ್ನು ಹಮ್ಮಿಕೊಳ್ಳುವ ಮೂಲಕ ಅವರ ಬೇಡಿಕೆಗಳ ಈಡೇರಿಕೆಗಾಗಿ ಪ್ರಾಮಾಣಿಕ ಪ್ರಯತ್ನ ನಡೆಸಿದೆ. ಈ ಸಂದರ್ಭದಲ್ಲಿ 'ಬೀಡಿ ಉದ್ಯಮ ಉಳಿಸಿ, ಮತ್ತು ಕಾರ್ಮಿಕರನ್ನು ರಕ್ಷಿಸಿ' ಎಂಬ ಘೋಷವಾಕ್ಯದೊಂದಿಗೆ ಸರಕಾರಕ್ಕೆ ಮಹಿಳಾ ಕಾರ್ಮಿಕರ ಸಮಸ್ಯೆಯನ್ನು ಮನದಟ್ಟು ಮಾಡಿದೆ.

- ಮಹಿಳೆಯರ ಆರ್ಥಿಕ ಸಬಲೀಕರಣಕ್ಕಾಗಿ ಸ್ವಸಹಾಯ ಸಂಘಗಳನ್ನು ಸ್ಥಾಪಿಸಿ ಹಲವಾರು ಕುಟುಂಬಗಳಿಗೆ ಆರ್ಥಿಕ ಸ್ವಾವಲಂಬನೆಯನ್ನು ಸಾಧಿಸಲು ನೆರವಾಗಿದೆ.
- ಸಮಸ್ಯೆಗೊಳಗಾದ ಹಲವಾರು ವಿವಾಹಗಳನ್ನು ವೇದಿಕೆವತಿಯಿಂದ ಏರ್ಪಡಿಸಿ ನ್ಯಾಯ ಒದಗಿಸಲಾಗಿದೆ.
- ಆರ್ಥಿಕ ಸಬಲೀಕರಣ ಪ್ರಕ್ರಿಯೆಯನ್ನು ಮತ್ತಷ್ಟು ಬಲಗೊಳಿಸಲು ಹೊಲಿಗೆ ತರಬೇತಿ, ಮಲ್ಲಿಗೆ ಕೃಷಿ, ಸೋಪು ತಯಾರಿಕೆ, ತರಕಾರಿ ಕೈತೋಟ ನಿರ್ಮಾಣ ಮುಂತಾದವುಗಳನ್ನು ಪ್ರೋತ್ಸಾಹಿಸಿದೆ.
- ಮಹಿಳೆಚುರ ಸಬಲೀಕರಣಕ್ಕಾಗಿ ಮಹಿಳೆಯರ 'ಸಹಾಯವಾಣಿ ಕೇಂದ್ರವನ್ನು ಸ್ಥಾಪಿಸಿಲಾಗಿದೆ.
- ಮಹಿಳೆಯರಿಗಾಗಿ ಕಾನೂನು ಮಾಹಿತಿ ಶಿಬಿರಗಳನ್ನು ಹಮ್ಮಿಕೊಂಡಿದೆ.
- ಪರಿಸರಾಸಕ್ತ ಮಹಿಳೆಯರ ಸಮಾವೇಶವನ್ನು ಹಮ್ಮಿಕೊಂಡಿದೆ.
- ರಾಷ್ಟ್ರೀಯ ಮಹಿಳಾ ಆಯೋಗದ ಸದಸ್ಯರ ಮೂಲಕ ಅರಿವು ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ.
- ಬ್ರೇಕ್‌ತ್ರೂ ಸಂಸ್ಥೆ ನವದೆಹಲಿ ಇದರ ಸಹಾಯದೊಂದಿಗೆ 'ಲಿಂಗತ್ವ ಮತ್ತು ಹಿಂಸೆ' ಕುರಿತಾದ ತರಬೇತಿ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದೆ.
- ನೆದರ್‌ಲ್ಯಾಂಡ್‌ನ ಕಿಟ್ ಸಂಸ್ಥೆಯ ವತಿಯಿಂದ ನಡೆಸಲಾದ ಅಂತರಾಷ್ಟ್ರೀಯ "ಲಿಂಗತ್ವ ಮತ್ತು ಅಭಿವೃದ್ಧಿ" ತರಬೇತಿ ಕಾರ್ಯಾಗಾರದಲ್ಲಿ ಸಂಘದ ಸ್ಥಾಪಕಾಧ್ಯಕ್ಷರ ಭಾಗವಹಿಸುವಿಕೆ.
- ಗುರುವಾಯನಕೆರೆಯಲ್ಲಿ ಮಹಿಳಾ ವಿವಿದೊದ್ದೇಶ ಸಹಕಾರ ಸಂಘದ ಸ್ಥಾಪನೆ.
- ಸ್ವಸಹಾಯ ಸಂಘಗಳಿಗೆ ಸಾಲ ವಿತರಣೆ, ಅವುಗಳ ರಚನೆಯ ಬಗ್ಗೆ ಮಾಹಿತಿ ಮತ್ತು ಅವುಗಳ ರಚನೆಯ ಮೂಲಕ ಆರ್ಥಿಕ ಅಭಿವೃದ್ಧಿಗೆ ಪ್ರೋತ್ಸಾಹ.
- ಸ್ತ್ರೀ ಶಕ್ತಿ ಮತ್ತಿತರ ಸ್ವಸಹಾಯ ಸಂಘಗಳಿಗೆ ಜಿಲ್ಲಾ ಪಂಚಾಯತ್ ನೆರವಿನೊಂದಿಗೆ ತರಬೇತಿ ಕಾರ್ಯಗಾರವನ್ನು ಏರ್ಪಡಿಸಲಾಗಿದೆ.
- ಪ್ರಜಾಧಿಕಾರ ಪ್ರತಿಪಾದನಾ ಮಹಾಧಿವೇಶನದಲ್ಲಿ 'ಮಹಿಳೆಯರ ಸಶಕ್ತತೆ ಮತ್ತು ಅಭಿವೃದ್ಧಿ ಕುರಿತಾಗಿ ಸರಕಾರದ ನೀತಿ ಯೋಜನೆಗಳು ಹೇಗಿರಬೇಕು ಎಂಬುದನ್ನು ಚ್ಚರ್ಚಿಸಿ ವೇದಿಕೆವತಿಯಿಂದ ಹಕ್ಕೊತ್ತಾಯಗಳನ್ನು ಮಂಡಿಸಲಾಗಿದೆ. ಈ ಹಕ್ಕೊತ್ತಾಯಗಳು ಮಹಿಳೆಯರಿಗೆ ಸಾಮಾಜಿಕ ನ್ಯಾಯ, ಭದ್ರತೆ, ಸಮಾನತೆ, ಶಿಕ್ಷಣ, ಉದ್ಯೋಗ, ಆರೋಗ್ಯ, ರಾಜಕೀಯ ಸ್ಥಾನಮಾನ, ವಿಧವಾವೇತನ ಮುಂತಾದವುಗಳ ಕುರಿತು ಸರಕಾರದ ಮತ್ತು ಇಲಾಖೆಗಳ ಗಮನ ಸೆಳೆಯುವಲ್ಲಿ ಯಶಸ್ವಿಯಾಗಿವೆ. ಈ ಬೇಡಿಕೆಗಳನ್ನು ಮುಂದಿಟ್ಟು ಹಲವಾರು ಆಂದೋಲನಗಳನ್ನು ಮತ್ತು ಪ್ರತಿಭಟನಾ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಹಮ್ಮಿಕೊಂಡಿದೆ.

ಈ ರೀತಿಯ ಪ್ರಾಮಾಣಿಕ ಕಾರ್ಯಸಾಧನೆಗಾಗಿ ವೇದಿಕೆಗೆ ಹಲವಾರು ಸನ್ಮಾನಗಳು ಪ್ರಶಸ್ತಿಗಳು ದಕ್ಕಿವೆ. ಅವುಗಳಲ್ಲಿ ಈ ಕೆಳಗಿನವು ಪ್ರಾಮುಖ್ಯವಾದುವು.

- ಮಹಿಳಾ ಜಾಗೃತಿ ವೇದಿಕೆಯ ಸ್ಥಾಪಕಾಧ್ಯಕ್ಷರಿಗೆ ಶಾಶ್ವತಿ ಪ್ರತಿಷ್ಠಾನ ಬೆಂಗಳೂರು ಇವರಿಂದ, "ಕಲ್ಪವಲ್ಲಿ ರಾಜ್ಯ ಪ್ರಶಸ್ತಿ"
- ಕರ್ನಾಟಕ ಗ್ರಾಮಾಭಿವೃದ್ಧಿ ಮತ್ತು ಸ್ವಯಂ ಸೇವಾ ಸಂಸ್ಥೆಗಳ ಒಕ್ಕೂಟದಿಂದ ಕರಾವಳಿ ಮಹಿಳಾ ಜಾಗೃತಿ ವೇದಿಕೆಗೆ "ಗ್ರಾಮಾಭಿವೃದ್ಧಿ ಪ್ರಶಸ್ತಿ"
- ಬೆಳ್ತಂಗಡಿ ತಾಲೂಕಿನ 200 ಸಂಸ್ಥೆಗಳನ್ನೊಳಗೊಂಡ ಅಭಿನಂದನಾ ಸಮಿತಿಯಿಂದ "ವೇದಿಕೆಗೆ" ಅಭಿನಂದನೆ
- ವಿವಿಧ ಸಂಘ ಸಂಸ್ಥೆಗಳಿಂದ ಮತ್ತು ವ್ಯಕ್ತಿಗಳಿಂದ ಪ್ರಶಸ್ತಿ ಮತ್ತು ಗೌರವಾರ್ಪಣೆ.

ಒಟ್ಟಿನಲ್ಲಿ ಹೆಣ್ಣು ಮನುಕುಲದ ಆಸ್ತಿ, ಮೂಲಭೂತ ಅಂಶ, ಪ್ರಕೃತಿದೇವಿ, ತ್ಯಾಗಮಯಿ ಎಂಬುದಾಗಿ ಚಿತ್ರಿಸುವ ದಂತಕಥೆಗಳಿಗೆ ಅರ್ಥವನ್ನು ಕಲ್ಪಿಸಿ ಹೆಣ್ಣಿಗೆ ಸಾಮಾಜಿಕ ನ್ಯಾಯವನ್ನು ದೊರಕಿಸಿಕೊಡುವ ನಿಟ್ಟಿನಲ್ಲಿ ನಾಗರಿಕ ಸೇವಾ ಟ್ರಸ್ಟ್‌ನ ಕೊಡುಗೆ ಅಪಾರವಾದುದು. ಈ ದೇಶದಲ್ಲಿ ಹೆಣ್ಣನ್ನು ಎರಡನೇ ದರ್ಜೆಯ ಪ್ರಜೆಯಾಗಿ ಪರಿಗಣಿಸುವ ಕಲ್ಪನೆಯನ್ನು ದೂರಮಾಡಿ ಜೀವ, ಭಾವ ಮತ್ತು ಬದುಕುಗಳ ಸಂಧಿಗ್ಧತೆಯಿಂದ ಪಾರು ಮಾಡುವ ಪ್ರಯತ್ನ ಶ್ಲಾಘನೀಯ. ಗಣ್ಯ ಮಹಿಳಾ ಹೋರಾಟಗಾರರಾದ ಪಾಪಮ್ಮ, ಫಿಲೊಮಿನಾ ಪೆರಿಸ್, ವಿದ್ಯಾನಾಯಕ್, ಮಮತಾ ಘಟ್ಟಿ, ಜ್ಯೋತಿ ರವೀಂದ್ರ, ರಾಜಶ್ರೀ ಹೆಗ್ಡೆ, ಡಾ ವಂದನಾ ಶಿವ, ವಾಣಿ ಪೆರಿಯೋಡಿ, ಶಾಂತಾರೆಡ್ಡಿ, ಗಟ್ರೂಟ್ ವೇಗಸ್ ಮುಂತಾದವರು ಮಹಿಳಾ ಜಾಗೃತಿ ವೇದಿಕೆ ವತಿಯಿಂದ ಹಮ್ಮಿಕೊಂಡ ಕಾರ್ಯಕ್ರಮಗಳಲ್ಲಿ ಸಕ್ರೀಯವಾಗಿ ತೊಡಗಿಸಿಕೊಂಡು ಹೋರಾಟಗಳಿಗೆ ಪ್ರೋತ್ಸಾಹವನ್ನು ನೀಡಿರುತ್ತಾರೆ.

೪.೨ ಕೃಷಿಕರ ವೇದಿಕೆ ಬೆಳ್ತಂಗಡಿ ಮತ್ತು ಅದರ ಕಾರ್ಯಕ್ರಮಗಳು

ಇದು ನಾಗರಿಕ ಸೇವಾಟ್ರಸ್ಟ್ ಗುರುವಾಯನಕೆರೆ ಇದರ ಮತ್ತೊಂದು ಅಂಗಸಂಸ್ಥೆಯಾಗಿದೆ. ಇದು 1995ರಲ್ಲಿ ಸ್ಥಾಪಿಸಿಲ್ಪಟ್ಟಿತ್ತು. ಮೂಲತಃವಾಗಿ ಬೆಳ್ತಂಗಡಿ ತಾಲೂಕಿನಲ್ಲಿ ಸ್ಥಾಪಿಸಿಲ್ಪಟ್ಟ ಈ ವೇದಿಕೆಯು ಕ್ರಮೇಣವಾಗಿ ಎರಡೂ ಜಿಲ್ಲೆಗಳಿಗೂ ವಿಸ್ತರಿಸಲ್ಪಟ್ಟಿತು. ದಕ್ಷಿಣ ಕನ್ನಡ ಮತ್ತು ಉಡುಪಿ ಉಭಯ ಜಿಲ್ಲೆಗಳ ಪ್ರತೀ ತಾಲೂಕುಗಳಲ್ಲಿ ವಲಯ ಸಮಿತಿಗಳನ್ನು ಹೊಂದಿದೆ. ಸುಮಾರು 50 ಸಾವಿರದಷ್ಟು ಸದಸ್ಯರನ್ನು ಹೊಂದಿರುವ ಈ ವೇದಿಕೆ 980 ಕೃಷಿಕರ, ಸಣ್ಣ ಕೃಷಿಕರ ಮತ್ತು ಕೃಷಿಕಾರ್ಮಿಕರ ಘಟಕಗಳನ್ನು ಸ್ಥಾಪಿಸಿ ಕಾರ್ಯಚರಿಸುತ್ತಿದೆ. ಸಣ್ಣ ಕೃಷಿಕರ ಮತ್ತು ಕೃಷಿ ಕಾರ್ಮಿಕರ ಸಮಸ್ಯೆಗಳಿಗೆ ಸ್ಪಂದಿಸುವುದು ಇದರ ಪ್ರಮುಖ ಗುರಿಯಾಗಿದೆ. ಕೃಷಿಕರಲ್ಲಿ ಸ್ವಾಭಿಮಾನವನ್ನು ಬೆಳೆಸಿ ಸುಸ್ಥಿರ ಮತ್ತು ಸಾವಯವ ಕೃಷಿ ಚಟುವಟಿಕೆಯನ್ನು ಪ್ರರೇಪಿಸಿತ್ತದೆ. ಸರಕಾರದ ಪರಿಸರ ವಿರೋಧಿ ಮತ್ತು ಕೃಷಿ ವಿರೋಧಿ ಧೋರಣೆಯ ಮತ್ತು ಯೋಜನೆಗಳ ವಿರುದ್ಧ ಹೋರಾಡುತ್ತಾ ಬಂದಿದೆ. ಕೃಷಿಕರು ಎದುರಿಸುತ್ತಿರುವ ಸಮಸ್ಯೆಗಳನ್ನು ಕ್ರೋಢಿಕರಿಸಿ ಸರಕಾರಕ್ಕೆ ಅವುಗಳನ್ನು ಮನದಟ್ಟು ಮಾಡುವಂತಹ ಕಾರ್ಯದಲ್ಲಿ ಟ್ರಸ್ಟ್ ಪ್ರವರ್ತಿತ ಕೃಷಿ ವೇದಿಕೆಯು ಶ್ಲಾಘನೀಚು ಕಾರ್ಯವನ್ನು ಮಾಡುತ್ತದೆ.

ಜಾಗತೀಕರಣದ ಪರಿಣಾಮದಿಂದಾಗಿ ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ ಕೃಷಿಕರ ಪರಿಸ್ಥಿತಿ ಶೋಚನೀಯವಾಗಿದೆ. ಸಾಕಷ್ಟು ರೈತರು ಆತ್ಮಹತ್ಯೆಗೆ ಶರಣಾದ ನಿದರ್ಶನಗಳಿವೆ. ಭಾರತದಲ್ಲಿ ಕೃಷಿಯ ಹಿನ್ನೆಡೆಗೆ ಕಾರಣಗಳನ್ನು ಅವಲೋಕಿಸುವಾಗ ಮೂಲಭೂತ ಸೌಕರ್ಯಗಳ ಕೊರತೆ ಮುಖ್ಯವಾಗಿ ಕಾಡುತ್ತದೆ. ಅಸಮರ್ಪಕ ರಸ್ತೆಗಳು, ವಿದ್ಯುದೀಕರಣದ ಕೊರತೆ, ಗೋದಾಮುಗಳ ಅಸಮರ್ಪಕ ನಿರ್ವಹಣೆ, ಅಸಮರ್ಪಕ ನೀರಾವರಿ ವ್ಯವಸ್ಥೆ, ಉತ್ತಮ ತಳಿಯ ಬೀಜಗಳ ಕೊರತೆ ಮುಂತಾದವುಗಳು ಮುಂಚೂಣಿಯಲ್ಲಿ ಕಾಣಿಸುವ ಸಮಸ್ಯೆಗಳಾಗಿವೆ. ಕೃಷಿ ಸಾಲದ ವಿಷಯಕ್ಕೆ ಬಂದರೆ ರೈತರಿಗೆ ಅಗತ್ಯ ಪ್ರಮಾಣದ ಸಾಲವನ್ನು ಸೂಕ್ತ ಬಡ್ಡಿದರದಲ್ಲಿ ನೀಡುವುದರಲ್ಲಿ ಸರಕಾರ ವಿಫಲವಾಗುತ್ತಿದೆ. ಕೃಷಿ ಬೆಳೆಗಳಿಗೆ ಸಿಗುವ ಬೆಲೆ ತೀರಾ ಕಡಿಮೆಯಾದುದರಿಂದ ರೈತರ ಆರ್ಥಿಕ ಪರಿಸ್ಥಿತಿ ಎಂದೂ ಸುಧಾರಿಸಲೇ ಇಲ್ಲ. ಕೃಷಿ ಮಾರುಕಟ್ಟೆಗಳ ಮೇಲೆ ಬಹುರಾಷ್ಟ್ರೀಯ ಕಂಪೆನಿಗಳ ಹಿಡಿತದಿಂದಾಗಿ ರೈತರ ಸಮಸ್ಯೆಗಳು ಮತ್ತಷ್ಟು ಜಟಿಲಗೊಂಡಿವೆ. ಇಂತಹ ಅಪಾಯಗಳಿಂದ ಸಣ್ಣ ಕೃಷಿಕರನ್ನು ಮತ್ತು ಕೃಷಿ ಕೂಲಿಗಳನ್ನು ರಕ್ಷಿಸುವುದು ಕೃಷಿಕರ ವೇದಿಕೆಯ ಮುಖ್ಯ ಉದ್ದೇಶವಾಗಿದೆ.

ಪ್ರಮುಖ ಕಾರ್ಯಕ್ರಮಗಳು ಮತ್ತು ಹೋರಾಟಗಳು:

ಸಣ್ಣ ಕೃಷಿಕರು ಮತ್ತು ಕೃಷಿ ಕಾರ್ಮಿಕರು ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರವಾಗಿ ನಾಗರಿಕ ಸೇವಾ ಟ್ರಸ್ಟ್ ಪ್ರವರ್ತಿತ ಕೃಷಿ ವೇದಿಕೆ ವತಿಯಿಂದ ಈ ಕೆಳಗಿನ ಅಂದೋಲನಗಳನ್ನು ಮತ್ತು ಕಾರ್ಯಕ್ರಮಗಳನ್ನು ರೂಪಿಸಲಾಗಿದೆ.

- ಸ್ಥಳೀಯ ಬೀಜ ಸಂರಕ್ಷಣೆಗಾಗಿ "ನಮನ ಬೀಜ ನಿಧಿ"ಯ ಸ್ಥಾಪನೆಯ ಮೂಲಕ 100 ಕ್ಕೂ ಮಿಕ್ಕಿ ಬತ್ತ ಮತ್ತು ತರಕಾರಿ ತಳಿಗಳನ್ನು ಸಂರಕ್ಷಿಸಲಾಗಿದೆ. ಈ ನಿಟ್ಟಿನಲ್ಲಿ ನಾಲ್ಕು ಬೀಜ ನಿಧಿಗಳನ್ನು ಸ್ಥಾಪಿಸಲಾಗಿದೆ.
- ಸ್ಥಳೀಯ ತಳಿಗಳ ಸಂರಕ್ಷಣೆ, ಹೈಬ್ರಿಡ್ ತಳಿಗಳ ಹಾವಳಿ ತಡೆ, ರಾಸಾಯನಿಕ ರಹಿತ ಸಾವಯವ ಕೃಷಿಗೆ ಆದ್ಯತೆ ನೀಡುವ ಸಲುವಾಗಿ ಸ್ಥಳೀಯ ತಳಿಗಳ 'ಬೀಜ ಮೇಳ' ಕಾರ್ಯಕ್ರಮ.
- ನನ್ನ ಭೂಮಿ ನನ್ನ ಕೃಷಿ ಎಂಬ ಕಲ್ಪನೆಯ ಬೆಳವಣಿಗೆ
- ಸುಸ್ಥಿರ ಕೃಷಿಯ ಮೂಲಕ ಸಣ್ಣ ಕೃಷಿಕರ ಸ್ವಾವಲಂಬನೆ ಹಾಗೂ ರಾಸಾಯನಿಕ ರಹಿತ ಕೃಷಿ ಚಟುವಟಿಕೆಗೆ ಪ್ರೋತ್ಸಾಹವಾಗಿ ಎರೆಹುಳ ಗೊಬ್ಬರ ತಯಾರಿಕೆಗೆ ಪ್ರೋತ್ಸಾಹ.
- ಸುಸ್ಥಿರ ಕೃಷಿ ವಿಧಾನಗಳಿಂದ ಬಡವರ ಅಭಿವೃದ್ಧಿ ಮತ್ತು ಮಾಹಿತಿಗಾಗಿ ತರಬೇತಿ ಶಿಬಿರ.
- ಸಣ್ಣ ಕೃಷಿಕರ, ಅನುತ್ಪಾದಕ ಎನ್ನಲಾಗುವ ಭೂಮಿ ಅಭಿವೃದ್ಧಿಗೆ ನೆಲ-ಜಲ ಸಂರಕ್ಷಣಾ ಕಾರ್ಯಕ್ರಮ ಮತ್ತು ನನ್ನ ಭೂಮಿ ನನ್ನ ಕೃಷಿ ಯೋಜನೆಯ ಬಾಗಿದಾರರಿಗೆ ತರಬೇತಿ.
- ಕೃಷಿಕರಿಗೆ ಸ್ವ ಉದ್ಯೋಗ ಮತ್ತು ಆರ್ಥಿಕ ಆಧಾರವಾಗುವ ಬೆಳೆಗಳನ್ನು ಬೆಳೆಸಲು ಪ್ರೋತ್ಸಾಹ ಮತ್ತು ತರಬೇತಿ.
- ರಬ್ಬರ್ ಬೆಳೆಯನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ವಿಚಾರ ಸಂಕೀರಣ.
- ಹೊಸ ಆರ್ಥಿಕ ನೀತಿಯಿಂದ ಕೃಷಿ ಕ್ಷೇತ್ರದ ಮೇಲಾಗುವ ಪರಿಣಾಮಗಳ ಕುರಿತು ಆರ್ಥಿಕ ತಜ್ಞರಿಂದ ಉಪನ್ಯಾಸ.

- ರೈತ ವಿರೋಧಿ ಬೀಜ ಮಸೂದೆ ಮತ್ತು ನೀರಿನ ಖಾಸಗೀಕರಣ ನೀತಿ ವಿರುದ್ಧ ರಾಜ್ಯಮಟ್ಟದ ಸಮಾವೇಶ.
- ರೈತರ ಬೀಜದ ಮೇಲಿನ ಪಾರಂಪರಿಕ ಹಕ್ಕುಗಳ ರಕ್ಷಣೆ, ನೀರಿನ ನೀತಿ ಮತ್ತು ಪರಿಸರ ನೀತಿಯ ಬದಲಾವಣೆಗೆ ರಾಜ್ಯಮಟ್ಟದ ಕಾರ್ಯಾಗಾರ.
- ಕೃಷಿ ಕಾರ್ಮಿಕರ ಮತ್ತು ಸಣ್ಣ ರೈತರ ಬೃಹತ್ ಸಮಾವೇಶ.
- ಎಚ್.ಪಿ.ಸಿ.ಎಲ್ ಪೈಪ್ ಲೈನ್ ಹಾದುಹೋಗಲಿದ್ದ ತಾಲೂಕಿನ ಕೃಷಿ ಭೂಮಿಯ ರಕ್ಷಣೆಗಾಗಿ ಹೋರಾಟ.
- 2007 ಪ್ರೆಬ್ರವರಿಯಲ್ಲಿ ನಡೆದ ಪ್ರಜಾಧಿಕಾರ ಮಹಾಧಿವೇಶನದಲ್ಲಿ ಸಣ್ಣ ಕೃಷಿಕರ ಮತ್ತು ಕೃಷಿ ಕಾರ್ಮಿಕರ ಸಶಕ್ತತೆ ಮತ್ತು ಅಭಿವೃದ್ಧಿ ಕುರಿತು ಸರಕಾರದ ನೀತಿ ಹೇಗಿರಬೇಕು ಎಂಬುದರ ಕುರಿತು ಹಕ್ಕೋತ್ತಾಯವನ್ನು ಮಂಡಿಸಲಾಯಿತು. ಸಾವಯವ ಕೃಷಿಗೆ ಆದ್ಯತೆ, ದೇಶೀ ಗೋವು ತಳಿ ಸಂರಕ್ಷಣೆ, ಕೃಷಿ ಭೂಮಿ ಪರಭಾರೆ ನಿಶೇಧ, ಸಣ್ಣ ನೀರಾವರಿಗೆ ಆದ್ಯತೆ, ಮಾರುಕಟ್ಟೆ ಸುಧಾರಣೆ, ಬೆಳೆ ವಿಮೆ, ಉದ್ಯೋಗ ಸೃಷ್ಟಿ, ಸರಳ ಕೃಷಿ ಯಂತ್ರ, ಸಾಲ ಯೋಜನೆ ಮುಂತಾದವುಗಳು ಹಕ್ಕೊತ್ತಾಯದ ಪ್ರಮುಖ ಅಂಶಗಳು. ಟ್ರಸ್ಟ್ ವತಿಯಿಂದ ಹಮ್ಮಿಕೊಂಡ ಕಾರ್ಯಕ್ರಮಗಳಲ್ಲಿ ದೇಶದ ವಿವಿಧ ಭಾಗಗಳಿಂದ ತಜ್ಞರು ಭಾಗವಹಿಸಿರುವುದು ಹೋರಾಟದ ಗಂಭೀರತೆಯನ್ನು ಸೂಚಿಸುತ್ತದೆ. ಡಾ ವಂದನಾ ಶಿವ, ಪ್ರೋ ಬಿ.ಎಂ. ಕುಮಾರ ಸ್ವಾಮಿ, ಡಾ ಎಚ್.ಸಿ. ಶರಶ್ಚಂದ್ರ, ಶಂಪಾ ದೈತೋಟ, ಮುಂತಾದ ತಜ್ಞರು ಭಾಗವಹಿಸಿದ್ದರು. ಇವರಲ್ಲದೆ, ಸರಕಾರದ ವತಿಯಿಂದ ಜನಪ್ರತಿನಿಧಿಗಳ ಭಾಗವಹಿಸುವಿಕೆ ಒಂದು ಆರೋಗ್ಯಕರ ಬೆಳವಣಿಗೆಯಾಗಿದ್ದು ವೇದಿಕೆ ಪ್ರಜಾಸತ್ತಾತ್ಮಕ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿದೆ ಎಂಬುದಕ್ಕೆ ಸಾಕ್ಷಿಯಾಗಿದೆ. ಒಟ್ಟಿನಲ್ಲಿ ಕೃಷಿಕರ ವೇದಿಕೆ, ಸಣ್ಣ ಕೃಷಿಕರ ಮತ್ತು ಕೃಷಿ ಕಾರ್ಮಿಕರ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವ ಪ್ರಮಾಣಿಕ ಪ್ರಯತ್ನವನ್ನು ಮಾಡುತ್ತಿದೆ.

೪.೩ ಪರಿಸರಾಸಕ್ತರ ಒಕ್ಕೂಟ ಮತ್ತು ಅದರ ಕಾರ್ಯಕ್ರಮಗಳು

1987 ರಲ್ಲಿ ಸ್ಥಾಪಿಸಲ್ಪಟ್ಟ ಬೆಳ್ತಂಗಡಿ ತಾಲೂಕು ಪರಿಸರ ಜಾಗೃತಿ ಒಕ್ಕೂಟವು ನಾಗರಿಕ ಸೇವಾ ಟ್ರಸ್ಟ್‌ನ ಮತ್ತೊಂದು ಅಂಗ ಸಂಸ್ಥೆಯಾಗಿದೆ. ಪರಿಸರ ಜಾಗೃತಿ, ಅರಣ್ಯ ಸಂರಕ್ಷಣೆ, ಜಲ ಸಂರಕ್ಷಣೆ ಮತ್ತು ಮಾಲಿನ್ಯ ತಡೆ ಮುಂತಾದವುಗಳು ಈ ವೇದಿಕೆಯ ಪ್ರಮುಖ ಧ್ಯೇಯಗಳಾಗಿವೆ. ಒಟ್ಟಿನಲ್ಲಿ ಶುದ್ಧ ಗಾಳಿ, ಶುದ್ಧ ನೀರು, ಶುದ್ಧ ಆಹಾರ ಮುಂತಾದವುಗಳಿಗಾಗಿ ಹಲವಾರು ಹೋರಾಟಗಳನ್ನು ಮತ್ತು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಬಂದಿದೆ.

- 1987ರಲ್ಲಿ ಪಶ್ಚಿಮ ಘಟ್ಟ ಉಳಿಸಿ ಪಾದಯಾತ್ರೆಯೊಂದಿಗೆ ಈ ವೇದಿಕೆಯ ಕಲಾಪಗಳು ಪ್ರಾರಂಭವಾದುವು.
- 1991–92 ರಲ್ಲಿ ಬೆಳ್ತಂಗಡಿ ತಾಲೂಕು ಪರಿಸರ ಜಾಗೃತಿ ಒಕ್ಕೂಟವನ್ನು ಸ್ಥಾಪಿಸಿತು.
- ಅರಣ್ಯ ಸಮಿತಿ ರಚನೆ
- ವಿಶ್ವ ಪರಿಸರ ಮಾಸಾಚರಣೆ,
- ರಕ್ಷಿತಾರಣ್ಯದಿಂದ ಮರಗಳ್ಳತನ ತಡೆ

- ಅರಣ್ಯ ಯೋಜನೆ ಕಾರ್ಯಾಗಾರ
- ವಿಶ್ವಸಂಸ್ಥೆಯ ಅಭಿವೃದ್ಧಿ ಮಾದರಿಗಳಿಗೆ ಒತ್ತು ನೀಡುತ್ತಾ ಪವಿತ್ರ ವನಗಳ ಮತ್ತು ಸಿಹಿ ನೀರಿನ ಮೀನುಗಳ ಸಂರಕ್ಷಣೆ
- ಅರಣ್ಯ ಯೋಜನೆ ಮಾಹಿತಿ ಕುರಿತ ಕೃತಿ ಬಿಡುಗಡೆ
- ತಾಲೂಕು ಮಟ್ಟದಲ್ಲಿ ಮಕ್ಕಳಿಗಾಗಿ ಪರಿಸರ ಸ್ಪರ್ಧೆ
- ದಕ್ಷಿಣ ಕನ್ನಡ ಉಳಿಸಿ ಅಭಿಯಾನ ಮತ್ತು ಪರಿಸರಾಸಕ್ತ ಮತ್ತು ಕೃಷಿಕರ ಬೃಹತ್ ಸಮಾವೇಶ
- ಕೃಷಿ ಮತ್ತು ಪರಿಸರ ವಿನಾಶಕಾರಿ ಯೋಜನೆಗಳ ವಿರುದ್ಧ ಬೃಹತ್ ಪ್ರತಿಭಟನೆ
- ಶುದ್ಧ ನೀರು, ಶುದ್ಧ ಗಾಳಿ, ಶುದ್ಧ ಆಹಾರ ನಮ್ಮ ಹಕ್ಕು ಎಂಬ ಕಲ್ಪನೆಯೊಂದಿಗೆ ಪಶ್ಚಿಮ ಘಟ್ಟ ಉಳಿಸಿ ಅಭಿಯಾನ.
- ಮಂಗಳೂರು, ಬಂಟ್ವಾಳ ಮತ್ತು ಬೆಳ್ತಂಗಡಿ ತಾಲೂಕಿನ ಕೃಷಿ ಭೂಮಿ ನಡುವಿನಿಂದ ಹಾದು ಹೋಗಲಿದ್ದ ಎಚ್‌ಪಿಸಿಎಲ್ ಪೈಪ್‌ಲೈನ್ ವಿರುದ್ಧ ಪ್ರತಿಭಟನೆ.
- ನೇತ್ರಾವತಿ ನದಿ ತಿರುಗಣೆ ಯೋಜನೆಯ ವಿರುದ್ಧ ನೇತ್ರಾವತಿ ಉಳಿಸಿ ಪಾದಯಾತ್ರೆ
- ಸಣ್ಣ ರೈತರನ್ನು ಅರಣ್ಯ ಇಲಾಖೆಯ ದಬ್ಬಾಳಿಕೆಯಿಂದ ಒಕ್ಕಲೆಬ್ಬಿಸುವುದರ ವಿರುದ್ಧ ಮತ್ತು ಆದಿವಾಸಿಗಳಿಗೆ ಅರಣ್ಯ ಇಲಾಖಾ ಸಿಬಂದಿಗಳು ನೀಡುತ್ತಿರುವ ಕಿರುಕುಳದ ವಿರುದ್ಧ ಪ್ರತಿಭಟನೆ.
- ರಕ್ಷಿತಾರಣ್ಯ ಸಂತ್ರಸ್ತರ ಜಿಲ್ಲಾ ಮಟ್ಟದ ಪ್ರತಿಭಟನಾ ಸಭೆ.
- ಬೆಳ್ತಂಗಡಿ ತಾಲೂಕಿನ ಕಡಿರುದ್ಯಾವರದಲ್ಲಿ ಅರಣ್ಯಾಧಿಕಾರಿಗಳ ದೌರ್ಜನ್ಯ ವಿರುದ್ಧ ಪ್ರತಿಭಟನೆ.
- ರಾಷ್ಟ್ರೀಯ ಉದ್ಯಾನವನ ಮತ್ತು ಆದಿವಾಸಿಗಳ ಹಕ್ಕುಗಳ ವಿಚಾರ ಸಂಕೀರಣ.
- ಪ್ರಾಕೃತಿಕ ಸಂಪನ್ಮೂಲಗಳ ರಕ್ಷಣೆಯ ದೃಷ್ಟಿಯಿಂದ ಕೃಷಿಕರ ಮತ್ತು ಮೀನುಗಾರರ ಹಕ್ಕುಗಳ ರಕ್ಷಣೆಗಾಗಿ ನಿರಂತರ ಹೋರಾಟ.
- ದ.ಕನ್ನಡ ಉಳಿಸಿ ಅಭಿಯಾನದ ಅಂಗವಾಗಿ ಎಂಆರ್‌ಪಿಎಲ್ ವಿರುದ್ಧ ಡಿಸಿ ಕಚೇರಿಯೆದುರು ಪ್ರತಿಭಟನೆ.
- ಅಂತರ್ಜಲಮಟ್ಟ ಸಂರಕ್ಷಣೆಯ ದೃಷ್ಟಿಯಿಂದ ಇಂಗುಗುಂಡಿ ನಿರ್ಮಾಣ, ಮಳೆ ನೀರು ಕೊಯ್ಲು, ನೀರು ಇಂಗಿಸೋಣ ಬನ್ನಿ ಆಂದೋಲನ ಕುರಿತಾದ ರಾಜ್ಯಮಟ್ಟದ ಕಾರ್ಯಾಗಾರ.
- ಪರಿಸರ ಸಂರಕ್ಷಣೆಯ ಕಾಳಜಿಗಾಗಿ ಪರಿಸರ ಸಂರಕ್ಷಣೆ ಪ್ರಶಸ್ತಿ ಮತ್ತು ರಾಜೀವ ಗಾಂಧಿ ಪರಿಸರ ಪ್ರಶಸ್ತಿ ಮತ್ತಿತರ ಪ್ರಶಸ್ತಿಗಳ ಗೌರವ.

ಒಟ್ಟಿನಲ್ಲಿ ಪರಿಸರದ ಏಳಿಗೆ ಇಂದಿನ ಒಂದು ಪ್ರಮುಖ ಅವಶ್ಯಕತೆಯೆಂದು ಜನಪ್ರತಿನಿಧಿಗಳಿಗೆ ಮತ್ತು ಜನಸಾಮಾನ್ಯರಿಗೆ ತಿಳಿಯಪಡಿಸುವಲ್ಲಿ ನಾಗರಿಕ ಸೇವಾ ಟ್ರಸ್ಟ್ ಪ್ರಮುಖ ಪಾತ್ರವನ್ನು ವಹಿಸುತ್ತದೆ. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಸಾಕಷ್ಟು ಪರಿಸರಾಸಕ್ತರನ್ನು ಹುಟ್ಟು ಹಾಕುವಲ್ಲಿ ಯಶಸ್ವಿಯಾಗಿರುವ ನಾಗರಿಕ ಸೇವಾ

ಟ್ರಸ್ಟ್ ತನ್ನ ಕಾರ್ಯ ಸಾಧನೆಯಲ್ಲಿ ಅಭೂತ ಪೂರ್ವ ಯಶಸ್ಸನ್ನು ಕಂಡಿದೆ ಎಂದರೆ ತಪ್ಪಾಗಲಾರದು. ಸರಕಾರದ ಧೋರಣೆಗಳನ್ನು ನೇರವಾಗಿ ವಿರೋಧಿಸದೆ ಪ್ರಜಾ ಸತ್ತಾತ್ಮಕ ರೀತಿಯಲ್ಲಿ ತನ್ನ ಕಾರ್ಯ ಕ್ರಮಗಳನ್ನು ಅನುಷ್ಠಾನಗೊಳಿಸಿದ ಕೀರ್ತಿ ನಾಗರಿಕ ಸೇವಾ ಟ್ರಸ್ಟ್‌ಗೆ ಸಲ್ಲುತ್ತದೆ. ಈ ಕಾರಣಕ್ಕಾಗಿಯೇ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಪರಿಸರದ ಏಳಿಗೆಗಾಗಿ ಶ್ರಮಿಸುತ್ತಿರುವ ಸಂಘ ಸಂಸ್ಥೆಗಳಲ್ಲಿ ನಾಗರಿಕ ಸೇವಾ ಟ್ರಸ್ಟ್ ಮುಂಚೂಣಿಯಲ್ಲಿದೆ. ಪರಿಸರ ಜಾಗೃತಿಯನ್ನು ಮೂಡಿಸುವ ನಿಟ್ಟಿನಲ್ಲಿ ಹಲವಾರು ಯಶಸ್ವಿ ಆಂದೋಲನಗಳನ್ನು, ಕಾರ್ಯಾಗಾರಗಳನ್ನು ಮತ್ತು ಸಮ್ಮೇಳಗಳನ್ನು ಹಮ್ಮಿಕೊಂಡ ಕೀರ್ತಿ ಈ ಸಂಘಟನೆಗೆ ಸಲ್ಲುತ್ತದೆ. ಜನ ಪ್ರತಿನಿಧಿಗಳು, ಪರಿಸರಾಸಕ್ತರು, ರಾಜಕೀಯ ದುರೀಣರು, ಸಾಮಾಜಿಕ ಮತ್ತು ಧಾರ್ಮಿಕ ಮುಖಂಡರು, ಸಾಹಿತಿಗಳು, ಇವರ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದು ಇವರ ಕೆಲಸಗಳಿಗೆ ಸಾಕ್ಷಿ. ಡಾ। ಯು.ಆರ್ ಅನಂತಮೂರ್ತಿ, ಬಿ.ಎಂ. ಇದಿನಬ್ಬ, ಡಾ। ಶಿವರಾಮ ಕಾರಂತ, ಶ್ರೀ ಪಡ್ರೆ, ಡಾ। ವಂದನಾ ಶಿವ, ಪಲಿಮಾರು ಶ್ರೀಗಳು, ಸ್ಥಳೀಯ ಶಾಸಕರುಗಳು, ಡಾ। ರವೀಂದ್ರನಾಥ್ ಶಾನುಭಾಗ್, ಮುಂತಾದವರು ಭಾಗವಹಿಸಿರುವರು. ಒಟ್ಟಿನಲ್ಲಿ ಶುದ್ಧ ಜಲ, ಶುದ್ಧ ನೀರು, ಶುದ್ಧ ಗಾಳಿ, ಪರಿಸರ ಮಾಲಿನ್ಯ ತಡೆ ಮತ್ತು ಪ್ರಾಕೃತಿಕ ಸಂಪನ್ಮೂಲಗಳ ರಕ್ಷಣೆಯೇ ಈ ವೇದಿಕೆಯ ಉದ್ದೇಶ.

೪.೪ ದಲಿತ ಅಭಿವೃದ್ಧಿ ಸಮಿತಿ ಮತ್ತು ಅದರ ಕಾರ್ಯಕ್ರಮಗಳು

ದಲಿತರ ಸಶಕ್ತತೆಗಾಗಿ ನಾಗರಿಕ ಸೇವಾ ಟ್ರಸ್ಟ್ ವತಿಯಿಂದ ರಚಿಸಲ್ಪಟ್ಟ ಸಮಿತಿಯಾಗಿದೆ. ನಮ್ಮ ದೇಶ ಸ್ವಾತಂತ್ರವಾಗಿ 6 ದಶಕಗಳಾದರೂ ದಲಿತರ ಸ್ಥಿತಿಗತಿ ಶೋಚನೀಯವಾಗಿದೆ. ದಲಿತರಿಗೆ ರಾಜಕೀಯ ಸ್ಥಾನಮಾನ, ಆರ್ಥಿಕ ಮತ್ತು ಸಾಮಾಜಿಕ ಸಮಾನತೆಯನ್ನು ಕಲ್ಪಿಸುವಲ್ಲಿ ನಮ್ಮ ದೇಶದ ಇಡೀ ಪ್ರಜಾಪ್ರುತ್ವ ವ್ಯವಸ್ಥೆಯೇ ವಿಫಲವಾಗಿದೆ. ಇಂದಿಗೂ ದಲಿತರ ಮೇಲೆ ಅಸ್ಪ್ರಶ್ಯತೆಯೆಂಬ ಮಹಾಭೂತ ಕಾಡುತ್ತಿದೆ. ಇಂದು ದೇಶದ ಅಭಿವೃದ್ಧಿಯಾಗಬೇಕಿದ್ದರೆ ಬಹು ಸಂಖ್ಯೆಯಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರ ಸ್ಥಾನಮಾನದಲ್ಲಿ ಅಭಿವೃದ್ಧಿ ಆಗಲೇ ಬೇಕಾಗಿದೆ. ಈ ಹಿನ್ನೆಲೆಯಲ್ಲಿ ನಾಗರಿಕ ಸೇವಾ ಟ್ರಸ್ಟ್ ಕಾರ್ಯಚರಿಸುತ್ತಾ 'ದಲಿತ ಅಭಿವೃದ್ಧಿ ಸಮಿತಿ' ಎಂಬ ಅಂಗ ಸಂಸ್ಥೆಯೊಂದನ್ನು ಸ್ಥಾಪಿಸಿದೆ.

ದಲಿತ ಅಭಿವೃದ್ಧಿ ಸಮಿತಿಯ ಅಧ್ಯಕ್ಷರಾದ ಕೆ. ಸೋಮ ಎಂಬುವರು ಅಭಿಪ್ರಾಯ ಪಡುವಂತೆ "ದಲಿತರನ್ನು ಭಾರತದ ಮೂಲನಿವಾಸಿಗಳೆಂಬ ನೆಲೆಯಲ್ಲಿ ಶೋಷಣೆಗೊಳಪಡಿಲಾಗುತ್ತಿದೆ. ಅವರ ಚರಿತ್ರೆಯನ್ನು ಅವಲೋಕಿಸುವಾಗ ಅವರು ದೌರ್ಜನ್ಯಕ್ಕೊಳಗಾದ ಹಲವಾರು ಸಂದರ್ಭಗಳು ನೆನಪಾಗುತ್ತವೆ. ನಮ್ಮ ಸಮಾಜದ ಕಟ್ಟುಪಾಡುಗಳ ಪ್ರಕಾರ ನಾವು ನಮ್ಮ ಪೂರ್ವಜರನ್ನು ಕೊಂದ ಕತ್ತಿಗುರಾಣಿಗಳನ್ನು ಪೂಜಿಸುತ್ತೇವೆ. ಆದರೆ ಮಾನವ ಜಾತಿಗೆ ಸೇರಿದ ದಲಿತರನ್ನು ಮಾನವರನ್ನಾಗಿ ಸ್ವೀಕರಿಸುತ್ತಿಲ್ಲ ಎಂದು ಖೇಧ ವ್ಯಕ್ತ ಪಡಿಸಿದರು. ಶಿಕ್ಷಣ, ಜಾಗೃತಿ ಮತ್ತು ಹೋರಾಟಗಳೇ ಇವರ ಸಮಸ್ಯೆಗಳಿಗೆ ಪರಿಹಾರ ಎಂಬುದಾಗಿ ನುಡಿಯುತ್ತಾ ನಾಗರಿಕ ಸೇವಾ ಟ್ರಸ್ಟ್ ಈ ನಿಟ್ಟಿನಲ್ಲಿ ಪ್ರಶಂಸನೀಯ ಕಾರ್ಯವನ್ನು ಮಾಡುತ್ತಿದೆ ಎಂದರು." ದಲಿತರ ಅಭಿವೃದ್ಧಿ ಸಮಿತಿಯು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

- ಬೆಳ್ತಂಗಡಿ ತಾಲೂಕು ಮಟ್ಟದ ದಲಿತರ ಬೃಹತ್ ಸಮಾವೇಶ. ಈ ಕಾರ್ಯಕ್ರಮದಲ್ಲಿ ಖ್ಯಾತ ಸಾಹಿತಿಗಳು ಮತ್ತು ಸ್ವಾತಂತ್ರ್ಯ ಹೋರಾಟಗಾರರ ಭಾಗವಹಿಸುವಿಕೆ.
- ಪ್ರತೀ ವರ್ಷ ದಲಿತರ ಶಿಕ್ಷಣ ಪ್ರೋತ್ಸಾಹ ಕಾರ್ಯಕ್ರಮ.
- ಬೆಳ್ತಂಗಡಿ ತಾಲೂಕಿನ ದಲಿತರ ಸ್ಥಿತಿಗತಿಯ ಬಗ್ಗೆ ಸಂಪೂರ್ಣ ಮಾಹಿತಿಯನ್ನೊಳಗೊಂಡ "ಹೊರ ಅಂಚಿನಿಂದ ಕೇಂದ್ರ ಬಿಂದುವಿನತ್ತ" ಎಂಬ ಕೃತಿ ಬಿಡುಗಡೆ.
- ದಲಿತರ ಮನೆ ಭೇಟಿ ಮತ್ತು ದಲಿತ ಕಾಲೋನಿಗಳಲ್ಲಿ ವಿದ್ಯಾರ್ಥಿಗಳಿಗೆ ಉಡುಪು ವಿತರಣೆ.
- ಡಾ। ಬಾಬಾ ಸಾಹೇಬ್ ಅಂಬೇಡ್ಕರ್ ಜನ್ಮದಿನಾಚರಣೆಯ ಪ್ರಯುಕ್ತ ಪ್ರತೀ ವರ್ಷ ವಿಚಾರಗೋಷ್ಠಿ.
- ದಲಿತರ ಮನೆಗಳಲ್ಲಿ ಶೌಚಾಲಯ ಮತ್ತು ಮತ್ತಿತರ ಸೌಲಭ್ಯಗಳತ್ತ ಗಮನ.
- ಜಾತಿಯತೆ, ಅಸ್ಪ್ರಶ್ಯತೆಯಂತ ಪಿಡುಗಗಳ ನಿವಾರಣೆಗಾಗಿ ನಿರಂತರ ಹೋರಾಟ.
- ದಲಿತರಿಗಾಗಿ ಮೀಸಲಿಟ್ಟ ಭೂಮಿಯನ್ನು ಮರು ಸ್ವಾಧೀನ ಪಡಿಸುವುದರ ವಿರುದ್ಧ ಹೋರಾಟ.
- ಸರಕಾರದಿಂದ ನಡೆಸಲ್ಪಡುವ ದೇವಾಲಯಗಳ ಆಡಳಿತ ಮಂಡಳಿಗಳಲ್ಲಿ ದಲಿತರ ಪ್ರಾತಿನಿಧ್ಯಕ್ಕೆ ಒತ್ತಾಯ.
- ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಒಳ ಮೀಸಲಾತಿ ಸೌಲಭ್ಯಕ್ಕಾಗಿ ಬೇಡಿಕೆ.
- ದಲಿತರ ಅಭಿವೃದ್ಧಿ ನಿಗಮದ ಮೂಲಕ ದಲಿತರಿಗೆ ಭೂಮಿ ಖರೀದಿಗೆ ಸಾಲ ನೀಡುವ ಯೋಜನೆಯ ಪರಿಣಾಮಕಾರಿ ಅನುಷ್ಠಾನ.
- ದಲಿತರ ಸಾಂಸ್ಕೃತಿಕ ಆಚರಣೆ, ಮತ್ತು ಮೌಲ್ಯಗಳನ್ನು ಎತ್ತಿಹಿಡಿದು ರಾಷ್ಟ್ರದ ಭಾವೈಕ್ಯತೆ ಮತ್ತು ಸಮಗ್ರತೆಯನ್ನು ಸಾಧಿಸಲು ವಿಶೇಷ ಆದ್ಯತೆ.
- ದಲಿತ ಕಾಲೋನಿಗಳ ಸಮೀಪ ಎಲ್ಲಾ ಸೌಲಭ್ಯವಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸ್ಥಾಪನೆಗೆ ಬೇಡಿಕೆ.
- ಸರಕಾರದಿಂದ ನಡೆಸಲ್ಪಡುವ ದಲಿತ ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳ ಸಮರ್ಥ ನಿರ್ವಹಣೆಗೆ ಒತ್ತು.
- ಸ್ವಸಹಾಯ ಸಂಘಗಳ ರಚನೆಯ ಮೂಲಕ ದಲಿತರ ಆರ್ಥಿಕ ಸ್ವಾವಲಂಬನೆಗೆ ಒತ್ತು.

ಒಟ್ಟಿನಲ್ಲಿ ದಲಿತ ಅಭಿವೃದ್ಧಿ ಸಮಿತಿಯು ದಲಿತರ ಸಶಕ್ತತೆಗಾಗಿ ನಿರಂತರ ಕಾರ್ಯ ಪ್ರವೃತ್ತವಾಗಿದೆ. ಜನಪ್ರತಿನಿಧಿಗಳಿಗೆ ಮತ್ತು ಸರಕಾರಕ್ಕೆ ದಲಿತರ ಸಮಸ್ಯೆಗಳನ್ನು ಮನದಟ್ಟು ಮಾಡುವಲ್ಲಿ ದಲಿತ ಅಭಿವೃದ್ಧಿ ಸಮಿತಿಯು ಶ್ರಮಿಸುತ್ತಿದೆ. ದಲಿತರಿಗೆ ಸರಕಾರದಿಂದ ಸಿಗಬಹುದಾದ ಸೌಲಭ್ಯಗಳ ಬಗ್ಗೆ ಮಾಹಿತಿಯನ್ನು ನೀಡುವ ಮೂಲಕ ಅಂತಹ ಯೋಜನೆಗಳ ಸಮರ್ಥ ಅನುಷ್ಠಾನಕ್ಕಾಗಿ ಪ್ರಯತ್ನಿಸುತ್ತಿದೆ. ಸಂದರ್ಶನ ಮತ್ತು ಸಮೀಕ್ಷೆಯು ಸೂಚಿಸುವಂತೆ ನಾಗರಿಕ ಸೇವಾ ಟ್ರಸ್ಟ್ ದಲಿತರನ್ನು ಹೊರ ಅಂಚಿನಿಂದ ಸಮಾಜದ ಮುಖ್ಯ ವಾಹಿನಿಗೆ ತರುವ ಪ್ರಾಮಾಣಿಕ ಪ್ರಯತ್ನದಲ್ಲಿ ತೊಡಗಿದೆ.

೪.೫ ಬಡತನ ಮತ್ತು ನಿರುದ್ಯೋಗ ನಿರ್ಮೂಲನ:

ನಾಗರಿಕ ಸೇವಾ ಟ್ರಸ್ಟ್ ಸೇರಿದಂತೆ ಹೆಚ್ಚಿನ ಎಲ್ಲಾ ಸರಕಾರೇತರ ಸಂಸ್ಥೆಗಳೊಂದಿಗೆ ಒಡನಾಟ ಹೊಂದಿರುವ ಹೆಚ್ಚಿನ ಜನರು ತೀರಾ ಬಡವರು. ಹೆಚ್ಚಿನವರು ತಮ್ಮ ಜೀವನೋಪಾಯಕ್ಕಾಗಿ ಕೂಲಿ, ಬೀಡಿ ವೃತ್ತಿ ಮತ್ತಿತ್ತರ ಸಣ್ಣಪುಟ್ಟ ಉದ್ಯೋಗಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಇಂತಹ ಜನರು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ತಾವು ಪಡೆಯುವ ದಿನಗೂಲಿ ತಮ್ಮ ಕುಟುಂಬಗಳ ಬೇಡಿಕೆಗಳನ್ನು ಪೂರೈಸಲು ಸಾಕಾಗುತ್ತಿಲ್ಲ. ಬ್ಯಾಂಕುಗಳಿಂದ ಮತ್ತಿತ್ತರ ಆರ್ಥಿಕ ಸಂಸ್ಥೆಗಳಿಂದ ಸಾಲವನ್ನು ಪಡೆಯುವಂತದ್ದು ಸಾಮಾನ್ಯವಾಗಿದೆ. ಸಾಲವನ್ನು ಪಡೆಯುವಂತಹ ಸಂದರ್ಭದಲ್ಲಿ ತಮ್ಮಲ್ಲಿರುವ ಆಸ್ತಿ ಮತ್ತು ಒಡವೆಗಳನ್ನು ಅಡವು ಹಾಕುವುದು ಅನಿವಾರ್ಯವಾಗಿರುತ್ತದೆ. ಸಾಲವನ್ನು ಮರುಪಾವತಿಸಲು ಸಾಧ್ಯವಾಗದೆ ಕೆಲವೊಂದು ಸಂದರ್ಭದಲ್ಲಿ ತಮ್ಮ ಆಸ್ತಿ ಮತ್ತು ಚಿನ್ನಾಭರಣಗಳನ್ನು ಸಂಪೂರ್ಣವಾಗಿ ಕಳೆದುಕೊಂಡ ಹಲವಾರು ನಿದರ್ಶನಗಳಿವೆ. ಈ ಸಮಸ್ಯೆಗಳಿಂದ ಮುಕ್ತವಾಗುವುದು ಸಾಧ್ಯವಾಗದೆ, ದುಶ್ಚಟಗಳಿಗೆ ಬಲಿಬಿದ್ದು ಆರೋಗ್ಯವನ್ನು ಕಳೆದುಕೊಂಡ ಹಲವಾರು ದಾಖಲೆಗಳಿವೆ. ಇಂತಹ ಜನರಿಗೆ ಸರಕಾರೇತರ ಸಂಸ್ಥೆಗಳು ಸಹಾಯವಾಗುತ್ತಿವೆ. ಸ್ವ ಸಹಾಯ ಸಂಘಗಳ ಮೂಲಕ ಸಾಲವನ್ನು ನೀಡಿ ಪರ್ಯಾಯ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಪ್ರಯತ್ನವನ್ನು ಮಾಡುತ್ತಿವೆ. ಹೈನುಗಾರಿಕೆ, ಮಲ್ಲಿಗೆ ಕೃಷಿ, ಸೋಪು ತಯಾರಿಕೆ, ಮುಂತಾದ ಸ್ವ ಉದ್ಯೋಗಗಳಲ್ಲಿ ಜನರಿಗೆ ತರಬೇತಿಯನ್ನು ನೀಡಿ ಅಂತಹ ಉದ್ಯೋಗಗಳಲ್ಲಿ ತೊಡಗಿಸಿಕೊಳ್ಳುವ ಅವಕಾಶಗಳನ್ನು ಕಲ್ಪಿಸಿಲಾಗುತ್ತದೆ. ಮಧ್ಯಪಾನ, ಧೂಮಾಪಾನ, ಮತ್ತಿತರ ದುಶ್ಚಟಗಳ ಕುರಿತು ಜಾಗೃತಿಯನ್ನು ಮೂಡಿಸಿ ಜನರಿಗೆ ಆರೋಗ್ಯವನ್ನು ಕಾಪಾಡುವ ಪ್ರೇರಣೆಯನ್ನು ನೀಡುತ್ತವೆ. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ನೇತೃತ್ವದಲ್ಲಿ 'ಮಧ್ಯಮುಕ್ತ ಸಮಾಜದ ಕಲ್ಪನೆ' ಮತ್ತು "ಸ್ವಾಸ್ತ್ಯ ಸಂಕಲ್ಪ"ದಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ. ಮಧ್ಯವರ್ಜನ ಶಿಬಿರಗಳನ್ನು ಆಯೋಜಿಸಿ ಸಾವಿರಾರು ಕುಟುಂಬಗಳನ್ನು ರಕ್ಷಿಸಿದ ಕೀರ್ತಿ ಈ ಸಂಸ್ಥೆಗೆ ಸಲ್ಲುತ್ತದೆ. ನಾಗರಿಕ ಸೇವಾ ಟ್ರಸ್ಟ್ ಕೂಡಾ ಈ ನಿಟ್ಟಿನಲ್ಲಿ ನಿರಂತರವಾಗಿ ಹೋರಾಟಗಳನ್ನು ಸಂಘಟಿಸಿ ಬಡತನ ಮತ್ತು ನಿರುಧ್ಯೋಗದ ನಿರ್ಮೂಲನಕ್ಕೆ ಶ್ರಮಿಸುತ್ತದೆ. ಮಂಗಳೂರು, ಕೆಎಂಸಿ ಆಸ್ಪತ್ರೆಯ ಸಹಯೋಗದೊಂದಿಗೆ ಆರೋಗ್ಯ ಜಾಗೃತಿ ಮೂಡಿಸುವ ಶಿಬಿರಗಳನ್ನು ಏರ್ಪಡಿಸುತ್ತದೆ. ಒಟ್ಟಿನಲ್ಲಿ ಜನರಿಗೆ ಆರ್ಥಿಕ ಸ್ವಾವಲಂಬನೆಯ ಬದುಕನ್ನು ಸಾರಲು ಸರಕಾರೇತರ ಸಂಸ್ಥೆಗಳು ಸಹಾಯವಾಗುತ್ತವೆ.

೪.೬ ಕಾರ್ಯಕ್ರಮಗಳ ಕುರಿತು ಜನರ ಪ್ರತಿಕ್ರಿಯೆ

ನಾಗರಿಕ ಸೇವಾ ಟ್ರಸ್ಟ್ ಬೆಳ್ತಂಗಡಿ ತಾಲೂಕಿನ ವಿವಿಧ ಗ್ರಾಮಗಳಲ್ಲಿ ತನ್ನ ಸದಸ್ಯರನ್ನು ಹೊಂದಿದೆ. ಟ್ರಸ್ಟ್ ಕಾರ್ಯಾಚರಿಸುತ್ತಿರುವ ಪ್ರದೇಶದ ಸಮೀಕ್ಷೆಯು ಸೂಚಿಸುವಂತೆ ಕೃಷಿ, ಕೃಷಿ ಕೂಲಿ, ದಲಿತರು, ಹಿಂದುಳಿದ ವರ್ಗದವರು ಮತ್ತು ಮಹಿಳೆಯರು ಟ್ರಸ್ಟ್ ಪ್ರವರ್ತಿತ ವಿವಿಧ ವೇದಿಕೆಗಳಲ್ಲಿ ಸದಸ್ಯತ್ವವನ್ನು ಹೊಂದಿದ್ದಾರೆಂಬ ಅಂಶವೂ ತಿಳಿದು ಬಂದಿದೆ. ಕೆಲವರು ಸುಮಾರು 10 ವರ್ಷಕ್ಕಿಂತ ಮೇಲ್ಪಟ್ಟ ಅವಧಿಯಿಂದ ಟ್ರಸ್ಟ್ ಪ್ರವರ್ತಿತ ವೇದಿಕೆಗಳಲ್ಲಿ ಸದಸ್ಯತ್ವ ಹೊಂದಿದ್ದು, ಇನ್ನು ಕೆಲವರು 5 ರಿಂದ 10 ವರ್ಷಗಳಿಂದೀಚೆಗೆ ಸದಸ್ಯರಾಗಿದ್ದಾರೆ. ಕೆಲವರು ತೀರ ಇತ್ತೀಚೆಗೆ ಟ್ರಸ್ಟ್

ಪ್ರವರ್ತಿತ ವೇದಿಕೆಗಳಿಗೆ ಸೇರ್ಪಡೆಗೊಂಡಿದ್ದಾರೆ. ಟ್ರಸ್ಟ್ ಪ್ರವರ್ತಿತ ಪ್ರತಿಯೊಂದು ವೇದಿಕೆಯು (ಕೃಷಿಕ, ದಲಿತ, ಮಹಿಳಾ ಜಾಗೃತಿ, ಪರಿಸರಾಸಕ್ತ) ಸ್ಥಳೀಯ ಘಟಕಗಳನ್ನು ಹೊಂದಿದ್ದು ಪ್ರತೀ ಘಟಕದಲ್ಲಿ ಸುಮಾರು 15 ರಿಂದ 20 ಸದಸ್ಯರನ್ನು ಹೊಂದಿದೆ. ಸದಸ್ಯತ್ವ ಶುಲ್ಕವು ಕನಿಷ್ಟವಾಗಿದ್ದು ಅಜೀವ ಸ್ವರೂಪದ್ದಾಗಿದೆ. ಹೆಚ್ಚಿನ ಸದಸ್ಯರು ಕೇವಲ ಒಂದೇ ವೇದಿಕೆಯ ಸದಸ್ಯರಾಗಿದ್ದು 25% ದಷ್ಟು ಮಂದಿ 1 ಕ್ಕಿಂದ ಹೆಚ್ಚು ವೇದಿಕೆಗಳಲ್ಲಿ ಸದಸ್ಯತ್ವವನ್ನು ಹೊಂದಿದ್ದಾರೆ. ಕೆಲವರು ಇತರ ಕೆಲವು ಸ್ವಯಂ ಸೇವಾ ಸಂಸ್ಥೆಗಳೊಂದಿಗೆ ಕೂಡಾ ತಮ್ಮ ಒಡನಾಟ ಮತ್ತು ಸದಸ್ಯತ್ವನ್ನು ಹೊಂದಿದ್ದಾರೆ. ಟ್ರಸ್ಟ್ ಪ್ರವರ್ತಿತ ವೇದಿಕೆಗಳ ಸ್ಥಳೀಯ ಘಟಕಗಳು ವಾರಕ್ಕೊಮ್ಮೆ ಎಂಬಂತೆ ತಮ್ಮ ಸಭೆಗಳನ್ನು ನಡೆಸುತ್ತಿದ್ದು ವಿವಿಧ ವಿಚಾರಗಳನ್ನು ಚರ್ಚಿಸುತ್ತಿವೆ. ಸಾಲ ವಿತರಣೆಯ ಕುರಿತಾದ ನಿರ್ಧಾರಗಳನ್ನು ಕೂಡಾ ಇಲ್ಲಿ ಕೈಗೊಳ್ಳಲಾಗುತ್ತದೆ. ಈ ಸದಸ್ಯರುಗಳಿಗೆ ಟ್ರಸ್ಟ್ ವತಿಯಿಂದ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

ಸಮೀಕ್ಷೆಯಿಂದ ತಿಳಿದು ಬಂದಂತೆ ಎಲ್ಲಾ ವೇದಿಕೆಗಳ 90% ಕ್ಕಿಂತ ಹೆಚ್ಚು ಮಂದಿ ಟ್ರಸ್ಟ್ ಬಗ್ಗೆ ಉತ್ತಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಪರಿಸರ ಸಂರಕ್ಷಣೆ, ಸಾಮಾಜಿಕ ಪಿಡುಗುಗಳ ವಿರುದ್ಧ ಜನಜಾಗೃತಿ, ಆರೋಗ್ಯ ತಪಾಸಣೆ, ಶುಚಿತ್ವ, ಗ್ರಾಮಗಳ ಉದ್ಧಾರ, ಅಸಮಾನತೆಯ ನಿರ್ಮೂಲನ, ಮತ್ತು ಲಿಂಗ ತಾರತಮ್ಯತೆಯ ನಿರ್ಮೂಲನ ಮುಂತಾದ ಕಾರ್ಯಕ್ರಮಗಳನ್ನು ಟ್ರಸ್ಟ್ ಸಕ್ರೀಯವಾಗಿ ಹಮ್ಮಿಕೊಳ್ಳುತ್ತದೆ ಎಂಬುದು ಸದಸ್ಯರ ಅಭಿಪ್ರಾಯವಾಗಿದೆ. ಜನರ ಕೊರತೆಗಳನ್ನು ಪಟ್ಟಿ ಮಾಡಿ ಅವುಗಳನ್ನು ಸರಕಾರದ ಸಂಬಂಧಪಟ್ಟ ಇಲಾಖೆಗಳ ಗಮನಕ್ಕೆ ತರುವ ವ್ಯವಸ್ಥಿತವಾದ ಪ್ರಯತ್ನ ಮಾಡಲಾಗುತ್ತದೆ. ಸಮೀಕ್ಷೆ ಮತ್ತು ಅಧ್ಯಯನ ವರದಿಗಳ ಮೂಲಕ ಜನರು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸ್ಥಾನಮಾನದ ಕುರಿತು ವಿವರಗಳನ್ನು ಸಂಗ್ರಹಿಸಲಾಗುತ್ತದೆ. ಜನರ ಸಮಸ್ಯೆಗಳಿಗೆ ಸರಕಾರದ ಸ್ಪಂದನೆಗಾಗಿ ಹಕ್ಕೋತ್ತಾಯಗಳನ್ನು ಮಾಡಲಾಗುತ್ತದೆ. ಒಟ್ಟಿನಲ್ಲಿ ಟ್ರಸ್ಟ್‌ನ ಚಟುವಟಿಕೆಗಳು ಮತ್ತು ಕಾರ್ಯಕ್ರಮಗಳು ಅದರಲ್ಲಿ ತೊಡಗಿಸಿಕೊಂಡ ಜನರ ದೈನಂದಿನ ಜೀವನದ ಅವಿಭಾಜ್ಯ ಅಂಗವಾಗಿದೆ. 100% ರಷ್ಟು ಮಂದಿ ಕೂಡಾ ಟ್ರಸ್ಟ್‌ನೊಂದಿಗೆ ತಮ್ಮ ಒಡನಾಟವನ್ನು ಮುಂದುವರಿಸಲು ಇಚ್ಛಿಸುತ್ತಿದ್ದು ಟ್ರಸ್ಟ್‌ನ ಕಾರ್ಯಕ್ರಮಗಳ ಯಶಸ್ಸಿಗೆ ಸಾಕ್ಷಿಯಾಗಿದೆ. ಟ್ರಸ್ಟ್ ಪ್ರವರ್ತಿತ ವೇದಿಕೆಗಳು ಜನರ ಸಮಸ್ಯೆಗಳನ್ನು ಆಲಿಸಿ ಪರಿಹಾರವನ್ನು ಕಂಡುಕೊಳ್ಳುವ ಪ್ರಯತ್ನವನ್ನು ಮಾಡುತ್ತಿವೆ ಎಂಬುದು ಸಮೀಕ್ಷೆಯಿಂದ ತಿಳಿದು ಬಂದಿದೆ. ಕೆಲವೊಂದು ಸಮಸ್ಯೆಗಳಿಂದ ಜನರು ಮುಕ್ತರಾಗುವಲ್ಲಿ ಟ್ರಸ್ಟ್ ಸಹಕಾರಿಯಾಗಿದೆ ಎಂಬುದು ಜನರ ಅಭಿಪ್ರಾಯವಾಗಿದೆ.

೪.೭ ಜನಜಾಗೃತಿಗಾಗಿ ಸಾಹಿತ್ಯ

ಸಾಹಿತ್ಯ ಮತ್ತು ಪತ್ರಕೋದ್ಯಮ ನಾಗರಿಕರ ಹಕ್ಕು ಬಾದ್ಯತೆಗಳನ್ನು ಎತ್ತಿ ಹಿಡಿದು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ರಕ್ಷಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ. ನಾಗರಿಕ ಸೇವಾ ಟ್ರಸ್ಟ್ ಗುರುವಾಯನಕೆರೆ ಇದರ ವಿವಿಧ ವೇದಿಕೆಗಳ ಆಶ್ರಯದಲ್ಲಿ ಹಲವಾರು ಕೃತಿಗಳು, ಕೈಪಿಡಿಗಳು, ಸ್ಮರಣ ಸಂಚಿಕೆಗಳು, ಸಮೀಕ್ಷಾ ವರದಿಗಳು, ಸಂಗ್ರಹಗಳು, ಮತ್ತು ಅನುವಾದಗಳು ಪ್ರಕಟಿಸಲ್ಪಟ್ಟಿವೆ. ಇವುಗಳು ವೇದಿಕೆಯು ಕಾರ್ಯಚರಿಸುತ್ತಿರುವ ಪ್ರದೇಶದ ಜನರ ಸ್ಥಿತಿಗತಿ ಮತ್ತು ಸಮಸ್ಯೆಗಳ ಕುರಿತಂತೆ ಬೆಳಕನ್ನು ಚೆಲ್ಲುತ್ತದೆ, ಮಾತ್ರವಲ್ಲದೆ, ಪರಿಹಾರೋಪಾಯಗಳ ಬಗ್ಗೆ ಕೂಡ ಚಿಂತನೆಯನ್ನು

ಹೊಂದಿವೆ. ಪರಿಸರ ಸಂರಕ್ಷಣೆ, ಕಾರ್ಮಿಕರ ಸಮಸ್ಯೆಗಳು ಮಹಿಳೆಯರ ಸ್ಥಿತಿಗತಿ ಮತ್ತು ಸಮಸ್ಯೆಗಳು, ಸಣ್ಣ ಕೃಷಿಕರ ಸಮಸ್ಯೆಗಳು ಇತ್ಯಾದಿ ವಿಷಯಗಳು ಈ ಸಾಹಿತ್ಯಗಳಲ್ಲಿ ಚರ್ಚೆಯ ವಿಷಯಗಳಾಗಿದ್ದು, ಅಂತವುಗಳ ಕುರಿತು ಜಾಗೃತಿ ಮೂಡಿಸುವ ಪ್ರಯತ್ನದಲ್ಲಿ ಯಶಸ್ವಿಯಾಗಿವೆ. ಕೆಲವೊಂದು ವರದಿಗಳಂತೂ ಒಂದು ಗ್ರಾಮದ ಜನತೆಯ ಸಂಪೂರ್ಣ ಚಿತ್ರಣವನ್ನು ಬಯಲಿಗೆಳೆಯುವಲ್ಲಿ ಯಶಸ್ವಿಯಾಗಿವೆ. ಈ ಕೆಳಗಿನ ಕೆಲವೊಂದು ಪ್ರಮುಖ ಕೃತಿಗಳು ಮತ್ತು ವರದಿಗಳು ಬೆಳ್ತಂಗಡಿ ತಾಲೂಕಿನ ಜನರ ಸ್ಥಿತಿಗತಿಯ ಕುರಿತಾದ ಮಾಹಿತಿಯನ್ನು ನೀಡುತ್ತದೆ.

- ಅರಣ್ಯ ಇಲಾಖೆಯ ನಿಬಂಧನೆಗಳು
- ಜನೋಪಯೋಗಿ ಸಸ್ಯ ಸಂಪತ್ತು
- ನೆಲ ಜಲ ಉಳಿಸಿ
- ಗ್ರಾಮ ಅರಣ್ಯ ಸಮಿತಿ ರಚನೆ
- ಅಳಿವಿನ ಬೀತಿಯಲ್ಲಿ ಕುದುರೆಮುಖ
- ದಕ್ಷಿಣ ಕನ್ನಡದ ದೇವರ ಕಾಡುಗಳು,
- ಪರಿಸರ ಗೀತೆಗಳು, ಮುಂತಾದ ಸಾಹಿತ್ಯ ಮತ್ತು ಸಮೀಕ್ಷಾ ವರದಿಗಳು ಅರಣ್ಯ ಸಂಪತ್ತು ಮತ್ತು ಪರಿಸರ ಸಂರಕ್ಷಣೆಯ ಕುರಿತು ಜಾಗೃತಿಯನ್ನು ಮೂಡಿಸುತ್ತವೆ.
- ಹೊರ ಅಂಚಿನಿಂದ ಕೇಂದ್ರ ಬಿಂದುವಿನತ್ತ
- ಮೂಡ ನಂಬಿಕೆಗಳನ್ನು ತೊಲಗಿಸಿ
- ಮುನ್ನಡೆಯ ಕಹಳೆ
- ಹೆಜ್ಜೆ ಗುರುತು, ಮುಂತಾದುವುಗಳು ದಲಿತರ ಮತ್ತು ಹಿಂದುಳಿದ ವರ್ಗಗಳ ಸಮಸ್ಯೆಗಳ ಕುರಿತು ಬೆಳಕು ಚೆಲ್ಲುತ್ತದೆ ಮಾತ್ರವಲ್ಲದೆ, ಅವರನ್ನು ಸಮಾಜದ ಮುಖ್ಯವಾಹಿನಿಗೆ ತರುವ ನಿಟ್ಟಿನಲ್ಲಿ ಜಾಗೃತಿಯನ್ನು ಮಾಡಿಸುತ್ತವೆ. ಇವುಗಳಲ್ಲಿ ಮುನ್ನಡೆಯ ಕಹಳೆ ಎಂಬ ಲೇಖನಗಳ ಸಂಗ್ರಹವು ರೈತರ, ಕಾರ್ಮಿಕರ, ಬೀಡಿ ಕೆಲಸಗಾರರ ಏಳಿಗಾಗಿ ಹಮ್ಮಿಕೊಂಡ ಮಹಾ ಸಮ್ಮೇಳನದ ಕೊಡುಗೆಯಾಗಿದೆ.
- ಸಾಮಾನ್ಯ ಕಾಯಿಲೆಗಳಿಗೆ ಗಿಡ ಮೂಲಿಕಾ ಔಷಧಿಗಳು,
- ನಿಸರ್ಗದತ್ತ ಆಹಾರ
- ಮಂಗನ ಕಾಯಿಲೆಗೆ ಪರಿಹಾರ ಮಾರ್ಗ
- ಸಾವಯವ ಕೃಷಿ, ಮುಂತಾದುವುಗಳು ಆರೋಗ್ಯದ ಮತ್ತು ಆರೋಗ್ಯಕರ ಆಹಾರ ಸೇವನೆಯ ಕುರಿತಾದ ವಿವರಗಳನ್ನು ಹೊಂದಿವೆ.
- ಜನತಾ ವೈವಿಧ್ಯ ದಾಖಲಾತಿ ಮಿತ್ತಬಾಗಿಲು ಗ್ರಾಮ
- ಜನತಾ ಜೀವ ವೈವಿಧ್ಯ ದಾಖಲಾತಿ ಕೊಯ್ಯೂರು ಗ್ರಾಮ
- ಜನತಾ ಜೀವ ವೈವಿಧ್ಯ ದಾಖಲಾತಿ ಹೇಗೆ?

ಮುಂತಾದವುಗಳು ಸಂಬಂಧಪಟ್ಟ ಗ್ರಾಮದ ಕುರಿತಾದ ಸಮಗ್ರ ಮಾಹಿತಿಯನ್ನು ಹೊಂದಿವೆ. ಉಳಿದಂತೆ, ಮಹಿಳಾ ಧನಿ ಎಂಬ ಕೃತಿಯು ಮಹಿಳೆಯರ ಮತ್ತು ಬೀಡಿ ಕಾರ್ಮಿಕರ ಸಮಸ್ಯೆಗಳ ಕುರಿತು ಜಾಗೃತಿಯನ್ನು ಮೂಡಿಸುತ್ತದೆ. ಸ್ವ ಉದ್ಯೋಗ ಮಾಹಿತಿ ಮತ್ತು ಕಾನೂನು ಜಾಗೃತಿ, ಮಾಹಿತಿ ಹಕ್ಕು ಮುಂತಾದ ಕೃತಿಗಳ ಜನರ ದೈನಂದಿನ ಜೀವನದಲ್ಲಿ ಎದುರಾಗುವ ಕೆಲವೊಂದು ಸಮಸ್ಯೆಗಳಿಗೆ ಕಾನೂನು ವ್ಯಾಪ್ತಿಯ ಸರಿಹಾರೋಪಾಯಗಳನ್ನು ಸೂಚಿಸುತ್ತವೆ. ಒಟ್ಟಿನಲ್ಲಿ ನಾಗರಿಕ ಟ್ರಸ್ಟ್ ವತಿಯಿಂದ ಪ್ರಕಾಶಿಸಲ್ಪಡುವ ಸಾಹಿತ್ಯ ಜನಸಾಮಾನ್ಯರಿಗೆ ಉಪಯುಕ್ತವಾಗಿದೆ ಎಂಬುದನ್ನು ಅಧ್ಯಯನದಿಂದ ತಿಳಿದಂತಾಗಿದೆ. ಇವುಗಳೂ ಕೂಡಾ ಸಾಮಾಜಿಕ ಬದಲಾವಣೆಯ ಮಾನದಂಡಗಳು ಎಂಬುದಾಗಿ ತಿಳಿದುಕೊಳ್ಳಬಹುದು.

ಜನರ ಸ್ಥಿತಿಗತಿಯ ಕುರಿತು ಗಮನಿಸಿದ ಅಂಶಗಳು:

ನಾಗರಿಕ ಸೇವಾ ಟ್ರಸ್ಟ್ ಕಾರ್ಯ ಚರಿಸುತ್ತಿರುವ ಪ್ರದೇಶದಲ್ಲಿ ಕ್ಷೇತ್ರಕಾರ್ಯ ಮತ್ತು ಸಂದರ್ಶನ ನಡೆಸಿದ ಪರಿಣಾಮವಾಗಿ ಫಲಾನುಭವಿಗಳ ಈ ಕೆಳಗಿನ ವಿವರಗಳು ಲಭ್ಯವಾಗಿದೆ. ಮೂರು ವೇದಿಕೆಗಳಿಗೆ ಸೇರಿದ ಸುಮಾರು 60 ಮಂದಿಯ ಸಮೀಕ್ಷೆಯನ್ನು ನಡೆಸಲಾಯಿತು. ಈ ಸಮೀಕ್ಷೆಯು ಸೂಚಿಸುವ ಪ್ರಕಾರ ಹೆಚ್ಚಿನವರು ಬಡವರು ಮತ್ತು ಆರ್ಥಿಕವಾಗಿ ಹಿಂದುಳಿದವರು ಎಂದು ತಿಳಿಯಲಾಯಿತು. ಕೃಷಿ, ಕೂಲಿ ವೃತ್ತಿ ಮತ್ತು ಸಣ್ಣ ಪುಟ್ಟ ಸ್ವ ಉದ್ಯೋಗಗಳು ಇವರ ಆದಾಯದ ಮೂಲಗಳಾಗಿವೆ. ಹೆಚ್ಚಿನವರ ಆದಾಯವು ರೂ 20,000 ಕ್ಕಿಂತ ಕೆಳಮಟ್ಟದಲ್ಲಿದ್ದು, ಕೇವಲ 5% ದಷ್ಟು ಜನರು 20,000 ಕ್ಕಿಂತ ಮೇಲ್ಪಟ್ಟ ಆದಾಯವನ್ನು ಹೊಂದಿದ್ದಾರೆ. ಮಹಿಳಾ ಜಾಗೃತಿ ವೇದಿಕೆಯ ಹೆಚ್ಚಿನ ಸದಸ್ಯರು ಬೀಡಿ ಕಾರ್ಮಿಕರಾಗಿದ್ದಾರೆ. ವಿದ್ಯಾಭ್ಯಾಸದ ಮಟ್ಟವನ್ನು ಗಮನಿಸಿದಾಗ ಹೆಚ್ಚಿನವರು ಪ್ರಾಥಮಿಕ ಶಿಕ್ಷಣವನನು ಮಾತ್ರ ಪಡೆದವರಾಗಿದ್ದಾರೆ. ಕೃಷಿ ಭೂಮಿಯ ವಿಸ್ತೀರ್ಣವು ತುಂಬಾ ಕಡಿಮೆಯಾಗಿದ್ದು ಕೇವಲ ಶೇ 20 ರಷ್ಟು ಮಂದಿ ಮಾತ್ರ 1 ಎಕ್ರೆಗಿಂತ ಮೇಲ್ಪಟ್ಟು ಭೂಮಿಯನ್ನು ಹೊಂದಿದ್ದಾರೆ. ಬತ್ತದ ಕೃಷಿ, ಅಡಿಕೆ, ತೆಂಗು ಮತ್ತು ತರಕಾರಿ ಇವರ ಪ್ರಮುಖ ಬೆಳೆಗಳು.


ಸಮೀಕ್ಷೆಯಿಂದ ತಿಳಿದು ಬಂದಂತೆ ಶೇ 90 ಕ್ಕಿಂತ ಹೆಚ್ಚು ಮಂದಿ ಸಾಮಾನ್ಯ ಹಂಚಿನ ಮನೆಗಳಲ್ಲಿ ವಾಸವಾಗಿದ್ದಾರೆ. ಕೆಲವೊಂದು ಮನೆಗಳು ಸರಕಾರದ ವಿವಿಧ ಯೋಜನೆಗಳಡಿಯಲ್ಲಿ ಕಟ್ಟಲಾಗಿದ್ದು ಮತ್ತು ಕೆಲವು ಮನೆಗಳು ಸಾಲದಿಂದ ಕಟ್ಟಲ್ಪಟ್ಟಿವೆ. ಹುಲ್ಲಿನ ಚಾವಣಿಗಳು ತೀರಾ ವಿರಳವಾಗಿ ಕಂಡುಬಂದಿವೆ. ಹೆಚ್ಚಿನ ಮನೆಗಳಲ್ಲಿ ಸ್ನಾನ ಗೃಹ ಮತ್ತು ಶೌಚಾಲಯಗಳಿದ್ದು ಕೇವಲ ದಲಿತರ ಕೆಲವು ಮನೆಗಳಲ್ಲಿ ಇದರ ಕೊರತೆ ಕಂಡು ಬಂದಿದೆ. 95% ರಷ್ಟು ಮಂದಿ ಉರುವಲಿಗಾಗಿ ಕಟ್ಟಿಗೆಯನ್ನು ಅವಲಂಬಿಸಿದ್ದಾರೆ. ಬಾವಿ ಮತ್ತು ಸಾರ್ವಜನಿಕ ನಳ್ಳಿ ನೀರು ಕುಡಿಯುವ ನೀರಿನ ಮೂಲಗಳಾಗಿವೆ. ಮೂರು ವೇದಿಕೆಗಳು ಸೇರಿದಂತೆ ಶೇ 20 ರಷ್ಟು ಮನೆಯಲ್ಲಿ ವಿದ್ಯುತ್ ಸೌಕರ್ಯವಿಲ್ಲ. ಭಾಗ್ಯ ಜ್ಯೋತಿ ಯೋಜನೆಯಡಿಯಲ್ಲಿ ವಿದ್ಯುತ್ ಸಂಪರ್ಕವನ್ನು ಪಡೆದವರ ಸಂಖ್ಯೆ ತೀರಾ ವಿರಳ. ಮನೋರಂಜನಾ ಮಾಧ್ಯಮಗಳಲ್ಲಿ ಹೆಚ್ಚಿನವರು ರೇಡಿಯೋ ಮತ್ತು ಸ್ಟಿರಿಯೋ ಹೊಂದಿದ್ದಾರೆ. ಕೇವಲ ಶೇ 30 ರಷ್ಟು ಮನೆಗಳಲ್ಲಿ ದೂರದರ್ಶನ ಸೌಲಭ್ಯವಿದೆ. ಶೇ 75 ರಷ್ಟು ಮಂದಿ ದೂರವಾಣಿ ಸೌಕರ್ಯವನ್ನು ಹೊಂದಿದ್ದು ಇದರಲ್ಲಿ ಹೆಚ್ಚಿನವೂ ಮೊಬೈಲ್ ಫೋನ್‌ಗಳಾಗಿವೆ. ವಾಹನಗಳು ತುಂಬಾ ವಿರಳವಾಗಿದ್ದು ಅಸಮರ್ಪಕ ರಸ್ತೆ ಸಂಪರ್ಕವನ್ನು ಗುರುತಿಸಲಾಗಿದೆ. ಒಳಚರಂಡಿ ಮತ್ತು ಸ್ವಚ್ಚತೆಯ ಕಡೆಗೆ ಹೆಚ್ಚಿನ ಆದ್ಯತೆ ನೀಡುವುದು ಅಗತ್ಯವಾಗಿದೆ.

೪.೮ ಸಮೀಕ್ಷಾ ವರದಿಗಳು – ಅಂಕಿ ಅಂಶ ಮತ್ತು ರೇಖಾ ಚಿತ್ರಗಳೊಂದಿಗೆ

ವೈಯುಕ್ತಿಕ ವಿವರಗಳು:


1. ವಿದ್ಯಾರ್ಹತೆ:

	ಉತ್ತರಿಸಿದವರ ಸಂಖ್ಯೆ	ಅನಕ್ಷರಸ್ಥ	1 ರಿಂದ 7 ರವರೆಗೆ	8 ರಿಂದ 10 ವರೆಗೆ	ಮೇಲ್ಪಟ್ಟು
ಕೃಷಿಕರ ವೇದಿಕೆ	20	20%	60%	10%	10%
ಮಹಿಳಾ ಜಾಗೃತಿ ವೇದಿಕೆ	20	5%	85%	10%	---
ದಲಿತ ಅಭಿವೃದ್ಧಿ ಸಮಿತಿ	20	10%	55%	30%	05%




2. ಭೂಮಿಯ ವಿಸ್ತೀರ್ಣ:

	ಉತ್ತರಿಸಿದವರ ಸಂಖ್ಯೆ	5 ಸೆಂಟ್ಸ್	6 ರಿಂದ 15 ಸೆಂಟ್ಸ್	15 ರಿಂದ 1 ಎಕ್ರೆ	ಮೇಲ್ಪಟ್ಟು
ಕೃಷಿಕರ ವೇದಿಕೆ	20	15%	10%	50%	25%
ಮಹಿಳಾ ಜಾಗೃತಿ ವೇದಿಕೆ	20	55%	15%	20%	10%
ದಲಿತ ಅಭಿವೃದ್ಧಿ ಸಮಿತಿ	20	25%	10%	35%	30%




3. ಆದಾಯ:

	ಉತ್ತರಿಸಿದವರ ಸಂಖ್ಯೆ	10,000ದ ಒಳಗೆ	11,000 ದಿಂದ 20,000	ಮೇಲ್ಪಟ್ಟು
ಕೃಷಿಕರ ವೇದಿಕೆ	20	30%	70%	---
ಮಹಿಳಾ ಜಾಗೃತಿ ವೇದಿಕೆ	20	60%	35%	05%
ದಲಿತ ಅಭಿವೃದ್ಧಿ ಸಮಿತಿ	20	50%	50%	---



4. ವೃತ್ತಿ:


	ಉತ್ತರಿಸಿದವರ ಸಂಖ್ಯೆ	ಕೃಷಿ	ಕೂಲಿ	ಬೀಡಿ	ಇತರ
ಕೃಷಿಕರ ವೇದಿಕೆ	20	50%	40%	---	10%
ಮಹಿಳಾ ಜಾಗೃತಿ ವೇದಿಕೆ	20	5%	---	95%	---
ದಲಿತ ಅಭಿವೃದ್ಧಿ ಸಮಿತಿ	20	5%	50%	25%	20%



ಈ ಕೆಳಗಿನ ಅಂಕಿ ಅಂಶಗಳು ಮೇಲಿನ ಮೂರು ವೇದಿಕೆಗಳಲ್ಲಿ ತೊಡಗಿಸಿಕೊಂಡಿರುವ ಜನರ ಸ್ಥಿತಿಗತಿಗಳನ್ನು ಸೂಚಿಸುತ್ತದೆ.


1. ಮನೆಯ ಸ್ವರೂಪ:

	ಉತ್ತರಿಸಿದವರ ಸಂಖ್ಯೆ	ಆರ್‌ಸಿಸಿಮನೆ	ಹಂಚಿನ ಮನೆ	ಹುಲ್ಲಿನ ಚಾವಣಿ
ಕೃಷಿಕರ ವೇದಿಕೆ	20	---	100%	---
ಮಹಿಳಾ ಜಾಗೃತಿ ವೇದಿಕೆ	20	15%	85%	---
ದಲಿತ ಅಭಿವೃದ್ಧಿ ಸಮಿತಿ	20	---	90%	10%




2. ಮನೆಯ ಒಡೆತನ:

	ಉತ್ತರಿಸಿದವರ ಸಂಖ್ಯೆ	ಸ್ವಂತ ಮನೆ	ಬಾಡಿಗೆ	ಇತರ
ಕೃಷಿಕರ ವೇದಿಕೆ	20	95%	5%	---
ಮಹಿಳಾ ಜಾಗೃತಿ ವೇದಿಕೆ	20	95%	---	5%
ದಲಿತ ಅಭಿವೃದ್ಧಿ ಸಮಿತಿ	20	100%	---	---




3. ಸ್ನಾನಗ್ರಹ ಮತ್ತು ಶೌಚಾಲಯ:

	ಉತ್ತರಿಸಿದವರ ಸಂಖ್ಯೆ	ಸ್ವಂತ	ಸಾಮಾನ್ಯ	ಬಯಲು
ಕೃಷಿಕರ ವೇದಿಕೆ	20	100%	---	---
ಮಹಿಳಾ ಜಾಗೃತಿ ವೇದಿಕೆ	20	100%	---	---
ದಲಿತ ಅಭಿವೃದ್ಧಿ ಸಮಿತಿ	20	75%	15%	10%




4. ಕುಡಿಯುವ ನೀರು:

	ಉತ್ತರಿಸಿದವರ ಸಂಖ್ಯೆ	ನಳ್ಳಿ	ಬಾವಿ	ಇತರ
ಕೃಷಿಕರ ವೇದಿಕೆ	20	20%	80%	---
ಮಹಿಳಾ ಜಾಗೃತಿ ವೇದಿಕೆ	20	20%	75%	5%
ದಲಿತ ಅಭಿವೃದ್ಧಿ ಸಮಿತಿ	20	25%	65%	10%




5. ಉರುವಲು / ಇಂದನ:

	ಉತ್ತರಿಸಿದವರ ಸಂಖ್ಯೆ	ಗ್ಯಾಸ್ ಸೌಲಭ್ಯ	ಸೀಮೆ ಎಣ್ಣೆ	ಕಟ್ಟಿಗೆ
ಕೃಷಿಕರ ವೇದಿಕೆ	20	05%	---	95%
ಮಹಿಳಾ ಜಾಗೃತಿ ವೇದಿಕೆ	20	15%	20%	65%
ದಲಿತ ಅಭಿವೃದ್ಧಿ ಸಮಿತಿ	20	---	---	100%



6. ವಿದ್ಯುತ್ ವ್ಯವಸ್ಥೆ:

	ಉತ್ತರಿಸಿದವರ ಸಂಖ್ಯೆ	ಗ್ರಹಬಳಕೆ	ಭಾಗ್ಯಜ್ಯೋತಿ	ಇಲ್ಲ
ಕೃಷಿಕರ ವೇದಿಕೆ	20	85%	---	15%
ಮಹಿಳಾ ಜಾಗೃತಿ ವೇದಿಕೆ	20	85%	05%	10%
ದಲಿತ ಅಭಿವೃದ್ಧಿ ಸಮಿತಿ	20	55%	10%	35%




7. ಮನೋರಂಜನಾ ಮಾಧ್ಯಮ:

	ಉತ್ತರಿಸಿದವರ ಸಂಖ್ಯೆ	ದೂರದರ್ಶನ	ಸ್ಟೀರಿಯೋ	ರೇಡಿಯೋ
ಕೃಷಿಕರ ವೇದಿಕೆ	20	30%	15%	55%
ಮಹಿಳಾ ಜಾಗೃತಿ ವೇದಿಕೆ	20	40%	10%	50%
ದಲಿತ ಅಭಿವೃದ್ಧಿ ಸಮಿತಿ	20	20%	05%	75%




8. ದೂರವಾಣಿ ಸೌಲಭ್ಯ:

	ಉತ್ತರಿಸಿದವರ ಸಂಖ್ಯೆ	ಸ್ವಂತ / ಮೊಬೈಲ್ ಸೇರಿ	ನೆರೆ	ಸಾರ್ವಜನಿಕ
ಕೃಷಿಕರ ವೇದಿಕೆ	20	90%	---	10%
ಮಹಿಳಾ ಜಾಗೃತಿ ವೇದಿಕೆ	20	75%	20%	05%
ದಲಿತ ಅಭಿವೃದ್ಧಿ ಸಮಿತಿ	20	55%	25%	20%



9. ವಾಹನ ಸೌಲಭ್ಯ:

	ಉತ್ತರಿಸಿದವರ ಸಂಖ್ಯೆ	ನಾಲ್ಕು ಚಕ್ರ ವಾಹನ	ಚಾಲಿಕನಾಗಿ	ಇಲ್ಲ
ಕೃಷಿಕರ ವೇದಿಕೆ	20	---	20%	80%
ಮಹಿಳಾ ಜಾಗೃತಿ ವೇದಿಕೆ	20	---	---	100%
ದಲಿತ ಅಭಿವೃದ್ಧಿ ಸಮಿತಿ	20	---	15%	85%



೪.೯ ಶಿಕ್ಷಣ ಮತ್ತು ಸಾಂಸ್ಕೃತಿಕ ಚಿತ್ರಣ:

ರೈತ ಮತ್ತು ಕಾರ್ಮಿಕ ಸಮುದಾಯಗಳಲ್ಲಿ ಶಿಕ್ಷಣದ ಅಭಾವವೇ ಎಲ್ಲ ಸಮಸ್ಯೆಗಳಿಗೆ ಮೂಲಕಾರಣ. ಶಿಕ್ಷಣದ ಮೂಲಕ ಜನರ ಸಂಘಟನೆ ಸಾಧ್ಯವಾಗುತ್ತದೆ. ಸಾಂಸ್ಕೃತಿಕವಾಗಿ ಕೃಷಿ ಮತ್ತು ಕೃಷಿಕೂಲಿ ಸಮುದಾಯಗಳಲ್ಲಿ ಹಲವಾರು ವಿಶೇಷತೆಗಳನ್ನು ಗುರುತಿಸಬಹುದು. ತಾಲೂಕಿನಾದ್ಯಾಂತ ಜನಾಂಗೀಯ ವೈವಿಧ್ಯತೆಯನ್ನು ಗುರುತಿಸಬಹುದು. ವಿವಿಧ ಆರಾಧನಾ ಕ್ಷೇತ್ರಗಳು ತಾಲೂಕಿನಾದ್ಯಾಂತ ಗುರುತಿಸಿಕೊಂಡಿವೆ. ಹಲವಾರು ಹಬ್ಬಗಳನ್ನು ಜನರು ಆಚರಿಸುತ್ತಿದ್ದಾರೆ. ಅವುಗಳಲ್ಲಿ ಚಂದ್ರಮಾನ ಯುಗಾದಿ, ಪತ್ತನಾಜೆ, ಅಷಾಡ ಏಕಾದಶಿ, ಆಟಿ ಅಮವಾಸ್ಯೆ, ಶ್ರಾವಣ ಮಾಸದ ವಿಶೇಷ ಹಬ್ಬಗಳು, ತುಳಸಿ ಪೂಜೆ, ನಾಗರ ಪಂಚಮಿ, ಗೌರಿ ಗಣೇಶ-ಚತುರ್ಥಿ, ಅನಂತ ಚತುರ್ದಶಿ, ಮಕ್ಕಳ ಹುಣ್ಣಿಮೆ, ದೀಪಾವಳಿ, ನವರಾತ್ರಿ, ಮುಂತಾದುವುಗಳು ಹಿಂದುಗಳ ಪ್ರಮುಖ ಹಬ್ಬಗಳಾಗಿವೆ. ತೆನೆ ಹಬ್ಬ, ಕ್ರಿಸ್ಮಸ್, ಗುಡ್‌ಫ್ರೈಡೆ, ಸಾಂತ್‌ಮಾರಿ ಗಳಂತಹ ಹಬ್ಬಗಳನ್ನು ಕ್ರಿಶ್ಚನ್ ಸಮುದಾಯದವರು ಆಚರಿಸುತ್ತಿದ್ದಾರೆ. ಮೊಹರಂ, ರಂಜಾನ್, ಈದ್ ಉಲ್ ಫಿತರ್ ಮತ್ತು ಈದ್ ಮಿಲಾದ್‌ಗಳು ಮುಸ್ಲಿಂ ಸಮುದಾಯದ ಪ್ರಮುಖ ಹಬ್ಬಗಳು. ಹಿಂದೂ ಸಾಂಸ್ಕೃತಿಕ ಪರಂಪರೆಯಲ್ಲಿ ದೊಂಪದಬಲಿ, ಭೂತದಕೋಲ, ಪುರುಷವೇಷ, ಗೊಂದೊಲು ಪೂಜೆ, ಕಂಗೋರ್ಲ್ ನೃತ್ಯ ಮುಂತಾದವುಗಳು ಪ್ರಮುಖವಾಗಿವೆ. ಯಕ್ಷಗಾನದ ಕಲೆ ಕೂಡ ಈ ವರ್ಗದ ಜನರಲ್ಲಿ

ವಿಶೇಷವಾಗಿ ಬೆಳವಣಿಗೆಯಾಗಿದೆ. ಒಟ್ಟಿನಲ್ಲಿ ಜನರು ಒಂದು ಶ್ರೀಮಂತ ಪರಂಪರೆಯನ್ನು ಹೊಂದಿದ್ದಾರೆ ಎಂಬುದನ್ನು ನಾವು ಈ ಬೆಳವಣಿಗೆಗಳಿಂದ ತಿಳಿದುಕೊಳ್ಳಬಹುದು.

ಸರಕಾರೇತರ ಸಂಸ್ಥೆಗಳು ಸಾಮಾಜಿಕ ಬದಲಾವಣೆಗೆ ಪೂರಕವಾದ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತವೆ. ನಾಗರಿಕ ಸೇವಾ ಟ್ರಸ್ಟ್ ಗುರುವಾಯನಕೆರೆ ಎಂಬುದು ಒಂದು ಸರಕಾರದೊಂದಿಗೆ ನೊಂದಾಯಿತ ಸಂಸ್ಥೆಯಾಗಿದ್ದು, ಬಡವರ, ದೀನದಲಿತರ ಮತ್ತು ಅಂಚಿಗೆ ತಳ್ಳಲ್ಪಟ್ಟ ಜನರ ಒಳಿತನ್ನು ಬಯಸುತ್ತದೆ. ತಮ್ಮ ಕಾರ್ಯ ಚಟುವಟಿಕೆಗಳನ್ನು ಯಶಸ್ವಿಯಾಗಿ ಜಾರಿಗೊಳಿಸುವ ಉದ್ದೇಶದಿಂದ ವಿವಿಧ ಅಂಗ ಸಂಸ್ಥೆಗಳನ್ನು ಸ್ಥಾಪಿಸಿಕೊಂಡಿದೆ. ಇವುಗಳಲ್ಲಿ ಕೃಷಿಕರ ವೇದಿಕೆ, ಕರಾವಳಿ ಮಹಿಳಾ ಜಾಗೃತಿ ವೇದಿಕೆ ಮತ್ತು ದಲಿತ ಅಭಿವೃದ್ಧಿ ಸಮಿತಿಗಳು ಪ್ರಮುಖವಾದವು. ಅಧ್ಯಯನದಲ್ಲಿ ಕಂಡುಕೊಂಡಂತೆ ಈ ಮೂರು ಸಮಿತಿಗಳು ತಮ್ಮ ಕೇಂದ್ರಿಕೃತ ಜನರ ಹಿತಾಸಕ್ತಿಯನ್ನು ರಕ್ಷಿಸುವುದಕ್ಕಾಗಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿವೆ. ಕೃಷಿಕರ ವೇದಿಕೆಯು ಸಣ್ಣ ಕೃಷಿಕರ ಮತ್ತು ಕ್ರಷಿ ಕಾರ್ಮಿಕರ ಸಮಸ್ಯೆಗಳತ್ತ ಗಮನ ಹರಿಸುತ್ತಾ ಹಲವಾರು ಕಾರ್ಯಕ್ರಮಗಳನ್ನು ರೂಪಿಸುತ್ತದೆ. ಸರಕಾರದ ರೈತ ವಿರೋಧಿ ನೀತಿಯ ವಿರುದ್ಧ ಹೋರಾಟಗಳನ್ನು ಸಂಘಟಿಸುತ್ತಾ ಸರಕಾರದ ನೀತಿ ಹೇಗಿರಬೇಕು ಎಂಬುದರ ಕುರಿತು ಹಕ್ಕೊತ್ತಾಯವನ್ನು ಮಂಡಿಸಿ ರೈತರ ಅನೇಕ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವಲ್ಲಿ ಯಶಸ್ವಿಯಾಗಿದೆ. ಪರಿಸರಾಸಕ್ತರ ಒಕ್ಕೂಟದ ವತಿಯಿಂದ ಪರಿಸರ ಸಂರಕ್ಷಣೆ, ಜಲಸಂರಕ್ಷಣೆ, ಮತ್ತು ಅಂತರ್ಜಲ ಸಂರಕ್ಷಣೆಯ ನಿಟ್ಟಿನಲ್ಲಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಕೃಷಿ ಮತ್ತು ಪರಿಸರ ವಿನಾಶಕ್ಕೆ ಕಾರಣವಾಗಬಹುದಾದ ಯೋಜನೆಗಳ ವಿರುದ್ಧ ಹೋರಾಟ ಮಾತ್ರವಲ್ಲದೆ ನೇತ್ರಾವತಿ ನದಿ ತಿರುಗಣೆಯಂತಹ ಅವೈಜ್ಞಾನಿಕ ಯೋಜನೆಗಳ ವಿರುದ್ಧವೂ ಹೋರಾಟಗಳನ್ನು ಸಂಘಟಿಸಿದೆ. ಪರಿಸರ ಸಂರಕ್ಷಣೆ ಒಂದು ಅವಶ್ಯಕ ಕಾರ್ಯ ಎಂಬುದನ್ನು ಜನಸಾಮಾನ್ಯರಿಗೆ ಮತ್ತು ಜನಪ್ರತಿನಿಧಿಗಳಿಗೆ ಮನದಟ್ಟು ಮಾಡುವಲ್ಲಿ ಟ್ರಸ್ಟ್ ಯಶಸ್ವಿಯಾಗಿದೆ. ಬಡತನ ಮತ್ತು ನಿರುದ್ಯೋಗದ ನಿವಾರಣೆಗಾಗಿ ಹಲವಾರು ಯೋಜನೆಗಳನ್ನು ರೂಪಿಸಿದೆ.

ಸಮುದಾಯ ಸಂಘಟನೆಯತ್ತ ನಾಗರಿಕ ಸೇವಾ ಟ್ರಸ್ಟ್ ವಿಶೇಷ ಗಮನವನ್ನು ಹರಿಸುತ್ತಿದ್ದೂ ಲಕ್ಷಗಟ್ಟಲೆ ಬೀಡಿ ನೌಕರರ ಜೀವನೋಪಾಯದ ಸಮಸ್ಯೆಗಳನ್ನು ಪರಿಹರಿಸುವ ಪ್ರಯತ್ನದಲ್ಲಿ ಯಶಸ್ಸಿನ ಹೆಜ್ಜೆಗಳನ್ನು ಹಾಕಿದೆ. ಕರಾವಳಿ ಮಹಿಳಾ ಜಾಗೃತಿ ವೇದಿಕೆಯು ಮಹಿಳೆಯರ ಸಮಸ್ಯೆಗಳನ್ನು ಆಲಿಸಿ ಪರಿಹಾರವನ್ನು ಕಂಡುಕೊಳ್ಳುವಲ್ಲಿ ಯಶಸ್ವಿಯಾಗಿದೆ. ಮಹಿಳಾ ದೌರ್ಜನ್ಯ ತಡೆ, ಲಿಂಗ ತಾರತಮ್ಯತೆಯ ನಿವಾರಣೆ ಮತ್ತು ಆರೋಗ್ಯ ಸೌಲಭ್ಯಗಳನ್ನು ಒದಗಿಸುವಲ್ಲಿ ಸಹಕಾರಿಯಾಗಿದೆ. ಸ್ವ-ಸಹಾಯ ಗುಂಪುಗಳನ್ನು ಸ್ಥಾಪಿಸುವ ಮೂಲಕ ಹಲವಾರು ಕುಟುಂಬಗಳ ಆರ್ಥಿಕ ಸಮಸ್ಯೆಗಳು ಪರಿಹಾರಗೊಂಡು ಸ್ವಾವಲಂಬನೆಯ ಜೀವನ ಸಾರುವುದಕ್ಕೆ ಸಹಕಾರಿಯಾಗಿದೆ. ಖ್ಯಾತ ಮಹಿಳಾ ಹೋರಾಟಗಾರರು ಟ್ರಸ್ಟ್ ವತಿಯಿಂದ ಹಮ್ಮಿಕೊಂಡ ಕಾರ್ಯಕ್ರಮಗಳಲ್ಲಿ ಭಾಗವಹಿಸಿರುವುದು ಅಂತಹ ಕಾರ್ಯಕ್ರಮಗಳ ಪ್ರಾಮುಖ್ಯತೆಯನ್ನು ಹೆಚ್ಚಿಸುವಲ್ಲಿ ಕಾರಣವಾಗಿದೆ.

ದಲಿತ ಮತ್ತು ಹಿಂದುಳಿದ ವರ್ಗಗಳ ಅಭ್ಯುದಯದ ಕಡೆಗೆ ನಾಗರಿಕ ಸೇವಾ ಟ್ರಸ್ಟ್ ವಿಶೇಷ ಗಮನವನ್ನು ಹರಿಸುತ್ತದೆ. ಇದಕ್ಕಾಗಿಯೇ ದಲಿತ ಅಭಿವೃದ್ಧಿ ಸಮಿತಿ ಮತ್ತಿತರ ಹೋರಾಟ ಸಮಿತಿಗಳನ್ನು ಸ್ಥಾಪಿಸಿದೆ. ಭಾರತಕ್ಕೆ

ಸ್ವಾತಂತ್ರ್ಯ ಸಿಕ್ಕಿ ಸುಮಾರು 60 ವರ್ಷಗಳಾದರೂ ದಲಿತರು ಮನುಷ್ಯ ಜಾತಿಗೆ ಸೇರಿದವರೆಂದು ಸ್ವೀಕರಿಸುವಲ್ಲಿ ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯೇ ಎಡವಿದೆ. ಭಾರತವು ಒಂದು ವಿಶಿಷ್ಟ ಹಾಗೂ ಸಂಕೀರ್ಣ ದೇಶವಾಗಿದ್ದೂ, ಅದರಲ್ಲಿ ಎಲ್ಲಾ ಬಗೆಯ ಗುಂಪುಗಳಿದ್ದು ಅವುಗಳು ಜಾತಿ, ಜನಾಂಗ, ವಿವಿಧ ಮತಗಳು, ಹಾಗೂ ಆಚಾರವಿಚಾರಗಳಿಂದ ವಿಭಜಿಸಲ್ಪಟ್ಟಿದೆ. ಇವುಗಳಲ್ಲಿ ಬಹು ಸಂಖ್ಯಾತರು ಕೀಳು ಜಾತಿಯವರಾಗಿದ್ದು ಮಾನವೀಯತೆಯಿಂದ ವಂಚಿತರಾಗಿದ್ದಾರೆ ಮತ್ತು ತಮ್ಮನ್ನು ಮೇಲಿನವರೆಂದು ಕರೆಸಿಕೊಳ್ಳುವ ಮತ್ತು ಬಹು ಸಂಖ್ಯಾತರ ಸುಖವನ್ನು ಬಲಿಗೊಟ್ಟು ಬದುಕುವ ಬೆರಳೆಣಿಕೆಯಷ್ಟು ಜನರಿಂದ ನಿರಂತರ ಶೋಷಣೆಯನ್ನು ಅನುಭವಿಸುತ್ತಿದ್ದಾರೆ. ಮೇಲ್ವರ್ಗದವರ ಈ ದಮನಕಾರಿ ನೀತಿಯೇ ದಲಿತರನ್ನು ಮತ್ತು ಹಿಂದುಳಿದ ವರ್ಗದವರನ್ನು ಸಮಾಜದ ಮುಖ್ಯವಾಹಿನಿಯಿಂದ ದೂರತಳ್ಳಲ್ಪಟ್ಟು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಬಹಳ ಹಿನ್ನಡೆಗೆ ಕಾರಣವಾಗಿದೆ. ಆದುದರಿಂದ ವಿಮೋಚನೆಯ ಸಂದೇಶ, ಶೋಷಣೆಯ ವಿರುದ್ಧ ಸಿಡಿದು ನಿಲ್ಲುವ ಇಚ್ಛೆ, ದಮನದಿಂದ ಸ್ವಾತಂತ್ರ್ಯದತ್ತ, ಸಾವಿನಿಂದ ಬದುಕಿನತ್ತ, ದಾಸ್ಯದಿಂದ ಆತ್ಮಗೌರವದತ್ತ ಮತ್ತು ಕತ್ತಲಿನಿಂದ ಬೆಳಕಿನತ್ತ ಮುಂತಾದ ಪ್ರಕ್ರಿಯೆಗಳು ಸಮಾಜದ ಸುಧಾರಕರಲ್ಲಿ ಮನೆ ಮಾತಾದವು. ದಲಿತರನ್ನು ಈ ತರದ ಸಂಕಟದಿಂದ ಪಾರು ಮಾಡುವ ಪ್ರಯತ್ನದಲ್ಲಿ ನಾಗರಿಕ ಸೇವಾ ಟ್ರಸ್ಟ್ ಕ್ರಿಯಾ ಶೀಲವಾಗಿದೆ. ಅವರೊಂದಿಗೆ ಸಹೋದರತೆಯ ಭಾವನೆಯನ್ನು ಹಂಚಿಕೊಂಡು ಸಮಾಜದ ಮುಖ್ಯವಾಹಿನಿಗೆ ತರುವ ಪ್ರಯತ್ನದಲ್ಲಿದೆ.

ಅಧ್ಯಯನಕ್ಕೆ ಪೂರಕವಾಗಿ ನಡೆಸಿದ ಸಂದರ್ಶನ ಮತ್ತು ಸಮೀಕ್ಷೆಗಳಿಂದ ತಿಳಿದು ಬರುವಂತೆ ನಾಗರಿಕ ಸೇವಾ ಟ್ರಸ್ಟ್ ಈ ನಿಟ್ಟಿನಲ್ಲಿ ವಿಶೇಷ ಆಸಕ್ತಿಯನ್ನು ವಹಿಸುತ್ತದೆ. ಇವರೊಂದಿಗಿನ ಒಡನಾಟದಲ್ಲಿ ಸಣ್ಣ ಕೃಷಿಕರ, ಕೃಷಿ ಕೂಲಿಗಳ, ದಲಿತರ ಮತ್ತು ಹಿಂದುಳಿದ ವರ್ಗಗಳ ಜೀವನಮಟ್ಟ ಗಣನೀಯವಾಗಿ ಸುಧಾರಣೆಯಾಗಿದೆ. ಸ್ವ-ಸಹಾಯ ಸಂಘಗಳ ಮೂಲಕ ಸಾಲವನ್ನು ಪಡೆದುಕೊಂಡು ತಮ್ಮ ವೈಯುಕ್ತಿಕ ಅಗತ್ಯತೆಗಳನ್ನು ಈಡೇರಿಸಿಕೊಳ್ಳುವಲ್ಲಿ ಜನರು ಯಶಸ್ವಿಯಾಗಿದ್ದಾರೆ. ದಲಿತರ ಸ್ಥಾನಮಾನದಲ್ಲಿ ಸಾಕಷ್ಟು ಬದಲಾವಣೆಗಳು ಕಂಡು ಬಂದಿವೆ. ಎಲ್ಲಾ ವರ್ಗದವರ ಮನೆಗಳಲ್ಲಿ ಕೆಲವೊಂದು ಆಧುನಿಕ ಸೌಕರ್ಯಗಳು ಕಾಣತೊಡಗಿದೆ. ಸಮೀಕ್ಷೆಯಿಂದ ಕಂಡುಕೊಂಡಂತೆ ನಾಗರಿಕ ಸೇವಾ ಟ್ರಸ್ಟ್ ಹಮ್ಮಿಕೊಳ್ಳುವ ಎಲ್ಲಾ ಕಾರ್ಯಕ್ರಮಗಳಲ್ಲಿ ಜನರು ಸಕ್ರಿಯವಾಗಿ ಭಾಗವಹಿಸುತ್ತಿದ್ದು, ಅವರಲ್ಲಿ ಜಾಗೃತಿ ಮೂಡಿದೆ ಎಂಬುದನ್ನು ತಿಳಿದುಕೊಳ್ಳಲಾಗಿದೆ. ಟ್ರಸ್ಟ್ ವತಿಯಿಂದ ಪ್ರಕಾಶಿಸಲ್ಪಡುವ ಕೈಪಿಡಿಗಳು, ಸ್ಮರಣ ಸಂಚಿಕೆಗಳು, ಕೃತಿಗಳು ಮತ್ತು ಅಧ್ಯಯನ ವರದಿಗಳು ಜನರಲ್ಲಿ ಜಾಗೃತಿಯನ್ನು ಮೂಡಿಸಲು ಸಹಕಾರಿಯಾಗಿವೆ. ಒಟ್ಟಿನಲ್ಲಿ ಟ್ರಸ್ಟ್‌ನ ವತಿಯಿಂದ ಹಮ್ಮಿಕೊಳ್ಳುವ ಎಲ್ಲಾ ಕಾರ್ಯಕ್ರಮಗಳ ಕುರಿತು ಜನರ ಪ್ರತಿಕ್ರಿಯೆ ಉತ್ತಮವಾಗಿದೆ. ಇವರ ಕಾರ್ಯಕ್ರಮಗಳು ಮತ್ತು ಜನಾಂದೋಲನಗಳು ನಿರೀಕ್ಷಿತ ಫಲಿತಾಂಶವನ್ನು ನೀಡಿವೆ ಎಂಬುದು ಅಧ್ಯಯನದಿಂದ ತಿಳಿದು ಬಂದಿದೆ. ಆದರೆ, ಕೆಲವೊಂದು ಪ್ರತಿಕ್ರಿಯೆಗಳ ಪ್ರಕಾರ ಕೆಲವೊಂದು ಜನರ ನಿರಾಸಕ್ತಿ ಅವರ ಯಾತಾ ಸ್ಥಿತಿಗೆ ಕಾರಣವಾಗಿದೆ. ಈ ನಿಟ್ಟಿನಲ್ಲಿ ಸರಕಾರೇತರ ಸಂಸ್ಥೆಗಳು ಕಾರ್ಯಪ್ರವೃತ್ತವಾಗುವುದು ಅಗತ್ಯವಾಗಿದೆ. ಅಂತಹ ಜನರನ್ನು ಗುರುತಿಸಿ, ಅವರಿಗಾಗಿ ವಿಶೇಷ ಕಾರ್ಯಕ್ರಮಗಳನ್ನು ರೂಪಿಸಿ ಅವರನ್ನು ಕೂಡಾ ಬದಲಾವಣೆಯ ಪಥದಲ್ಲಿ ಮುನ್ನಡೆಸುವುದು ಅನಿವಾರ್ಯವಾಗಿದೆ.

* * * * * * * * * * * * *

ಅಧ್ಯಾಯ : ಐದು

ಸಾಮಾಜಿಕ ಪರಿವರ್ತನೆ

೫.೧ ಸಾಮಾಜಿಕ ಪರಿವರ್ತನೆಯ ವ್ಯಾಖ್ಯೆಗಳು

೫.೨ ಸಾಮಾಜಿಕ ಪರಿವರ್ತನೆಯ ಲಕ್ಷಣಗಳು

೫.೩ ಸರಕಾರೇತರ ಸಂಸ್ಥೆಗಳು ಮತ್ತು ಸಾಮಾಜಿಕ ಬದಲಾವಣೆ

೫.೪ ಆರ್ಥಿಕ ಪ್ರಗತಿ ಮತ್ತು ಸಾಮಾಜಿಕ ಬದಲಾವಣೆ

೫.೫ ಸಾಮಾಜಿಕ ಬದಲಾವಣೆಯ ಅಂಗವಾಗಿ ರಾಜಕೀಯ ಜಾಗೃತಿ

೫.೬ ಸಾಮಾಜಿಕ ಬದಲಾವಣೆಯಲ್ಲಿ ನಾಗರಿಕಾ ಸೇವಾ ಟ್ರಸ್ಟ್ ಪ್ರವರ್ತಿತ ವೇದಿಕೆಗಳು

೧. ಕೃಷಿಕರ ವೇದಿಕೆ

೨. ಮಹಿಳಾ ಜಾಗೃತಿ ವೇದಿಕೆ

೩. ದಲಿತ ಅಭಿವೃದ್ಧಿ ಸಮಿತಿ

ಅಧ್ಯಾಯ : ಐದು

ಸಾಮಾಜಿಕ ಪರಿವರ್ತನೆ

ಯಾವುದೇ ವಿಷಯ ಹಾಗೂ ಸಂದರ್ಭಕ್ಕೆ ಸಂಬಂಧಪಟ್ಟಂತೆ 'ಪರಿವರ್ತನೆ' ಎಂಬುದು ಒಂದು ವ್ಯಾಪಕವಾದ ಪ್ರಕ್ರಿಯೆ ಮತ್ತು ಪ್ರಕೃತಿ ಸಹಜವಾದ ನಿಯಮವಾಗಿದೆ. ಇದೊಂದು ಸಮಾಜದ ಆಂತರಿಕ ಲಕ್ಷಣವಾಗಿದ್ದು, ಮಾನವ ಸಮಾಜ ಕೂಡಾ ಈ ನಿಯಮಕ್ಕೆ ಬದ್ಧವಾಗಿದೆ. ಈ ಪರಿವರ್ತನೆಯ ಫಲವಾಗಿಯೇ ಮಾನವ ಸಮಾಜವು ಅನಾಗರಿಕ ಸ್ಥಿತಿಯಿಂದ ನಾಗರಿಕ ಸ್ಥಿತಿಗೆ ತಲುಪಿದ್ದೂ ಮಾತ್ರವಲ್ಲದೆ, ಇನ್ನೂ ಹೆಚ್ಚು ಪರಿಪೂರ್ಣತೆಯ ಸ್ಥಿತಿಗೆ ತಲುಪಲು ಸಾಧ್ಯ ಆಗಿದೆ. ಈ ಪರಿವರ್ತನೆ ಎಂಬುದು ಒಂದು ಚಲಿಸುವ ನೀರಿನಂತಿದ್ದು, ಅದರ ವೇಗ ಮತ್ತು ಮಟ್ಟವನ್ನು ಊಹಿಸುವುದು ಮತ್ತು ಅಳೆಯುವುದು ಬಹು ಕಷ್ಟದ ಕೆಲಸವಾಗಿದೆ. ಅಂತೂ ಈ ಪರಿವರ್ತನೆಯ ವೇಗವೂ ಇತ್ತೀಚಿನ ದಿನಗಳಲ್ಲಿ ಅಧಿಕವಾಗಿದೆ. ಶಿಕ್ಷಣದ ಬೆಳವಣಿಗೆ ಮತ್ತು ಆರ್ಥಿಕ ಪ್ರಗತಿ ಈ ಸಾಮಾಜಿಕ ಪರಿವರ್ತನೆಯ ಪ್ರಮುಖ ಮಾನದಂಡಗಳು ಎಂಬುದಾಗಿ ಹೇಳಿದರೆ ತಪ್ಪಾಗಲಾರದು. ಒಟ್ಟಿನಲ್ಲಿ ಸಾಮಾಜಿಕ ಪರಿವರ್ತನೆಯ ಪರಿಕಲ್ಪನೆಯು ಮಾನವನ ಸಾಮಾಜಿಕ ಸಂಬಂಧಗಳ ವ್ಯವಸ್ಥೆಯಲ್ಲಿ ಕಂಡುಬರುವ ವ್ಯತ್ಯಾಸಗಳನ್ನು ಅಥವಾ ಮಾರ್ಪಾಟುಗಳನ್ನು ಸಂಕೇತಿಸುವುದು. ಸಾಮಾಜಿಕ ಸಂಬಂಧಗಳೇ ಸಾಮಾಜಿಕ ಪ್ರಕ್ರಿಯೆಗಳಿಗೆ, ಸಾಮಾಜಿಕ ವ್ಯವಸ್ಥೆ ಮತ್ತು ಸಂಘಟನೆಗೆ ಕಾರಣವಾಗಿರುವುದರಿಂದ ಇವುಗಳಲ್ಲಿ ಕಂಡುಬರುವ ಪರಿವರ್ತನೆಯನ್ನು 'ಸಾಮಾಜಿಕ ಪರಿವರ್ತನೆ' ಎಂದು ಅರ್ಥೈಸಬಹುದಾಗಿದೆ.

೫.೧ ಸಾಮಾಜಿಕ ಪರಿವರ್ತನೆಯ ವ್ಯಾಖ್ಯೆಗಳು:

ಸಾಮಾಜಿಕ ಬದಲಾವಣೆಯ ಬಗ್ಗೆ ವಿದ್ವಾಂಸರು ಮತ್ತು ಸಮಾಜ ಶಾಸ್ತ್ರಜ್ಞರು ಹಲವಾರು ವ್ಯಾಕ್ಯೆಗಳನ್ನು ನೀಡಿದ್ದಾರೆ.

1. **ಎಮ್. ಇ. ಜೋನ್ಸ್** ಅವರ ಪ್ರಕಾರ " ಸಾಮಾಜಿಕ ಪ್ರಕ್ರಿಯೆಗಳು ಸಾಮಾಜಿಕ ಮಾದರಿಗಳು, ಸಾಮಾಜಿಕ ಅಂತಃಕ್ರಿಯೆಗಳು ಅಥವಾ ಸಾಮಾಜಿಕ ಸಂಘಟನೆಗಳು ಇವುಗಳ ಯಾವುದೇ ಮುಖದಲ್ಲಿ ಉಂಟಾಗುವ ವ್ಯತ್ಯಾಸಗಳನ್ನು ಅಥವಾ ಮಾರ್ಪಾಟುಗಳನ್ನು ವಿವರಿಸಲು ಸಾಮಾಜಿಕ ಪರಿವರ್ತನೆ ಎಂಬ ಕಲ್ಪನೆಯನ್ನು ಬಳಸಲಾಗುತ್ತದೆ."

2. **ಕಿಂಗ್ಸ್ ಲೇ ಡೇವಿಸ್** ಎಂಬಾತನ ಪ್ರಕಾರ "ಸಮಾಜದ ರಚನೆ ಮತ್ತು ಕಾರ್ಯಗಳಲ್ಲಿ ಆಗುವ ಬದಲಾವಣೆಗಳನ್ನು ಸಾಮಾಜಿಕ ಬದಲಾವಣೆ ಎನ್ನಬಹುದು."

3. **ಮೆಕೈವರ್ ಮತ್ತು ಪೇಜ್** ರವರು ಅಭಿಪ್ರಾಯ ಪಡುವಂತೆ 'ಸಾಮಾಜಿಕ ಪರಿವರ್ತನೆಯನ್ನು ಸಾಮಾಜಿಕ ಸಂಬಂಧಗಳಲ್ಲಾಗುವ ಬದಲಾವಣೆ ಎಂದು ಕರೆದಿದ್ದಾರೆ'

4. **ವಿಲ್ಬರ್ಟ್ ಮೂರ್** ರವರ ಪ್ರಕಾರ, "ಒಂದು ಕಾಲಾವಧಿಯಲ್ಲಿ ಸಾಮಾಜಿಕ ನಿಯಮಗಳು ಹಾಗೂ ಮೌಲ್ಯಗಳನ್ನೊಳಗೊಂಡಂತೆ ವರ್ತನಾ ಮಾದರಿಗಳಲ್ಲಿ ಹಾಗೂ ಸಂಸ್ಕೃತಿಯಲ್ಲಿ ಕಾಣಬಹುದಾದ ಬಹಳ ಮಹತ್ವದ ಬದಲಾವಣೆಗಳನ್ನು ಸಾಮಾಜಿಕ ಪರಿವರ್ತನೆ ಎನ್ನಬಹುದು."

ಮೇಲಿನ ವ್ಯಾಖ್ಯೆಗಳು ಸೂಚಿಸುವಂತೆ ಸಾಮಾಜಿಕ ಪರಿವರ್ತನೆ ಎಂಬುದು ಒಂದು ಸಾರ್ವತ್ರಿಕ ಪರಿಕಲ್ಪನೆಯಾಗಿದ್ದು ಒಂದು ವಿಶಾಲ ವ್ಯಾಪ್ತಿಯನ್ನು ಹೊಂದಿದೆ. ಸಾಮಾಜಿಕ ಪರಿಕಲ್ಪನೆಯ ವಿಶ್ಲೇಷಣೆಯಲ್ಲಿ ಪರಿವರ್ತನೆ, ವಿಕಾಸ, ಪ್ರಗತಿ, ಅಭಿವೃದ್ಧಿ, ಬೆಳವಣಿಗೆ ಮುಂತಾದ ಪರಿಕಲ್ಪನೆಗಳು ಪರಸ್ಪರ ಸಂಬಂಧಿತವಾಗಿವೆ. ಪರಿವರ್ತನೆ, ಎಂಬ ಪದವನ್ನು ಭಾರತ ದೇಶಕ್ಕೆ ಸಂಬಂಧ ಪಟ್ಟಂತೆ ಹಲವಾರು ಕ್ಷೇತ್ರಗಳಿಗೆ ಹೋಲಿಸಬಹುದು. ವಿಜ್ಞಾನ, ತಂತ್ರಜ್ಞಾನ, ಅಣುವಿಜ್ಞಾನ, ಸಾರಿಗೆ ಸಂಪರ್ಕ ಮಾಧ್ಯಮಗಳು ಮುಂತಾದ ಕ್ಷೇತ್ರಗಳಲ್ಲಿ ಭಾರತ ಸಾಕಷ್ಟು ಪ್ರಗತಿಯನ್ನು ಸಾಧಿಸಿದೆ. ಈ ಪ್ರಕ್ರಿಯೆಯು ವಿವಿಧ ವಿಧಾನಗಳಲ್ಲಿ, ವಿವಿಧ ಕಾರಣಗಳಿಂದಾಗಿ, ವಿವಿಧ ರೂಪಗಳಲ್ಲಿ ಸಂಭವಿಸಿದೆ. ಈ ಪರಿವರ್ತನೆಯು ಪ್ರಗತಿಶೀಲ, ಶಾಶ್ವತ ಮತ್ತು ಏಕದಿಶಾನುವರ್ತಿಯಾಗದೆ ಪ್ರತಿಗಾಮಿಯೂ, ಅಲ್ಪಕಾಲಿಕವೂ ಮತ್ತು ಬಹುದಿಶಾನುವರ್ತಿಯೂ ಆಗಿರಬಹುದು.

೫.೨ ಸಾಮಾಜಿಕ ಪರಿವರ್ತನೆಯ ಲಕ್ಷಣಗಳು:

ಸಾಮಾಜಿಕ ಪರಿವರ್ತನೆಯ ವಸ್ತು ನಿಷ್ಟವಾದ ವಿಶ್ಲೇಷಣೆ ಮತ್ತು ಅಧ್ಯಯನವು ಈ ಕೆಳಗಿನ ಗುಣಲಕ್ಷಣಗಳತ್ತ ನಮ್ಮ ಗಮನವನ್ನು ಸೆಳೆಯುವುದು.

೧. ಸಾಮಾಜಿಕ ಪರಿವರ್ತನೆಯು ಸಾರ್ವತ್ರಿಕವಾದುದು ಮತ್ತು ನಿರಂತರವಾದುದು.
೨. ಸಾಮಾಜಿಕ ಪರಿವರ್ತನೆಯು ಸಮಯಿಕವಾದುದು.
೩. ಸಾಮಾಜಿಕ ಪರಿವರ್ತನೆಯು ಅನಿವಾರ್ಯವಾದುದು ಮತ್ತು ಪಾರಿಸರಿಕವಾದುದು.
೪. ಸಾಮಾಜಿಕ ಪರಿವರ್ತನೆ, ಎಂದರೆ ಮಾನವನ ಪರಿವರ್ತನೆ
೫. ಅದು ಪ್ರತಿಕ್ರಿಯೆಗಳ ಸರಮಾಲೆಯನ್ನು ಸೃಷ್ಟಿಸುತ್ತದೆ.
೬. ಅದು ನಿರ್ದಿಷ್ಟ ದಿಕ್ಕು ಮತ್ತು ವೇಗವನ್ನು ಹೊಂದಿರುತ್ತದೆ.
೭. ಅದು ಒಂದು ವಸ್ತುನಿಷ್ಟ ಪರಿಕಲ್ಪನೆಯಾಗಿದೆ.

ಮೇಲೆ ಸೂಚಿಸಿದ ಹಲವಾರು ಲಕ್ಷಣಗಳನ್ನು ಹೊಂದಿದ್ದರೂ ಸಾಮಾಜಿಕ ಬದಲಾವಣೆ ಎಂಬ ಪರಿಕಲ್ಪನೆಯು ಹಲವಾರು ಮೂಲಭೂತ ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ. ಇಂತಹ ಪ್ರಮುಖ ಪ್ರಶ್ನೆಗಳಲ್ಲಿ ಸಾಮಾಜಿಕ ಪರಿವರ್ತನೆಯ ದಿಸೆ ಯಾವುದು?

ಅದರ ರೂಪ ಯಾವುದು? ಮೂಲ ಯಾವುದು?

ಇತಿಮಿತಿಗಳಾವುವು? ವೇಗ ಮತ್ತು ಗತಿ ಯಾವುದು?

ಅದು ಮಾನವ ಪ್ರಯತ್ನದಿಂದಾದುದೇ?

ಅಂತಹ ಬದಲಾವಣೆಯಲ್ಲಿ ಸಂಘ ಸಂಸ್ಥೆಗಳ ಪಾತ್ರವೇನು?

ಮುಂತಾದ ಪ್ರಶ್ನೆಗಳು ಮನುಷ್ಯನ ಸಾಮಾಜಿಕ ಬದಲಾವಣೆಯಲ್ಲಿ ಹಂತದಲ್ಲಿ ಎದುರಾಗುತ್ತವೆ.

ಈ ಮೂಲಭೂತ ಪ್ರಶ್ನೆಗಳಿಗೆ ಮನುಷ್ಯನ ಸಾಂಸ್ಕೃತಿಕ ಚೌಕಟ್ಟಿನೊಳಗೆ ಉತ್ತರವನ್ನು ಕಂಡುಹಿಡಿಯಬೇಕಾಗಿದೆ. ಸಂಸ್ಕೃತಿಯು ಜಡವಾದುದಲ್ಲ, ಆದರೆ, ಪರಿವರ್ತನಶೀಲವಾದುದು. ಸಾಂಸ್ಕೃತಿಕ ಅಂಶಗಳು ಸಾಮಾಜಿಕ ಬದಲಾವಣೆಗೆ ಪ್ರೇರಣೆಯಾಗಿವೆ. ಮನುಷ್ಯನ ಮೌಲ್ಯಗಳು ಮತ್ತು ನಂಬಿಕೆಗಳು, ರೂಢಿಗಳು, ಆಚಾರ–ವಿಚಾರಗಳು, ರೀತಿ–ನೀತಿಗಳು, ನೈತಿಕ ನಿಯಮಗಳು, ಸಿದ್ಧಾಂತಗಳು, ಮತಧರ್ಮ, ಶಿಕ್ಷಣ ಮುಂತಾದ ವಿಚಾರಗಳು ಸಂಸ್ಕೃತಿಯ ವಿವಿಧ ಅಂಶಗಳಾಗಿ ಸಾಮಾಜಿಕ ಬದಲಾವಣೆಗೆ ಕಾರಣವಾಗುತ್ತದೆ. ಈ ಬದಲಾವಣೆಯ ಪ್ರಕ್ರಿಯೆಯಲ್ಲಿ ಸರಕಾರ, ಸಂಘ ಸಂಸ್ಥೆಗಳು, ಬುದ್ಧಿ ಜೀವಿಗಳು, ಮತ್ತು ಸೇವಾ ಮನೋಭಾವಸ್ಥರು, ಪಾಲ್ಗೊಳ್ಳುವುದು ಅನಿವಾರ್ಯವಾಗಿದೆ. ಸರಕಾರಗಳು ಶಾಸನತ್ಮಾಕವಾಗಿ ಕೆಲವೊಂದು ಸಮಸ್ಯೆಗಳಿಗೆ ಪರಿಹಾರವನ್ನು ಒದಗಿಸುತ್ತದೆ. ಬುದ್ಧಿಜೀವಿಗಳು ಮತ್ತು ಸೇವಾ ಮನೋಭಾವಸ್ಥರು ಸಂಘ ಸಂಸ್ಥೆಗಳ ಮೂಲಕ ಈ ಸಾಮಾಜಿಕ ಬದಲಾವಣೆಯ ಪ್ರಕ್ರಿಯೆಯಲ್ಲಿ ಭಾಗವಹಿಸುತ್ತಾರೆ. ಈ ನಿಟ್ಟಿನಲ್ಲಿ ಸರಕಾರೇತರ ಸಂಸ್ಥೆಗಳ ಸೇವೆ ಅಮೂಲ್ಯವಾದುದು. ಇವುಗಳು ಜನರ ಮೂಲಭೂತ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವ ಮೂಲಕ ಸಾಮಾಜಿಕ ಬದಲಾವಣೆಯನ್ನು ಪ್ರೇರೇಪಿಸುತ್ತವೆ. ಈ ನಿಟ್ಟಿನಲ್ಲಿ ಬೆಳ್ತಂಗಡಿ ತಾಲೂಕು ವ್ಯಾಪ್ತಿಯ ಸರಕಾರೇತರ ಸಂಸ್ಥೆಗಳ ಸೇವೆಯು ಶ್ಲಾಘನೀಯ. ಈ ಪ್ರಬಂಧದಲ್ಲಿ ನಾಗರಿಕ ಸೇವಾ ಟ್ರಸ್ಟ್ ಗುರುವಾಯನಕೆರೆ ಇದರ ಪಾತ್ರದ ಬಗ್ಗೆ ವಿವರಿಸುವ ಪ್ರಯತ್ನವನ್ನು ಮಾಡಲಾಗಿದೆ.

೫.೩ ಸರಕಾರೇತರ ಸಂಸ್ಥೆಗಳು ಮತ್ತು ಸಾಮಾಜಿಕ ಬದಲಾವಣೆ:

ಸಾಮಾಜಿಕ ಬದಲಾವಣೆಯ ಅರ್ಥ, ವ್ಯಾಖ್ಯೆಗಳು ಮತ್ತು ಲಕ್ಷಣಗಳು ತಿಳಿಸುವಂತೆ ಸಾಮಾಜಿಕ ಬದಲಾವಣೆಯು ಒಂದು ಸಮಾಜದ ಆಂತರಿಕ ಲಕ್ಷಣವಾಗಿದೆ ಮತ್ತು ಮಾನವ ಸಮಾಜವು ಈ ಬದಲಾವಣೆಯ ನಿಯಮಕ್ಕೆ ಬದ್ಧವಾಗಿದೆ. ಸಾಮಾಜಿಕ ಬದಲಾವಣೆಯ ಪ್ರಕ್ರಿಯೆಯಲ್ಲಿ ಸರಕಾರೇತರ ಸಂಸ್ಥೆಗಳು, ಪ್ರಮುಖ ಪಾತ್ರವನ್ನು ವಹಿಸುತ್ತದೆ. ಶಿಕ್ಷಣದ ಬೆಳವಣಿಗೆ, ಲಿಂಗ ತಾರತಮ್ಯತೆಯ ನಿರ್ಮೂಲನ, ಅಸಮಾನತೆಯ ನಿವಾರಣೆ, ಬಡತನ ಮತ್ತು ನಿರುದ್ಯೋಗ ಸಮಸ್ಯೆಗಳಿಗೆ ಪರಿಹಾರ, ರಾಜಕೀಯ ಜಾಗೃತಿ, ಮದ್ಯಮುಕ್ತ ಸಮಾಜದ ಪರಿಕಲ್ಪನೆ, ಧಾರ್ಮಿಕ ಸಾಮರಸ್ಯ, ಕೋಮು ಸೌಹಾರ್ದತೆ ಮುಂತಾದವುಗಳನ್ನು ಸಾಮಾಜಿಕ ಬದಲಾವಣೆಯ ಪ್ರಮುಖ ಮಾನದಂಡಗಳು ಎಂಬುದಾಗಿ ಗುರುತಿಸಬಹುದು. ಈ ಸಮಸ್ಯೆಗಳ ನಿವಾರಣೆಯೇ, ಸಾಮಾಜಿಕ ಬದಲಾವಣೆಯಾಗಿದೆ. ಬೆಳ್ತಂಗಡಿ ತಾಲೂಕಿನ ವ್ಯಾಪ್ತಿಯಲ್ಲಿ ಬರುವ ಹಲವಾರು ಸರಕಾರೇತರ ಸಂಸ್ಥೆಗಳು ಮೇಲೆ ಸೂಚಿಸಿದ ಹಲವಾರು ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವ ಪ್ರಾಮಾಣಿಕ ಪ್ರಯತ್ನದಲ್ಲಿ ತೊಡಗಿವೆ. ಪ್ರಸ್ತುತ ಅಧ್ಯಯನವು ನಾಗರಿಕ ಸೇವಾ ಟ್ರಸ್ಟ್ ಗುರುವಾಯನಕೆರೆ ಇದರ ಪ್ರಮುಖ ಕಾರ್ಯಕ್ರಮಗಳ ಬಗ್ಗೆ ಬೆಳಕು ಚೆಲ್ಲುವ ಮತ್ತು ಎಷ್ಟರ ಮಟ್ಟಿಗೆ ಈ ಸರಕಾರೇತರ ಸಂಸ್ಥೆಯು ಸಾಮಾಜಿಕ ಬದಲಾವಣೆಯ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡಿದೆ. ಎಂಬುದನ್ನು ಕಂಡುಕೊಳ್ಳುವ ಪ್ರಯತ್ನವಾಗಿದೆ.

೫.೪ ಆರ್ಥಿಕ ಪ್ರಗತಿ ಮತ್ತು ಸಾಮಾಜಿಕ ಬದಲಾವಣೆ:


ನಾಗರಿಕ ಸೇವಾ ಟ್ರಸ್ಟ್ ಪ್ರವರ್ತಿತ ವೇದಿಕೆಗಳು ಗ್ರಾಮೀಣ ಜನರ ಆರ್ಥಿಕ ಸಮಸ್ಯೆಗಳನ್ನು ಸ್ವಲ್ಪ ಮಟ್ಟಿಗೆ ಸುಧಾರಿಸುವಲ್ಲಿ ಯಶಸ್ವಿಯಾಗಿವೆ. ಅಧ್ಯಯನದಿಂದ ತಿಳಿದುಕೊಂಡಂತೆ ಟ್ರಸ್ಟ್ ಪ್ರವರ್ತಿತ ವೇದಿಕೆಗಳಲ್ಲಿ ತೊಡಗಿಸಿಕೊಂಡಿರುವ ಶೇಖಡಾ 100 ರಷ್ಟು ಮಂದಿ ಕೂಡ ಸಣ್ಣ ಉಳಿತಾಯ ಯೋಜನೆಯಲ್ಲಿ ತೊಡಗಿದ್ದಾರೆ. ಶೇಖಡಾ 100 ರಷ್ಟು ಮಂದಿ ಕೂಡಾ ವಿವಿಧ ಕಾರಣಗಳಿಗಾಗಿ ಸಾಲ ಸೌಲಭ್ಯವನ್ನು ಪಡೆದುಕೊಂಡಿದ್ದಾರೆ. ಮನೆ ದುರಸ್ತಿ, ಕೃಷಿ ಚಟುವಟಿಕೆಯ ವಿಸ್ತರಣೆ, ಸ್ವ ಉದ್ಯೋಗ ಮತ್ತು ವೈಯುಕ್ತಿಕ ಅಗತ್ಯತೆಗಳಿಗಾಗಿ ಸಾಲದ ಹಣವನ್ನು ಬಳಸಲಾಗಿದೆ. ಸಾಲವನ್ನು ಮರುಪಾವತಿಸುವ ರೀತಿ ಜನರಿಗೆ ಬಲು ಸುಲಭವಾಗಿದ್ದು, ವಾರಕ್ಕೊಂದು ಕಂತಿನಂತೆ ಹಣವನ್ನು ಮರುಪಾವತಿಸಲಾಗುತ್ತದೆ. ಜನರ ಅಭಿಪ್ರಾಯದ ಪ್ರಕಾರ ಬಡ್ಡಿದರ ಕೂಡಾ ಕಡಿಮೆ ಎಂಬ ಅಂಶ ಬೆಳಕಿಗೆ ಬಂದಿದೆ. ಮೂರು ವೇದಿಕೆಗಳ ಸದಸ್ಯರ ಅಭಿಪ್ರಾಯದಂತೆ ಶೇಖಡಾ 80 ರಷ್ಟು ಜನರ ಸಾಲದ ಮೊತ್ತವು ರೂ 20,000 ಕ್ಕಿಂತ ಕಡಿಮೆಯಾಗಿದೆ. ಕೇವಲ ಶೇಖಡಾ 20 ರಷ್ಟು ಮಂದಿ ಮಾತ್ರ 20,000 ಕ್ಕಿಂತ ಮೇಲ್ಪಟ್ಟು ಸಾಲವನ್ನು ಪಡೆದಿದ್ದಾರೆ. ಮರುಪಾವತಿ ವಿಳಂಬವಾದ ಸಂದರ್ಭದಲ್ಲಿ ಸಾಲ ಪಡೆದವರನ್ನು ಸೌಹಾರ್ದಯುತವಾಗಿ ನೋಡಲಾಗುತ್ತಿದ್ದು, ಸಾಲ ನವೀಕರಣಕ್ಕೆ ಅವಕಾಶವನ್ನು ಕಲ್ಪಿಸಲಾಗುತ್ತದೆ.

ಸಮೀಕ್ಷೆಯಿಂದ ತಿಳಿದು ಬಂದಂತೆ ನಾಗರಿಕ ಸೇವಾ ಟ್ರಸ್ಟ್ ಜನರ ಆರ್ಥಿಕ ಸಮಸ್ಯೆಗಳನ್ನು ಸುಧಾರಿಸುವ ಕಾಳಜಿಯನ್ನು ಹೊಂದಿದೆ. ಜನರಿಗೆ ಸುಲಭ ರೀತಿಯಲ್ಲಿ ಸಾಲ ದೊರೆಯುತ್ತಿದ್ದು, ತಮ್ಮ ತುರ್ತು ಬೇಡಿಕೆಗಳನ್ನು ಈಡೇರಿಸುವುದಕ್ಕೆ ಸಹಕಾರಿಯಾಗಿದೆ. ಜನರ ಆರ್ಥಿಕ ಜೀವನ ಮಟ್ಟದಲ್ಲಿ ಕಂಡು ಬಂದ ಸುಧಾರಣೆ ಅವರ ಸಾಮಾಜಿಕ ಸ್ಥಾನಮಾನದ ಸುಧಾರಣೆಗೆ ಕಾರಣವಾಗಿದೆ. ಸಮಾಜದಲ್ಲಿ ಎಲ್ಲರಂತೆ ನೆಮ್ಮದಿಯಿಂದ ಜೀವನ ಸಾಗಿಸುವುದು ಸಾಧ್ಯವಾಗಿದೆ. ಒಟ್ಟಿನಲ್ಲಿ ನಾಗರಿಕ ಸೇವಾ ಟ್ರಸ್ಟ್ ಮತ್ತು ಅದರ ವೇದಿಕೆಗಳು ಹಮ್ಮಿಕೊಳ್ಳುವ ಯೋಜನೆಗಳು ಮತ್ತು ಅಭಿವೃದ್ಧಿ ಮಾದರಿಗಳು ಸ್ವಲ್ಪಮಟ್ಟಿಗೆ ಜನರಿಗೆ ಸಾಮಾಜಿಕ ಗೌರವವನ್ನು ಸಂಪಾದಿಸಿಕೊಡುವಲ್ಲಿ ಯಶಸ್ವಿಯಾಗಿವೆ.

ಈ ಕೆಳಗಿನ ರೇಖಾ ಚಿತ್ರವು ಜನರ ಆರ್ಥಿಕ ಸುಧಾರಣಾ ಕ್ಷೇತ್ರಗಳ ಬಗ್ಗೆ ಮಾಹಿತಿಯನ್ನು ನೀಡುತ್ತವೆ.


1. ಉಳಿತಾಯ ಯೋಜನೆ:

	ಉತ್ತರಿಸಿದವರ ಸಂಖ್ಯೆ	ಉಳಿತಾಯ ಮಾಡುತ್ತಿದ್ದೇವೆ	ಉಳಿತಾಯ ಇಲ್ಲ
ಕೃಷಿಕರ ವೇದಿಕೆ	20	100%	---
ಮಹಿಳಾ ಜಾಗೃತಿ ವೇದಿಕೆ	20	100%	---
ದಲಿತ ಅಭಿವೃದ್ಧಿ ಸಮಿತಿ	20	100%	




2. ಸಾಲ ಸೌಲಭ್ಯ ಪಡೆದವರು:

	ಉತ್ತರಿಸಿದವರ ಸಂಖ್ಯೆ	ಸಾಲಸೌಲಭ್ಯ ಪಡೆದವರು	ಸಾಲಸೌಲಭ್ಯ ಪಡೆಯದವರು
ಕೃಷಿಕರ ವೇದಿಕೆ	20	100%	---
ಮಹಿಳಾ ಜಾಗೃತಿ ವೇದಿಕೆ	20	100%	---
ದಲಿತ ಅಭಿವೃದ್ಧಿ ಸಮಿತಿ	20	100%	



3. ಸಾಲದ ಮೊತ್ತ:

	ಉತ್ತರಿಸಿದವರ ಸಂಖ್ಯೆ	20,000 ರಿಂದ ಒಳಗೆ	20,000ಕ್ಕಿಂತ ಮೇಲ್ಪಟ್ಟು
ಕೃಷಿಕರ ವೇದಿಕೆ	20	80%	20%
ಮಹಿಳಾ ಜಾಗೃತಿ ವೇದಿಕೆ	20	85%	15%
ದಲಿತ ಅಭಿವೃದ್ಧಿ ಸಮಿತಿ	20	90%	10%



೫.೫ ಸಾಮಾಜಿಕ ಬದಲಾವಣೆಯ ಅಂಗವಾಗಿ ರಾಜಕೀಯ ಜಾಗೃತಿ:

ರಾಜಕೀಯ ಜಾಗೃತಿ ಮೂಡಿಸುವಲ್ಲಿ ನಾಗರಿಕ ಸೇವಾ ಟ್ರಸ್ಟ್ ಮತ್ತು ಅದರ ಅಂಗ ಸಂಸ್ಥೆಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ. ರಾಜಕೀಯ ಜಾಗೃತಿಯ ಅಂಗವಾಗಿ ಎಲ್ಲಾ ರಾಜಕೀಯ ಪಕ್ಷಗಳೊಂದಿಗೆ ಮುಖಾಮುಖಿ ಸಂವಾದಗಳನ್ನು ಒಂದೇ ವೇದಿಕೆಯಲ್ಲಿ ಏರ್ಪಡಿಸಿ ಜನರ ಬೇಡಿಕೆಗಳುಳ್ಳ ಪ್ರಣಾಳಿಕೆಯನ್ನು ಸಿದ್ಧಪಡಿಸಿದ ಕೀರ್ತಿ ನಾಗರಿಕ ಸೇವಾ ಟ್ರಸ್ಟ್‌ಗೆ ಸಲ್ಲುತ್ತದೆ. ಸ್ಥಳೀಯ, ರಾಜ್ಯ ಮತ್ತು ರಾಷ್ಟ್ರ ಮಟ್ಟದ ನಾಯಕರನ್ನು ಸಿದ್ಧಪಡಿಸುವ ಉದ್ದೇಶದಿಂದ ಜನರಿಗೆ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತದೆ. ಜನರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಆಂದೋಲನ ಮತ್ತು ಜಾಥಾಗಳನ್ನು ಏರ್ಪಡಿಸಲಾಗುತ್ತದೆ. ಒಟ್ಟಿನಲ್ಲಿ ಪ್ರಜಾಸತ್ತಾತ್ಮಕ ತತ್ವಗಳಿಗೆ ತಲೆ ಬಾಗಿ ತಮ್ಮ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಪ್ರಯತ್ನಿಸುತ್ತದೆ. ಜಾತಿ, ಧರ್ಮ, ಮತ್ತು ಜನಾಂಗ ಎಂಬ ಬೇಧಬಾವವಿಲ್ಲದೆ ಹೋರಾಟಗಳನ್ನು ಸಂಘಟಿಸುತ್ತದೆ.


ರಾಜಕೀಯ ಕ್ಷೇತ್ರಕ್ಕೆ ಸೀಮಿತವಾಗಿ ನಡೆಸಿದ ಸಮೀಕ್ಷೆಯ ಪ್ರಕಾರ ಮೂರು ವೇದಿಕೆಗಳ ಶೇಖಡಾ 90 ರಷ್ಟು ಜನರಲ್ಲಿ ರಾಜಕೀಯ ಜಾಗೃತಿ ಮೂಡಿರುವುದು ಕಂಡುಬರುತ್ತದೆ. ಆದರೇ ಜನರ ರಾಜಕೀಯ ಜಾಗೃತಿಯು ಕೇವಲ ಮತದಾನ ಕ್ಷೇತ್ರಕ್ಕೆ ಸೀಮಿತವಾಗಿರುದನ್ನು ಗಮನಿಸಬಹುದು. ಜನರಿಗೆ ರಾಜಕೀಯದಲ್ಲಿ ಭಾಗವಹಿಸುವ ಆಸಕ್ತಿ ಕಡಿಮೆ ಇದ್ದೂ ಮಹಿಳೆಯರಲ್ಲಿ ಕೇವಲ 25% ರಷ್ಟು ಮಂದಿ ಮಾತ್ರ ರಾಜಕೀಯದಲ್ಲಿ ಭಾಗವಹಿಸುವ ಆಸಕ್ತಿಯನ್ನು ವ್ಯಕ್ತಪಡಿಸಿದ್ದಾರೆ. ತಾಲೂಕು, ಜಿಲ್ಲೆ ಮತ್ತು ಗ್ರಾಮ ಮಟ್ಟದಲ್ಲಿ ಕೆಲವರು ಚುನಾವಣೆಯಲ್ಲಿ ಭಾಗವಹಿಸಿ ಜಯಶಾಲಿಯಾಗಲು ನಾಗರಿಕ ಸೇವಾ ಟ್ರಸ್ಟ್ ಪ್ರೇರೇಪಣೆಯಾಗಿದೆ. ಆದರೂ ಸರಕಾರದ ಕಾರ್ಯಕ್ರಮಗಳು ಜನರಿಗೆ

ತಲುಪಲು ಈ ಸಂಘಟನೆ ಒಂದು ಕೊಂಡಿಯಂತೆ ಕಾರ್ಯ ನಿರ್ವಹಿಸುತ್ತದೆ. ಸರಕಾರದ ಜನ ವಿರೋಧಿ ನೀತಿಗಳ ವಿರುದ್ಧ ಹೋರಾಟಗಳನ್ನು ಸಂಘಟಿಸುತ್ತದೆ ಎಂಬ ಅಭಿಪ್ರಾಯ ವ್ಯಕ್ತವಾಗಿದೆ. ರಾಜಕೀಯದಲ್ಲಿ ಭಾಗವಹಿಸಲು ಆಸಕ್ತಿಯ ಕೊರತೆ, ಜನರ ಕೌಟುಂಬಿಕ ಹಿನ್ನೆಲೆ, ವಿದ್ಯಾಭ್ಯಾಸದ ಕೊರತೆ ಮತ್ತು ಸಾಮಾಜಿಕ ಕಟ್ಟು-ಪಾಡುಗಳು ಪ್ರಮುಖವಾಗಿ ಜನರನ್ನು ರಾಜಕೀಯದಿಂದ ದೂರ ಉಳಿಯುವಂತೆ ಮಾಡಿವೆ. ಒಟ್ಟಿನಲ್ಲಿ ನಾಗರಿಕ ಸೇವಾ ಟ್ರಸ್ಟ್ ಮತ್ತು ಅದರ ವಿವಿಧ ವೇದಿಕೆಗಳು ರಾಜಕೀಯ ಜಾಗೃತಿಯನ್ನು ಮೂಡಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ ಎಂಬುದಾಗಿ ಈ ಅಧ್ಯಯನದಿಂದ ತಿಳಿಯಬಹುದು.

ರಾಜಕೀಯ ಜಾಗೃತಿ ಮತ್ತು ಭಾಗವಹಿಸುವಿಕೆಯನ್ನು ಈ ಕೆಳಗಿನ ರೇಖಾ ಚಿತ್ರಗಳ ಮೂಲಕ ಗುರುತಿಸಬಹುದು.


೧. ರಾಜಕೀಯ ಜಾಗೃತಿ:

	ಉತ್ತರಿಸಿದವರ ಸಂಖ್ಯೆ	ಜಾಗೃತಿ ಮೂಡಿದೆ	ಜಾಗೃತಿ ಇಲ್ಲ
ಕೃಷಿಕರ ವೇದಿಕೆ	20	90%	20%
ಮಹಿಳಾ ಜಾಗೃತಿ ವೇದಿಕೆ	20	80%	20%
ದಲಿತ ಅಭಿವೃದ್ಧಿ ಸಮಿತಿ	20	95%	05%



೨. ರಾಜಕೀಯದಲ್ಲಿ ಪಾತ್ರ:

	ಉತ್ತರಿಸಿದವರ ಸಂಖ್ಯೆ	ಮತದಾರನಾಗಿ	ಮತದಾನ ಚುನಾವಣೆ
ಕೃಷಿಕರ ವೇದಿಕೆ	20	55%	45%
ಮಹಿಳಾ ಜಾಗೃತಿ ವೇದಿಕೆ	20	65%	35%
ದಲಿತ ಅಭಿವೃದ್ಧಿ ಸಮಿತಿ	20	90%	10%



೫.೬ ಸಾಮಾಜಿಕ ಬದಲಾವಣೆಯಲ್ಲಿ ನಾಗರಿಕ ಸೇವಾ ಟ್ರಸ್ಟ್ ಪ್ರವರ್ತಿತ ವೇದಿಕೆಗಳು

ನಾಗರಿಕ ಸೇವಾ ಟ್ರಸ್ಟ್ ಗುರುವಾಯನಕೆರೆ ಎಂಬ ಸರಕಾರೇತರ ಸಂಸ್ಥೆಯು ತಳಸ್ಥರದ ಸಮುದಾಯಗಳ ಅಭಿವೃದ್ಧಿಯ ಮೂಲಧ್ಯೇಯವನ್ನು ಹೊಂದಿದೆ. ಸಮಾಜದ ಅತ್ಯಂತ ತಳ ಮಟ್ಟದಲ್ಲಿರುವ ಜನರ ಸಮಸ್ಯೆಗಳಿಗೆ ಸ್ಪಂದಿಸಿ ಅವರನ್ನು ಸಮಾಜದ ಮುಖ್ಯ ವಾಹಿನಿಗೆ ತರುವ ಕಾರ್ಯದಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತದೆ. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳೆರಡರಲ್ಲೂ ತನ್ನ ಸೇವಾ ಚಟುವಟಿಕೆಗಳನ್ನು ವಿಸ್ತರಿಸಿಕೊಂಡಿರುವ ಈ ಸಂಸ್ಥೆಯು ತನ್ನ ಮೂಲ ನೆಲೆಯನ್ನು ಬೆಳ್ತಂಗಡಿ ತಾಲೂಕಿನ ಗುರುವಾಯನಕೆರೆಯಲ್ಲಿ ಹೊಂದಿದೆ. ಬೆಳ್ತಂಗಡಿ ತಾಲೂಕಿನ ಗ್ರಾಮೀಣ ಜನರಲ್ಲಿ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಜಾಗೃತಿಯನ್ನು ಮೂಡಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ. ರಾಜಕೀಯ ಮತ್ತು ಆರ್ಥಿಕ ನೆಲೆಯಲ್ಲಿ ಈ ಸಂಸ್ಥೆಯ ಕಾರ್ಯ ಚಟುವಟಿಕೆಗಳು ಎಷ್ಟರ ಮಟ್ಟಿಗೆ ಜನರಿಗೆ ಸಹಕಾರಿಯಾಗಿದೆ ಎಂಬುದನ್ನು ಈಗಾಗಲೇ ತಿಳಿದುಕೊಂಡಿದ್ದೇವೆ. ಕೃಷಿಕರು, ಕೃಷಿಕೂಲಿಗಳು, ದಲಿತರು, ಹಿಂದುಳಿದ ವರ್ಗದವರು ಮತ್ತು ಮಹಿಳೆಯರು ಇದರ ಕಾರ್ಯ ಚಟುವಟಿಕೆಗಳಿಂದ ಬಹಳಷ್ಟು ಪ್ರಯೋಜನ ಪಡೆದಿದ್ದು, ಅವರ ಅಭ್ಯುದಯವೇ ಈ ಸಂಸ್ಥೆಯ ಮೂಲ ಉದ್ದೇಶಗಳಲ್ಲೊಂದಾಗಿದೆ.

ನಾಗರಿಕ ಸೇವಾ ಟ್ರಸ್ಟ್ ಪ್ರವರ್ತಿತ ವಿವಿಧ ವೇದಿಕೆಗಳು, ಬೆಳ್ತಂಗಡಿ ತಾಲೂಕಿನ ಪ್ರತೀ ಹಳ್ಳಿ ಹಳ್ಳಿಗಳಲ್ಲಿ ತಮ್ಮ ಸ್ಥಳೀಯ ಘಟಕಗಳನ್ನು ಹೊಂದಿವೆ. ಈ ವೇದಿಕೆಗಳ ಅಧ್ಯಕ್ಷರ ಮತ್ತು ಸದಸ್ಯರಿಂದ ಸಂದರ್ಶನ ಮತ್ತು ಪ್ರಶ್ನಾವಳಿಗಳ ಮೂಲಕ ಸಂಗ್ರಹಿಸಿದ ಮಾಹಿತಿಯ ಪ್ರಕಾರ ಈ ವೇದಿಕೆಗಳು ಸಣ್ಣ ಕೃಷಿಕರ, ಕೃಷಿಕೂಲಿಗಳ, ದಲಿತರ, ಹಿಂದುಳಿದ ವರ್ಗಗಳ ಮತ್ತು ಮಹಿಳೆಯರ ಕಲ್ಯಾಣವನ್ನು ಬಯಸುತ್ತವೆ.

ಸಾಮಾಜಿಕ ಬದಲಾವಣೆಯಲ್ಲಿ ಕೃಷಿಕರ ವೇದಿಕೆ:

ಕೃಷಿಕರ ವೇದಿಕೆಯು ನಾಗರಿಕ ಸೇವಾ ಟ್ರಸ್ಟಿನ್ ಒಂದು ಅಂಗ ಸಂಸ್ಥೆಯಾಗಿದೆ. ಇದು ಕೃಷಿಕರಲ್ಲಿ ಹಲವಾರು ಸಮಸ್ಯೆಗಳ ಕುರಿತು ಜಾಗೃತಿ ಮೂಡಿಸುತ್ತದೆ. ಇದು ಗ್ರಾಮೀಣ ಮಟ್ಟದಲ್ಲಿ ಅನೇಕ ಕೃಷಿಕ ಘಟಕಗಳನ್ನು ಹೊಂದಿದೆ. ಸಣ್ಣ ಕೃಷಿಕರು ಮತ್ತು ಕೃಷಿ ಕೂಲಿಗಳು ಇದರ ಸದಸ್ಯತ್ವವನ್ನು ಹೊಂದಿದ್ದಾರೆ. ಇವರು ವಾರಕ್ಕೊಮ್ಮೆ ಸಭೆಗಳನ್ನು ನಡೆಸುತ್ತಿದ್ದೂ ತಮ್ಮ ಸಮಸ್ಯೆಗಳ ಕುರಿತು ಚರ್ಚೆಯನ್ನು ನಡೆಸುತ್ತಾರೆ. ಇವರಿಗೆ ಟ್ರಸ್ಟ್ ವತಿಯಿಂದ ಆಗಾಗ ತರಬೇತಿಯನ್ನು ನೀಡಲಾಗುತ್ತದೆ ಮತ್ತು ಇದರ ಕಾರ್ಯವೈಕರಿಯನ್ನು ಟ್ರಸ್ಟ್ ವತಿಯಿಂದ ನೇಮಿಸಲ್ಪಟ್ಟ ಸಮನ್ವಯಾಧಿಕಾರಿಗಳು ಪರಿಶೀಲಿಸುತ್ತಾರೆ. ಕೃಷಿ ಬೆಳೆಗೆ ಕಾಡುವ ರೋಗಗಳ ಬಗ್ಗೆ, ಸಾವಯವ ಕೃಷಿ ವಿಧಾನಗಳ ಬಗ್ಗೆ ಮತ್ತು ಸ್ಥಳಿಯ ಬೀಜಗಳ ಬಳಕೆಯ ಬಗ್ಗೆ ಜಾಗೃತಿಯನ್ನು ಮೂಡಿಸಲಾಗುತ್ತದೆ.


ಪ್ರಸ್ತುತ ಅಧ್ಯಯನಕ್ಕೆ ಪೂರಕವಾಗಿ ಕೃಷಿಕರ ಘಟಕಕ್ಕೆ ಸೇರಿದ ಸುಮಾರು 20 ಮಂದಿಗೆ ಪ್ರಶ್ನಾವಳಿಗಳನ್ನು ಹಂಚುವ ಮೂಲಕ ಅಭಿಪ್ರಾಯಗಳನ್ನು ಸಂಗ್ರಹಿಸಲಾಯಿತು. ನಾಗರಿಕ ಸೇವಾ ಟ್ರಸ್ಟ್‌ನ ಕಾರ್ಯದರ್ಶಿ ಮತ್ತು ಕೃಷಿ ಕ್ಷೇತ್ರಕ್ಕೆ ಸಂಬಂಧ ಪಟ್ಟಂತೆ ಅಪಾರ ಮಾಹಿತಿಯುಳ್ಳ ಬಿ.ಕೆ. ಪರಮೇಶ್ವರ ಮತ್ತು ಇತರರಿಂದ ಸಂದರ್ಶನದ ಮೂಲದ

ಮಾಹಿತಿಯನ್ನು ಪಡೆಯಲಾಯಿತು. ಆವರ ಅಭಿಪ್ರಾಯಗಳು ಮತ್ತು ಪ್ರತಿಕ್ರಿಯೆಗಳು ಸಕಾರಾತ್ಮಕವಾಗಿದ್ದು ಟ್ರಸ್ಟ್‌ನ ಸೇವಾ ಚಟುವಟಿಕೆಗಳ ಕುರಿತು ತೃಪ್ತಿದಾಯಕ ಅಭಿಪ್ರಾಯಗಳನ್ನು ಹೊಂದಿವೆ. ಕೃಷಿಕರಲ್ಲಿ ರಾಜಕೀಯ ಜಾಗೃತಿ ಮೂಡಿಸುವಲ್ಲಿ ಮತ್ತು ಆರ್ಥಿಕ ಸ್ವಾವಲಂಬನೆಯ ಬದುಕನ್ನು ಸಾರುವುದಕ್ಕೆ ಈ ವೇದಿಕೆಯು ಪ್ರೇರೇಪಣೆಯಾಗಿವೆ. ಆರೋಗ್ಯ ಮತ್ತು ಶುಚಿತ್ವದ ಕುರಿತು ಜಾಗೃತಿಯನ್ನು ಮೂಡಿಸಿ ಆಧುನಿಕ ಕೃಷಿ ವಿಧಾನಗಳ ಬಗ್ಗೆ ಮಾಹಿತಿಯನ್ನು ನೀಡುತ್ತವೆ.

ಕೃಷಿಕರ ವೇದಿಕೆಯ ಸದಸ್ಯರಲ್ಲಿ ನಡೆಸಿದ ಸಮೀಕ್ಷೆಯು ಸೂಚಿಸುವಂತೆ ಶೇಖಡಾ 65 ರಷ್ಟು ಮಂದಿ ಮಕ್ಕಳ ಶಿಕ್ಷಣಕ್ಕೆ ಸಹಾಯವಾಗಿದೆ ಎಂಬ ಅಭಿಪ್ರಾಯವನ್ನು ಹೊಂದಿದ್ದಾರೆ. ಸಭೆ–ಸಮಾರಂಭಗಳಲ್ಲಿ ವೇದಿಕೆಯ ಸದಸ್ಯರ ಅಭಿಪ್ರಾಯಗಳಿಗೆ ಮನ್ನಣೆ ದೊರೆಯುತ್ತಿದ್ದೂ ಜನರ ಒಕ್ಕೂಟ ಬಲಗೊಳ್ಳುವುದಕ್ಕೆ ಕಾರಣವಾಗಿದೆ ಎಂಬ ಮಾತನ್ನು ಎಲ್ಲರೂ ಹಂಚಿಕೊಂಡಿದ್ದು, ಲಿಂಗ ತಾರತಮ್ಯತೆ ದೂರವಾಗಿದೆ ಎಂಬ ಅಭಿಪ್ರಾಯ ವ್ಯಕ್ತವಾಗಿದೆ. ಜಾತಿ–ಜಾತಿಗಳ ಅಂತರ ಕಡಿಮೆಯಾಗುತ್ತಿದ್ದು ಧಾರ್ಮಿಕ ಸಾಮರಸ್ಯ ಬಲಗೊಳ್ಳುತ್ತಿದೆ ಎಂಬ ಅಭಿಪ್ರಾಯವಿದೆ. ಆರೋಗ್ಯ ಮತ್ತು ಶುಚಿತ್ವದ ಕುರಿತು ಜಾಗೃತಿ ಮೂಡಿದ್ದೂ ಸಂಘದ ಒಟ್ಟಾರೆ ಚಟುವಟಿಕೆಗಳು ಉತ್ತಮವಾಗಿವೆ ಎಂಬ ಒಮ್ಮತದ ಅಭಿಪ್ರಾಯ ವ್ಯಕ್ತವಾಗಿದೆ. ಸಮಾಜಿಕ ಸ್ಥಾನಮಾನ ಮತ್ತು ಗೌರವ ಹೆಚ್ಚಾಗಿದ್ದು ಟ್ರಸ್ಟ್‌ನ ಚಟುವಟಿಕೆಗಳು ಸಾಮಾಜಿಕ ಬದಲಾವಣೆಗೆ ಪೂರಕವಗಿದೆ ಎಂಬ ಅಭಿಪ್ರಾಯವನ್ನು ಶೇಖಡಾ 100 ರಷ್ಟು ಮಂದಿ ಕೂಡ ಹಂಚಿಕೊಂಡಿರುವ ವಿಷಯವು ಟ್ರಸ್ಟ್‌ನ ಕಾರ್ಯಕ್ರಮಗಳು ಸಾಮಾಜಿಕ ಬದಲಾವಣೆಯನ್ನು ಪ್ರೇರೇಪಿಸುತ್ತವೆ ಎಂಬುದನ್ನು ಸೂಚಿಸುತ್ತದೆ.

ಕೃಷಿಕರಲ್ಲಿ ಸಾಮಾಜಿಕ ಬದಲಾವಣೆಯ ಮಾನದಂಡಗಳು:

ಹಂಚಿಕೆ ಮಾಡಲಾದ ಪ್ರಶ್ನೆಗಳು	ಪ್ರತಿಕ್ರಿಯಿಸಿದವರ ಸಂಖ್ಯೆ	ಹೌದು	ಇಲ್ಲ
1. ಸಮಾಜದಲ್ಲಿ ಗೌರವ ಹೆಚ್ಚಾಗಿದೆಯೇ?	20	100%	--
2. ಸಲಹೆಗಳಿಗೆ ಮನ್ನಣೆ ದೊರೆಯುತ್ತಿದೆಯೇ?	20	100%	--
3. ಲಿಂಗ ಸಮಾನತೆಯತ್ತ ಸಾಗುತ್ತಿದೆಯೇ?	20	100%	--
4. ಸಮಾಜಿಕ ಸಮಸ್ಯೆಗಳಿಗೆ ಪರಿಹಾರ ಲಭಿಸಿದೆಯೇ?	20	100%	--
5. ಜಾತಿ-ಜಾತಿಗಳ ಅಂತರ ಕಡಿಮೆಯಾಗಿದೆಯೇ?	20	100%	--
6. ಧಾರ್ಮಿಕ ಸಾಮರಸ್ಯ ಬಲಗೊಂಡಿದೆಯೇ?	20	100%	--
7. ಸಾಮಾಜಿಕ ಬದಲಾವಣೆ ಆಗಿದೆಯೇ?	20	100%	--



ಮೇಲಿನ ರೇಖಾ ಚಿತ್ರದಲ್ಲಿರುವ ಅಂಕಿ ಅಂಶಗಳು ಸಾಮಾಜಿಕ ಬದಲಾವಣೆಯ ಕುರಿತಾದ ವಿವಿಧ ಅಂಶಗಳ ಬಗ್ಗೆ ಜನರ ಪ್ರತಿಕ್ರಿಯೆಯನ್ನು ಸೂಚಿಸುತ್ತದೆ ಮತ್ತು ಶೇಖಡಾ 100 ರಷ್ಟು ಮಂದಿ ಕೂಡಾ ಅಭಿಪ್ರಾಯ ಪಡುವಂತೆ ನಾಗರಿಕ ಸೇವಾ ಟ್ರಸ್ಟ್‌ನ ಅಂಗ ಸಂಸ್ಥೆಯಾದ ಕೃಷಿಕರ ವೇದಿಕೆಯು ಕೃಷಿಕರಲ್ಲಿ ಸಾಮಾಜಿಕ ಬದಲಾವಣೆಗೆ ಪೂರಕವಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತದೆ ಎಂಬುದನ್ನು ಸೂಚಿಸುತ್ತದೆ.

ಸಾಮಾಜಿಕ ಬದಲಾವಣೆಯಲ್ಲಿ ಮಹಿಳಾ ಜಾಗೃತಿ ವೇದಿಕೆ


1995 ರಲ್ಲಿ ನಾಗರಿಕ ಸೇವಾ ಟ್ರಸ್ಟ್‌ನ ಅಂಗ ಸಂಸ್ಥೆಯಾಗಿ ಹುಟ್ಟಿಕೊಂಡ 'ಕರಾವಳಿ ಮಹಿಳಾ ಜಾಗೃತಿ ವೇದಿಕೆಯು' ಮಹಿಳೆಯರ ಸಮಸ್ಯೆಗಳ ಪರಿಹಾರಕ್ಕೆ ಗಮನವನ್ನು ನೀಡುತ್ತಿದೆ. ಬೆಳ್ತಂಗಡಿ ತಾಲೂಕಿನ ವ್ಯಾಪ್ತಿಯಲ್ಲಿ ಹಲವಾರು ಮಹಿಳಾ ಸ್ವಸಹಾಯ ಸಂಘಗಳನ್ನು ರಚಿಸಿಕೊಂಡು ಕಾರ್ಯ ನಿರ್ವಹಿಸುತ್ತಿದೆ. ಮಹಿಳೆಯರ ಸಮಸ್ಯೆಗಳ ಕುರಿತಾಗಿ ಜಾಗೃತಿಯನ್ನು ಮೂಡಿಸುತ್ತದೆ. ಲಿಂಗ ತಾರತಮ್ಯತೆಯ ನಿವಾರಣೆ ಮತ್ತು ಮಹಿಳಾ ದೌರ್ಜನ್ಯ ತಡೆಗೆ ಹೆಚ್ಚಿನ ಆದ್ಯತೆಯನ್ನು ನೀಡುತ್ತದೆ. ಮಹಿಳೆಯರಿಗೆ ಆರ್ಥಿಕ ಸ್ವಾವಲಂಬನೆಯ ಬದುಕು ಸಾರುವುದಕ್ಕೆ ಪ್ರೇರಣೆಯಾಗಿದೆ. ಮಹಿಳಾ ಜಾಗೃತಿ ವೇದಿಕೆಯ ಸದಸ್ಯರಲ್ಲಿ ರಾಜಕೀಯ ಪ್ರಜ್ಞೆ ಕೂಡಾ ಮೂಡಿಸುವ ಪ್ರಯತ್ನದಲ್ಲಿ ತೊಡಗಿದೆ. ಪ್ರಸ್ತುತ

ಅಧ್ಯಯನದ ಸಲುವಾಗಿ ಮಹಿಳಾ ಜಾಗೃತಿ ವೇದಿಕೆಯ ಸದಸ್ಯರಿಂದ ಪ್ರಶ್ನಾವಳಿಗಳ ಮತ್ತು ಸಂದರ್ಶನದ ಮೂಲಕ ಈ ಕೆಳಗಿನ ಅಭಿಪ್ರಾಯವನ್ನು ಪಡೆಯಲಾಗಿದೆ.

ಸಮೀಕ್ಷೆಯು ಸೂಚಿಸುವಂತೆ ನಾಗರಿಕ ಸೇವಾ ಟ್ರಸ್ಟ್‌ನ ಒಡನಾಟದಿಂದ ಮಹಿಳೆಯರಲ್ಲಿ ಜಾಗೃತಿ ಮೂಡಿದೆ. ಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹ ಲಭಿಸುತ್ತದೆ ಎಂಬ ಅಭಿಪ್ರಾಯ ವ್ಯಕ್ತವಾಗಿದೆ. ಆರೋಗ್ಯದ ದೃಷ್ಟಿಯಲ್ಲಿ ಜಾಗೃತಿ ಮೂಡಿದ್ದು ಲಿಂಗ ತಾರತಮ್ಯತೆ ದೂರವಾಗಿದೆ ಎಂಬ ಅಭಿಪ್ರಾಯವಿದೆ. ವೇದಿಕೆಯ ಸದಸ್ಯರ ಸಲಹೆ ಸೂಚನೆಗಳಿಗೆ ಮನ್ನಣೆ ದೊರೆಯುತ್ತಿದ್ದು ಸಮಸ್ಯೆಗಳ ಪರಿಹಾರಕ್ಕೆ ಸಹಕಾರಿಯಾಗಿದೆ. ಶೇಖಡಾ 90 ರಷ್ಟು ಮಂದಿಯ ಅಭಿಪ್ರಾಯದ ಪ್ರಕಾರ ಜನರ ಒಕ್ಕೂಟ ಬಲಗೊಂಡಿದ್ದು ಜಾತಿ-ಜಾತಿಗಳ ಧಾರ್ಮಿಕ ಸಾಮರಸ್ಯ ಬಲಗೊಳ್ಳುತ್ತಿದ್ದು, ಮಹಿಳೆಯರಿಗೆ ಸ್ವತಂತ್ರವಾಗಿ ಚಿಂತಿಸಿ ಸ್ವಾವಲಂಬನೆಯ ಜೀವನ ಸಾರುವುದಕ್ಕೆ ಸಹಕಾರಿಯಾಗಿದೆ. ಶೇಖಡಾ 100 ರಷ್ಟು ಮಂದಿ ಕೂಡಾ ಅಭಿಪ್ರಾಯ ಪಡುವ ಪ್ರಕಾರ ಸಮಾಜದಲ್ಲಿ ಮಹಿಳೆಯರ ಸ್ಥಾನಮಾನ ಹೆಚ್ಚಾಗಿದೆ ಮತ್ತು ಸಾಮಾಜಿಕ ಬದಲಾವಣೆ ಆಗಿದೆ ಎಂಬ ವಿಷಯವನ್ನು ಗಮನಿಸಲಾಗಿದೆ. ಬೀಡಿ ಕಾರ್ಮಿಕರ ಬಗ್ಗೆ ವಿಶೇಷ ಕಾಳಜಿ ವಹಿಸುತ್ತಿರುವ ವೇದಿಕೆ ಬೀಡಿ ಉದ್ಯಮದ ರಕ್ಷಣೆಯ ನಿಟ್ಟಿನಲ್ಲಿ ಮಹಾಧಿವೇಶನವನ್ನು ಏರ್ಪಡಿಸಿದೆ. ಮಹಿಳೆಯರು ಮೂಢನಂಬಿಕೆಗಳಿಂದ ಮುಕ್ತರಾಗಿ ಸಮಾಜದ ಮುಖ್ಯವಾಹಿನಿಗೆ ಬರುವುದಕ್ಕೆ ಅವಕಾಶವನ್ನು ಕಲ್ಪಿಸಲಾಗಿದೆ. ಒಟ್ಟಿನಲ್ಲಿ ಸಂಘದ ಚಟುವಟಿಕೆಗಳು ಉತ್ತಮವಾಗಿವೆ.

ಮಹಿಳೆಯರಲ್ಲಿ ಸಾಮಾಜಿಕ ಬದಲಾವಣೆಯ ಅಂಶಗಳು:

ಹಂಚಿಕೆ ಮಾಡಲಾದ ಪ್ರಶ್ನೆಗಳು	ಪ್ರತಿಕ್ರಿಯಿಸಿದವರ ಸಂಖ್ಯೆ	ಹೌದು	ಇಲ್ಲ
1. ಸಮಾಜದಲ್ಲಿ ಗೌರವ ಹೆಚ್ಚಾಗಿದೆಯೇ?	20	100%	--
2. ನಿಮ್ಮ ಸಲಹೆಗಳಿಗೆ ಮನ್ನಣೆ ದೊರೆಯುತ್ತಿದೆಯೇ?	20	100%	--
3. ಲಿಂಗ ಸಮಾನತೆಯತ್ತ ಸಾಗುತ್ತಿದೆಯೇ?	20	100%	--
4. ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರ ಲಭಿಸಿದೆಯೇ?	20	100%	--
5. ಜಾತಿಗಳ ನಡುವಿನ ಅಂತರ ಕಡಿಮೆಯಾಗಿದೆಯೇ?	20	100%	--
6. ಧಾರ್ಮಿಕ ಸಾಮರಸ್ಯ ಬಲಗೊಂಡಿದೆಯೇ?	20	100%	--
7. ಸಾಮಾಜಿಕ ಬದಲಾವಣೆ ಆಗಿದೆಯೇ?	20	100%	--



ಮೇಲಿನ ರೇಖಾ ಚಿತ್ರದಲ್ಲಿರುವ ಅಂಕಿ ಅಂಶಗಳು ಮಹಿಳೆಯರಲ್ಲಿ ಸಾಮಾಜಿಕ ಬದಲಾವಣೆಯ ವಿವಿಧ ಅಂಶಗಳಿಗೆ ಮಹಿಳೆಯರ ಪ್ರತಿಕ್ರಿಯೆಯನ್ನು ಸೂಚಿಸುತ್ತದೆ. ಶೇಖಡಾ 100 ರಷ್ಟು ಮಂದಿ ಕೂಡಾ ಅಭಿಪ್ರಾಯ ಪಡುವಂತೆ ನಾಗರಿಕ ಸೇವಾ ಟ್ರಸ್ಟ್ ಪ್ರವರ್ತಿತ ಮಹಿಳಾ ಜಾಗೃತಿ ವೇದಿಕೆಯು ಸಾಮಾಜಿಕ ಬದಲಾವಣೆಗೆ ಪೂರಕವಾಗಿದೆ.


ಸಾಮಾಜಿಕ ಬದಲಾವಣೆಯಲ್ಲಿ ದಲಿತ ಅಭಿವೃದ್ಧಿ ಸಮಿತಿ:

ನಾಗರಿಕ ಸೇವಾ ಟ್ರಸ್ಟ್ ಅಂಗ ಸಂಸ್ಥೆಯಾಗಿ ಹುಟ್ಟಿಕೊಂಡಿರುವ 'ದಲಿತ ಅಭಿವೃದ್ಧಿ ಸಮಿತಿಯು' ದಲಿತರ ಪರವಾಗಿ ನಿರಂತರ ಹೋರಾಟದಲ್ಲಿ ತೊಡಗಿದೆ. ಅಸ್ಪ್ರಶ್ಯತೆಯನ್ನು ಹೋಗಾಲಾಡಿಸಿ ಸಾಮಾಜಿಕ ಸಮಾನತೆಯನ್ನು ಸಾಧಿಸುವ ಪ್ರಯತ್ನದೊಂದಿಗೆ ದಲಿತರ ಆರ್ಥಿಕ ಸ್ಥಿತಿಗತಿಯ ಸುಧಾರಣೆಗೆ ಹಲವಾರು ಕಾರ್ಯಕ್ರಮಗಳನ್ನು ರೂಪಿಸುತ್ತದೆ. ಈ ಸಂಘಟನೆಯ ನೇತೃತ್ವದಲ್ಲಿ ಬೆಳ್ತಂಗಡಿ ತಾಲೂಕಿನ ದಲಿತರ ಸ್ಥಿತಿಗತಿ ಕುರಿತಾದ ಸಮಗ್ರ ಅಧ್ಯಯನವನ್ನು ನಡೆಸಲಾಗಿದ್ದು, "ಹೊರ ಅಂಚಿನಿಂದ ಕೇಂದ್ರ ಬಿಂದುವಿನತ್ತ" ಎಂಬ ಕೃತಿಯನ್ನು ಹೊರತಂದಿದೆ. ಈ ಕೃತಿಯು ಸ್ವಾತಂತ್ರ್ಯೋತ್ತರ ಭಾರತದಲ್ಲಿ ಬೆಳ್ತಂಗಡಿ ತಾಲೂಕಿನ ದಲಿತರ ರಾಜಕೀಯ, ಆರ್ಥಿಕ, ಶೈಕ್ಷಣಿಕ, ಮತ್ತು ಸಾಮಾಜಿಕ ಸ್ಥಿತಿಗತಿಯ ಬಗ್ಗೆ ಮಾಹಿತಿಯನ್ನು ನೀಡುತ್ತದೆ.

ಪ್ರಸ್ತುತ ಅಧ್ಯಯನಕ್ಕಾಗಿ ನಡೆಸಿದ ಸಮೀಕ್ಷೆಯ ಪ್ರಕಾರ ಶೇಖಡಾ 95ರಷ್ಟು ಮಂದಿ ಮಕ್ಕಳ ಶಿಕ್ಷಣಕ್ಕೆ ಸಹಾಯವಾಗಿದೆ. ಎಲ್ಲಾ ಸದಸ್ಯರ ಸಲಹೆ ಸೂಚನೆಗಳಿಗೆ ಮನ್ನಣೆ ದೊರೆಯುವುದರೊಂದಿಗೆ ಟ್ರಸ್ಟ್‌ನ ಚಟುವಟಿಕೆಗಳು ಸಾಮಾಜಿಕ ಸಮಸ್ಯೆಗಳ ಪರಿಹಾರಕ್ಕೆ ಸಹಕಾರಿಯಾಗಿವೆ ಎಂಬ ಅಭಿಪ್ರಾಯ ವ್ಯಕ್ತವಾಗಿದೆ. ವೇದಿಕೆಯ ಕಾರ್ಯಕ್ರಮಗಳು ಜಾತಿ–ಜಾತಿಗಳ ನಡುವಿನ ಅಂತರ ಕಡಿಮೆಯಾಗುವುದಕ್ಕೆ ಸಹಕಾರಿಯಾಗಿದ್ದು ಜನರ ಒಕ್ಕೂಟ ಬಲಗೊಳ್ಳುತ್ತಿದೆ ಎಂಬ ಅಭಿಪ್ರಾಯವಿದೆ. ಆರೋಗ್ಯ ಮತ್ತು ಶುಚಿತ್ವದ ನಿಟ್ಟಿನಲ್ಲಿ ಜನಜಾಗೃತಿ ಮೂಡಿಸಲಾಗುತ್ತಿದೆ ಮತ್ತು ಧಾರ್ಮಿಕ ಸಾಮರಸ್ಯ ಬಲಗೊಳ್ಳುತ್ತಿದೆ. ಲಿಂಗ ಸಮಾನತೆಯನ್ನು ಕಾಯ್ದುಕೊಳ್ಳುವಲ್ಲಿ ವೇದಿಕೆಯ ಕಾರ್ಯಕ್ರಮಗಳು ಸಹಕಾರಿಯಾಗುತ್ತಿದ್ದು ದಲಿತರ ಸಾಮಾಜಿಕ ಸ್ಥಾನಮಾನ ಹೆಚ್ಚಾಗಿದೆ ಎಂಬ ಅಭಿಪ್ರಾಯ ವ್ಯಕ್ತವಾಗಿದೆ. ಒಟ್ಟಿನಲ್ಲಿ ದಲಿತರೊಂದಿಗೆ ಸಹೋದರತೆಯ ಭಾವನೆ ಹಂಚಿಕೊಂಡು ಅವರನ್ನು ಸಮಾಜದ ಮುಖ್ಯವಾಹಿನಿಗೆ ತರುವಂತಹ ಕಾರ್ಯದಲ್ಲಿ ನಾಗರಿಕ ಸೇವಾ ಟ್ರಸ್ಟ್ ಮತ್ತು ಅದರ ಅಂಗ ಸಂಸ್ಥೆಗಳು ಸಕ್ರೀಯವಾಗಿ ತೊಡಗಿಸಿಕೊಂಡಿವೆ. ವೇದಿಕೆಯ ಚಟುವಟಿಕೆಗಳು ಉತ್ತಮವಾಗಿವೆ ಮತ್ತು ಸಾಮಾಜಿಕ ಬದಲಾವಣೆಗೆ ಪೂರಕವಾಗಿದೆ ಎಂಬ ಅಭಿಪ್ರಾಯವನ್ನು ಶೇಖಡಾ 100 ರಷ್ಟು ಮಂದಿ ಕೂಡಾ ವ್ಯಕ್ತಪಡಿಸಿದ್ದಾರೆ.

ದಲಿತರಲ್ಲಿ ಸಾಮಾಜಿಕ ಬದಲಾವಣೆಯ ಮಾನದಂಡಗಳು:

ಹಂಚಿಕೆ ಮಾಡಲಾದ ಪ್ರಶ್ನೆಗಳು	ಪ್ರತಿಕ್ರಿಯಿಸಿದವರ ಸಂಖ್ಯೆ	ಹೌದು	ಇಲ್ಲ
1. ಸಮಾಜದಲ್ಲಿ ಗೌರವ ಹೆಚ್ಚಾಗಿದೆಯೇ?	20	100%	--
2. ಸಲಹೆಗಳಿಗೆ ಮನ್ನಣೆ ದೊರೆಯುತ್ತಿದೆಯೇ?	20	100%	--
3. ಲಿಂಗ ಸಮಾನತೆಯತ್ತ ಸಾಗುತ್ತಿದೆಯೇ?	20	100%	--
4. ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರ ಲಭಿಸಿದೆಯೇ?	20	100%	--
5. ಜಾತಿಗಳ ಅಂತರ ಕಡಿಮೆಯಾಗಿದೆಯೇ?	20	100%	--
6. ಧಾರ್ಮಿಕ ಸಾಮರಸ್ಯ ಬಲಗೊಂಡಿದೆಯೇ?	20	100%	--
7. ಸಾಮಾಜಿಕ ಬದಲಾವಣೆ ಆಗಿದೆಯೇ?	20	100%	--



ಮೇಲಿನ ರೇಖಾ ಚಿತ್ರದಲ್ಲಿರುವ ಅಂಕಿ ಅಂಶಗಳು ದಲಿತರಲ್ಲಿ ಸಾಮಾಜಿಕ ಬದಲಾವಣೆಯ ಕುರಿತಾದ ವಿವಿಧ ಅಂಶಗಳಿಗೆ ದಲಿತರ ಪ್ರತಿಕ್ರಿಯೆಯನ್ನು ಸೂಚಿಸುತ್ತವೆ. ಶೇಖಡಾ 100 ರಷ್ಟು ಮಂದಿ ಕೂಡಾ ಅಭಿಪ್ರಾಯ ಪಡುವಂತೆ ನಾಗರಿಕ ಸೇವಾ ಟ್ರಸ್ಟ್ ಪ್ರವರ್ತಿತ ದಲಿತ ಅಭಿವೃದ್ಧಿ ಸಮಿತಿಯು ಸಾಮಾಜಿಕ ಬದಲಾವಣೆಗೆ ಪೂರಕವಾಗಿರುವ ಒಂದು ವೇದಿಕೆಯಾಗಿದೆ.

ಈ ಅಧ್ಯಾಯದಲ್ಲಿ ಸಾಮಾಜಿಕ ಬದಲಾವಣೆಯ ಅರ್ಥ ಮತ್ತು ವ್ಯಾಖ್ಯೆಗಳನ್ನು ವಿವರಿಸಲಾಗಿದೆ. ವಿದ್ವಾಂಸರು ಮತ್ತು ಸಮಾಜ ಶಾಸ್ತ್ರಜ್ಞರು ಸಾಮಾಜಿಕ ಬದಲಾವಣೆಯ ಕುರಿತು ಹಲವಾರು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಈ ವಿವಿಧ ಹೇಳಿಕೆಗಳಿಂದ ತಿಳಿದುಬರುವ ಪ್ರಕಾರ ಸಾಮಾಜಿಕ ಪರಿವರ್ತನೆ ಮತ್ತು ಬದಲಾವಣೆ ಎಂಬುದು ಒಂದು ಸಾರ್ವತ್ರಿಕ ಪರಿಕಲ್ಪನೆ ಎಂಬುದು ಸಾಬೀತಾಗಿದೆ. ಇದು ಒಂದು ವಿಶಾಲ ವ್ಯಾಪ್ತಿಯನ್ನು ಹೊಂದಿದೆ ಮತ್ತು ಇದರ ವೇಗವನ್ನು ಅಳೆಯುವುದು ಬಲು ಕಷ್ಟಕರ ಎಂಬುದು ತಿಳಿದು ಬಂದಿದೆ. ಈ ಪರಿವರ್ತನೆಯ ಫಲವಾಗಿಯೇ ಮನುಷ್ಯ ಸಮಾಜದಲ್ಲಿ ಹಲವಾರು ಏರು ಪೇರುಗಳು ಮತ್ತು ಬದಲಾವಣೆಗಳು ಸಂಭವಿಸುತ್ತದೆ. ಈ ಸಾಮಾಜಿಕ ಬದಲಾವಣೆ ಎಂಬ ಪರಿಕಲ್ಪನೆಯ ಒಂದು ಸಮಾಜದ ಆಂತರಿಕ ಲಕ್ಷಣವಾಗಿದ್ದು ಹಲವಾರು ಗುಣ ಲಕ್ಷಣಗಳನ್ನು ಕೂಡ ಹೊಂದಿದೆ. ಸರಕಾರೇತರ ಮತ್ತು ಸ್ವಯಂ ಸೇವಾ ಸಂಸ್ಥೆಗಳು ಈ ಬದಲಾವಣೆಯ ಪ್ರಕ್ರಿಯೆಯಲ್ಲಿ ನಿರಂತರವಾಗಿ ತೊಡಗಿಸಿಕೊಂಡಿವೆ. ಆರ್ಥಿಕ ಪ್ರಗತಿ, ಶೈಕ್ಷಣಿಕ ಬೆಳವಣಿಗೆ, ರಾಜಕೀಯ ಜಾಗೃತಿ, ಮುಂತಾದವುಗಳು ಸಾಮಾಜಿಕ ಬದಲಾವಣೆಯ ಮೂಲ ಪ್ರೇರಣೆಯಾಗಿದೆ.

ಬೆಳ್ತಂಗಡಿ ತಾಲೂಕು ವ್ಯಾಪ್ತಿಯಲ್ಲಿ ಹಲವಾರು ಸ್ವಯಂ ಸೇವಾ ಸಂಸ್ಥೆಗಳು ಕಾರ್ಯ ಚರಿಸುತ್ತಿವೆ. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ (ರಿ) ಇಡೀ ಪ್ರಪಂಚಕ್ಕೆ ಮಾದರಿಯಾಗಿದ್ದೂ ಮಾತ್ರವಲ್ಲದೆ ತನ್ನ ಕಾರ್ಯದಕ್ಷತೆಯ ಮೂಲಕ ಅಂತರಾಷ್ಟ್ರೀಯ ಪ್ರಶಸ್ತಿಯನ್ನು ಗಿಟ್ಟಿಸಿಕೊಂಡಿದೆ. ನಾಗರಿಕ ಸೇವಾ ಟ್ರಸ್ಟ್

ಗುರುವಾಯನಕೆರೆ ಕೂಡ ಈ ನಿಟ್ಟಿನಲ್ಲಿ ತನ್ನದೇ ಆದ ವಿಶಿಷ್ಟ ಕಾರ್ಯ ವೈಖರಿಯ ಮೂಲಕ ದೇಶ-ವಿದೇಶದಲ್ಲಿ ಪ್ರಚಾರದಲ್ಲಿದೆ. ಟ್ರಸ್ಟ್ ಪ್ರವರ್ತಿತ ವಿವಿಧ ವೇದಿಕೆಗಳು ತಮ್ಮ ಧ್ಯೇಯೋದ್ದೇಶಗಳಿಗೆ ಪೂರಕವಾಗಿ ಕಾರ್ಯಸಚರಿಸುತ್ತಾ ದೀನ-ದಲಿತರ ಸೇವೆಯಲ್ಲಿ ನಿರಂತರವಾಗಿ ತೊಡಗಿಸಿಕೊಂಡಿವೆ. ಸಾಮಾಜಿಕ ಬದಲಾವಣೆಗೆ ಪೂರಕವಾಗುವ ಹತ್ತು ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಜನಜನಿತವಾಗಿವೆ. ಟ್ರಸ್ಟ್ ಪ್ರವರ್ತಿತ ವೇದಿಕೆಗಳಲ್ಲಿ ಸಕ್ರೀಯವಾಗಿ ತೊಡಗಿಸಿಕೊಂಡಿರುವ ಜನರಿಂದ ಪ್ರಶ್ನಾವಳಿಗಳ ಮೂಲಕ ಪಡೆದುಕೊಂಡಿರುವ ಮಾಹಿತಿಯ ಪ್ರಕಾರ "ನಾಗರಿಕ ಸೇವಾ ಟ್ರಸ್ಟ್ ಗುರುವಾಯನಕೆರೆ" ಎಂಬ ಹೆಸರಿನ ಈ ಸರಕಾರೇತರ ಸಂಸ್ಥೆಯು ಸಾಮಾಜಿಕ ಬದಲಾವಣೆಗೆ ಪೂರಕವಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತದೆ ಎಂಬುದು ಸಾಬೀತಾಗಿದೆ. ಜನರ ಪ್ರತಿಕ್ರಿಯೆಯು ಸೂಚಿಸುವ ಪ್ರಕಾರ ಟ್ರಸ್ಟ್ ಪ್ರವರ್ತಿತ ವೇದಿಕೆಗಳಲ್ಲಿ ತೊಡಗಿಸಿಕೊಂಡಿರುವ ಜನರ ಹಲವಾರು ಸಮಸ್ಯೆಗಳು ನಿವಾರಣೆಗೊಂಡಿವೆ. ಸಮಾಜದಲ್ಲಿ ತಮ್ಮ ಸ್ಥಾನ-ಮಾನ ಹೆಚ್ಚಾಗಿದೆ ಎಂಬ ಅಭಿಪ್ರಾಯ ವ್ಯಕ್ತವಾಗಿದೆ. ಜಾತಿಜಾತಿಗಳ ನಡುವಿನ ಅಂತರವು ಕಡಿಮೆಯಾಗುತ್ತಿದ್ದು, ಧಾರ್ಮಿಕ ಸಾಮರಸ್ಯ ಬಲಗೊಳ್ಳುತ್ತಿದೆ ಎಂಬ ಪ್ರತಿಕ್ರಿಯೆ ವ್ಯಕ್ತವಾಗಿದೆ. ಲಿಂಗ ತಾರತಮ್ಯತೆ ಕೂಡಾ ದೂರವಾಗುತ್ತಿದ್ದು ಮಹಿಳೆಯರ ಸ್ಥಾನಮಾನದಲ್ಲಿ ಗಣನೀಯವಾದ ಸುಧಾರಣೆ ಕಂಡುಬಂದಿದೆ. ಆದರೆ ಈ ಬದಲಾವಣೆಯ ಪ್ರಮಾಣ, ವೇಗ ಮತ್ತು ವ್ಯಾಪ್ತಿಯನ್ನು ನಿಖರವಾಗಿ ಅಳೆಯುವುದು ಕೂಡ ಬಲು ಕಷ್ಟಕರ ಎಂಬುದು ಸಾಬೀತಾಗಿದೆ ಮಾತ್ರವಲ್ಲದೆ, ಜನರ ಕೆಲವೊಂದು ಸಮಸ್ಯೆಗಳಿಗೆ ಇನ್ನೂ ಪರಿಹಾರ ಲಭಿಸಬೇಕಾಗಿದೆ.

****

ಅಧ್ಯಾಯ: ಆರು

ಶೋಧನದ ಫಲಿತ

೬.೧ ಸರಕಾರೇತರ ಸಂಸ್ಥೆಗಳ ಕಾರ್ಯವೈಖರಿಯ ವಿಶ್ಲೇಷಣೆ

೬.೨ ಅಧ್ಯಯನದಿಂದ ಕಂಡುಕೊಂಡ ಅಂಶಗಳು

೬.೩ ಸರಕಾರೇತರ ಸಂಸ್ಥೆಗಳ ಕಾರ್ಯ ನಿರ್ವಹಣೆಗೆ ಸಂಬಂಧಪಟ್ಟಂತೆ ಕೆಲವೊಂದು ಸೂಚನೆಗಳು:

೬.೪ ಮುಂದಿನ ಅಧ್ಯಯನಗಳ ಕುರಿತಾದ ಮುನ್ನೋಟ

ಅಧ್ಯಾಯ: ಆರು

ಶೋಧನದ ಫಲಿತ

೬.೧ ಸರಕಾರೇತರ ಸಂಸ್ಥೆಗಳ ಕಾರ್ಯವೈಖರಿಯ ವಿಶ್ಲೇಷಣೆ

"ಸಾಮಾಜಿಕ ಬದಲಾವಣೆಯಲ್ಲಿ ಸರಕಾರೇತರ ಸಂಸ್ಥೆಗಳು" ಎಂಬ ಶೀರ್ಷಿಕೆಯ ಈ ಸಂಪ್ರಬಂದವು ಬೆಳ್ತಂಗಡಿ ತಾಲೂಕಿನ ಸರಕಾರೇತರ ಸಂಸ್ಥೆಗಳ ಕುರಿತಾದ ಒಂದು ಅಧ್ಯಯನವಾಗಿದೆ. ಸರಕಾರೇತರ ಸಂಸ್ಥೆಗಳು ನಾಗರಿಕ ಸಮಾಜದ ಅವಿಭಾಜ್ಯ ಅಂಗವಾಗಿರುವುದರಿಂದ ಅವುಗಳ ಕುರಿತಾದ ಅಧ್ಯಯನ ಪ್ರಸ್ತುತವಾಗಿದೆ. ಅಧಿಕಾರ ಸಂಬಂಧಗಳು ಎಂದೂ ನೇರವಾಗಿರುವುದಿಲ್ಲ. ಅಲ್ಲಿರುವ ಸಂಕೀರ್ಣ ಕೊಳ್ಳುಕೊಡುವಿಕೆಯಲ್ಲಿ ಶೋಷಕ ಹಾಗೂ ಶೋಶಿತ ವರ್ಗಗಳು ಕೆಲವೊಂದು ಲಾಭ–ನಷ್ಟಗಳನ್ನು ಅನುಭವಿಸುತ್ತವೆ. ಈ ಲಾಭ ನಷ್ಟಗಳ ಲೆಕ್ಕಾಚಾರವನ್ನು ಹೆಚ್ಚಾಗಿ ಆರ್ಥಿಕ ಮಾನದಂಡಗಳಿಂದ ಅಳೆಯಲಾಗುತ್ತದೆಯಾದರೂ ಸಂಬಂಧಿತ ವರ್ಗದ ಸಾಮಾಜಿಕ, ರಾಜಕೀಯ ಮತ್ತು ಧಾರ್ಮಿಕ ಹೆನ್ನೆಲೆಯನ್ನು ತಿಳಿದುಕೊಳ್ಳುವುದು ಅಗತ್ಯವಾಗಿದೆ. ಸರಕಾರ ಹಾಗೂ ಜನಸಾಮಾನ್ಯರಿಂದ ನಿರ್ಲಕ್ಷಿಸಲ್ಪಟ್ಟ ಹಲವಾರು ವಿಷಯಗಳಿಗೆ ಗಮನನೀಡಿ ಸರಕಾರ ಹಾಗೂ ಜನಸಾಮಾನ್ಯರ ಗಮನಕ್ಕೆ ತರುವ ಕೆಲಸವನ್ನು ಸರಕಾರೇತರ ಸಂಸ್ಥೆಗಳು ಮಾಡಬೇಕಾಗಿದೆ. ಇಲ್ಲಿ ಸಾಂಪ್ರದಾಯಿಕವಾಗಿ ಸಮಾಜಸೇವೆಯನ್ನು ಅರ್ಥೈಸುವ ವಿಧಾನದ ಕುರಿತಂತೆ ವಿಮರ್ಷೆ ನಡೆಯಬೇಕಾಗಿದೆ. ಈ ನಿಟ್ಟಿನ ಪ್ರಯತ್ನಗಳನ್ನು ಮಾಡುವ ಹಂತದಲ್ಲಿ ಸರಕಾರೇತರ ಸಂಸ್ಥೆಗಳು ಜನರ ಕುರಿತು ಹೊಂದಿರುವ ಪೂರ್ವಗ್ರಹದಿಂದ ಸರಕಾರೇತರ ಸಂಸ್ಥೆಗಳ ಮತ್ತು ಜನರ ನಡುವಿನ ಅಂತರವನ್ನು ಹೆಚ್ಚಿಸಬಹುದು. ಒಂದು ವೇಳೆ ಯಾವುದೇ ಒಂದು ಸರಕಾರೇತರ ಸಂಸ್ಥೆ ತನ್ನ ಕಾರ್ಯ ವೈಖರಿಯಲ್ಲಿ ತಾವು ಮೇಲ್ಪಟ್ಟದಲ್ಲಿರುವೆವು ಹಾಗೂ ಜನರು ಕೆಳಸ್ಥರದಲ್ಲಿದ್ದಾರೆ, ತಾವು ಕೊಡುವವರು ಹಾಗೂ ಜನರು ಪಡೆದುಕೊಳ್ಳವವರು ಎಂಬ ಮನೋಭಾವನೆಯನ್ನು ಬೆಳೆಸಿಕೊಂಡಲ್ಲಿ ಸರಕಾರೇತರ ಸಂಸ್ಥೆಗಳು ಜನರನ್ನು ಸಬಲೀಕರಣ ಮಾಡುವಲ್ಲಿ ವಿಫಲವಾಗುತ್ತವೆ. ಯಾಕೆಂದರೆ ಇಲ್ಲಿ ಜನರ ಪ್ರತಿಭೆಗಳಿಗೆ ಅವಕಾಶ ನೀಡದೆ ಇರುವುದರಿಂದ ಸರಕಾರೇತರ ಸಂಸ್ಥೆಗಳ ಕಾರ್ಯವೈಖರಿ ಹಾಗೂ ಅಭಿವೃದ್ಧಿ ಮಾದರಿಗಳು ಏಕಪಕ್ಷೀಯವಾಗಿ ಸಾಗುವ ಅಪಾಯವಿದೆ. ಆದುದರಿಂದ ಜನರಿಗಾಗಿ ರೂಪಿಸುವ ಯೋಜನೆಗಳ ಜೊತೆಜೊತೆಗೆ ಜನರ ಬಗ್ಗೆ ಇರುವ ಮನೋಭಾವನೆ ಕೂಡಾ ಅಷ್ಟೇ ಮುಖ್ಯವಾಗಿರುತ್ತದೆ.

ಈ ಸಂಪ್ರಬಂಧದ ಪ್ರಾರಂಭಿಕ ಅಧ್ಯಾಯದಲ್ಲಿ ಅಧ್ಯಯನದ ವ್ಯಾಪ್ತಿ, ಉದ್ದೇಶಗಳು ಮತ್ತು ಕಾರ್ಯ ವಿಧಾನದ ಕುರಿತು ಚರ್ಚಿಸಲಾಗಿದ್ದು, ಈ ನಿಟ್ಟಿನ ಅಧ್ಯಯನವು ಇಂದಿನ ಪರಿಸ್ಥಿತಿಗೆ ಪ್ರಸ್ತುತವೆನಿಸುತ್ತದೆ. ಬೆಳ್ತಂಗಡಿ ತಾಲೂಕು ಒಂದು ಭವ್ಯ ಐತಿಹಾಸಿಕ ಪರಂಪರೆಯನ್ನು ಹೊಂದಿದೆ ಎಂಬುದನ್ನು ಇಲ್ಲಿ ವಿವರಿಸಲಾಗಿದೆ. ಮುಂದಿನ ಅಧ್ಯಾಯದಲ್ಲಿ ಅಧ್ಯಯನದ ಧ್ಯೇಯೊದ್ದೇಶಗಳಿಗೆ ಪೂರಕವಾಗಿ ಅಧ್ಯಯನವನ್ನು ರೂಪಿಸುವ ಉದ್ದೇಶದಿಂದ ಜನರ

ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ಸ್ಥಿತಿಗತಿಯ ಕುರಿತು ವಿವರಿಸಲಾಗಿದೆ. ಅಧ್ಯಾಯ ಮೂರು ಮತ್ತು ನಾಲ್ಕರಲ್ಲಿ ಸರಕಾರೇತರ ಸಂಸ್ಥೆಗಳು ಮತ್ತು ಅವುಗಳ ಕಾರ್ಯವೈಖರಿಯ ಕುರಿತಾದ ವಿಮರ್ಶೆಯನ್ನು ಮಾಡಲಾಗಿದೆ. ಇಲ್ಲಿ ನಾಗರಿಕ ಸೇವಾ ಟ್ರಸ್ಟ್ ಗುರುವಾಯನಕೆರೆ ಇದರ ಅಭಿವೃದ್ಧಿ ಮಾದರಿಗಳ ಮೇಲೆ ವಿಶೇಷ ಒತ್ತನ್ನು ನೀಡಲಾಗಿದೆ. ಅಧ್ಯಾಯ ಐದರಲ್ಲಿ ಸಾಮಾಜಿಕ ಬದಲಾವಣೆಯ ಕುರಿತಾದ ವಿಶ್ಲೇಷಣೆಯನ್ನು ಮಾಡುವ ಹಂತದಲ್ಲಿ ವಿವಿಧ ಅಭಿವೃದ್ಧಿ ಮಾದರಿಗಳ ಕುರಿತಾದ ಚರ್ಚೆಯನ್ನು ಮಾಡಲಾಗಿದೆ. ಬೆಳ್ತಂಗಡಿ ತಾಲೂಕಿಗೆ ಸೀಮಿತವಾಗಿ ನಡೆಸಿದ ಈ ಅಧ್ಯಯನದ ಫಲವಾಗಿ ಹಲವಾರು ಹೊಸ ವಿಚಾರಗಳನ್ನು ತಿಳಿದುಕೊಳ್ಳುವುದು ಸಾಧ್ಯವಾಯಿತು.

೬.೨ ಅಧ್ಯಯನದಿಂದ ಕಂಡುಕೊಂಡ ಅಂಶಗಳು:

ಸರಕಾರೇತರ ಸಂಸ್ಥೆಗಳು ಮತ್ತು ಸಾಮಾಜಿಕ ಬದಲಾವಣೆ ಎಂಬ ನೆಲೆಯಲ್ಲಿ ಅಧ್ಯಯನವನ್ನು ನಡೆಸಲಾಯಿತು. ಬೆಳ್ತಂಗಡಿ ತಾಲೂಕಿಗೆ ಸೀಮಿತವಾಗಿದ್ದ ಅಧ್ಯಯನವು ನಾಗರಿಕ ಸೇವಾ ಟ್ರಸ್ಟ್ ಗುರುವಾಯನಕೆರೆ ಎಂಬ ಸಂಸ್ಥೆಯ ಮೇಲೆ ವಿಶೇಷವಾಗಿ ಬೆಳಕನ್ನು ಚೆಲ್ಲುತ್ತದೆ. ಈ ಎನ್‌ಜಿಓ ಕಾರ್ಯ ಕ್ಷೇತ್ರದ ವ್ಯಾಪ್ತಿಯಲ್ಲಿ ನಡೆಸಿದ ಸಮೀಕ್ಷೆ ಮತ್ತು ಇತರ ಮೂಲಗಳಿಂದ ಸಂಗ್ರಹಿಸಿದ ಮಾಹಿತಿಯ ಆಧಾರದಲ್ಲಿ ಈ ಕೆಳಗಿನ ಅಂಶಗಳನ್ನು ಗಮನಿಸಲಾಗಿದೆ ಮತ್ತು ಸುಧಾರಣೆಯ ನಿಟ್ಟಿನಲ್ಲಿ ಕೆಲವು ಸಲಹೆಗಳನ್ನು ನೀಡಲಾಗಿದೆ.

- ಎನ್‌ಜಿಓಗಳು ಸಮಾಜದ ತಳಸ್ಥರದ ಜನರ ಅಭಿವೃದ್ಧಿಯ ಕಾಳಜಿಯನ್ನು ಹೊಂದಿವೆ ಎಂಬುದನ್ನು ತಿಳಿದುಕೊಳ್ಳಬಹುದು. ಎನ್‌ಜಿಓ ಕಾರ್ಯಕ್ಷೇತ್ರಗಳು ಹೆಚ್ಚಾಗಿ ಹಳ್ಳಿ ಪ್ರದೇಶಗಳಿಗೆ ಕೇಂದ್ರಿಕೃತಗೊಂಡಿದ್ದು ಸಮಾಜದ ತಳಸ್ಥರದ ಜನರಾದ ಸಣ್ಣ ಕೃಷಿಕರು, ಕೃಷಿಕೂಲಿಗಳು, ಬೀಡಿ ಕಾರ್ಮಿಕರು, ದಲಿತರು ಮತ್ತು ಹಿಂದುಳಿದ ವರ್ಗಗಳ ಜನರು ಇವುಗಳ ಕಾರ್ಯಕ್ರಮಗಳ ಫಲಾನುಭವಿಗಳಾಗಿದ್ದಾರೆ.
- ಅಧ್ಯಯನದಿಂದ ಕಂಡುಕೊಂಡಂತೆ ಎನ್‌ಜಿಓಗಳಲ್ಲಿ ತೊಡಗಿಸಿಕೊಂಡಿರುವ ಜನರ ಆದಾಯ ಮಟ್ಟವು ಕೆಳಮಟ್ಟದಲ್ಲಿದೆ. ಕೃಷಿ ಕೂಲಿ, ಬೀಡಿ ವೃತ್ತಿ ಮುಂತಾದವುಗಳನ್ನು ಜನರು ಹೆಚ್ಚಾಗಿ ಅವಲಂಬಿಸಿದ್ದಾರೆ. ಜನರಲ್ಲಿ ಸ್ವ ಉದ್ಯೋಗ ಮತ್ತು ಲಾಭದಾಯಕ ಇತರ ವೃತ್ತಿಗಳ ಕುರಿತು ಜಾಗೃತಿ ಮೂಡಿಸುವುದು ಅಗತ್ಯವಾಗಿದೆ. ಒಟ್ಟಿನ್ನಲಿ ಆರ್ಥಿಕ ಪರಿಸ್ಥಿತಿ ಮತ್ತಷ್ಟು ಸುಧಾರಣೆಯಾಗಬೇಕಾಗಿದೆ.
- ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಬೀಡಿ ವೃತ್ತಿಯನ್ನು ಅವಲಂಬಿಸಿದ್ದಾರೆ. ಮತ್ತು ಆ ಉದ್ಯಮವನ್ನು ಉಳಿಸುವ ನಿಟ್ಟಿನಲ್ಲಿ ಎನ್‌ಜಿಓಗಳು ಹೋರಾಡುತ್ತಿವೆ. ಆರೋಗ್ಯದ ನಿಟ್ಟಿನಲ್ಲಿ ಚಿಂತನೆಯನ್ನು ಮಾಡಿದಾಗ ಮಹಿಳೆಯರಿಗೆ ಪರ್ಯಾಯ ಉದ್ಯೋಗಗಳನ್ನು ಕಂಡುಕೊಳ್ಳುವ ನಿಟ್ಟಿನ ಪ್ರಯತ್ನ ಅಗತ್ಯವಾಗಿದೆ.
- ಗ್ರಾಮೀಣ ಜನತೆಯ ಆರೋಗ್ಯ ಮಟ್ಟದ ಸುಧಾರಣೆಗಾಗಿ ಗ್ರಾಮೀಣ ಆರೋಗ್ಯ ಕೇಂದ್ರಗಳ ಸ್ಥಾಪನೆಯ ನಿಟ್ಟಿನಲ್ಲಿ ಪ್ರಯತ್ನ ಅಗತ್ಯವಾಗಿದೆ.

- ಕೆಲವೊಂದು ಪ್ರದೇಶಗಳಿಗೆ ರಸ್ತೆ ಸಂಪರ್ಕದ ಕೊರತೆ, ವಿದ್ಯುತ್‌ಚ್ಛಕ್ತಿಯ ಸಮಸ್ಯೆ ಮುಂತಾದ ಮೂಲಭೂತ ಸೌಕರ್ಯಗಳ ವಿಸ್ತರಣೆಯ ನಿಟ್ಟಿನಲ್ಲಿ ಮತ್ತಷ್ಟು ಪ್ರಯತ್ನಗಳು ಅಗತ್ಯವಾಗಿದೆ.
- ಜನರಲ್ಲಿ ರಾಜಕೀಯ ಜಾಗೃತಿ ಕೇವಲ ಮತದಾನದಲ್ಲಿ ಭಾಗವಹಿಸುವುದಕ್ಕೆ ಸೀಮಿತವಾಗಿದ್ದು ಚುನಾವಣೆಯಲ್ಲಿ ಸ್ಪರ್ಧಿಸುವವರ ಸಂಖ್ಯೆ ತೀರಾ ವಿರಳವಾಗಿದೆ. ಚುನಾವಣೆಯಲ್ಲಿ ಸ್ಪರ್ಧಿಸಿ ಜನಪ್ರತಿನಿಧಿಗಳನ್ನು ಸೃಷ್ಟಿಸುವ ನಿಟ್ಟಿನ ಪ್ರಯತ್ನ ಅಗತ್ಯವಾಗಿದೆ.
- ಕೆಲವೊಂದು ದಲಿತರ ಮನೆಗಳಲ್ಲಿ ಮೂಲಭೂತ ಸೌಕರ್ಯಗಳಾದ ನೀರು ಸರಬರಾಜು, ವಿದ್ಯುತ್ ವ್ಯವಸ್ಥೆ, ಶೌಚಾಲಯ ಮುಂತಾದವುಗಳ ಕೊರತೆಗಳನ್ನು ಗಮನಿಸಲಾಗಿದ್ದು ಅವುಗಳನ್ನು ಒದಗಿಸುವ ನಿಟ್ಟಿನ ಪ್ರಯತ್ನಗಳು ಅಗತ್ಯವಾಗಿದೆ.
- ಜನರ ಸಂಸ್ಕೃತಿಯು ಆಧುನಿಕತೆಯೊಂದಿಗೆ ವಿಲೀನಗೊಳ್ಳುತ್ತಿದ್ದು ಸಾಂಪ್ರದಾಯಿಕ ಕುಲಕಸೂಬುಗಳಾದ ಬುಟ್ಟಿ ಹೆಣೆಯುವುದು, ಹಗ್ಗ ತಯಾರಿಕೆ, ಮಡಕೆ ತಯಾರಿಕೆ ಮುಂತಾದವುಗಳನ್ನು ಉಳಿಸುವ ಪ್ರಯತ್ನ ಅಗತ್ಯವಾಗಿದೆ.
- ಜನರಲ್ಲಿ ಸಾಮಾಜಿಕ ಸಮಸ್ಯೆಗಳು ಇನ್ನೂ ಅಸ್ತಿತ್ವದಲ್ಲಿದ್ದು ಅವುಗಳ ನಿವಾರಣೆಯ ಪ್ರಯತ್ನಗಳು ಆಗಬೇಕಾಗಿದೆ. ಜನರ ಆರ್ಥಿಕ ಮತ್ತು ಸಾಮಾಜಿಕ ಜೀವನ ಮಟ್ಟದ ಸುಧಾರಣೆಗೆ ಈ ಕೆಳಗಿನ ಕ್ರಮಗಳು ಸಹಕಾರಿಯಾಗಬಹುದು. ಜನರು ಈ ಕೆಳಗಿನ ಬೇಡಿಕೆಗಳನ್ನು ಮುಂದಿಡುತ್ತಾರೆ.
  - ಇನ್ನೂ ಕಡಿಮೆ ದರದಲ್ಲಿ ಸಾಲ ನೀಡಬೇಕು.
  - ಸ್ವ ಉದ್ಯೋಗದ ಕುರಿತು ಮಾಹಿತಿ ನೀಡಬೇಕು.
  - ವಿದ್ಯುತ್ ಸೌಲಭ್ಯ ಒದಗಿಸಬೇಕು.
  - ಆರ್ಥಿಕ ಸಹಾಯ ಹೆಚ್ಚಾಗಬೇಕು.
  - ರಸ್ತೆಗಳ ಸುಧಾರಣೆಯಾಗಬೇಕು
  - ಕುಡಿಯುವ ನೀರಿನ ಸೌಲಭ್ಯ ಅಗತ್ಯ
  - ಇನ್ನೂ ಹಲವಾರು ರೀತಿಯಲ್ಲಿ ಇರುವ ಅಸಮಾನತೆ ದೂರವಾಗಬೇಕು
  - ಜನರಿಗೆ ಸಕಾಲಕ್ಕೆ ಮಾಹಿತಿಗಳು ದೊರೆಯುವಂತಾಗಬೇಕು.
  - ವಾರದ ಸಭೆಗಳಿಗೆ ಹಾಜರಾತಿ ಮತ್ತು ಟ್ರಸ್ಟ್ ಕಾರ್ಯಕರ್ತರ ಬೇಟಿ ನಿರಂತರವಾಗಬೇಕು.
  - ಸಾಮಾಜಿಕ ಸಮಸ್ಯೆಗಳ ಕುರಿತು ಅರಿವು ಮೂಡಿಸಬೇಕು.
  - ಪರಿಸರ ಸಂರಕ್ಷಣೆ, ಶುಚಿತ್ವ ಮತ್ತು ಆರೋಗ್ಯ ಜಾಗೃತಿ ಅಗತ್ಯ.
  - ಜನರಲ್ಲಿ ರಾಜಕೀಯ ಜಾಗೃತಿ ಮತ್ತಷ್ಟು ವಿಸ್ತರಣೆಯಾಗಬೇಕು.

೬.೩ ಸರಕಾರೇತರ ಸಂಸ್ಥೆಗಳ ಕಾರ್ಯ ನಿರ್ವಹಣೆಗೆ ಸಂಬಂಧಪಟ್ಟಂತೆ ಕೆಲವೊಂದು ಸೂಚನೆಗಳು:

ಸರಕಾರೇತರ ಸಂಸ್ಥೆಗಳ ಕುರಿತಾದ ಈ ಅಧ್ಯಯನದಲ್ಲಿ ಕಂಡು ಕೊಂಡಂತೆ ಸಾಮಾಜಿಕ ಬದಲಾವಣೆ ಮತ್ತು ಅನ್ಯಾಯದ ವಿರುದ್ಧ ಹೋರಾಡಿ ಸಾಮಾಜಿಕ ನ್ಯಾಯವನ್ನು ತಂದುಕೊಡುವ ಕಾರ್ಯಕ್ಕೆ ನಾಗರಿಕ ಸೇವಾ ಟ್ರಸ್ಟ್ ಮತ್ತು ಇತರ ಸರಕಾರೇತರ ಸಂಸ್ಥೆಗಳು ಮಹತ್ವವನ್ನು ಕೊಡುತ್ತವೆ. ನಿಜವಾದ ಅರ್ಥದಲ್ಲಿ ಇಂದಿನ ಸಮಾಜದಲ್ಲಿ ಬದಲಾವಣೆಗಳು ಮತ್ತು ಅನ್ಯಾಯದ ವಿರುದ್ಧದ ಹೋರಾಟದ ಚಿತ್ರಣಗಳು ಜನರ ಮುಂದೆ ಸಿನೇಮಾ, ಟಿವಿ ಹಾಗೂ ಇತರ ಮಾಧ್ಯಮಗಳಲ್ಲಿ ಪ್ರತಿಬಿಂಬಿತವಾಗುತ್ತಿರುವ ಈ ದಿನಗಳಲ್ಲಿ ಪ್ರತಿಭಟನೆ ಮತ್ತು ಹೋರಾಟಗಳ ಪರ್ಯಾಯ ಮಾದರಿಗಳನ್ನು ಹುಡುಕುವ ಪ್ರಯತ್ನಗಳು ನಾಗರಿಕ ಸೇವಾ ಟ್ರಸ್ಟ್ ವತಿಯಿಂದ ನಡೆಯುತ್ತಿವೆ. ಎಂದು ಹೇಳಬಹುದು. ಪ್ರಾಂಜ್ ಪಾನನ್‌ನೆಂಬ ಅಲ್ಜೀರಿಯಾದ ಮನೋಶಾಸ್ತ್ರಜ್ಞ ತನ್ನ **ವ್ರುಚೆಡ್ ಆಪ್ ದಿ ಅರ್ಥ್** ("Wretched of the Earth") ಮತ್ತು **ಬ್ಲ್ಯಾಕ್ ಸ್ಕಿನ್ ವೈಟ್ ಮಾಸ್ಕ್** ("Black Skin White Mask") ಕೃತಿಗಳಲ್ಲಿ ಹಿಂಸೆಯ ಮೂಲಕ ವಸಾಹತುಶಾಹಿ ಅಧಿಕಾರವನ್ನು ಮಾನಸಿಕವಾಗಿ ಹೊರಗಟ್ಟಿಸಬಹುದೆಂದು ಪ್ರತಿಪಾದಿಸುತ್ತಾರೆ. ಇಂದಿನ ಕೆಲವು ಚಳುವಳಿಗಳು ಹಿಂಸೆಯ ಮೂಲಕ ಬದಲಾವಣೆ ಸಾಧ್ಯವೆಂಬ ನಂಬಿಕೆಯಲ್ಲಿ ತಮ್ಮ ಕಾರ್ಯ ಚಟುವಟಿಕೆಗಳನ್ನು ನಡೆಸುತ್ತಿರುವುದನ್ನು ನಾವು ಕಾಣುತ್ತೇವೆ. ಆಶಿಷ್ ನಂದಿಯಂಬ ಮನೋ ರಾಜಕೀಯ ಶಾಸ್ತ್ರಜ್ಞ ಹಿಂಸಾತ್ಮಕ ಪ್ರತಿಭಟನೆಗಳು ಅಧಿಕಾರಸ್ಥರ ಸಂಸ್ಕೃತಿಯನ್ನು ಅನುಕರಿಸಿದಂತಾಗುತ್ತದೆಯೆಂದು ದಿ **ಇಂಟಿಮೇಟ್ ಎನಿಮಿ** ("The Intimate Enemy") ಎಂಬ ಕೃತಿಯಲ್ಲಿ ಚರ್ಚಿಸುತ್ತಾರೆ. ಅದಕ್ಕೆ ಪರ್ಯಾಯ ಮಾರ್ಗದ ಹುಡುಕಾಟಗಳು ನಂದಿಯ ಇತರ ಹಲವಾರು ಕೃತಿಗಳಲ್ಲಿ ಕಾಣಸಿಗುತ್ತವೆ. ಆತನಿಗೆ ಗಾಂಧಿ ಮಾರ್ಗವು ಹೊಸ ಬೆಳಕನ್ನು ನೀಡುತ್ತದೆ. ಗಾಂಧಿಜಿಯ **"ಹಿಂದ್ ಸ್ವರಾಜ್"** ಈ ನಿಟ್ಟಿನಲ್ಲಿ ಹೊಸ ಮಾರ್ಗದ ಅನ್ವೇಷಣೆಯಾಗಿದೆ. ಅಂದರೆ, ನಂದಿಯ ಪ್ರಕಾರ ಹಿಂಸೆ ಕೇವಲ ರಕ್ತಪಾತದಿಂದ ನಡೆಯುವ ಪ್ರಕ್ರಿಯೆಯಲ್ಲ, ಇದು ಜನರನ್ನು ಮಾನಸಿಕವಾಗಿ, ಸಾಮಾಜಿಕ ಜ್ಞಾನಮಿಮಾಂಸೆಗಳ ಮುಖಾಂತರ ನಿರಂತರವಾಗಿ ಅಧಿಕಾರಸ್ಥವರ್ಗ ನಡೆಸುತ್ತಿರುವ ಪ್ರಕ್ರಿಯೆಯಾಗಿದೆ. ವಸಾಹತು ಸಂದರ್ಭದಲ್ಲಿ ಬ್ರಿಟಿಷ್ ಆಡಳಿತ ವರ್ಗ ತನ್ನ ಜ್ಞಾನಮಿಮಾಂಸೆಗಳ ಮುಖಾಂತರ. ನೇಷನ್ ಸ್ಟೇಟ್, ಸೆಕ್ಯುಲರಿಸಂ, ಪ್ರಗತಿ ಮುಂತಾದ ಇತಿಹಾಸ ಮಾದರಿಗಳನ್ನು ಹೇರಿದೆ. ಅದರ ಮೂಲಕ ಇಲ್ಲಿನ ಪರಂಪರಗಾತ ಅಭಿವೃದ್ಧಿ ಮಾದರಿಗಳನ್ನು ಕಡೆಗಣಿಸಲಾಗಿದೆ. ಇದಕ್ಕಾಗಿ ಭಾರತದ ಶಿಕ್ಷಿತ, ಉನ್ನತ ಜಾತಿ ವರ್ಗದ ಜನರನ್ನು ಬಳಸಿಕೊಳ್ಳಲಾಗಿದೆ. ಇವರೇ ಮುಂದೆ ಸ್ವಾತಂತ್ರ್ಯ ಬಂದ ಬಳಿಕ ಬ್ರಿಟಿಷರ ಕಾರ್ಯಸೂಚಿಯನ್ನು ಮುಂದುವರೆಸಿ ಈ ದೇಶದ ಲಕ್ಷಾಂತರ ಜನ ಸಮುದಾಯಗಳನ್ನು ಪ್ರಗತಿಯ ಹೆಸರಲ್ಲಿ ನಡೆಯುವ ಹಿಂಸೆಯ ಮುಖಾಂತರ ದಮನಿಸುತ್ತಿದ್ದಾರೆಂಬ ಆಕ್ಷೇಪಗಳನ್ನು ಆಶಿಷ್‌ನಂದಿ ತಮ್ಮ ಬರಹಗಳಲ್ಲಿ ವಿಶ್ಲೇಷಿಸುತ್ತಾರೆ. ಇದಕ್ಕೆ ಪರ್ಯಾಯವಾಗಿ ಸ್ವಾತಂತ್ರ್ಯ ಪೂರ್ವದಲ್ಲಿ ಜನ ಸಮೂದಾಯಗಳ ನಡುವೆ ಇದ್ದಂತಹ ಕೊಡುಕೊಳ್ಳುವಿಕೆ ಮತ್ತು ಡೆಮೊಕ್ರೆಟಿಕ್ (Democratic) ಮಾದರಿಗಳ ಚರ್ಚೆಯನ್ನು ನಂದಿಯವರು ಮುಂದಿಡುತ್ತಾರೆ.

ಇವತ್ತು ಸರಕಾರೇತರ ಸಂಸ್ಥೆಗಳ ವಿಶ್ಲೇಷಣೆ ನಡೆಸುವಾಗ ಮೇಲಿನ ಹಲವು ವಿಷಯಗಳನ್ನು ಗಮನದಲ್ಲಿಡಬೇಕಾಗುತ್ತದೆ. ಯಾಕೆಂದರೆ ಸರಕಾರೇತರ ಸಂಸ್ಥೆಗಳು ಹಮ್ಮಿಕೊಳ್ಳುವ ಪ್ರತಿಭಟನೆಗಳು ಮತ್ತು ಕಾರ್ಯಕ್ರಮಗಳು ಅಂತಿಮವಾಗಿ ಕೆಲವೊಂದು ಸಂದರ್ಭಗಳಲ್ಲಿ ಜನವಿರೋಧಿಯಾಗುವ ಅಪಾಯಗಳಿರುತ್ತವೆ. ಉದಾಹರಣೆಗೆ ಯಾವುದೇ ಒಂದು ಪ್ರತಿಭಟನೆ ಹಿಂಸೆಗೆ ತೊಡಗಿದಾಗ ಇದರಿಂದ ಜನರಿಗೆ ನಿಜವಾದ ಅರ್ಥದಲ್ಲಿ ಸಹಾಯವಾಗುತ್ತದೋ ಎಂಬುದನ್ನು ಪ್ರಶ್ನಿಸಬೇಕಾಗುತ್ತದೆ. ಹಾಗೆಯೇ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಾಗ ನಿರ್ಧಾರಗಳು ಮೇಲಿಂದ ಹೇರಲ್ಪಡುತ್ತವೆಯೋ, ಅಥವಾ ಪ್ರಜಾಪ್ರಭುತ್ವ ಮಾದರಿಯ ಭಾಗವಹಿಸುವಿಕೆಯಿಂದ ನಡೆಯುತ್ತವೆಯೋ ಎಂಬ ಎಚ್ಚರಿಕೆಯನ್ನು ವಹಿಸಬೇಕಾಗುತ್ತದೆ. ಈ ನಿಟ್ಟಿನಲ್ಲಿ ನಾಗರಿಕ ಸೇವಾ ಟ್ರಸ್ಟ್‌ನ ಕಾರ್ಯಕ್ರಮಗಳನ್ನು ಅವಲೋಕಿಸಿದಾಗ ನಿರ್ಧಾರಗಳು ಪ್ರಜಾಪ್ರಭುತ್ವ ಮಾದರಿಯಲ್ಲಿ ಸ್ವೀಕರಿಸಲಾಗುತ್ತವೆ ಮತ್ತು ಹೋರಾಟದ ಮಾದರಿಗಳು ಹಿಂಸೆಗೆ ಕುಮ್ಮಕ್ಕನ್ನು ನೀಡದಿರುವ ಹಿನ್ನಲೆಯಲ್ಲಿ ಸಮಾಜದ ಮೇಲೆ ಸಕಾರಾತ್ಮಕವಾದ ಪರಿಣಾಮವನ್ನೆ ಬೀರುತ್ತವೆ ಎಂಬುದನ್ನು ತಿಳಿದುಕೊಳ್ಳಬಹುದು. ರಾಜಕೀಯ ಜಾಗೃತಿ, ಸಾಮಾಜಿಕ ಅಭಿವೃದ್ಧಿ ಮಾದರಿಗಳು ಮತ್ತು ಆರ್ಥಿಕ ಅಭಿವೃದ್ಧಿಯ ಮಾದರಿಗಳನ್ನು ಜನರು ಸ್ವ ಇಚ್ಚೆಯಿಂದ ಸ್ವೀಕರಿಸಿದ್ದೂ ಟ್ರಸ್ಟ್‌ನ ಕಾರ್ಯ ಚಟುವಟಿಕೆಗಳ ಯಶಸ್ಸಿಗೆ ಕಾರಣವಾಗಿವೆ.

ಒಟ್ಟಿನಲ್ಲಿ ನಾಗರಿಕ ಸಮಾಜ ತನ್ನನ್ನೇ ತಾನು ಅಸ್ತಿತ್ವದಲ್ಲಿಟ್ಟು ಮುಂದುವರಿಸಿಕೊಂಡು ಹೋಗುವಲ್ಲಿ ಸರಕಾರೇತರ ಸಂಸ್ಥೆಗಳ ಪಾತ್ರ ಬಹು ಮುಖ್ಯವಾದುದು. ಜನ ಸಮೂದಾಯದ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಬೆಳವಣಿಗೆಗೆ ಸರಕಾರೇತರ ಸಂಸ್ಥೆಗಳು, ಸರಕಾರ ಮತ್ತು ಜನರ ನಡುವೆ ನಿರಂತರ ಸಂಬಂಧವಿರಬೇಕು. ಇಲ್ಲಿ ಕೆಲವೊಂದು ವಿಚಾರಗಳನ್ನು ಮುಖ್ಯವಾಗಿ ಗಮನಿಸಬೇಕಾಗುತ್ತದೆ. ಇವತ್ತು ಕೆಲವೊಂದು ಸರಕಾರೇತರ ಸಂಸ್ಥೆಗಳು ಜನರ ಹೆಸರಲ್ಲಿ ಸರಕಾರದೊಂದಿಗೆ ಸಂಧಾನವನ್ನು ಮಾಡಿಕೊಂಡು ತಮ್ಮ ಬೆಳೆಯನ್ನು ಬೇಯಿಸಿಕೊಳ್ಳುತ್ತವೆಯೇ ಹೊರತು ಜನರ ಕಲ್ಯಾಣಕ್ಕಾಗಿ ಬದ್ಧತೆಯನ್ನು ತೋರುತ್ತಿಲ್ಲ ಎಂಬ ಆರೋಪಗಳು ಮಾಧ್ಯಮಗಳಲ್ಲಿ ಕಂಡುಬರುತ್ತವೆ. ಬದ್ಧತೆಯನ್ನು ಕಾರ್ಯರೂಪಕ್ಕೆ ತರುವಾಗ ಸಮಾಜದ ಒಟ್ಟಾರೆ ಪರಿಸ್ಥಿತಿ ಕುರಿತಂತೆ ವೈಜ್ಞಾನಿಕವಾದ ತಿಳಿವು ಎಷ್ಟು ಮುಖ್ಯವೋ ಅಷ್ಟೇ ನೈತಿಕ ಜವಾಬ್ದಾರಿಯೂ ಮುಖ್ಯವೆಂಬುದನ್ನು ಗಾಂಧಿಜಿಯವರು ಸೇರಿದಂತೆ ಹಲವು ಸಮಾಜ ಸುಧಾರಕರು ತಮ್ಮ ಕಾರ್ಯಶೈಲಿಯ ಮುಖಾಂತರ ತೋರಿಸಿಕೊಟ್ಟಿದ್ದಾರೆ.

೬.೪ ಮುಂದಿನ ಅಧ್ಯಯನಗಳ ಕುರಿತಾದ ಮುನ್ನೋಟ

ಮುಂದಿನ ಅಧ್ಯಯನಗಳ ಕುರಿತಾದ ಮುನ್ನೋಟ ಮತ್ತು ಎನ್‌ಜಿಓಗಳ ಕಾರ್ಯ ನಿರ್ವಹಣೆಯ ಬಗ್ಗೆ ಚಿಂತನೆಯನ್ನು ನಡೆಸಿದಾಗ ಕೆಲವೊಂದು ವಿಚಾರಗಳು ಗಣನೆಗೆ ಬರುತ್ತವೆ. ಮುಂದಿನ ಅಧ್ಯಯನಗಳು ಸರಕಾರೇತರ ಸಂಸ್ಥೆಗಳ ದೃಷ್ಟಿಕೋನಗಳು ಮಾದರಿಗಳ ಕುರಿತಂತೆ ಇನ್ನಷ್ಟು ಆಳವಾಗಿ ಅಭ್ಯಸಿಸಬಹುದು. ಇದನ್ನೇ ಸ್ವಲ್ಪ ಸ್ಪಷ್ಟಪಡಿಸುವುದಾದರೆ ಸರಕಾರೇತರ ಸಂಸ್ಥೆಗಳ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಎರಡು ಮಾದರಿಗಳನ್ನು ಗುರುತಿಸಬಹುದು. ಒಂದು, ಜನರ ಆರ್ಥಿಕ, ಸಾಮಾಜಿಕ, ಸ್ಥಿತಿಗತಿಗಳ ಕುರಿತಾಗಿ ತಮ್ಮದೇ ಆದ ಪೂರ್ವ

ಗ್ರಹಿಕೆಗಳನ್ನಿಟ್ಟುಕೊಂಡು ಕೆಲವೊಂದು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಜನರ ಮೇಲೆ ಹೇರುವುದು. ಇಂತಹ ಕಾರ್ಯಕ್ರಮಗಳಿಂದ ಕೆಲವೊಂದು ಸಕರಾತ್ಮಕ ಬದಲಾವಣೆಗಳು ಸಾಧ್ಯವಾದರೂ ಅಂತಿಮವಾಗಿ ಇದು ಜನ ವಿರೋಧಿಯಾಗುವ ಸಾಧ್ಯತೆಗಳು ಹೆಚ್ಚು, ಇದಕ್ಕೆ ಕಾರಣವೇನೆಂದರೆ, ಈ ಕಾರ್ಯಕ್ರಮಗಳು ಜನರಿಗೆ ಅಗತ್ಯವೋ ಎಂಬುದನ್ನು ಗಣನೆಗೆ ತೆಗೆದುಕೊಳ್ಳದಿರುವುದು ಮತ್ತು ಕೆಲವೊಂದು ಬಾರಿ ಇಂತಹ ಕಾರ್ಯಕ್ರಮಗಳು ಪ್ರತಿಗಾಮಿ ಪರಿಣಾಮಗಳನ್ನು ಸೃಷ್ಟಿಸಬಹುದು.

ಎರಡನೇ ಮಾದರಿಯಲ್ಲಿ ಜನರಿಂದ, ಜನರೊಂದಿಗೆ ಮುಖಾಮುಖಿ ಸಂವಹನದ ಮುಖಾಂತರ ರೂಪುಗೊಂಡ ಕಾರ್ಯಕ್ರಮಗಳು. ಈ ಶೈಲಿ ಪ್ರಜಾಪ್ರಭುತ್ವ ಮಾದರಿಯಲ್ಲಿದ್ದೂ ಸಮೂದಾಯಗಳ ಜವಾಬ್ದಾರಿ, ಒಳಗೊಳ್ಳುವಿಕೆ, ಮತ್ತು ತೊಡಗಿಸಿಕೊಳ್ಳುವಿಕೆ, ಅಧಿಕ ಮಟ್ಟದಲ್ಲಿರುತ್ತದೆ. ಇಂತಹ ವ್ಯವಸ್ಥೆಯಲ್ಲಿ ಸಮುದಾಯದೊಂದಿಗೆ ಸರಕಾರೇತರ ಸಂಸ್ಥೆ ಹೆಜ್ಜೆ ಹಾಕುತ್ತಾ ಸಮಸ್ಯೆಗಳ ಕಾರ್ಯಸೂಚಿಗಳ ಕುರಿತಂತೆ ಸಮಾಲೋಚನೆಗೆ ಸ್ಥಳ ಮತ್ತು ಸಮಯಾವಕಾಶಗಳು ದೊರೆಯುತ್ತವೆ. ಇಂತಹ ಹಲವು ಮಾದರಿಗಳ ಅಧ್ಯಯನ ಇವತ್ತಿನ ತುರ್ತು ಅಗತ್ಯವಾಗಿದೆ. ಇದರ ಜೊತೆಜೊತೆಗೆ ಇವತ್ತಿನ ಹೊಸ ವಿದ್ಯಾಮಾನಗಳು ಯಾವುದು ಎಂಬುದರ ಕುರಿತು ಅಧ್ಯಯನ ನಡೆಯಬೇಕಾಗಿದೆ. ಉದಾಹರಣೆಗೆ ಇದೇ ಜಾಗತೀಕರಣದ ಪ್ರಕ್ರಿಯೆ ಮತ್ತು ಅದು ಸ್ಥಳೀಯ ಸಮುದಾಯಗಳ ಮೇಲೆ ಯಾವ ಪರಿಣಾಮವನ್ನು ಬೀರುತ್ತದೆ ಹಾಗೂ ಸರಕಾರೇತರ ಸಂಸ್ಥೆಗಳು ಇವುಗಳಿಗೆ ಹೇಗೆ ಸ್ಪಂದಿಸುತ್ತವೆ ಎಂಬುದರ ಕುರಿತಂತೆ ವಿಸ್ತ್ರತವಾದ ಅಧ್ಯಯನ ಅಗತ್ಯವಿದೆ. ಯಾಕೆಂದರೆ ಈ ಎಲ್ಲಾ ವಿದ್ಯಾಮಾನಗಳನ್ನು ಇಂದು ಬಿಡಿಬಿಡಿಯಾಗಿ ನೋಡಲು ಸಾಧ್ಯವಿಲ್ಲ. ಅವುಗಳು ಪರಸ್ಪರ ಸಂಬಂಧವನ್ನು ಹೊಂದಿದ್ದು ಈ ಸಂಬಂಧಗಳು ಯಾವ ನೆಲೆಯಲ್ಲಿ ಕಾರ್ಯಗತಗೊಳ್ಳುತ್ತವೆ ಎಂಬುದು ಮುಖ್ಯವಾಗುತ್ತದೆ. ಪ್ರೆಂಚ್ ತತ್ವಶಾಸ್ತ್ರಜ್ಞನಾದ ಮಿಶೆಲ್ ಫುಕೊ ಅವರು ಅಭಿಪ್ರಾಯಪಡುವಂತೆ, "ಅಧಿಕಾರ"ವು ನಮ್ಮ ನಡುವಿನ ಸಂಬಂಧಗಳನ್ನು ನಿರ್ಧರಿಸುತ್ತದೆ. ಈ ಅಧಿಕಾರವು ಎನ್‌ಜಿಓಗಳ ಕಾರ್ಯವೈಕರಿಯಲ್ಲಿ ಕೂಡಾ ಅಡಕವಾಗಿದ್ದು ಈ ಅಧಿಕಾರ ಸಂಬಂಧಗಳ ಕುರಿತಾದ ವಿಸ್ತ್ರತ ಅಧ್ಯಯನ ನಡೆಯಬೇಕಾಗಿದೆ. ಇದು ಕೇವಲ ಶೈಕ್ಷಣಿಕ ಪಠ್ಯಕ್ರಮಕ್ಕೆ ಸೀಮಿತವಾಗಿರದೆ, ಸ್ಥಳೀಯ ಸಮೂದಾಯ ಹಾಗೂ ಸರಕಾರೇತರ ಸಂಸ್ಥೆಗಳನ್ನು ಒಳಗೊಂಡಂತೆ ನಡೆಯಬೇಕಾಗಿದೆ. ತಮ್ಮ ಕಾರ್ಯಕ್ರಮಗಳನ್ನು ರೂಪಿಸುವಾಗ ಜನರ ಸಮಸ್ಯೆಗಳಿಗೆ ಸ್ಪಂದಿಸಿ ಜನರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವುದು ಅಗತ್ಯವಾಗಿದೆ. ಈ ರೀತಿಯ ಪ್ರಜಾಸತ್ತಾತ್ಮಕ ಮಾದರಿಗಳ ಮೂಲಕ ಸರಕಾರೇತರ ಸಂಸ್ಥೆಗಳು ಅನ್ಯಾಯದ ವಿರುದ್ಧದ ಹೋರಾಟಗಳಲ್ಲಿ ಯಶಸ್ವಿಯಾಗಬಹುದು ಮತ್ತು ತನ್ನ ಕಾರ್ಯಕ್ಷೇತ್ರದಲ್ಲಿ ಬರುವ ಜನರಿಗೆ ಸಾಮಾಜಿಕ ನ್ಯಾಯವನ್ನು ಒದಗಿಸಬಹುದು.

* * * * * * * * * * *

ಪರಾಮರ್ಷನ ಗ್ರಂಥಗಳು / ಲೇಖನಗಳು

೧. ಕನ್ನಡ ಗ್ರಂಥಗಳು:

೧. ಚ.ನ.ಶಂಕರ್‌ರಾವ್ – *'ಸಾಮಾಜಿಕ ಸಂಸ್ಥೆಗಳು ಮತ್ತು ಸಾಮಾಜಿಕ ಪರಿವರ್ತನೆ'*: ಜೈ ಭಾರತ ಪ್ರಕಾಶನ್, ಮಂಗಳೂರು, ೨೦೦೬

೨. ಡಾ.ಸುಬ್ರಮಣ್ಯ ರೈ – *'ದಕ್ಷಿಣ ಕನ್ನಡ ಜಿಲ್ಲೆಯ ಐತಿಹಗಳು'*: ಕನ್ನಡ ಅಧ್ಯಯನ ವಿಭಾಗ; ಮುಂಬಯಿ ಯುನಿವರ್ಸಿಟಿ

೩. ಐಗಳ ಗಣಪತಿರಾವ್ – *'ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ*: ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ , ಉಡುಪಿ, ೧೯೨೩

೪. ಡಾ.ಪ್ರಭಾಕರ ಆಚಾರ್ ಕೆ ಮತ್ತು ವಿದ್ಯಾನಾಯಕ್ ಎಸ್ – *' ದಕ್ಷಿಣ ಕನ್ನಡದ ದೇವರ ಕಾಡುಗಳು '*: ನಾಗರಿಕ ಸೇವಾ ಟ್ರಸ್ಟ್, ಗುರುವಾಯನಕೆರೆ, ೨೦೦೬

೫. ಡಾ.ಶಂಕರ ಖಂಡೇರಿ– *' ಮಹಿಳೆಯರಿಗೆ ಕಾನೂನಿನಲ್ಲಿ ತಾರತಮ್ಯ'*: ನಾಗರಿಕ ಸೇವಾ ಟ್ರಸ್ಟ್ ಗುರುವಾಯನಕೆರೆ, ೨೦೦೨

೬. ಪ್ರೊ.ಬಿ.ಎಂ.ಕುಮಾರಸ್ವಾಮಿ – *'ಅಳಿವಿನ ಭೀತಿಯಲ್ಲಿ ಕುದುರೆಮುಖ' :* ನಾಗರಿಕ ಸೇವಾ ಟ್ರಸ್ಟ್ ಗುರುವಾಯನಕೆರೆ, ೨೦೦೧

೭. *'ಹೊರ ಅಂಚಿನಿಂದ ಕೇಂದ್ರಬಿಂದುವಿನತ್ತ* '– ಬೆಳ್ತಂಗಡಿ ತಾಲೂಕಿನ ದಲಿತರ ಸ್ಥಿತಿಗತಿಯ ಕುರಿತಾದ ಅಧ್ಯಯನ – ನಾಗರಿಕ ಸೇವಾ ಟ್ರಸ್ಟ್ ಗುರುವಾಯನಕೆರೆ, ೨೦೦೩–೨೦೦೪

೮. *'ಹೆಜ್ಜೆ ಗುರುತು'* ಪ್ರಜಾಧಿಕಾರ ಪ್ರತಿಪಾದನಾ ಮಹಾ ಅಧಿವೇಶನದ ಸಂದರ್ಬದಲ್ಲಿ ಬಿಡುಗಡೆ ಮಾಡಿದ ಕೃತಿ – ನಾಗರಿಕ ಸೇವಾ ಟ್ರಸ್ಟ್ ಗುರುವಾಯನಕೆರೆ, ೨೦೦೭

೯. *'ಪ್ರಜಾಧಿಕಾರ'* – ಮತದಾರರ ಜಾಗೃತಿ ಮತ್ತು ಪ್ರಜಾಧಿಕಾರ ಪ್ರತಿಪಾಧನೆಯ ಪ್ರಕ್ರಿಯೆಗಳ ದಾಖಲಾತಿ, ನಾಗರಿಕ ಸೇವಾ ಟ್ರಸ್ಟ್ ಗುರುವಾಯನಕೆರೆ, ೨೦೦೬

೧೦. ತೋಟಿಗಾನಹಳ್ಳಿ ರಾಮಯ್ಯ (ಸಂಪಾದಿತ) *'ತಲಪರಿಗೆ'*: ಕರ್ನಾಟಕ ಪರಿಶಿಷ್ಟ ಜಾತಿ/ವರ್ಗಗಳ ಅಭಿವೃದ್ಧಿ ನಿಗಮ, ಬೆಂಗಳೂರು, ೨೦೦೫

೧೧. *'ಜನತಾ ಜೀವ ವೈವಿಧ್ಯ ದಾಖಲಾತಿ'* ಮಿತ್ತಬಾಗಿಲು ಗ್ರಾಮ – ನಾಗರಿಕ ಸೇವಾ ಟ್ರಸ್ಟ್ ಗುರುವಾಯನಕೆರೆ, ೨೦೦೩

೧೨. *ಸ್ವ–ಉದ್ಯೋಗ ತರಬೇತಿ ಯೋಜನೆಯ ತರಬೇತಿ,* ನಾಗರಿಕ ಸೇವಾ ಟ್ರಸ್ಟ್ ಗುರುವಾಯನಕೆರೆ, ೨೦೦೧

೧೩. *ಕಡಲತೀರ ನಿಯಂತ್ರಣ ವಲಯ ಅಧಿಸೂಚನೆ* – ನಾಗರಿಕ ಸೇವಾ ಟ್ರಸ್ಟ್ ಗುರುವಾಯನಕೆರೆ, ೨೦೦೧

೧೪. *ನಿಸರ್ಗದತ್ತ ಆಹಾರ (ಸಂಪಾದಿತ)* –ನಾಗರಿಕ ಸೇವಾ ಟ್ರಸ್ಟ್ ಗುರುವಾಯನಕರೆ, ೧೯೯೮

೧೫. *'ವಿಶ್ವ ಪರಿಸ್ಥಿತಿ'* ಅನುವಾದಿತ –ಎಂ.ಸಿ.ಶರತ್ಚಂದ್ರ –ನಾಗರಿಕ ಸೇವಾ ಟ್ರಸ್ಟ್ ಗುರುವಾಯನಕೆರೆ, ೨೦೦೧

೨. ಇಂಗ್ಲಿಷ್ ಗ್ರಂಥಗಳು:

೧. ಬರೂಚ ರುಸ್ತುಂ. 'ದ ಪೊಲಿಟಿಕ್ಸ್ ಆಫ್ ಕಲ್ಚರಲ್ ಪ್ರಾಕ್ಟೀಸ್' . ನ್ಯೂ ಡೆಲ್ಲಿ: ಒಯುಪಿ, ೨೦೦೧

೨. ಚಕ್ರವರ್ತಿ ದಿಪೇಶ್. ' *ಪ್ರೊವೆನ್ಸಿಯೇಟಿಂಗ್ ಯೂರೋಪ್; ಪೋಸ್ಟ್ ಕೊಲೊನಿಯಲ್ ಥೋಟ್ ಆಂಡ್ ಹಿಸ್ಟೋರಿಕಲ್ ಡಿಫರೆನ್ಸ್. ಪ್ರಿನ್ಸ್ಟನ್:ಪಿಯು ಪ್ರೆಸ್, ೨೦೦೧*

೩. ಫೆನನ್ ಫ್ರಂಟ್. '*ದ ವ್ರೆಚ್ಡ್ ಆಫ್ ದಿ ಆರ್ಥ್*

೪. ಡಾ.ಪಿ.ಗುರುರಾಜ ಭಟ್ – *'ಸ್ಟಡೀಸ್ ವಿಥ್ ತುಳುವ ಹಿಸ್ಟರಿ ಆಂಡ್ ಕಲ್ಚರ್*: ಮಣಿಪಾಲ, ೧೯೭೫

೫. ಕೊತಾಯ್ ಕೃಷ್ಣ– '*ಎಕ್ಸ್‌ಪೆರಿಮೆಂಟ್ಸ್ ಇನ್ ರೂರಲ್ ಡೆವಲಪ್‌ಮೆಂಟ್': ಅನ್ಮೊಲ್ ಪಬ್ಲಿಕೇಶನ್ಸ್* – ನವದೆಹಲಿ, ೨೦೦೨

೬. ನಂದಿ ಆಶಿಶ್. '*ಇಂಟಿಮೇಟ್ ಎನಿಮಿ* '. ನ್ಯೂ ಡೆಲ್ಲಿ: ಒಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್ ೧೯೮೩

೭. ರೊಡ್ರಿಗಸ್ ವಲೇರಿಯನ್. '*ದ ಎಸನ್ಸಿಯಲ್ ರೈಟಿಂಗ್ಸ್ ಆಫ್ ಬಿ.ಆರ್.ಅಂಬೇಡ್ಕರ್.* ನ್ಯೂ ಡೆಲ್ಲಿ: ಒಯುಪಿ,೨೦೦೨

೮. ಡಾ. ಕೆ.ವಿ.ರಮೇಶ್ –'ಎ *ಹಿಸ್ಟರಿ ಆಫ್ ಸೌಥ್ ಕೆನರಾ*': ಗೀತಾ ಬುಕ್ ಹೌಸ, ಮೈಸೂರು, ೧೯೭೯

೯. ಸಯಿದ್ ಎಡ್ವರ್ಡ್ . *'ಒರಿಯೆಂಟಲಿಸಂ' ನ್ಯೂಯೊರ್ಕ್*

೧೦. ಪ್ರ್ಯಾಸ್ ವಿಲಿಯಂ ಮತ್ತು ಮೆಂಡೋನ್ಸಾ ವಿನ್ಸೆಂಟ್ – *'ದಿ ಲ್ಯಾಂಡ್ ಕಾಲ್ಡ್ ಸೌಥ್ ಕೆನರಾ'* :ಇಮೇಜ್ ಪ್ಲೆಕ್ಸ್ ಪಬ್ಲಿಷರ್ಸ್ ,ಮಂಗಳೂರು, ೨೦೦೬

೩. ಸ್ಮರಣ ಸಂಚಿಕೆಗಳು:

೧. **'ಚಾರುಮುಡಿ'** ಬೆಳ್ತಂಗಡಿ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನದ ಸಂಚಿಕೆ – ಸಂಪುಟ ೨,೪, ಮತ್ತು ೬ ಕನ್ನಡ ಸಾಹಿತ್ಯ ಪರಿಷತ್ತು ಬೆಳ್ತಂಗಡಿ ೧೯೯೫, ೧೯೯೭, ೧೯೯೯

೨. **'ಮುನ್ನಡೆಯ ಕಹಳೆ'** ಹಿಂದುಳಿದವರ ಮುನ್ನಡೆಯ ಮಹಾಸಮ್ಮೇಳನದ ಸ್ಮರಣಸಂಚಿಕೆ'

೩. *'ಸಮನ್ವಯ'* ಕ್ರೈಸ್ತ ಸಮನ್ವಯ ಸಮಿತಿಯ ತ್ರೈಮಾಸಿಕ ಸಂಚಿಕೆ

೪. '*ದುಡಿಮೆಯ ಕೊಡಿಮರ* ' – ಬೀಡಿಕಾರ್ಮಿಕರ ಬ್ರಹತ್ ಸಮಾವೇಶದ ಸ್ಮರಣ ಸಂಚಿಕೆ – ನಾಗರಿಕ ಸೇವಾ ಟ್ರಸ್ಟ್ ಗುರುವಾಯನಕೆರೆ – ೨೦೦೩

೪. ಪತ್ರಿಕೆಗಳು

೧. *ಮಲೆನಾಡು ಮಾಹಿತಿ ಕೈಪಿಡಿ*–ಉದಯವಾಣಿ ಪ್ರೆಸ್ ಮಣಿಪಾಲ

೨. ಜಮೀಯ್ಯತುಲ್ ಫಲಾಹ್ ಸಮಿತಿಯ ವಾರ್ತಾಪತ್ರಿಕೆ– 'ಆಲ್–ಫಲಾಹೆ–ಸಂಪುಟ ೨೦೦೮'

೩. 'ಇನ್‌ಫೊರ್ಮೇಶನ್ ಆಫ್ ವಿಲೇಜ್ ಫೋರೆಸ್ಟ್ ಕಮಿಟೀಸ್' ಸಮ್ ಗೈಡ್‌ಲೈನ್ಸ್ , ನಾಗರಿಕ ಸೇವಾ ಟ್ರಸ್ಟ್ ಗುರುವಾಯನಕೆರೆ – ೨೦೦೧

೫. ಸಂದರ್ಶನದ ಮೂಲಕ ಮಾಹಿತಿ ಸಂಗ್ರಹ:

೧. **ಸೋಮನಾಥ್ ನಾಯಕ್** – ಅಧ್ಯಕ್ಷರು, ಎನ್.ಎಸ್.ಟಿ ಗುರುವಾಯನಕೆರೆ

ಸಂದರ್ಶನ ದಿನಾಂಕ: – ೧೭-೧೨-೨೦೦೮

೨. **ಬಿ.ಕೆ. ಪರಮೇಶ್ವರ** – ಕಾರ್ಯದರ್ಶಿ, ಎನ್.ಎಸ್.ಟಿ ಗುರುವಾಯನಕೆರೆ

ಸಂದರ್ಶನ ದಿನಾಂಕ: – ೧೭-೧೨-೨೦೦೮

೩. **ಕುಮಾರಿ ಪಿ. ಹೇಮಾವತಿ** – ಅಧ್ಯಕ್ಷರು, ಕರಾವಳಿ ಮಹಿಳಾ ಜಾಗೃತಿ ವೇದಿಕೆ

ಸಂದರ್ಶನದ ದಿನಾಂಕ – ೧೮-೧೨-೨೦೦೮

೪. **ಕೆ. ಸೋಮ** – ಅಧ್ಯಕ್ಷರು, ದಲಿತ ಅಭಿವೃದ್ಧಿ ಸಮಿತಿ, ಎನ್. ಎಸ್. ಟಿ. ಗುರುವಾಯನಕೆರೆ

ಸಂದರ್ಶನದ ದಿನಾಂಕ – ೧೮-೧೨-೨೦೦೮

* * * * * * * * * * * *

ಅನುಬಂಧ – ೧

ಹಂಪಿ ಕನ್ನಡ ವಿಶ್ವವಿದ್ಯಾಲಯದ ವತಿಯಿಂದ ಎಂ.ಫಿಲ್ ಅಧ್ಯಯನಕ್ಕೆ ಪೂರಕವಾಗಿ ಸಿದ್ಧ ಪಡಿಸಲಿರುವ ಪ್ರಭಂದಕ್ಕೆ ಪೂರಕವಾದ ಪ್ರಶ್ನಾವಳಿ

ಅಧ್ಯಯನದ ವಿಷಯ : ಸಾಮಾಜಿಕ ಬದಲಾವಣೆಯಲ್ಲಿ ಸರಕಾರೇತರ ಸಂಸ್ಥೆಗಳು: ಬೆಳ್ತಂಗಡಿ ತಾಲೂಕು ಒಂದು ಅಧ್ಯಯನ

ಅಧ್ಯಯನ ಕೈಗೊಳ್ಳುವವರು : ಶ್ರೀ ಅಲೆಕ್ಸ್ ಐವನ್ ಸಿಕ್ವೇರಾ
ಇತಿಹಾಸ ಉಪನ್ಯಾಸಕ
ಸೇಕ್ರೆಡ್ ಹಾರ್ಟ್ ಕಾಲೇಜು, ಮಡಂತ್ಯಾರು

ಗುರುತು		
೧	ಹೆಸರು	
೨	ಉಪಜಾತಿ	
೩	ಸ್ಥಳ/ಪ್ರದೇಶ	
೪	ವಿದ್ಯಾರ್ಹತೆ	
೫	ಕುಟುಂಬದ ವೃತ್ತಿ	
೬	ವಾರ್ಷಿಕ ಆದಾಯ	
೭	ಕೃಷಿಭೂಮಿ	ಅ. ಇದೆ ಆ. ಇಲ್ಲ
೮	ಭೂಮಿ ವಿಸ್ತೀರ್ಣ	

ಗಮನಿಸಿದ ಲಕ್ಷಣಗಳು/ಅಂಶಗಳು

		ಅ.	ಆ.	ಇ
೧	ಮನೆಯ ಸ್ವರೂಪ	ಆರ್.ಸಿ.ಸಿ.ಮನೆ	ಮನೆ	ಹುಲ್ಲಿನ ಛಾವಣಿ
೨	ಮನೆಯ ಒಡೆತನ	ಸ್ವಂತ	ಬಾಡಿಗೆ	ಅಕ್ರಮ–ಸಕ್ರಮ
೩	ಮನೆ ಪಡೆಯಲು ಮೂಲ	ಪಾರಂಪರ್ಯ	ಖರೀದಿಸಿದ್ದು/ಸಾಲ ಮೂಲ	ಸರ್ಕಾರಿ ಸಹಾಯ
೪	ಕೊಠಡಿಗಳ ಸಂಖ್ಯೆ	2ಕ್ಕಿಂತ ಹೆಚ್ಚು	1ರಿಂದ 2	ಕೊಠಡಿಗಳಿಲ್ಲ
೫	ವಾತಾಯಾನ	ಉತ್ತಮ	ತೃಪ್ತಿಕರ	ಅತೃಪ್ತಿಕರ
೬	ಸ್ನಾನಗೃಹ	ಸ್ವಂತ	ಸಾಮಾನ್ಯ	ಬಯಲು ಶೌಚಾಲಯ
೭	ಕುಡಿಯುವ ನೀರು	ನಳ್ಳಿ	ಬಾವಿ	ದೂರದ ನೆಲೆಗಳಿಂದ
೮	ಒಳಚರಂಡಿ ವ್ಯವಸ್ಥೆ	ಸಂಪರ್ಕ ಕಲ್ಪಿಸಿದೆ	ಸ್ಥಳದಲ್ಲೇ ವ್ಯವಸ್ಥೆ	ಇಲ್ಲ
೯	ಇಂಧನ	ಗ್ಯಾಸ್	ಸೀಮೆಎಣ್ಣೆ	ಕಟ್ಟಿಗೆ
೧೦	ವಿದ್ಯುಚ್ಛಕ್ತಿ	ಗೃಹಬಳಕೆ	ಭಾಗ್ಯಜ್ಯೋತಿ	ಸಂಪರ್ಕವಿಲ್ಲ
೧೧	ಪ್ರಸಾರ ಪ್ರಸಾಧನಗಳು	ದೂರದರ್ಶನ(ಟಿ.ವಿ)	ಸ್ಟೀರಿಯೋ	ರೇಡಿಯೋ
೧೨	ದೂರವಾಣಿ ಸೌಲಭ್ಯ	ಸ್ವಂತ	ನೆರೆಹೊರೆಯವರದ್ದು	ಸಾರ್ವಜನಿಕ
೧೩	ವಾಹನ	ನಾಲ್ಕು ಚಕ್ರದ್ದು	ದ್ವಿಚಕ್ರ	ಚಾಲಕನಾಗಿ ಮಾತ್ರ

ಪ್ರಶ್ನಾವಳಿ

೧. ನಿಮ್ಮ ಪ್ರದೇಶದಲ್ಲಿ ನಾಗರಿಕಾ ಸೇವಾ ಟ್ರಸ್ಟ್ ಕಾರ್ಯಚಟುವಟಿಕೆ ನಡೆಸುತ್ತಿದೆಯಾ?
ಅ. ಹೌದು ಆ. ಇಲ್ಲ

೨. ನೀವು ನಾಗರಿಕಾ ಸೇವಾ ಟ್ರಸ್ಟ್‌ನ ಸದಸ್ಯತ್ವವನ್ನು ಹೊಂದಿದ್ದೀರಾ?
ಅ. ಹೌದು ಆ. ಇಲ್ಲ

೩. ಯಾವ ಕ್ಷೇತ್ರದಲ್ಲಿ ಅವರು ಕಾರ್ಯ ನಿರ್ವಹಿಸುತ್ತಿದ್ದಾರೆ?
ಅ. ಕೃಷಿ ಆ. ಕೃಷಿ ಕೂಲಿ ಇ. ದಲಿತರು ಈ. ಮಹಿಳೆ

೪. ಎಷ್ಟು ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ?
ಅ 5ಕ್ಕಿಂತ ಕಡಿಮೆ ಆ. 6ರಿಂದ 10 ಇ. 10 ವರ್ಷಕ್ಕೆ ಮೇಲ್ಪಟ್ಟು

೫. ನಿಮ್ಮ ಊರಿನಲ್ಲಿ ಅವರ ಕಚೇರಿಯನ್ನು ಹೊಂದಿದ್ದಾರೆಯಾ?
ಅ. ಹೌದು ಆ. ಇಲ್ಲ

೬. ಅವರೊಂದಿಗೆ ನಿಮ್ಮ ಒಡನಾಟ ?
ಅ. ದಿನಾಲೂ ಆ. ವಾರಕ್ಕೊಮ್ಮೆ ಇ. ತಿಂಗಳಿಗೊಮ್ಮೆ ಈ. ಅನಿಯಮಿತ

೭. ನಿಮಗೆ ಅವರಿಂದ ದೊರೆಯುವ ಸೇವೆಯ ಕ್ಷೇತ್ರ?
ಅ ಕೃಷಿಕ್ಷೇತ್ರ ಆ. ಪರಿಸರ ಜಾಗೃತಿ ಇ. ತರಬೇತಿ ಈ. ಸ್ವ ಉದ್ಯೋಗ

೮. ನಾಗರಿಕಾ ಸೇವಾ ಟ್ರಸ್ ಪ್ರವರ್ತಿಸುವ ಸಮಿತಿಗಳಲ್ಲಿ ಸದಸ್ಯರಾಗಿದ್ದೀರಾ?
ಅ. ಮಹಿಳಾ ಜಾಗ್ರತಿ ವೇದಿಕೆ ಆ. ಕೃಷಿ ವೇದಿಕೆ
ಇ. ಪರಿಸರಾಸಕ್ತರ ಒಕ್ಕೂಟ ಈ. ದಲಿತ ಅಭಿವೃದ್ಧಿ ಸಮಿತಿ

೯. ಸದಸ್ಯತ್ವ ಶುಲ್ಕ ಇದೆಯಾ ?
ಅ ವಾರ್ಷಿಕ ಆ. ಅಜೀವ ಇ. ಇಲ್ಲ

೧೦. ನಾಗರಿಕಾ ಸೇವಾ ಟ್ರಸ್ಟ್‌ನ ಮುಖ್ಯ ಗುರಿ ?
ಅ. ಆರ್ಥಿಕ ಸಹಾಯ ಆ. ಗ್ರಾಮಗಳ ಉದ್ದಾರ ಇ. ಪರಿಸರ ಸಂರಕ್ಷಣೆ ಈ. ಜನಜಾಗ್ರತಿ

೧೧. ಅವರೊಂದಿಗಿನ ಒಡನಾಟದಲ್ಲಿ ನಿಮಗೆ ಸಹಾಯವಾಗಿದೆಯಾ?
ಅ. ಹೌದು ಆ. ಸ್ವಲ್ಪ ಮಟ್ಟಿಗೆ ಇ. ಇಲ್ಲ

೧೨. ನಿಮ್ಮ ದಿನ ನಿತ್ಯದ ಕೆಲಸಕ್ಕೆ ಸಹಾಯ?
ಅ. ಹೌದು ಆ. ಸ್ವಲ್ಪ ಮಟ್ಟಿಗೆ ಇ. ಇಲ್ಲ

೧೩. ಯಾವ ಸಮಸ್ಯೆಗಳು?
ಅ. ಆರ್ಥಿಕ ಆ. ಕೃಷಿ ಇ. ಕೃಷಿ ಕೂಲಿ ಈ. ಮಹಿಳೆಯರ ಸಮಸ್ಯೆ

೧೪. ಸಮಸ್ಯೆಗಳಿಗೆ ಸ್ಪಂದಿಸುವ ರೀತಿ?
ಅ. ಆರ್ಥಿಕ ಆ. ಸಂಘ ಇ. ಹೋರಾಟ ಈ. ಜಾಗ್ರತಿ

೧೫. ಲಭಿಸಿದ ಪ್ರಯೋಜನ ?
ಅ ಅತ್ಯುತ್ತಮ ಆ. ಉತ್ತಮ ಇ. ಸಾಧಾರಣ ಈ. ಇಲ್ಲ

೧೬. ಸಮಸ್ಯೆಗಳ ಕುರಿತಂತೆ ಜಾಗ್ರತಿ ?
ಅ.ಉತ್ತಮ ಆ. ಸಾಧಾರಣ ಇ. ಇಲ್ಲ

೧೭. ಸಾಮಾಜಿಕ ಸ್ಥಾನ ಮಾನ ?
ಅ. ಸುಧಾರಣೆ ಆ. ಇಲ್ಲ

೧೮. ರಾಜಕೀಯವಾಗಿ ?
ಅ ಉತಮ ಆ. ಸಾಧಾರಣ ಇ. ಇಲ್ಲ

೧೯. <u>ಆರ್ಥಿಕ ಸುಧಾರಣೆಯ ಕ್ಷೇತ್ರಗಳು:</u>

೧. ಉಳಿತಾಯ ಮಾಡುತ್ತಿದ್ದೀರಾ ? ಅ ಹೌದು ಆ. ಇಲ್ಲ

೨. ಸಾಲದಿಂದ ಮುಕ್ತಿ ? ಅ. ಹೌದು ಆ. ಇಲ್ಲ

೩. ಭೂಮಿ ವಿಸ್ತರಣೆ/ಖರೀದಿ ? ಅ. ಹೌದು ಆ ಇಲ್ಲ

೪. ಭೂಮಿ ಅಭಿವೃದ್ಧಿ ? ಅ. ಹೌದು ಆ. ಇಲ್ಲ

೫. ಸಾಲ ಸೌಲಭ್ಯ ? ಅ. ಹೌದು ಆ. ಇಲ್ಲ

೬. ಗರಿಷ್ಠ ಮೊತ್ತದ ಸಾಲ? ಅ. ೧೦೦೦೦ ಆ. ೨೦೦೦೦ ಈ.೫೦೦೦೦ಕ್ಕಿಂತ ಹೆಚ್ಚು

೭. ಬಡ್ಡಿ ವಿಧಿಸಲಾಗುತ್ತದೆಯಾ? ಅ. ಹೌದು ಆ. ಇಲ್ಲ

೮. ಮರುಪಾವತಿಯ ರೀತಿ? ಅ. ಕಠಿಣ ಆ. ಸುಲಭ

೯. ಬಡ್ಡಿ ದರ ? ಅ. ಕಡಿಮೆ ಆ. ಹೆಚ್ಚು

೧೦. ಪಾವತಿ ವಿಳಂಬ ಅಥವಾ ಸಾಧ್ಯವಾಗದಿದ್ದಲ್ಲಿ ಪರಿಣಾಮ?

ಅ. ಹೆಚ್ಚು ಬಡ್ಡಿ ಆ. ಆಸ್ತಿ ಅಡವು ಇ. ವಸ್ತುಗಳ ಏಲಂ ಈ. ಇತರ

೨೦. <u>ಸಾಮಾಜಿಕ ಕ್ಷೇತ್ರದಲ್ಲಿ:</u>

೧. ಮಕ್ಕಳಿಗೆ ಶಿಕ್ಷಣಕ್ಕೆ ಸಹಾಯ ? ಅ. ಹೌದು ಆ. ಇಲ್ಲ

೨. ಸಮಾಜದಲ್ಲಿ ಗೌರವ ? ಅ. ಹೌದು ಆ. ಇಲ್ಲ

೩. ನಿಮ್ಮ ಸಲಹೆ/ಅಭಿಪ್ರಾಯಗಳಿಗೆ ಮನ್ನಣೆ? ಅ. ಹೌದು ಆ. ಇಲ್ಲ

೪. ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರ ? ಅ. ಹೌದು ಆ. ಇಲ್ಲ

೫. ಜನರ ಒಕ್ಕೂಟ ಬಲಗೊಂಡಿದೆಯಾ? ಅ. ಹೌದು ಆ. ಇಲ್ಲ

೬. ಲಿಂಗ ಸಮಾನತೆಯತ್ತ ಸಾಗುತ್ತಿದೆಯ? ಅ. ಹೌದು ಆ. ಇಲ್ಲ

೭. ಜಾತಿಗಳ ನಡುವಿನ ಮೇಲು ಕೀಳು ಭಾವನೆ ಕಡಿಮೆಯಾಗಿದೆಯಾ ?
ಅ. ಹೌದು ಆ. ಇಲ್ಲ

೮. ಧಾರ್ಮಿಕ ಸಾಮರಸ್ಯ ಬಲಗೊಳ್ಳುತ್ತಿದೆಯಾ ?
ಅ. ಹೌದು ಆ. ಇಲ್ಲ

೯. ಸಂಘದ ಸಾಮಾಜಿಕ ಚಟುವಟಿಕೆಗಳು
ಅ ಅತ್ಯುತ್ತಮ ಆ. ಉತ್ತಮ ಇ. .ಸಾಧಾರಣ

೧೦. ಸಾಮಾಜಿಕ ಬದಲಾವಣೆ ಆಗಿದೆಯಾ ?
ಅ ಹೌದು ಆ. ಇಲ್ಲ

೧೧. ಆರೋಗ್ಯದ ಕಡೆಗೆ ಗಮನ?
ಅ. ಹೌದು ಆ. ಇಲ್ಲ

೨೧. <u>ರಾಜಕೀಯ ಕ್ಷೇತ್ರದಲ್ಲಿ:</u>

೧. ಜನರಲ್ಲಿ ರಾಜಕೀಯ ಜಾಗ್ರತಿ ಮೂಡಿದೆಯಾ ?
ಅ. ಹೌದು ಆ. ಇಲ್ಲ

೨. ರಾಜಕೀಯ ಕ್ಷೇತ್ರದಲ್ಲಿ ಜನರ ಭಾಗವಹಿಸುವಿಕೆ?
ಅ. ಹೆಚ್ಚು ಆ. ಸಾಧಾರಣ ಇ.ಕಡಿಮೆ

೩. ಗ್ರಾಮ, ತಾಲೂಕು, ಜಿಲ್ಲೆ ಮತ್ತು ರಾಜ್ಯ ಮಟ್ಟದಲ್ಲಿ ಜನಪ್ರತಿನಿಧಿಗಳನ್ನು ರೂಪಿಸುವಲ್ಲಿ ಸಹಕಾರಿಯಾಗಿದೆಯಾ ?
ಅ. ಹೌದು ಆ. ಇಲ್ಲ

೪. ಸರಕಾರದ ಕಾರ್ಯಕ್ರಮಗಳು ಪ್ರಯೋಜನ ಪಡೆಯುತ್ತಿದ್ದೀರಾ ?
ಅ. ಹೌದು ಆ. ಇಲ್ಲ

೫. ಯಾವ ಕಾರ್ಯಕ್ರಮಗಳು ?

೬. ಸರಕಾರದ ಜನವಿರೋಧಿ ಧೋರಣೆಗಳ ವಿರುದ್ಧ ಹೋರಾಟಗಳು?

ಅ. ಹೌದು ಆ. ಇಲ್ಲ

೭. ಜನಾಂದೋಲನ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತೀರಾ ?

ಅ. ಹೌದು ಆ. ಇಲ್ಲ

೮. ರಾಜಕೀಯ ಜಾಗ್ರತಿ ಮೂಡಿದೆಯಾ ?

ಅ. ಹೌದು ಆ. ಇಲ್ಲ

೨೪. ನಾಗರಿಕ ಸೇವಾ ಸಮಿತಿಯೊಂದಿಗೆ ಒಡನಾಟ ಮುಂದುವರಿಸಲು ಇಚ್ಚೆ ?

ಅ. ಹೌದು ಆ. ಇಲ್ಲ

೨೫. ಒಡನಾಟ ಹೇಗಿರಬೇಕು?

ಅ ಹೆಚ್ಚು ಆ. ಕಡಿಮೆ ಇ.ಯಥಾಸ್ಥಿತಿ

೨೬. ನಿಮ್ಮ ಒಟ್ಟಾರೆ ಅಭಿಪ್ರಾಯ ?

ಅ ಅತ್ಯುತ್ತಮ ಆ. ಉತ್ತಮ ಇ. .ಸಾಧಾರಣ ಈ. ಸಾಲದು

೨೮. ಟ್ರಸ್ಟ್‌ನ ಕಾರ್ಯಚಟುವಟಿಕೆಗಳು ಇನ್ನೂ ಉತ್ತಮವಾಗಿ ಮೂಡಿ ಬರಲು ನಿಮ್ಮ ಸಲಹೆಗಳು (ಇದ್ದಲ್ಲಿ)

೧.

ಅ.

ಆ.

ಇ.

ಈ.

ಚಿತ್ರಮುಖಿ

ಬೀಡಿ ಕಾರ್ಮಿಕರ ಮಹಾ ಅಧಿವೇಶನ:



ಗುರುವಾಯನಕೆರೆ ಸಸ್ಯೋದ್ಯಾನದಲ್ಲಿರುವ ನಾಗರಿಕ ಸೇವಾ ಟ್ರಸ್ಟ್‌ನ ಸಂಪನ್ಮೂಲ ಕೇಂದ್ರ:



ಬೀಡಿ ಕಾರ್ಮಿಕರ ಜಾಥಾ:



ಕೃಷಿಕರ ಜಾಗೃತಿ ಆಂದೋಲನ:



ದಲಿತ ಶಿಕ್ಷಣ ಪ್ರೋತ್ಸಾಹ ಕಾರ್ಯಕ್ರಮ



ದಲಿತರು: ಒಂದು ಸಭೆಯ ನಂತರ

